ಕಸ್ತೂರಿ

ಜನವರಿ 1988



ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಹ ಸಂಪಾದಕ:
ಮಾಧವ ನಾ. ಮಹಿಷಿ

ಕಲೆ:
ಪಿ.ಆರ್. ಪಾಟೀಲ

ಮುಖಪುಟ:
ತಪೋಭಂಗ
ಕಲೆ: ಎಂ.ಟಿ.ವಿ. ಆಚಾರ್ಯ

ಬೆಳಕಿಂಡಿ

- ಸುಸಂಘಟಿತ ಅಪರಾಧಗಳನ್ನೆಸಗುವುದೆಂದರೆ ಸಮಾಜದ ವಿರುದ್ಧ ಕೂಟಯುದ್ಧದಲ್ಲಿ ತೊಡಗಿದಂತೆ.

-ಲಿಂಡನ್ ಜಾನ್ಸನ್

- ಜಗತ್ತಿನಲ್ಲಿ ಕೆಟ್ಟ ತಾಯಿ ಅಥವಾ ಒಳ್ಳೆಯ ಸಾವು ಎಂಬುದಿಲ್ಲವೇ ಇಲ್ಲ.

-ಯಿದ್ದಿಶ್ ನಾಣ್ನುಡಿ

- ಕೀರ್ತಿಯೆಂಬುದು ಸಾಧನೆಗೆ ಸಿಂಪಡಿಸಿದ ಸುವಾಸನೆ.

-ಸಾಕ್ರೆಟಿಸ್

- ತ್ಯಾಗವೂ ವ್ಯವಹಾರದ ಮತ್ತೊಂದು ಮುಖವೇ.

-ಹಾಲ್‌ಬ್ರೂಕ್ ಜಾನ್ಸನ್

- ಯೋಚಿಸಲು ಮಲಗುವವರು ವಿರಳ; ಮಲಗಲು ಯೋಚಿಸುವವರು ಬಹಳ.

-ಯಬರೇಶಿ

ಪ್ರತಿಯೊಬ್ಬನಲ್ಲೂ ತಪ್ಪು ಕಂಡು ಹಿಡಿಯುವುದು ಸುಲಭ; ಆದರೆ ಅದಕ್ಕೆ ಸೂಕ್ತ ಪರಿಹಾರ ಸೂಚಿಸುವುದು ವಿಚಾರಶೀಲನ ಲಕ್ಷಣ.

-ಡೆಮೊಸ್ತೆನೆಸ್

ಮನುಷ್ಯ ಎನ್ನುವ ಪದ ಮನಸ್ಸಿನ ಅಧಿಪತಿ ಎನ್ನುವುದನ್ನು ಸೂಚಿಸುತ್ತದೆ.

-ಸತ್ಯ ಸಾಯಿಬಾಬಾ (ಭಗವದ್ವಾಣಿ ಭಾಗ-1)

ಹೊ[illegible] ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	"	65=00
3 ವರ್ಷಕ್ಕೆ	"	100=00

KASTURI, JANUARY 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕ ದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

• ಪುಸ್ತಕ ವಿಭಾಗ •

"ಭೇದ" .... ಯಶವಂತ ಚಿತ್ತಾಲ

ಸಂಗ್ರಹಾನುವಾದ .... ರಮಾ ಕಾರಂತ

ಪ್ರಿಯ ಚಿಂತನ

ಗಣಿತಾಧ್ವರ್ಯು

ಶ್ರೀನಿವಾಸ ರಾಮಾನುಜನ್ ಅವರನ್ನು ಕುರಿತು ಜಿ.ಟಿ.ನಾ. ತುಂಬ ಚೆನ್ನಾದ ಅಕ್ಷರ ಶಿಲ್ಪ ರಚಿಸಿದ್ದಾರೆ. ಡಿಸೆಂಬರ್ 'ಪುಸ್ತಕ ವಿಭಾಗ'ದಲ್ಲಿ ಅಲ್ಪಾವಧಿಯ ಬದುಕಿನಲ್ಲೇ ಅನಂತವಾದ ಗಣಿತ ಸೂತ್ರಗಳನ್ನು ಕೊಟ್ಟು ಹೋದ ಆ ಮಹಾ ಲೆಕ್ಕಿಗನಿಗೆ 'ಕಸ್ತೂರಿ' ನೀಡಿದ ಜನ್ಮಶತಾಬ್ದಿಯ ಈ ಗೌರವ ಅಮೂಲ್ಯವಾದದ್ದು.

ಬೈಕಳಾ (ಮುಂಬೈ) -ಅಮಿತಾಕ್ಷರರಾವ್

ಪ್ರತಿಭೆಗೂ ಪದವಿಗೂ ಸಂಬಂಧವಿಲ್ಲವೆಂಬ ಮಾತನ್ನು ಶ್ರೀನಿವಾಸ ರಾಮಾನುಜನ್ನರ ಜೀವನ (ಕಸ್ತೂರಿ ಪು.ವಿ. ಡಿಸೆಂಬರ್ 87) ಸಾಬೀತುಗೊಳಿಸುತ್ತದೆ. ಅವರ ಅಗಣಿತ ಸಾಮರ್ಥ್ಯವನ್ನು ನಮ್ಮ ಗಮನಕ್ಕೆ ತಂದು ಕೊಟ್ಟ, ಜಿ.ಟಿ. ನಾರಾಯಣರಾಯರು ತುಂಬ ಒಳ್ಳೆಯ ಕೆಲಸ ಮಾಡಿ ಇಪ್ಪತ್ತೊಂದನೆಯ ಶತಮಾನದ ಭ್ರಮೆಯಲ್ಲಿರುವ ಯುವ ಜನಾಂಗದ ಕಣ್ಣು ತೆರೆಸಿದ್ದಾರೆ.

ಪಡುಬಿದ್ರಿ (ದ.ಕ.) -ಸೇತುರಾಮ ಹಾ.ಮೈ

ಶರ್ಲಾಕ್ ಹೋಮ್ಸ್

ನಮ್ಮನ್ನು ಕುತೂಹಲಕ್ಕೆಡೆ ಮಾಡುತ್ತ, ಉಸಿರು ಬಿಗಿಹಿಡಿಸುತ್ತ ಓದಿಸಿಕೊಂಡೊಯ್ಯುವ ಶರ್ಲಾಕ್ ಹೋಮ್ಸ್‌ನ ಪತ್ತೇದಾರಿ 'ಹಾವು-ಹಗ್ಗ'ವನ್ನು ಕೊಟ್ಟದ್ದಕ್ಕಾಗಿ 'ಕಸ್ತೂರಿ'ಗೆ ಅನಂತ ವಂದನೆಗಳು. ಹೋಮ್ಸ್‌ನ ಇನ್ನಷ್ಟು ಪತ್ತೇದಾರಿ ಸಾಹಸ ಕಥೆಗಳನ್ನು ನೀಡಿ ಸಂಪಾದಕರೆ.

ಕರಗುದರಿ -ವಾಮನ ಪಾಟೀಲ

ಇಕ್ರಿಸ್ಯಾಟ್

ನವೆಂಬರ್ ತಿಂಗಳ 'ಕಸ್ತೂರಿ'ಯಲ್ಲಿ ಪ್ರಕಟವಾದ ಮೋಹನ್ ಗ. ಹೆಗಡೆಯವರ "ಇಕ್ರಿಸ್ಯಾಟ್ ಎಂದರೇನು?" ಲೇಖನ ಓದಿದೆ. ಒಣ ಭೂಮಿ ಅಭಿವೃದ್ಧಿಯ ಗುರಿ ಹೊಂದಿರುವ ಇಕ್ರಿಸ್ಯಾಟ್ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿದಲ್ಲಿ ಆಹಾರ ಸಮಸ್ಯೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಬಹುದು. ತೀವ್ರ ಜನಸಂಖ್ಯಾ ಸಮಸ್ಯೆ ಹೊಂದಿರುವ ಭಾರತದಂಥ ರಾಷ್ಟ್ರಗಳು ಇತ್ತ ಗಮನಹರಿಸುವುದು ಅವಶ್ಯ.

ಅರಂತೋಡು -ಶೇಖರ ಅರಂತೋಡು

ಇದು ಹೀಗಿರಬೇಕಿತ್ತು

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಆದ್ಯ ರಾಮಾಚಾರ್ಯರ 'ಉದಾರ ಮತವಾದಿಗಳಾದ ಮುಸಲ್ಮಾನರು' ಲೇಖನದಲ್ಲಿ ಮಹರ್ಷಿ ದಯಾನಂದರೂ ದ್ವೈತವನ್ನು ಪುರಸ್ಕರಿಸಿದರು ಎಂದಿದೆ. ಆದರೆ ನನಗೆ ತಿಳಿದಿರುವಂತೆ ಆತ್ಮ, ಪರಮಾತ್ಮ, ಪ್ರಕೃತಿ ಇವುಗಳನ್ನು ಮೂಲಭೂತ ತತ್ವಗಳನ್ನಾಗಿ ಸ್ವೀಕರಿಸಿ, ವೈಜ್ಞಾನಿಕವಾದ ತ್ರೈತವಾದವನ್ನು ಘೋಷಿಸಿದ ದಯಾನಂದರು ದ್ವೈತ, ಅದ್ವೈತಗಳೆರಡನ್ನೂ ನಿರಾಕರಿಸಿದ್ದಾರೆ.

ಸುಳ್ಯ -ದತ್ತಾತ್ರೇಯ ಮರಾಠೆ

ಪರಸ್ಪರ ಅರಿತುಕೊಳ್ಳಬೇಕು

ರುಕ್ಮಿಣಿ ಗಿರಿಮಾಜಿಯವರ ಕಥೆ "ವಿಧಿ ನಡೆಸಿದ ಕಡೆಗೆ" (ನವೆಂಬರ್ 87) ಓದಿದೆ. ಇಂದಿನ ದಿನಗಳಲ್ಲಿ ರಾಮಾರಾಯರಂಥ ವಯಸ್ಸಾದ ವಿಧುರರ ಸಮಸ್ಯೆ ಜಟಿಲವಾಗುತ್ತಿದೆ. ಹಿರಿಯರ ಸೇವೆ ಮಾಡಬೇಕೆಂಬ

ಮನೋಭಾವ ಇಂದಿನವರಲ್ಲಿ ಮಾಯವಾಗುತ್ತಿದೆ. ಆದರೆ ಹಿರಿಯರೂ ಬದಲಾದ ಪರಿಸ್ಥಿತಿಗೆ ಹೊಂದಿಕೊಂಡರೆ ಎಷ್ಟೋ ಬಾರಿ ಈ ಸಮಸ್ಯೆಗಳು ಮಾಯವಾಗಿ ಬಿಡುತ್ತವೆ. ಹಿರಿಯರು ಮತ್ತು ಮಕ್ಕಳು ಪರಸ್ಪರರನ್ನು ಅರಿತುಕೊಂಡು ನಡೆಯುವುದು ಅವಶ್ಯ. ಇದು ನನ್ನ ಸ್ವಂತ ಅನುಭವ.

ಮೈಸೂರು -ರಂಗನಾಥ

ಆಕಳು ಕಪ್ಪಾದರೆ

ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಮರಾಠಿ ಕಥೆ "ಆಕಳು ಕಪ್ಪಾದರೆ" ಮಾನವೀಯ ಮೌಲ್ಯಗಳಿಂದ ಕೂಡಿದ, ಉತ್ತಮವಾದ ಕೃತಿ. ತನ್ನ ತಂದೆ ಮತ್ತು ತಮ್ಮನಿಗಾಗಿ ನಿಸ್ವಾರ್ಥ ಬುದ್ಧಿಯಿಂದ, ಕಪ್ಪುಬಣ್ಣದ ಆದರೆ ಬಿಳಿ ಹೃದಯದವರಾದ ಚೆರಿಯನ್‌ರನ್ನು ಮದುವೆಯಾಗುವ ಕಥಾನಾಯಕಿ ಅಲಕಾಳನ್ನು ಕಲ್ಪಿಸಿಕೊಂಡ ಗಿರಿಜಾ ಕೀರ್ ಮತ್ತು ಇಂಥ ಉತ್ತಮ ಕೃತಿಯನ್ನು ಕನ್ನಡಿಗರಿಗೆ ನೀಡಿದ ಶ್ಯಾಮಸುಂದರ ದೇಶಪಾಂಡೆ ಅಭಿನಂದನಾರ್ಹರು.

ಬೆಂಗಳೂರು. -ನ.ಕೃ. ಮೂರ್ತಿ

ನರಕದ ದವಡೆಯಿಂದ

"ನರಕದ ದವಡೆಯಿಂದ" ಲೇಖನ (ನವೆಂಬರ್ ಕಸ್ತೂರಿ')ವನ್ನು ಓದಿದಾಗ ಮನಸ್ಸಿಗೆ ಬಹಳ ನೋವಾಯಿತು. ಶ್ರೀಧರನ್‌ರಂತೆ ನರಕಯಾತನೆ ಅನುಭವಿಸಿದವರು ಇನ್ನೂ ಎಷ್ಟಿದ್ದಾರೋ ಏನೋ!

ಕಲಬುರ್ಗಿ. -ಜಗದೀಶ ವಿ. ಹುನಗುಂದ

ರಾಂಗಿ ಮತ್ತು ಪಪ

ನವೆಂಬರ್ 'ಕಸ್ತೂರಿ'ಯಲ್ಲಿ ಬಂದ ಮಾವೋರಿ ಲೋಕ ಕಥೆ "ರಾಂಗಿ ಮತ್ತು ಪಪ" ಚೆನ್ನಾಗಿದೆ. ಅದರ ಕೊನೆಯ ಪ್ಯಾರಾ ಓದಿದಾಗ ಇನ್ನೊಂದು ವಿಷಯ ನೆನಪಿಗೆ ಬಂತು. ನಮ್ಮಲ್ಲಿ ಮಳೆ ಬರುವುದಕ್ಕೂ ಸಿಮೆಂಟಿನ ನೆಲಕ್ಕೆ ತೇವ ಬರುವುದಕ್ಕೂ ಸಂಬಂಧ ಕಲ್ಪಿಸಿ ಮಳೆ ಬರುವುದೋ, ಇಲ್ಲವೋ ಎಂಬುದನ್ನು ನಿರ್ಧರಿಸುತ್ತಾರೆ. ನೆಲಕ್ಕೆ ತೇವ ಬಂತೆಂದರೆ, ಅಂದಿನಿಂದ ಮಳೆ ನಿಲ್ಲುತ್ತದೆ ಎನ್ನುವುದು ರೂಢಿಯಲ್ಲಿದೆ.

ಭಂಡಿಪೊಳೆ. -ಶ್ರೀಹರಿ ವಿ. ದಾಮಲೆ

ಸಂತೋಷದ ವಿಚಾರ

"ವಿಶ್ವೇಶ್ವರಯ್ಯನವರನ್ನು ನಾನು ಕಂಡಂತೆ.." ಲೇಖನ ಚೆನ್ನಾಗಿ ಮೂಡಿ ಬಂದಿದೆ. ವಿಶ್ವೇಶ್ವರಯ್ಯನವರ ಆದರ್ಶ, ತತ್ವಗಳನ್ನು ದಾಸಪ್ಪನವರು ಇಂದಿಗೂ ಪಾಲಿಸುತ್ತಿರುವುದು ಸಂತೋಷದ ವಿಚಾರ.

ಬೈಂದೂರು. -ಬಿ.ಎಂ. ನಾಥ, ಬೈಂದೂರು

ಜನಕ ಚಿಕಿತ್ಸೆ

ನವೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಡಾ|| ಕರವೀರ ಪ್ರಭು ಕ್ಯಾಲಕೊಂಡರ "ಜನಕ ಚಿಕಿತ್ಸೆ" ಲೇಖನ ಜನ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಚೆನ್ನಾಗಿ ಮೂಡಿಬಂದಿದೆ.

ಬೆಳಗಾವಿ. -ಜಿ.ಎಸ್. ಹಿಟ್ಟಣಗಿ

ಕಲಿತುಕೊಳ್ಳಬೇಕು

ಕ್ರಿಕೆಟ್‌ನಲ್ಲಿ ಪಾಕಿಸ್ತಾನ ಸೋತ ತಕ್ಷಣ ಪಟಾಕಿ ಹೊಡೆಯುವ ಹಿಂದೂಗಳು, ಭಾರತ ಸೋತ ತಕ್ಷಣ ಕುಣಿದು ಕುಪ್ಪಳಿಸುವ ಮುಸಲ್ಮಾನರು ನರಸಿಂಹ ಗುಡಿಯವರ "ಟೀಪು ವಿಚಾರ ವೈಭವ-ಹೃದಯ ವೈಶಾಲ್ಯ" (ನವೆಂಬರ್ 'ಕಸ್ತೂರಿ') ಲೇಖನದಿಂದ ಕಲಿತುಕೊಳ್ಳಬೇಕಾದುದು ಸಾಕಷ್ಟಿದೆ.

ದಾವಣಗೆರೆ. -ಜಾಜೂರ್ ಉಮೇಶ

ಅಮೂಲ್ಯ ನಿಧಿ

ದೂರದ ದೆಹಲಿಯಲ್ಲಿರುವ ನನಗಂತೂ 'ಕಸ್ತೂರಿ' ಪ್ರತಿ ತಿಂಗಳೂ ಬರುವ ಒಂದು ನಿಧಿ.

ಹೊಸದೆಹಲಿ. -ವೆಂಕಟೇಶ ದ. ಕಳಸಾಪುರ.

ಸರಳ-ಸುಭಗ

ಶ್ರೀಮತಿ ವಂದನಾ ಶಾನಭಾಗರ 'ಟೆಲಿಗ್ರಾಫಿ-ಅಂದು ಇಂದು' (ಡಿಸೆಂಬರ್ 87) ಸರಳವಾಗಿ ನಮಗೆ ಅದರ ತಾಂತ್ರಿಕತೆಯ ಕುರಿತು ಮಾಹಿತಿ ನೀಡಿದ ಲೇಖನ. ಎಸ್ಸೆಸ್ಸೆಲ್ಸಿ ಓದು ತ್ತಿರುವ ನನಗಂತೂ ಈ ಲೇಖನ ತುಂಬಾ ಉಪಯುಕ್ತ.

ಜಮಾಲಪುರ. -ಸಯೀದಾ ಕಿತ್ತೂರ

ಕಸ್ತೂರಿ

ಸಂಚಿಕೆ: ೫ ಜನವರಿ ೧೯೮೮ ವರ್ಷ: ೩೨

ನೈಜಭಕ್ತಿ

ನಾರದ ಮಹರ್ಷಿ, ರುಕ್ಮಿಣಿ ಹಾಗೂ ಸತ್ಯಭಾಮೆಯವರಿಗೆ ತಮಗಿಂತ ಮಿಗಿಲಾದ ಕೃಷ್ಣ ಭಕ್ತರೇ ಇಲ್ಲವೆಂದು ಗರ್ವ. ಅದನ್ನು ಮುರಿಯಬೇಕೆಂದು ಶ್ರೀಕೃಷ್ಣ ಒಂದು ಹೊಂಚು ಹೂಡಿದ. ಒಮ್ಮೆ ನಾರದ ದರ್ಶನಕ್ಕೆ ಬಂದಾಗ ಶ್ರೀಕೃಷ್ಣ ಹೊಟ್ಟೆ ಹಿಡಿದುಕೊಂಡು ನರಳಾಡುತ್ತಿದ್ದ. "ನಾರದಾ, ನನಗೆ ತಡೆಯಲಾರದಂಥ ಹೊಟ್ಟೆ ನೋವು. ಭಕ್ತರ ಪಾದ ತೊಳೆದು ಆ ನೀರನ್ನು ಕುಡಿದರೆ ಮಾತ್ರ ಅದು ಶಮನವಾಗುತ್ತದೆ. ಬೇಗನೆ ಕಾಲು ತೊಳೆದುಕೊಂಡು ಆ ನೀರನ್ನು ಕುಡಿಸು" ಎಂದ.

ನಾರದ ಹೌಹಾರಿದ "ಪರಮಾತ್ಮ ನಿನಗೆ ನನ್ನ ಕಾಲು ತೊಳೆದ ನೀರನ್ನು ಕುಡಿಸಿದರೆ ನಾನು ಮಹಾ ಪಾಪಿ ಎನಿಸಿಕೊಳ್ಳುತ್ತೇನೆ. ರೌರವ ನರಕಕ್ಕೆ ಹೋಗುತ್ತೇನೆ. ಎಂದಿಗೂ ಆ ರೀತಿ ಮಾಡಲಾರೆ".

"ಹೋಗಲಿ ಬಿಡು. ಕಾಲು ತೊಳೆದ ನೀರು ಕುಡಿಸುವಂತೆ ರುಕ್ಮಿಣಿಗೆ ಹೇಳು".

ನಾರದ ರುಕ್ಮಿಣಿಯ ಬಳಿಗೆ ಹೋಗಿ ಶ್ರೀಕೃಷ್ಣನ ಸೂಚನೆ ತಿಳಿಸಿದ.

"ಅಯ್ಯೋ ದೇವರೆ, ಶ್ರೀಕೃಷ್ಣ ನನ್ನ ಪತಿಯಷ್ಟೇ ಅಲ್ಲ, ಸಾಕ್ಷಾತ್ ಭಗವಂತ. ಅವನ ಸೂಚನೆ ಒಪ್ಪಲು ಸಾಧ್ಯವೇ ಇಲ್ಲ" ರುಕ್ಮಿಣಿ ಸ್ಪಷ್ಟವಾಗಿಯೇ ಹೇಳಿದಳು.

ಇನ್ನೂ ಹೊಟ್ಟೆ ಹಿಡಿದುಕೊಂಡು ಕುಳಿತಿದ್ದ ಶ್ರೀಕೃಷ್ಣನ ಬಳಿಗೆ ಬಂದ ನಾರದ "ಔಷಧ" ಕೊಡಲು ರುಕ್ಮಿಣಿ ನಿರಾಕರಿಸಿದ್ದನ್ನು ನಿವೇದಿಸಿದ.

"ಆಗಲಿ, ಬೇಗನೆ ಸತ್ಯಭಾಮೆಯ ಮನೆಗೆ ಓಡಿ ಕಾಲು ತೊಳೆದ ನೀರನ್ನು ಕೊಡುವಂತೆ ಹೇಳು" ಎಂದು ಶ್ರೀಕೃಷ್ಣ ನಾರದನನ್ನು ಕಳುಹಿಸಿದ.

ಸತ್ಯಭಾಮೆಯೂ ಅದಕ್ಕೆ ಒಪ್ಪಲಿಲ್ಲ. ಬರಿಗೈಯಿಂದ ಬಂದ ನಾರದನನ್ನು ನೋಡಿ ಶ್ರೀಕೃಷ್ಣ ನೋವು ಮತ್ತಷ್ಟು ಹೆಚ್ಚಾದಂತೆ ನಟಿಸಿದ. "ನನ್ನ ಹೊಟ್ಟೆನೋವು ನಿವಾರಿಸಲು ಪರಮ ಭಕ್ತರು ಯಾರೊಬ್ಬರೂ ಸಿದ್ಧರಿಲ್ಲವೆ? ಇರಲಿ. ರಾಧೆಯೊಬ್ಬಳಿದ್ದಾಳೆ. ಆಕೆಯನ್ನು ಕೇಳಿ ಬರುತ್ತೀಯಾ".

ನಾರದ ರಾಧೆಯ ಮನೆಗೆ ಹೋಗಿ ಶ್ರೀಕೃಷ್ಣನ ಅಸ್ವಾಸ್ಥ್ಯಕ್ಕೆ ಔಷಧ ಕೊಡುವಂತೆ ಕೇಳಿದ. ಕೂಡಲೇ ರಾಧೆ ಒಳಗೆ ಹೋಗಿ ಕಾಲು ತೊಳೆದು ಒಂದು ತಂಬಿಗೆ ತುಂಬಾ ನೀರನ್ನು ತಂದು ನಾರದನ ಕೈಗೆ ಕೊಡುತ್ತ "ನಾರದಾ, ನನ್ನ ಸ್ವಾಮಿಗೆ ಕಾಲು ತೊಳೆದ ನೀರನ್ನು ಕುಡಿಸಿದರೆ ನನಗೆ ಘೋರ ನರಕ ಪ್ರಾಪ್ತಿಯಾಗಬಹುದು. ಆದರೆ ಆ ನೀರು ಕುಡಿದು ಅವನಿಗೆ ಸೌಖ್ಯವಾಗುವಂತಿದ್ದರೆ, ನಾನು ಎಷ್ಟು ಬಾರಿ ಬೇಕಾದರೂ ನರಕಕ್ಕೆ ಹೋಗಲು ಸಿದ್ಧ".

ನಾರದ ಭಕ್ತಳ ಕಾಲು ತೊಳೆದ ನೀರನ್ನು ಕೃಷ್ಣನ ಬಳಿಗೆ ತಂದಾಗ ಅವನ ಹೊಟ್ಟೆನೋವು ಮಾಯವಾಗಿತ್ತು. ನಾರದ, ರುಕ್ಮಿಣಿ, ಸತ್ಯಭಾಮೆಯರಿಗೆ ನೈಜಭಕ್ತಿಯ ಅರ್ಥವೂ ಆಗಿತ್ತು. ●

ಮಹರ್ಷಿ ವಿಶ್ವಾಮಿತ್ರ

ಕ್ಷಾತ್ರ ಬಲಕ್ಕಿಂತ ಬ್ರಹ್ಮ ತೇಜಸ್ಸು ಶ್ರೇಷ್ಠವಾದುದೆಂದು ಸ್ವಾನುಭಾವದಿಂದ ಅರಿತು, ಬ್ರಹ್ಮ ತೇಜಸ್ಸು ಮತ್ತು ಗೌರವ ದೊರಕಿಸಿದ ಮಹಾನ್ ತಪಸ್ವಿ ವಿಶ್ವಾ ಮಿತ್ರರು. ಪ್ರಚಂಡ ತಪೋಬಲದಿಂದ ಹೊಸ ಸೃಷ್ಟಿಯನ್ನೇ ನಿರ್ಮಿಸಿದ ಅವರು ಜಗತ್ತಿಗೆ ಮಾಡಿದ ಕಲ್ಯಾಣ ಅನುಪಮ. ಅಂತೆಯೇ ಅವರಿಗೆ ವಿಶ್ವದ ಮಿತ್ರನೆಂಬ ಅನ್ವರ್ಥಕನಾಮ. ಸರ್ವ ವೇದಗಳೂ ಪುರುಷ ಸೂಕ್ತದ ವ್ಯಾಖ್ಯಾನವಾದರೆ ಪುರುಷ ಸೂಕ್ತವು ತ್ರಿಪದಾ ಗಾಯತ್ರಿಯ ವ್ಯಾಖ್ಯಾನ. ಗಾಯತ್ರಿ ಮಂತ್ರದ ದೃಷ್ಟಾರನೇ ಈ ಮಹಾಮಹಿಮ. ಋಗ್ವೇದದ ಮೂರನೆಯ ಮಂಡಲದಲ್ಲಿಯ ಸೂಕ್ತಗಳೆಲ್ಲದರ ದೃಷ್ಟಾರರು ವಿಶ್ವಾಮಿತ್ರರು, ಅವರ ಶಿಷ್ಯರು ಹಾಗೂ ಗೋತ್ರಜರು. ಯಜ್ಞದಲ್ಲಿ ಬಲಿ ಯಾಗಲು ಹೊರಟಿದ್ದ ಶುನಶ್ಯೇಪನಿಗೆ ಅವರು ಹೇಳಿಕೊಟ್ಟ ಮಂತ್ರ ಅವನ ಜೀವ ಉಳಿಸಿತು. ಅವರ ಪ್ರೀತಿ ವಾತ್ಸಲ್ಯಗಳ ಕೂಸಾಗಿ, ಮಗನಾಗಿ ಆತ ದೇವರಾತ ನೆನೆಸಿಕೊಂಡ.

ಚಂಡ ಕೌಶಿಕನೆಂದು ಖ್ಯಾತರಾದರೂ ವಿಶ್ವಾಮಿತ್ರರು ದಯೆ, ಕರುಣೆಗಳ ಸಾಕಾರ. ದುಃಖಿತನಾಗಿ ಬಂದ ತ್ರಿಶಂಕುವಿನ ಬೇಡಿಕೆಯನ್ನು ತಪೋಬಲದಿಂದ ಈಡೇರಿಸ ಹೊರಟ ಅವರ ಅನುಕಂಪ ಹಟಗಳೆಲ್ಲ ರೋಮಾಂಚಕಾರಿ. "ಅನ್ಯಮಿಂದ್ರಮ್ ಕರಿಷ್ಯಾಮಿ" ಎಂದ ಅವರು ತ್ರಿಶಂಕುವಿಗೆ ಅಂತರಿಕ್ಷದಲ್ಲೇ ನೆಲೆಕಲ್ಪಿಸಿ "ವಿಶ್ವಾಮಿತ್ರ ಸೃಷ್ಟಿ" ಮಾಡಿದ ಬಗೆ ಅಗಾಧವಾದುದು. ಅವರ ಪ್ರಾರ್ಥನಾ ಬಲ ಮಂತ್ರ ಶಕ್ತಿ ಅಸಾಮಾನ್ಯ. ಅವರ ಪ್ರಾರ್ಥನೆ ಕೇಳಿ ಹರಿವ ಸಿಂಧುನದಿ ದಾರಿ ಬಿಟ್ಟದ್ದು ವೇದೋಕ್ತ. ವಶಿಷ್ಠರೊಂದಿಗೆ ಆಧ್ಯಾತ್ಮಿಕ ರಾಜಕೀಯ ರಂಗದಲ್ಲಿ ಸೆಣಸಿ ಅವರಿಂದಲೇ ಮಹರ್ಷಿಯೆನಿಸಿಕೊಂಬ ಹಟ ವಿಶ್ವಾಮಿತ್ರರಿಗಲ್ಲದೆ ಇನ್ನಾರಿಗೆ ಸಾಧ್ಯ. ಅವರ ತಪಸ್ಸಿನ ಪ್ರಭಾವ ಮೂರು ಲೋಕಗಳಿಗೆ ಚುರುಕು ಕೊಟ್ಟಿದೆ. ಅವರ ತಪಸ್ಸು ಕೆಡಿಸಲು ಕಳಿಸಿದ ಮೇನಕೆಯು ಅವರಿಗೆ ಶಕುಂತಲೆಯನ್ನು ನೀಡಿದಳು. ಶಕುಂತಲೆಯ ಮಗ ಭರತ ನಿಂದಲೇ ಈ ಭರತ ಭೂಮಿಹೆಸರು ಪಡೆದಿದ್ದು. ಶ್ರೀರಾಮಚಂದ್ರ ವಿಷ್ಣುವಿನ ಅವತಾರ. ಆದರೂ ಬಲ, ಅತಿಬಲ ಅಸ್ತ್ರಗಳ ಉಪದೇಶ ಕಾರ್ಯ ಅವರಿಂದ. ಅಹಲ್ಯೋದ್ಧಾರವಾದುದು ಅವರು ಯಜ್ಞಾನಂತರ ವಿದೇಹ ನಗರಿಗೆ ಹೊರಟಾಗ. ಸೀತಾರಾಮರ ಕಲ್ಯಾಣ ಕೂಡ ವಿಶ್ವಾಮಿತ್ರರ ಯೋಜನೆಯೇ. ತಮ್ಮ ತಪಸ್ಸು ತೇಜಸ್ಸು, ಜ್ಞಾನ, ಸಾಧನೆಗಳಿಂದ ಸಪ್ತಋಷಿಗಳ, ಸ್ಥಾನಪಡೆದು ಮೆರೆಯುತ್ತಿರುವ ಅವರು ಭಾರತೀಯರಿಗೆ ಮಾಡಿದ ಉಪಕಾರ ಅನನ್ಯ. ಅವರು ಕಂಡ "ಗಾಯತ್ರಿ ಮಂತ್ರ"ವೊಂದೇ ಸಾಕು ಅವರ ಮಹತಿಯ ಪರಿಚಯಕ್ಕೆ. ಬುದ್ಧಿ, ಬಲಗಳನ್ನು ಕೊಡಲು ಸವಿತೃನಾಮಕ ವಿಷ್ಣುವನ್ನು ಕೇಳಿಕೊಳ್ಳುವ ಈ ಮಂತ್ರದ ಬಲವೇ ಬಲ. ಗುರೂಪದೇಶ ಪಡೆದು ಸಾಧನಾ ಪೂರ್ವಕ ಇದರ ಜಪ ಮಾಡಿದವರೆಲ್ಲ ಎಷ್ಟೋಶಕ್ತಿ ಜ್ಞಾನ, ಬಲಗಳನ್ನು ಪಡೆದಿರುವರು. ಅದನ್ನರಿಯುವುದು ಭಾರತೀಯರ ಕರ್ತವ್ಯ. ●

ದಶಕದತ್ತ........

'ರಾನಿ-'ರಾಕಿ ಸಮರ

– ಟಿ.ಎಂ. ಸುಬ್ಬರಾಯ

ಇರಾಕಿನ ಅಧ್ಯಕ್ಷ ಸದ್ದಾಮ್ ಹುಸೇನರು 1980 ರ ಸೆಪ್ಟಂಬರಿನಲ್ಲಿ ಇರಾನಿನೊಡನೆ ಸಮರವನ್ನು ಆರಂಭಿಸಿದರು. ಶಾ ರಹಿತವಾದ ತೆಹರಾನಿನ ಆಡಳಿತದಲ್ಲಿ ಅಸ್ಥಿರತೆಯನ್ನುಂಟು ಮಾಡುವುದು ಅತಿ ಸುಲಭವೆಂದು ಅವರು ಎಣಿಸಿದ್ದರು. ಸಮರ ಆರಂಭವಾಗಿ ಏಳು ವರುಷಗಳೇ ಸಂದಿವೆಯಾದರೂ ಪ್ರಮುಖ ಅರಬ್ ರಾಷ್ಟ್ರಗಳ ನೆರವು ಬಲಿಷ್ಠ ಸೇನಾ ಬಲವಿದ್ದರೂ ಇರಾಕಿನ ಪಾಲಿಗೆ ಜಯ ಇನ್ನೂ ಕನಸಿನ ಗಂಟಾಗಿಯೇ ಉಳಿದಿದೆ. ವಾಯು ಬಲವನ್ನು ಹೆಚ್ಚಾಗಿ ಅವಲಂಬಿಸದೆ ತಮ್ಮ ಭೂದಳದಿಂದಲೇ ದಿಟ್ಟ ಹೋರಾಟ ನೀಡುತ್ತಿರುವ ಇರಾನಿಯರು ದಿನೇ ದಿನೇ ಹುಸೇನರ ಲೆಕ್ಕಾಚಾರವನ್ನು ಹುಸಿ ಮಾಡುತ್ತಿದ್ದಾರೆ. ಸೋಲು ಗೆಲುವು ಸದ್ಯಕ್ಕೆ ನಿರ್ಧಾರವಾಗಲಿಕ್ಕಿಲ್ಲ. ಆದರೆ, ಇರಾನಿಯರು ಸಮರದಲ್ಲಿ ಈಗಾಗಲೇ ತಮ್ಮ ಪ್ರಾಬಲ್ಯವನ್ನು ಮೆರೆದಿದ್ದಾರೆ. ಇರಾಕ್ ಗಡಿಯಲ್ಲಿಯ ಹಲವು ಪ್ರದೇಶಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದ್ದಾರೆ. ಆ ಮೂಲಕವಾಗಿ ಕೊಲ್ಲಿ ರಾಷ್ಟ್ರಗಳಿಗೆ ದಿಗಿಲು ಹುಟ್ಟಿಸಿದ್ದಾರೆ.

ಕಳೆದ ವರುಷದ ಅಂತ್ಯದಲ್ಲಿ ನಡೆಸಿದ ಒಂದು ಸಮೀಕ್ಷೆಯಂತೆ ಇರಾನ್-ಇರಾಕ್ ಸಮರದಲ್ಲಿ ಇದುವರೆಗೆ ಸತ್ತವರ ಮತ್ತು ಶಾಶ್ವತವಾಗಿ ಅಂಗವಿಕಲರಾದವರ ಸಂಖ್ಯೆ ಹತ್ತು ಲಕ್ಷಕ್ಕಿಂತಲೂ ಅಧಿಕ. ಎರಡೂ ರಾಷ್ಟ್ರಗಳಿಗೆ ಆರ್ಥಿಕವಾಗಿ ಉಂಟಾಗಿರುವ ನಷ್ಟ ೬೦೦ ಬಿಲಿಯನ್ ಡಾಲರ್‌ಗಳಷ್ಟು. ಈ ಏಳು ವರುಷಗಳ ಸಮರಾವಧಿಯಲ್ಲಿ ಇರಾಕ್ ಪಡೆದಿರುವ ಸಾಲ ಒಟ್ಟು ೭೫ ಬಿಲಿಯನ್ ಡಾಲರ್‌ಗಳು. ಹೇಗಾದರೂ ಆಯಾತುಲ್ಲಾ ಖೊಮೇನಿಯನ್ನು ಬಗ್ಗು ಬಡಿಯ ಬೇಕೆಂದು ಇರಾಕಿನ ಇರಾದೆ. ಅದಕ್ಕಾಗಿ ಇರಾಕ್ ಹೂಡದ ತಂತ್ರವಿಲ್ಲ. ಆಡದ ಆಟವಿಲ್ಲ. ವಿಷಾಯುಕ್ತ ಅಸ್ತ್ರಗಳನ್ನೂ ಅದು ಇರಾನಿಯರ ಮೇಲೆ ಪ್ರಯೋಗಿಸಿದೆ. ಆದರೆ ತಾನು ಅಂಥ ಅಸ್ತ್ರ ಬಳಸಿಯೇ ಇಲ್ಲ, ಆರೋಪ ಹುರುಳಿಲ್ಲದ್ದು ಎಂದು ತಳ್ಳಿ ಹಾಕುವ ಯತ್ನವನ್ನು ನಡೆಸಿದೆ. ಆದರೆ ವಿಶ್ವಸಂಸ್ಥೆಯ ಪರಿಣತರ ತಂಡ ಇಂಥ ವಿಷಪೂರಿತ ಆಯುಧಗಳ ಬಳಕೆಯಾಗಿರುವುದನ್ನು ಆಧಾರ ಸಹಿತವಾಗಿ ಪತ್ತೆ ಹಚ್ಚಿದೆ.

ಹುಸೇನರ ಇನ್ನೊಂದು ಅವಿವೇಕದ ಕೆಲಸವೆಂದರೆ ಕೊಲ್ಲಿ ಪ್ರದೇಶದಲ್ಲಿ ಟ್ಯಾಂಕರ್ ಸಮರವನ್ನು ಆರಂಭಿಸಿ ಇರಾನಿನ ತೈಲವಾಹಕ ನೌಕೆಗಳ ನಾಶಕ್ಕೆ ತೊಡಗಿದ್ದು. ಇದು ಪ್ರಾರಂಭ ವಾದದ್ದು ೧೯೮೧ ರಲ್ಲಿ. ಇರಾಕಿನ ಈ ಬಗೆಯ ದಾಳಿಗೆ ಪ್ರತಿಯಾಗಿ ಇರಾನ್ ಕೂಡಾ ಅದೇ ಬಗೆಯ ಕಾರ್ಯಾಚರಣೆಗೆ ತೊಡಗಿತು. ಲಂಡನ್ನಿನ ಲಾಯ್ಡ್ಸ್ ದಾಖಲೆಯ ವರದಿಯಂತೆ ೧೯೮೧ರ ಮೇ ತಿಂಗಳಿನಿಂದ ೧೯೮೭ರ ಜೂನ್ ನಡುವಿನ ತನಕ ಒಟ್ಟು ೩೨೪ ತೈಲವಾಹಕ ನೌಕೆಗಳನ್ನು

ಅರ್ಧಂಬರ್ಧ ಅಥವಾ ಪೂರ್ಣವಾಗಿ ನಾಶಗೊಳಿಸಲಾಗಿದೆ. ೧೯೮೪-೮೭ ಅವಧಿಯಲ್ಲಿ ಹೀಗೆ ದಾಳಿಗೆ ತುತ್ತಾದ ತೈಲವಾಹಕ ನೌಕೆಗಳು ಒಟ್ಟು ೨೬೪. ಅವುಗಳಲ್ಲಿ ಇರಾಕಿನವರು ಧ್ವಂಸಗೊಳಿಸಿದ್ದು ೧೬೪. ಇರಾನಿಯರು ಧ್ವಂಸಗೊಳಸಿದ್ದು ೧೦೦. ಪರಿಣಾಮವಾಗಿ ಬಾಗದಾದ್ ತನ್ನ ನೌಕೆಗಳ ಸಂಚಾರವನ್ನು ಸ್ಥಗಿತಗೊಳಿಸಿದೆ. ತನ್ನ ದೇಶದ ಬಂದರುಗಳನ್ನು ಮುಚ್ಚಿದೆ. ಇರಾಕ್ ಈಗ ತನ್ನ ತೈಲವನ್ನು ಮುಖ್ಯವಾಗಿ ನೆಲದ ಮೇಲೆ ಕೊಳವೆಗಳ ಮೂಲಕ ಸಾಗಿಸುತ್ತಿದೆ. ಹುಸೇನರ ಬೆನ್ನೆಲುಬು ಕುವೈತ್ ಎಂಬುದನ್ನು ಬಲ್ಲ ಆಯಾತುಲ್ಲಾ ಖೊಮೇನಿ ಕುವೈತಿನ ತೈಲವಾಹಕ ನೌಕೆಗಳತ್ತ ತಮ್ಮ ಲಕ್ಷ್ಯ ಹರಿಸಿದ್ದಾರೆ. ಇರಾಕ್-ಇರಾನ್ ನೆರೆಯಲ್ಲಿರುವ ಖಾರಿ ಈಗ ವಿಶೇಷ ಮಹತ್ವ ಪಡೆದಿದೆ. ಈ ಖಾರಿಯ ಒಂದು ಬದಿಯಲ್ಲಿ ಇರಾನ್ ಇದೆ. ಇರಾನಿಗೆ ಹೊಂದಿಕೊಂಡಂತೆ ಅದಕ್ಕೆ ಪೂರ್ವ ದಿಕ್ಕಿನಲ್ಲಿ ಅಫಘಾನಿಸ್ತಾನ, ಪಾಕಿಸ್ತಾನಗಳು ಹಬ್ಬಿವೆ. ಈ ಖಾರಿಯ ಮೂತಿಯ ಬಳಿ ಅದರ ಪಶ್ಚಿಮ ಅಂಚಿನಲ್ಲಿ ಇರಾಕಿಗೆ ಹೊಂದಿಕೊಂಡಂತೆ ಇರುವ ದೇಶ ಕುವೈತ್ ಸೌದಿ ಅರೇಬಿಯ ಸಂಯುಕ್ತ ಅರಬ್ ಎಮಿರೇಟುಗಳು ಇವೆಲ್ಲಾ ಖಾರಿಯ ದಕ್ಷಿಣ ಬದಿಗೆ ಕುವೈತಿನೊಂದಿಗೆ ಸಾಲಾಗಿ ಮಾಲೆಯಂತೆ ಹಬ್ಬಿವೆ. ಆದ್ದರಿಂದ ಖಾರಿಯೇ ಈ ದೇಶಗಳಿಗೆಲ್ಲ ಜೀವನಾಡಿ. ಈ ದೇಶಗಳ ತೈಲ ಹೊರಕ್ಕೆ ಹೋಗುವುದು ಈ ಖಾರಿಯ ಮೂಲಕ. ಕುವೈತ್ ಕೂಡ ಈ ಖಾರಿಯ ಮೂಲಕ ತನ್ನ ತೈಲವಾಹಕ ನೌಕೆಗಳನ್ನು ಕಳುಹಿಸುತ್ತದೆ. ಕುವೈತ್ ಇರಾಕಿನ ಮಿತ್ರ ದೇಶ. ಇರಾಕಿಗೆ ಅದು ನೆರವು ನೀಡುತ್ತಿದೆಯೆಂದು ಇರಾನಿನ ಕೋಪ. ಅದಕ್ಕಾಗಿ ಇರಾನ್ ಕುವೈತಿನ ತೈಲವಾಹಕ ನೌಕೆಗಳಿಗೆ ಪ್ರಹರಿಸುತ್ತಿದೆ. ತಮ್ಮಲ್ಲಿಂದ ಅಮೇರಿಕಕ್ಕೆ ತೈಲ ತುಂಬಿಕೊಂಡು ಸಾಗುತ್ತಿದ್ದ ಹನ್ನೊಂದು ನೌಕೆಗಳಿಗೆ ರಕ್ಷಣೆ ಒದಗಿಸಬೇಕೆಂದು ಕುವೈತ್ ರೇಗನ್ ಸರಕಾರ ವನ್ನು ಕೋರಿತು. ಅಮೇರಿಕ ಮೊದಲು ಒಲ್ಲೆನೆಂದಿತು. ಆದರೆ ಕೊನೆಯಲ್ಲಿ ಅನಿವಾರ್ಯವಾಗಿ ಒಪ್ಪಿಕೊಂಡಿತು. ಕುವೈತಿನ ತೈಲವಾಹಕ ನೌಕೆಗಳಿಗೆ ತಮ್ಮ ರಾಷ್ಟ್ರದ ಧ್ವಜ, ನೌಕಾಬಲ ಹಾಗೂ ವಾಯುಬಲದ ನೆರವು ನೀಡುವುದಾಗಿ ರೇಗನ್ ಸಾರಿದರು. ಮಾತ್ರವಲ್ಲ, ಇರಾನ್ ಖಾರಿ ಪ್ರದೇಶದ ಮುಕ್ತ ಸಾರಿಗೆಗೆ ಅಡ್ಡಿ ಬರುತ್ತಿದೆಯೆಂದು ಆರೋಪಿಸಿದರು. ಅಮೇರಿಕಾದ ಹಿತರಕ್ಷಣೆಯ ಉದ್ದೇಶದಿಂದಾಗಿ ಸೇನಾ ನೌಕೆಯ ಸಹಿತ ತೈಲವಾಹಕ ನೌಕೆಯ ಸಂಚಾರ ಅಗತ್ಯ ಎಂದು ಪ್ರತಿಪಾದಿಸಿದರು. ವಾಸ್ತವವಾಗಿ ಅಮೇರಿಕ ಖಾರಿ ಪ್ರದೇಶದ ತೈಲವನ್ನವಲಂಬಿಸಿಲ್ಲ. ಆದರ ಅಗತ್ಯದ ಶೇಕಡ ೬ರಷ್ಟು ಮಾತ್ರ ಇದರಿಂದ ಪೂರೈಕೆಯಾಗುತ್ತಿದೆ. ಖಾರಿ ಪ್ರದೇಶದ ಹಡಗು ಸಾರಿಗೆಯಲ್ಲಿ ಶೇಕಡಾ ೭೦ಕ್ಕೆ ಅಪಾಯ ಒದಗಿರುವುದು ಇರಾಕಿನಿಂದ.

ಈ ಇರಾನ್-ಇರಾಕ್ ರಕ್ತಸಿಂಚಿತ ಯುದ್ಧವನ್ನು ನಿಲ್ಲಿಸಲು ಹಲವು ಬಾರಿ ಯತ್ನ ನಡೆದಿದೆ. ಅಲಿಪ್ತ ರಾಷ್ಟ್ರಗಳು, ಇಸ್ಲಾಮೀ ಸಮ್ಮೇಳನ, ವಿಶ್ವಸಂಸ್ಥೆ ಎಲ್ಲರೂ ಮೊರೆಯಿಟ್ಟಿದ್ದಾರೆ. ಆದರೂ ಯುದ್ಧನಿಂತಿಲ್ಲ. ಅಂತರರಾಷ್ಟ್ರೀಯ ಸಮೂಹಗಳು ಸೂಚಿಸಿದ ಸಲಹೆಯನ್ನು ಇರಾಕ್ ಆರಂಭದ ದಿನಗಳಲ್ಲಿ ತನ್ನ ಸೊಕ್ಕಿನಿಂದಾಗಿ ತಿರಸ್ಕರಿಸಿತ್ತು. ವಿಶ್ವಸಂಸ್ಥೆಯ ಕರೆಯನ್ವಯ ತಾನು ಯುದ್ಧವಿರಾಮಕ್ಕೆ ಸಿದ್ಧ ಎನ್ನುವ ನಾಟಕವನ್ನಾಡುತ್ತಲೇ ಬಂದಿತ್ತು. ಆದರೆ ಆಕ್ರಮಣ ಆರಂಭಿಸಿದ ಇರಾಕಿನ ಈಗಿನ ಸ್ಥಿತಿ, ಮರ್ಯಾದೆಯಾಗಿ ಈ ಯುದ್ಧ ಮುಗಿಸಿದರೆ ಸಾಕು ಎನಿಸುವಂತಾಗಿದೆ. ಆದರೆ ಇರಾನಿನದು ಒಂದೇ ಹಠ. ಕೊನೆಯ ತನಕ ಯುದ್ಧ ಮಾಡಿಬಿಡಬೇಕು. ಬಾಗ್‌ದಾದಿನಲ್ಲಿ ಹುಸೇನರ ಆಡಳಿತ ಕೊನೆಗೊಳಿಸಬೇಕು. ಇರಾನ್ ಪ್ರತಿ ಬಾರಿಯೂ ಯುದ್ಧ ನಿಲುಗಡೆಗೆ ವಿರೋಧ ಸೂಚಿಸುತ್ತಾ ಬಂದಿದೆ. ಇದಕ್ಕೆ ಒಂದು ಬಲವಾದ ಕಾರಣವಿದೆ. ಇರಾಕ್ ಇರಾನಿನ ಮೇಲೆ ಆಕ್ರಮಣ ಮಾಡಿದ್ದು ತಪ್ಪು ಎಂಬುದನ್ನು ಯಾವೊತ್ತೂ ವಿಶ್ವಸಂಸ್ಥೆ ಖಂಡಿಸಿಲ್ಲ.

ಇರಾನ್-ಇರಾಕ್ ಯುದ್ಧ ನಿಲ್ಲಬೇಕೆಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ಯಾರೂ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಬೃಹತ್ ರಾಷ್ಟ್ರಗಳ ವಿರಸದಿಂದಾಗಿ ಒಕ್ಕೊರಲಿನಿಂದ ಕೂಗಲಾರದ ವಿಶ್ವಸಂಸ್ಥೆಯ ಭದ್ರತಾ ಮಂಡಲಿಯ ನಿರ್ಣಯಗಳು ಸತ್ವಹೀನವಾಗಿವೆ ದೊಡ್ಡ ರಾಷ್ಟ್ರಗಳು ನಿಜಕ್ಕೂ ಪರಿಸ್ಥಿತಿಯನ್ನು ಗಂಭೀರವಾಗಿ ತೆಗೆದುಕೊಂಡಿದ್ದ ಪಕ್ಷದಲ್ಲಿ ಇನ್ನೂ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತಿದ್ದವು. ಆದರೆ ಅವೇ ಇರಾನ್-ಇರಾಕ್‌ಗಳಿಗೆ ಅಸ್ತ್ರಗಳ ಮಾರಾಟ ಮಾಡುತ್ತಾ ಬಂದಿವೆ. ಅವೇ ಅಸ್ತ್ರ ಕೊಟ್ಟು ಯುದ್ಧ ಮಾಡಿಸುತ್ತಿವೆ.



ಇರಾನ್-ಇರಾಕ್ ಯುದ್ಧ ಮಾಡುತ್ತಲೇ ಇರಬೇಕು. ತಮ್ಮ ಅಸ್ತ್ರ ಮಾರಾಟವಾಗುತ್ತಲೇ ಇರಬೇಕು ಎನ್ನುವ ಧೋರಣೆ ದೊಡ್ಡ ರಾಷ್ಟ್ರಗಳದು.

ಅಮೇರಿಕ ಇರಾನನ್ನು ಹೃದಯಾಂತರಾಳದಿಂದ ದ್ವೇಷಿಸುತ್ತಾ ಬಂದಿದೆ. ಅದಕ್ಕೆ ಹಲವು ಕಾರಣಗಳೂ ಉಂಟು. ಅಮೇರಿಕದ ಮಿತ್ರರಾಗಿದ್ದ ಶಾರನ್ನು ಈಗಿನ ಆಯಾತುಲ್ಲಾ ಖೊಮೇನಿ ಆಡಳಿತ ಪದಚ್ಯುತಗೊಳಿಸಿತು. ಶಾರ ಪತನದಿಂದ ಅಮೇರಿಕಕ್ಕೆ ಭಾರೀ ನಷ್ಟವಾಯಿತು.

ಹಲವು ಅಮೇರಿಕನರನ್ನು ಇರಾನ್ ಒತ್ತೆಯಾಳಾಗಿ ಇಟ್ಟುಕೊಂಡಿತ್ತು. ಇರಾನಿಗೆ ಯಾವುದೇ ಸಹಾಯ ಮಾಡಬಾರದೆಂಬುದು ಅಮೇರಿಕದ ಬಹಿರಂಗ ನಿಲುವು. ಆದರೆ, ರೇಗನ್ನರ ಅಮೇರಿಕವೇ ಇರಾನಿಗೆ ರಹಸ್ಯವಾಗಿ ಅಸ್ತ್ರ ಒದಗಿಸಿತು. ಇದು ಈಗ ತನಿಖೆಗೆ ಒಳಪಟ್ಟ ಸಂಗತಿ. ಇರಾನ್ ಗೆಲ್ಲಬಾರದೆಂಬುದು ರೆಗನ್ನರ ಇಚ್ಛೆ ಕೂಡ. ಆದರೆ ತನ್ನ ಮಿತ್ರ ರಾಷ್ಟ್ರವಾದ ಇಸ್ರೇಲಿನ ಓತವನ್ನೂ ಅಮೇರಿಕ ಪರಿಗಣಿಸಬೇಡವೇ? ಇರಾನ್ ಇರಾಕ್‌ಗಳ ಪೈಕಿ ಇರಾಕಿನ ಬಗ್ಗೆ ಇಸ್ರೇಲಿಗೆ ಹೆಚ್ಚಿನ ದ್ವೇಷ. ಇರಾನೂ ಗೆಲ್ಲಬಾರದು, ಇರಾಕೂ ಗೆಲ್ಲಬಾರದು, ಯುದ್ಧ ನಡೆಯುತ್ತಿರಬೇಕು. ಇದು ಇಸ್ರೇಲಿನ ಅಪೇಕ್ಷೆ ಅದಕ್ಕಾಗಿ ಇಸ್ರೇಲ್ ಅಮೇರಿಕದ ಮೇಲೆ ತನ್ನ ಪ್ರಭಾವ ಬೀರಿ ಇರಾನಿಗೆ ಅದು ಅಸ್ತ್ರ ಪೂರೈಕೆ ಮಾಡುವಂತೆ ನೋಡಿಕೊಂಡಿತು. ಈ ಅಸ್ತ್ರ ಮಾರಾಟದಿಂದ ಬಂದ ಲಾಭದಿಂದ ನಿಕರಾಗುವದ ಅಧಿಕೃತ ಸರಕಾರದ ವಿರುದ್ಧ ಹೋರಾಡುತ್ತಿರುವ ಬಂಡುಕೋರರಿಗೆ ನೆರವು ನೀಡುವ ಉದ್ದೇಶವೂ ಇತ್ತು ರೇಗನ್ನರಿಗೆ. ರಶಿಯಾ ಇರಾನ್ ಸಂಬಂಧ ಮೊದಲಿನಿಂದಲೂ ಚೆನ್ನಾಗಿರಲಿಲ್ಲ. ಅದು ತೀರ ಹದಗೆಟ್ಟಿದ್ದು ೧೯೮೩ರಲ್ಲಿ. ಆಗ ಇರಾನ್ ತನ್ನ ದೇಶದಲ್ಲಿದ್ದ ರಶಿಯನ್ ರಾಜತಾಂತ್ರಿಕರಲ್ಲಿ ಅರ್ಧದಷ್ಟು ಮಂದಿಯನ್ನು ಹೊರದಬ್ಬಿತು. ರಶಿಯಾ ಪರವಾಗಿದ್ದ ಟ್ಯೂಡ್ಡಾ ಪಕ್ಷದ ಸಾವಿರಾರು ಸದಸ್ಯರನ್ನು ಇರಾನ್ ಬಂಧಿಸಿತು. ಮಾತ್ರವಲ್ಲ, ಬಂಧನದಲ್ಲಿರುವ ಟ್ಯೂಡ್ಡಾ ಪಕ್ಷದ ನಾಯಕರನ್ನು ಈಗಲೂ ಆಗಾಗ ದೂರದರ್ಶನವ ಮೂಲಕ ಪ್ರದರ್ಶಿಸಿ ರಶಿಯದ ಬಗೆಗೆ ತನಗಿರುವ ಕೋಪ ಪ್ರಕಟಿಸುತ್ತಿದೆ ಇರಾನ್.

ಇರಾನಿನ ಜೊತೆ ತನ್ನ ಸ್ನೇಹ ಸಂಬಂಧ ಸುಧಾರಿಸಲು ರಶಿಯ ಹಲವು ಪ್ರಯತ್ನ ನಡೆಸಿದೆ. ಇರಾನ್ ನಗರಗಳ ಮೇಲೆ ಇರಾಕಿಯರು ದಾಳಿ ನಡೆಸಿ, ತನ್ನಿಂದ ಪಡೆದ ಅಸ್ತ್ರಗಳನ್ನು ಬಳಸುತ್ತಿದ್ದಾರೆ ಎನ್ನುವ ಆರೋಪ ಬಂದಾಗ ೧೯೮೫ರಲ್ಲಿ ಇರಾಕಿಗೆ ಶಸ್ತ್ರಾಸ್ತ್ರ ಪೂರೈಸುವುದನ್ನು

ರಶಿಯು ಸ್ಥಗಿತಗೊಳಿಸಿತು. ರಶಿಯದ ವರಿಷ್ಠ ರಾಜತಾಂತ್ರಿಕರು ಬಾಗದಾದ್ ತೆಹರಾನು ಗಳಿಗೆ ಹಲವು ಬಾರಿ ಭೇಟಿ ನೀಡಿ ಶಾಂತಿ ಒಪ್ಪಂದದ ಬಗ್ಗೆ ಮಾತುಕತೆ ನಡೆಸಿದ್ದಾರೆ.

ಇರಾನಿನ ಮೇಲೆ ಇರಾಕ್ ಅಸ್ತ್ರ ಪ್ರಯೋಗಿ ಸುವುದನ್ನು ತಡೆಹಿಡಿಯುವಲ್ಲಿ ರಶಿಯ ಕುಸು ಮಟ್ಟಿಗೆ ಯಶ ಸಾಧಿಸಿದೆ ಎಂಬುದೇನೋ ನಿಜ. ಆದರೆ ಇದರಿಂದಾಗಿ ರಶಿಯದ ಬಗ್ಗೆ ತೆಹರಾನ್ ತುಂಬ ಒಳ್ಳೆಯ ಅಭಿಪ್ರಾಯ ತಳೆದಿದೆ ಎನ್ನಲಾಗದು. ಇತ್ತೀಚಿನ ದಿನಗಳಲ್ಲಂತೂ ರಶಿಯ-ಇರಾನ್ ಸಂಬಂಧ ಕೆಡುತ್ತಲೇ ಸಾಗಿದೆ. ಅಫಘಾನಿಸ್ತಾನದ ಗೆರಿಲ್ಲಾಗಳನ್ನು ಬೆಂಬಲಿಸುವಲ್ಲಿ ಇರಾನ್ ಪ್ರಮುಖ ಪಾತ್ರ ವಹಿಸುತ್ತಿದೆ. ಖೊಮೇನಿ ವಿರೋಧಿಗಳಿಗೆ ರಶಿಯ ಹಾಗೂ ಅಫಘಾನಿಸ್ತಾನ ಕುಮ್ಮಕ್ಕು ಕೊಡುತ್ತಿವೆ, ನೆರವು ನೀಡುತ್ತಿವೆ ಎಂಬುದು ಇರಾನಿನ ಆಪಾದನೆ. ಇರಾನಿನಿಂದ ಹೊರದೂಡಲ್ಪಟ್ಟ ಟ್ಯೂಡ್ಹಾ ಪಕ್ಷದ ಹಲವು ಧುರೀಣರು ಈಗ ಕಾಬೂಲಿನಲ್ಲಿ ಆಶ್ರಯ ಪಡೆದಿದ್ದಾರೆ. ೧೯೮೪ ರಿಂದ ಕಾಬೂಲಿನಲ್ಲಿ ಟ್ಯೂಡ್ಹಾ ಆಕಾಶವಾಣಿ ನಿಲಯವೊಂದು ಪ್ರಸಾರ ನಡೆಸುತ್ತಿದೆ. ಇರಾನಿನ ಗಡಿಗೆ ಹೊಂದಿಕೊಂಡಿರುವ ಬಲೂಚಿಸ್ತಾನದಲ್ಲಿ ಇರಾನಿ ಎಡಪಂಥ ಪಕ್ಷ ಫೆಡಾಯಿನ್ ಗೆರಿಲ್ಲಾಗಳನ್ನು ಟ್ಯೂಡ್ಹಾ ಧುರೀಣರು ಜೊತೆಗೂಡಿಸಿಕೊಂಡಿದ್ದಾರೆ. ಇದು ಇರಾನಿಯರ ಕೋಪವನ್ನು ಹೆಚ್ಚಿಸಿದೆ.

ಇರಾನ್ ಮತ್ತು ರಶಿಯದ ನಡುವಿನ ವ್ಯಾಪಾರ ಸಂಬಂಧ ಕೂಡ ಈಗ ಮೊದಲಿನಂತಿಲ್ಲ. ೧೯೮೫ ರಲ್ಲಿ ಇರಾನಿಗೆ ೨೦೪ ಮಿಲಿಯನ್ ರೂಬೆಲ್ ಮೌಲ್ಯದ ಸರಕನ್ನು ರಶಿಯ ರಫ್ತು ಮಾಡಿತ್ತು. ಆದರೆ ೧೯೮೬ ರಲ್ಲಿ ೫೮ ಮಿಲಿಯನ್ ರೂಬೆಲ್ ಮೌಲ್ಯದ ಸರಕನ್ನು ಮಾತ್ರ ಅದು ಇರಾನಿಗೆ ರವಾನಿಸಿದೆ. ೧೯೮೫ ರಲ್ಲಿ ಇರಾನಿನಿಂದ ರಶಿಯಕ್ಕೆ ರವಾನೆಯಾದದ್ದು ೧೪೪ ಮಿಲಿಯನ್ ರೂಬೆಲ್ ಮೌಲ್ಯದ ಸರಕು. ೧೯೮೬ ರಲ್ಲಿ ಕೇವಲ ೧೮ ಮಿಲಿಯನ್ ರೂಬೆಲ್ ಮೌಲ್ಯದ ಸರಕನ್ನು ಆ ದೇಶ ರಶಿಯಕ್ಕೆ ರವಾನಿಸಿದೆ.

ಬೇರೆ ರಾಷ್ಟ್ರಗಳು ಖಾರಿ ಪ್ರದೇಶದಲ್ಲಿರುವ ತಮ್ಮ ನೌಕೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಪಕ್ಷದಲ್ಲಿ ತಾನು ಕೂಡ ತನ್ನ ನೌಕೆಗಳನ್ನು ಅಲ್ಲಿಂದ ತೆರವು ಮಾಡಿಸುವುದಾಗಿ ಜುಲೈ ಮೂರರಂದು ರಶಿಯ ಪ್ರಕಟಿಸಿತು. ರಶಿಯ ವಿದೇಶಾಂಗ ಸಚಿವ ಶ್ರೀ ಯೂಲಿ ವೋರನ್‌ಸ್ಟೊವ್ ನೇತೃತ್ವದಲ್ಲಿ ವರಿಷ್ಠರ ನಿಯೋಗವೊಂದು ತೆಹರಾನಿಗೆ ಭೇಟಿ ನೀಡಿ ಈ ಕುರಿತು ಚರ್ಚಿಸದೆ. ಆದರೆ, ಸದ್ದಾಮ್ ಹುಸೇನ ಅಧಿಕಾರದಲ್ಲಿ ಮುಂದುವರಿಯಬೇಕೆಂಬುದು ರಶಿಯದ ಆಂತರಿಕ ಆಸೆ. ಒಂದು ವೇಳೆ ಹುಸೇನ್ ಪದಚ್ಯುತರಾದರೆ ಇರಾಕಿನಲ್ಲಿ ಚೀನಿಯರ ಪ್ರಾಬಲ್ಯ ಹೆಚ್ಚುತ್ತದೆ. ಚೀನಾ ಇರಾಕಿನಲ್ಲಿ ಪ್ರಾಬಲ್ಯ ಬೆಳೆಸಿಕೊಳ್ಳುವುದು ರಶಿಯಕ್ಕೆ ಬೇಕಾಗಿಲ್ಲ. ಹೀಗಾಗಿ ಎಲ್ಲವೂ ಗೋಜಲು.

ಇರಾನ್-ಇರಾಕ್ ಸಮರ ರಶಿಯಾ-ಅಮೇರಿಕದ ಗುದುಮುರಿಯಾಗಿದೆ. ಎರಡರ ನಡುವೆ ಆರೋಪ ಪ್ರತ್ಯಾರೋಪಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ. ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬುದು ಎರಡೂ ರಾಷ್ಟ್ರಗಳ ಧೋರಣೆ.

ಇರಾನ್-ಇರಾಕ್ ಪಶ್ಚಿಮ ಏಶಿಯದ ಎರಡು ಮುಸ್ಲಿಂ ದೇಶಗಳು. ಒಂದು ಷಿಯಾ, ಇನ್ನೊಂದು ಸುನ್ನಿ. ಎರಡೂ ಪ್ರಾಚೀನ ಸಂಸ್ಕೃತಿ ನಾಗರಿಕತೆ ಉಳ್ಳ ದೇಶಗಳು. ಪರ್ಷಿಯ ಎಂದು ಹೆಸರು ಹೊಂದಿದ್ದ ಇಂದಿನ ಇರಾನ್ ಕ್ರಿ.ಪೂ. ೨೫೦೦ ಕ್ಕೂ ಹಿಂದಿನ ಇತಿಹಾಸ ಹೊಂದಿದ್ದರೆ, ಇರಾಕ್ ಪ್ರಾಚೀನ ನಾಗರಿಕತೆಯ ತೊಟ್ಟಿಲುಗಳಲ್ಲಿ ಒಂದಾಗಿರುವ ಮೆಸಪೊಟೇಮಿಯ. ಇರಾನಿನ ವಿಸ್ತೀರ್ಣ ೬,೩೬,೨೯೪ ಚ. ಮೈಲಿಗಳು. ಇರಾಕಿನ ವಿಸ್ತೀರ್ಣ ೧,೭೩,೨೫೮ ಚದರ ಮೈಲಿಗಳು. ಅಂದರೆ ಇರಾಕಿಗಿಂತ ಇರಾನ್ ನಾಲ್ಕು ಪಟ್ಟು ದೊಡ್ಡದು. ಇರಾನಿನ ಉತ್ತರದಲ್ಲಿ ರಶಿಯ ಮತ್ತು ಕ್ಯಾಸ್ಪಿಯನ್ ಸಮುದ್ರಗಳಿವೆ. ದಕ್ಷಿಣದಲ್ಲಿ ಓಮಾನ್ ಮತ್ತು ಪರ್ಷಿಯನ್ ಖಾರಿ. ಪಶ್ಚಿಮದಲ್ಲಿ ಇರಾಕ್. ಪೂರ್ವದಲ್ಲಿ ಅಫಘಾನಿಸ್ತಾನ ಮತ್ತು ಪಾಕಿಸ್ತಾನಗಳಿವೆ. ಇರಾಕಿನ ಉತ್ತರದಲ್ಲಿ ತುರ್ಕಿ. ದಕ್ಷಿಣದಲ್ಲಿ ಸೌದಿ ಅರೇಬಿಯ, ಕುವೈತ್, ಪರ್ಷಿಯನ್ ಖಾರಿ, ಪೂರ್ವದಲ್ಲಿ ಇರಾನ್. ಪಶ್ಚಿಮದಲ್ಲಿ ಸಿರಿಯ, ಜೋರ್ಡಾನ್‌ಗಳಿವೆ. ಇರಾನಿನ ಸ್ವಾಭಾವಿಕ ಲಕ್ಷಣಗನುಗುಣವಾಗಿ ಕ್ಯಾಸ್ಪಿಯನ್ ತೀರ ಪ್ರದೇಶ, ಪರ್ವತ ಪ್ರದೇಶ, ಮರುಭೂಮಿ ಪ್ರದೇಶ ಮತ್ತು ಕುಜಿಸ್ತಾನ ಬಯಲು ಎಂಬುದಾಗಿ ನಾಲ್ಕು ಭಾಗಗಳನ್ನಾಗಿ ಮಾಡಬಹುದು. ಇರಾಕನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ಉತ್ತರದ

ಎತ್ತರ ಪ್ರದೇಶ, ಟೈಗ್ರಿಸ್ ಮತ್ತು ಯುಫ್ರಟಿಸ್ ಯಮಳ ನದಿ ಪ್ರದೇಶ ಮತ್ತು ಮರುಭೂಮಿ ಪ್ರದೇಶ.

ಇರಾನಿನದು ಖಂಡಾಂತರ ವಾಯುಗುಣ. ಇರಾಕಿನಲ್ಲಿ ಮರಳುಗಾಡಿನ ವಾಯುಗುಣವಿದೆ ಭಾರತದ ಬೇಸಗೆಯ ಮನ್ಸೂನ್ ಮಾರುತಗಳು ಸಿಂಧೂ ಬಯಲನ್ನೂ, ಅಫಘಾನಿಸ್ತಾನ ಬಲೂಚಿಸ್ತಾನಗಳ ಪರ್ವತಗಳನ್ನೂ ದಾಟಿದ ನಂತರ ಇರಾನಿನ ಮೇಲೆ ಬೀಸುತ್ತವೆ. ಆದ್ದರಿಂದ ಇರಾನಿನ ಪೂರ್ವ ತೀರ ಪ್ರದೇಶಗಳ ವಾತಾವರಣದಲ್ಲಿ ತೇವ ಹೆಚ್ಚು. ಒಳನಾಡಿನಲ್ಲಿ ಬೇಸಗೆಯಲ್ಲಿ ಬಹುತೇಕ ಒಣಹವೆ. ಸೆಯಿಸ್ತಾನ್ ಎಂಬಲ್ಲಿ ಜುಲೈ ತಿಂಗಳಲ್ಲಿ ಸಮಶೀತ ಉಷ್ಣತೆ ೯೦ ಡಿಗ್ರಿ ಫ್ಯಾರನ್ ಹೈಟ್ ಮುಟ್ಟುತ್ತದೆ. ೫೦೦೦ ಅಡಿಗಳಿಗಿಂತ ಕಡಿಮೆ ಮಟ್ಟದಲ್ಲಿರುವ ಪ್ರದೇಶದಲ್ಲೆಲ್ಲ ನಡು ಹಗಲು ಬಹು ಘೋರ. ಕ್ಯಾಸ್ಪಿಯನ್ ಸಮುದ್ರ ಪ್ರದೇಶ ಬಿಟ್ಟು ಉಳಿದೆಡೆಗಳಲ್ಲಿ ಬೇಸಗೆಯಿಂದ ಚಳಿಗಾಲಕ್ಕೂ, ಚಳಿಗಾಲದಿಂದ ಬೇಸಿಗೆಗೂ ಥಟ್ಟನೆ ಬದಲಾವಣೆಯಾಗುತ್ತದೆ. ಚಳಿಗಾಲದಲ್ಲಿ ಸೈಬೀರಿಯದಿಂದ ಬೀಸುವ ಶೀತ ಮಾರುತಗಳನ್ನು ತಡೆಯುವಷ್ಟು ಎತ್ತರದ ಪರ್ವತಗಳಿಲ್ಲ. ಆದರೆ ದಕ್ಷಿಣದಲ್ಲೂ ಪೂರ್ವದಲ್ಲೂ ಇರುವ ಪರ್ವತಗಳು ಎತ್ತರವಾಗಿರುವುದರಿಂದ ಸಮುದ್ರದ ಹಿತಕರ ಪ್ರಭಾವಕ್ಕೆ ಅಡ್ಡಿಯುಂಟಾಗಿದೆ. ಚಳಿಗಾಲದಲ್ಲಿ ಉತ್ತರದಲ್ಲಿ ಹೆಚ್ಚು ಹಿಮ ಬೀಳುತ್ತದೆ. ಭೂಮಧ್ಯ ಸಮುದ್ರದಲ್ಲಿ ಸಂಭವಿಸುವ ಮಹಾಗರ್ತಗಳ ಪರಿಣಾಮವಾಗಿ ವಾಯುವ್ಯದ ಎತ್ತರ ಪ್ರದೇಶದಲ್ಲೂ, ಕ್ಯಾಸ್ಪಿಯನ್ ಪ್ರದೇಶದಲ್ಲೂ ಹೆಚ್ಚು ಮಳೆಯಾಗುತ್ತದೆ. ದಕ್ಷಿಣಕ್ಕೂ ಪೂರ್ವಕ್ಕೂ ಬಂದಂತೆ ಇದು ಕಡಿಮೆಯಾಗುತ್ತದೆ ಮತ್ತು ಅನಿಶ್ಚಿತವೂ ಆಗುತ್ತದೆ. ಉತ್ತರದ ಲವಣ ಮರುಭೂಮಿಗಳಿಂದ ಮಕ್ರಾನ್ ಕರಾವಳಿಯವರೆಗೂ, ಸೆಯಿಸ್ತಾನದಿಂದ ಇಸ್ಪಹಾನ್‌ವರೆಗೂ ಇರುವ ಪ್ರದೇಶದಲ್ಲಿ ವರ್ಷಕ್ಕೆ ೪ ಇಂಚಿಗಿಂತ ಕಡಿಮೆ ಮಳೆ.

ಇರಾಕಿನ ಜೀವನಾಡಿ ಟೈಗ್ರಿಸ್ ಮತ್ತು ಯುಫ್ರೆಟಿಸ್ ನದಿಗಳು. ೧,೧೫೦ ಮೈಲಿ, ೧,೭೦೦ ಮೈಲಿ ದೂರ ಪ್ರವಹಿಸುವ ಈ ನದಿಗಳಿದ್ದರೂ ಇರಾಕಿನ ಹವೆ ಉಷ್ಣ. ಬಾಗದಾದಿನಲ್ಲಿ ವರ್ಷಕ್ಕೆ ಸುಮಾರು ೬.೫ ಇಂಚು ಮಳೆ ಬೀಳುತ್ತದೆ. ಸಾಮಾನ್ಯವಾಗಿ ಚಳಿಗಾಲದಲ್ಲಿ (ನವೆಂಬರಿನಿಂದ ಜೂನ್ ಅವಧಿಯಲ್ಲಿ) ಮಳೆಯಾಗುತ್ತದೆ. ಜನವರಿ ಅತ್ಯಂತ ಚಳಿಯಾಗುವ ತಿಂಗಳು. ಆಗ ಇಲ್ಲಿಯ ಉಷ್ಣತೆ ೪೯ ಡಿಗ್ರಿ ಫ್ಯಾರನ್ ಹೈಟ್ ಮಧ್ಯಾಹ್ನದ ವೇಳೆ ಅದು ೧೦೦ ಡಿಗ್ರಿ ಫ್ಯಾರನ್ ಹೈಟ್ ೧೨೦ ಡಿಗ್ರಿ ಫ್ಯಾರನ್ ಹೈಟ್‌ಗೆ ಏರುತ್ತದೆ. ಇರಾಕಿನ ಈಶಾನ್ಯ ಭಾಗ ತಂಪಾಗಿದೆ. ಇಲ್ಲಿ ತುಸು ಹೆಚ್ಚು ಮಳೆಬೀಳುತ್ತದೆ. ಆದರೆ, ಪಶ್ಚಿಮದಲ್ಲಿರುವ ಸಿರಿಯನ್ ಮರುಭೂಮಿಯಲ್ಲಿ ಒಂದು ಅಂಗುಲಕ್ಕಿಂತಲೂ ಕಡಿಮೆ ಮಳೆಯಾಗುತ್ತದೆ. ಆರ್ದ್ರತೆ ತುಂಬಾ ಕಡಿಮೆ.

ಇರಾನ್-ಇರಾಕ್ ಎರಡಕ್ಕೂ ತೈಲವೇ ಮುಖ್ಯ ಸಂಪತ್ತು.

ಆರ್ಯರ ಭಾಷೆಯನ್ನಾಡುತ್ತಿದ್ದ ಶ್ವೇತ ವರ್ಣದ ಜನರ ಒಂದು ಪಂಗಡ ಕ್ರಿಸ್ತಪೂರ್ವ ೨೫೦೦ರ ಸುಮಾರಿಗೆ ಮಧ್ಯ ಏಶಿಯದಿಂದ ಹೊರಟು ಪರ್ಷಿಯನ್ ಕೊಲ್ಲಿಯ ಹತ್ತಿರ ನೆಲೆಸಿತೆಂದು ನಂಬಲಾಗಿದೆ. ಆರ್ಯಭಾಷಿಗಳಾದ ಈ ಪರ್ಷಿಯನ್ನರು ಅಸ್ಸಿರಿಯಾ ಸಾಮ್ರಾಜ್ಯ ನಾಶವಾದ ಮೇಲೆ ಕ್ರಿಸ್ತಪೂರ್ವದಲ್ಲಿಯೇ ಸೈರಸನ ನಾಯಕತ್ವದಲ್ಲಿ ಅಕೆಮೆನಿಡ್ ಸಾಮ್ರಾಜ್ಯವನ್ನು ಕಟ್ಟಿದರು. ಅಲ್ಲಿಂದ ಮುಂದೆ ಒಂದಾದ ಮೇಲೊಂದರಂತೆ ಅನೇಕ ಸಾಮ್ರಾಜ್ಯಗಳು ಅಲ್ಲಿ ಬೆಳೆದು ಅಳಿದವು. ಏಳನೆಯ ಶತಮಾನದಲ್ಲಾದ ಅರಬ್ ಮುಸ್ಲಿಮರ ಆಕ್ರಮಣ ಇರಾನಿನ ಸ್ವರೂಪವನ್ನೇ ಬದಲಿಸಿತು. ಅರಬ್ ಸಾಮ್ರಾಜ್ಯ ತನ್ನೊಂದಿಗೆ ಶಕ್ತಿ ಹಾಗೂ ಧಾರ್ಮಿಕ ಭಾವನೆಯನ್ನು ತಂದು ಇಲ್ಲಿ ಪ್ರಚುರಗೊಳಿಸಿತು. ಅನೇಕ ಪರ್ಷಿಯನ್ನರು ಅಬು ಮುಸ್ಲಿಮರಾದರು. ಹಲವು ಇರಾನಿಯನ್ನರು ತಮ್ಮ ಜರತುಷ್ಟ್ರ ಧರ್ಮ ಉಳಿಸಿಕೊಳ್ಳುವ ಸಲುವಾಗಿ ದೇಶವನ್ನು ತ್ಯಜಿಸಿದರು. ಭಾರತಕ್ಕೂ ಕೆಲವರು ಬಂದರು. ಅವರ ವಂಶಸ್ಥರೇ ಇಂದು ಭಾರತದಲ್ಲಿ ಪಾರ್ಸಿಗಳೆಂದು ಗುರುತಿಸಲ್ಪಡುತ್ತಾರೆ. ಕೆಲವರು ಅಲ್ಲಿಯೇ ಉಳಿದು ಗುಪ್ತವಾಗಿ ಜರತುಷ್ಟ್ರ ಧರ್ಮ ಅನುಸರಿಸಿದರು. ಅಂಥವರ ವಂಶಜರನ್ನು ಈಗ ಯಜ್ದ ಹಾಗೂ ಕಿರಮಾನ ಎಂದು ಕರೆಯುತ್ತಾರೆ.

೧೬೧೪ರಲ್ಲಿ ಬ್ರಿಟಿಷರು ಇರಾನಿನೊಂದಿಗೆ ವ್ಯಾಪಾರ ಆರಂಭಿಸಿದರು. ಹಾಲೆಂಡ್ ಹಾಗೂ ರಶಿಯದೊಂದಿಗೆ ಇರಾನ್ ವ್ಯಾಪಾರ

ಸಂಬಂಧ ಬೆಳೆಸಿತು. ಈ ವ್ಯಾಪಾರ ಇರಾನಿನ ಅಭಿವೃದ್ಧಿಗೆ ನಾಂದಿಯಾಯಿತು. ಆದರೆ, ಇರಾನ್ ರಾಜಕೀಯ ಕೂಟ ನೀತಿಯ ಕೇಂದ್ರವಾಯಿತು. ಅಫಘಾನದ ಹಾಗೂ ರಶಿಯನ್ನರ ಆಕ್ರಮಣಕ್ಕೆ ಇರಾನ್ ತುತ್ತಾಯಿತಲ್ಲದೇ ಬ್ರಿಟಿಶ್‌ರ್ ಹಾಗೂ ರಶಿಯನ್ನರ ಸೇನಾ ನೆಲೆಯಾಯಿತು. ನಿರಂಕುಶ ಶಾಸನಗಳ ವಿರುದ್ಧ ಅಸಂತೋಷ ಹೆಚ್ಚುತ್ತಾ ಇರಾನಿನಲ್ಲಿ ವಿದ್ರೋಹ ಚಟುವಟಿಕೆಗಳು ಆರಂಭಗೊಂಡವು. ಶಪವಿದ್ ಮನೆತನದ ಅರಸ ಕರೀಮಖಾನ್ ಝೆಂಡ್ ೧೭೫೦ ರಿಂದ ೧೭೭೯ ರವರೆಗೆ ಆಳಿದ. ಅನಂತರ ತುರ್ಕಿ ಜಾತಿಯ ಕ್ವಾಜರರ ಆಡಳಿತ ೧೮೩೪ರ ತನಕ ನಡೆಯಿತು. ಕ್ವಾಜಾರರ ಆಡಳಿತಾವಧಿಯಲ್ಲಿ ರಶಿಯನ್ನರು ಇರಾನಿನಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡರು. ರಶಿಯ ಪರ ಮೊಹಮ್ಮದ್ ಶಾನ್ ಆಡಳಿತ ೧೮೩೪ರಲ್ಲಿ ಕೊನೆಗೊಂಡಿತು. ಆರಂಭದಲ್ಲಿ ಆತ ರಶಿಯ ದತ್ತ ವಾಲಿದರೂ, ಅನಂತರ ಬ್ರಿಟಿಷರತ್ತ ವಾಲಿದ್ದರಿಂದ ಬ್ರಿಟಿಷರು ಇರಾನಿನಲ್ಲಿ ತಮ್ಮ ಶಕ್ತಿಯನ್ನು ಬೆಳೆಸಿಕೊಂಡರು. ಶಾನ ನಿರಂಕುಶ ಪ್ರಭುತ್ವ ೧೮೯೬ ರಲ್ಲಿ ಕೊನೆಗೊಂಡಿತಲ್ಲದೆ ೧೯೦೫ ರಲ್ಲಿ ಅಶಾಂತಿ ತಲೆದೋರಿ ಇರಾನಿನ ಮಧ್ಯಮ ವರ್ಗ ದವರು ದಂಗೆಯೆದ್ದರು.

೧೯೦೬ರಲ್ಲಿ ಮಜಲಿಸ್ (ಪಾರ್ಲಿಮೆಂಟ್) ರಚಿತವಾಯಿತು. ಸಂವಿಧಾನ ರೂಪುಗೊಂಡಿತು. ೧೯೦೮ರಲ್ಲಿ ಮೊದಲ ಬಾರಿಗೆ ಇರಾನಿನಲ್ಲಿ ತೈಲ ಶೋಧವಾಯಿತು. ಇದರಿಂದ ಇರಾನಿನ ಒಡೆತನಕ್ಕಾಗಿ ಬ್ರಿಟಿಷ್ ಹಾಗೂ ರಶಿಯನ್ನರ ಕಚ್ಚಾಟ ಹೆಚ್ಚಿತು.

ಪ್ರಥಮ ವಿಶ್ವಸಮರ ಕಾಲಕ್ಕೆ ಇರಾನ್ ತಟಸ್ಥ ವಾಗಿದ್ದಂತೆ ಕಂಡರೂ ದೇಶದಲ್ಲಿ ಗುಪ್ತ ಚಟು ವಟಿಕೆಗಳು ನಡೆದವು. ದೇಶದಲ್ಲಿ ಅಸ್ಥಿರ ಪರಿಸ್ಥಿತಿ ಉಂಟಾಯಿತು. ಸುಧಾರಣೆಗಾಗಿ ಬ್ರಿಟನ್ ಯತ್ನಿಸಿದರೂ ಸಫಲವಾಗಲಿಲ್ಲ.

೧೯೨೧ ರಲ್ಲಿ ಒಂದು ದಂಗೆ ನಡೆಯಿತು. ರೇಜಾನ್ ಈ ದಂಗೆಯ ನೇತೃತ್ವ ವಹಿಸಿದ್ದ. ಈ ದಂಗೆಯಿಂದ ಇರಾನಿನಲ್ಲಿ ಸೈನ್ಯ ಪ್ರಭುತ್ವ ಸ್ಥಾಪಿತ ವಾಯಿತು. ೧೯೨೫ರಲ್ಲಿ ಶಾರನ್ನು ಉರುಳಿಸಿದ ರೇಜಾನ್ ರೇಜಾಪಹಲವಿ ಎನ್ನುವ ಹೆಸರಿನಲ್ಲಿ ಅರಸನೆಂದು ಘೋಷಿಸಿ ಕೊಂಡ. ದೇಶದಲ್ಲಿ ಅನೇಕ ಸುಧಾರಣೆಗಳನ್ನು ಕೈಗೊಂಡು ಸುಭದ್ರ ಕೇಂದ್ರ ಸರಕಾರವನ್ನು ಸ್ಥಾಪಿಸಿದ. ಪಹಲವಿ ದೇಶವನ್ನು ಆಧುನಿಕರಿಸಲು ಪ್ರಯತ್ನಿಸಿದ. ೧೯೩೫ ರಲ್ಲಿ ದೇಶದ ಹೆಸರನ್ನು ಪರ್ಷಿಯದ ಬದಲಾಗಿ 'ಇರಾನ್' ಎಂದು ಅಧಿಕೃತವಾಗಿ ಘೋಷಿಸಿದ.

ದ್ವಿತೀಯ ಮಹಾಯುದ್ಧದ ಕಾಲಕ್ಕೆ ಇರಾನ್ ಜರ್ಮನಿಯೊಂದಿಗೆ ಹೊಂದಿದ್ದ ಮಿತ್ರತ್ವ ದಿಂದಾಗಿ ಬ್ರಿಟಿಷರು ಹಾಗೂ ರಶಿಯನ್ನರು ಅದನ್ನು ಆಕ್ರಮಿಸಿದರು. ರೇಜಾ ಪಹಲವಿ ಅಧಿಕಾರವನ್ನು ಮಗ ಮೊಹಮ್ಮದ್ ರೇಜಾ ಶಾನಿಗೆ ಹಸ್ತಾಂತರಿಸಿದ. ಅದಕ್ಕೆ ರಶಿಯ ಹಾಗೂ ಬ್ರಿಟನ್ನಿನ ಒತ್ತಾಯವೇ ಕಾರಣ. ಯುದ್ಧ ಮುಗಿದ ಮೇಲೆ ರಶಿಯಾ ಇರಾನಿನ ಮೇಲೆ ತನ್ನ ಸ್ವಾಮ್ಯವನ್ನು ಸ್ಥಾಪಿಸಿತು. ಅನಂತರ ವಿಶ್ವ ಸಂಸ್ಥೆಯ ಒತ್ತಾಯದಿಂದ ರಶಿಯ ಇರಾನಿನ ಉತ್ತರ ಭಾಗದಿಂದ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಈ ಮಧ್ಯೆ ಇರಾನಿನಲ್ಲಿ ರಾಷ್ಟ್ರೀಯ ಭಾವನೆ ಬಲಗೊಂಡಿತು. ಸರಕಾರದ ಬಗ್ಗೆ ಜನರಲ್ಲಿ ಅತೃಪ್ತಿ ಅಸಮಾಧಾನ ಹೆಚ್ಚಿದವು. ಮೂಲೆ ಗುಂಪಾಗಿದ್ದ ಮಜಲಿಸ್ ೧೯೪೯ರಲ್ಲಿ ಪುನಃ ಸ್ಥಾಪಿತವಾಗಿ ಚುನಾವಣೆ ನಡೆಯಿತು. ಡಾ|| ಮುಸಾದಿಕ್ ಪ್ರಧಾನ ಮಂತ್ರಿಯಾದ. ೧೯೫೧ರಲ್ಲಿ ಮುಸಾದಿಕ್ ಆಂಗ್ಲೋ-ಇರಾನಿಯನ್ ಆಯಿಲ್ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದ. ಅದು ಅಂತಾರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿತು.

ಡಾ|| ಮುಸಾದಿಕನ ಬದಲಾಗಿ ಫಜಲುಲ್ಲಾ ಜಾಹೆದಿಯನ್ನು ಪ್ರಧಾನ ಮಂತ್ರಿಯಾಗಿ ಶಾ ನೇಮಿಸಿದ. ಅದೇ ವರ್ಷ ಎಂಟು ಯುರೋಪಿಯನ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದರಿಂದ ಮೂಲಕ ತೈಲ ಸಮಸ್ಯೆ ಯನ್ನು ಬಗೆಹರಿಸಿಕೊಳ್ಳಲಾಯಿತು.

ಶಾರ ಇಚ್ಛೆಯ ಮೇರೆಗೆ ಇರಾನಿನಲ್ಲಿ ದ್ವಿಪಕ್ಷ ಪ್ರಜಾಪ್ರಭುತ್ವ ಸರಣಿ ರಚಿಸುವ ಪ್ರಯೋಗ ನಡೆ ಯಿತು. ಆದರೆ, ಈ ಬಗೆಯ ಪದ್ಧತಿ ಇರಾನಿ ನಲ್ಲಿ ಯಶ ಪಡೆಯಲಿಲ್ಲ.

೧೯೬೧ ರಲ್ಲಿ ಶಾ ಇರಾನಿನಲ್ಲಿ ಕ್ರಾಂತಿಕಾರೀ ಸುಧಾರಣೆ ಕೈಗೊಳ್ಳಲು ನಿರ್ಧರಿಸಿದ. ಊಳಿಗ ಮಾನ್ಯ ಪದ್ಧತಿಯ ಅಂತ್ಯ, ಗುಲಾಮಗಿರಿ ಪದ್ಧ ತಿಯ ರದ್ಧತಿ, ಚುನಾವಣೆ ಹಾಗೂ ಆಡಳಿತ ಕ್ರಮ ದಲ್ಲಿ ಸುಧಾರಣೆ, ಕಾರ್ಮಿಕರಿಗೆ ಆದಾಯದಲ್ಲಿ ಪಾಲು ಇವು ಶಾನ ಕ್ರಾಂತಿಕಾರೀ ಯೋಜನೆಗಳು.

೧೯೬೭ ರಲ್ಲಿ ರೇಜಾ ಶಾನ ಕಿರೀಟ ಧಾರಣೆ ನಡೆಯಿತು. ಆದರೆ, ಖೊಮೇನಿ ಎಂಟು ವರುಷ

ಗಳ ಒಂದೆ ಈ ಕಿರೀಟಧಾರಿಯನ್ನು ದೇಶದಿಂದ ಓಡಿಸಿದ. ಇಸ್ಲಾಂ ಸಿದ್ಧಾಂತಿಗಳ ಸರಕಾರ ಸ್ಥಾಪನೆಗೆ ಆತ ಮುಂದಾದ.

ಇರಾಕ್ ಬಹುಕಾಲ ಆಟೋಮನ್ ಸಾಮ್ರಾಜ್ಯದ ಆಶ್ರಿತ ರಾಜ್ಯವಾಗಿತ್ತು. ತುರ್ಕಿಯ ಆಡಳಿತ ಇರಾಕಿನ ಜನಜೀವನದ ಮೇಲೆ ತುಂಬಾ ಪ್ರಭಾವ ಬೀರಿದೆ. ಪ್ರಥಮ ಮಹಾಯುದ್ಧ ಮತ್ತು ಬ್ರಿಟಿಶ್ ಸೈನ್ಯಾಡಳಿತದ ನಂತರ ೧೯೨೧ ರಲ್ಲಿ ಇರಾಕಿನಲ್ಲಿ ಘಟನಾತ್ಮಕ ಅರಸೊತ್ತಿಗೆ ಸ್ಥಾಪಿತವಾಯಿತು. ಹಷೆ ಮೈಟ್ ದೊರೆ ಫೈಸೆಲ್ ಇರಾಕಿನ ರಾಜನಾದ. ೧೯೨೪ ರಲ್ಲಿ ಇರಾಕಿನ ಸಂವಿಧಾನ ಪರಿಷ್ಕರಣಗೊಂಡಿತು. ಇರಾಕಿನ ಸಾರ್ವಭೌಮತ್ವಕ್ಕೆ ಧಕ್ಕೆ ಬರದಂತೆ ಬ್ರಿಟನ್ ಸಲಹೆನೀಡುವ ಬಗ್ಗೆ ೧೯೩೦ ರಲ್ಲಿ ಇರಾಕ್ ಬ್ರಿಟನ್ನಿನೊಡನೆ ಒಂದು ಒಪ್ಪಂದ ಮಾಡಿಕೊಂಡಿತು. ೧೯೩೩ ರಲ್ಲಿ ಫೈಸಲ್ ಕಾಲವಾದ. ಅವನ ಅವಸಾನಾನಂತರ, ಸಿಂಹಾಸನಕ್ಕಾಗಿ ಇರಾಕಿನಲ್ಲಿ ಜಗಳವಾಯಿತು. ಫೈಸಲಿನ ಕಿರಿಯ ಮಗ ಅಬ್ದುಲ್ಲ ತನ್ನ ಸೋದರಳಿಯನ ರಾಜ ಪ್ರತಿನಿಧಿಯಾಗಿ ಆಡಳಿತ ನಿರ್ವಹಿಸತೊಡಗಿದ. ಮುಂದೆ ಆ ಸೋದರಳಿಯನೇ ಎರಡನೆಯ ಫೈಸಲ್ ಎನ್ನುವ ಅಭಿಧಾನದಿಂದ ಇರಾಕಿನ ರಾಜನಾದ.

ಆದರೆ, ಈ ಅವಧಿಯಲ್ಲಿ ರಾಜಕೀಯದಲ್ಲಿ ಸೈನ್ಯದ ಪ್ರಭಾವ ಹೆಚ್ಚತೊಡಗಿತ್ತು. ಅಲ್ಲಿ ಹೆಸರಿಗೆ ಮಾತ್ರ ಪ್ರಜಾಪ್ರಭುತ್ವ: ನಾಮಮಾತ್ರ ರಾಜ ನಿಜವಾದ ಅಧಿಕಾರ ಕೆಲವೇ ಜನ ಧಾರ್ಮಿಕ ಮುಖಂಡ ಹಾಗೂ ಅಧಿಕಾರಿಗಳ ಕೈಯಲ್ಲಿತ್ತು.

೧೯೫೮ ರಲ್ಲಿ ಇರಾಕಿನಲ್ಲಿ ಸೈನಿಕ ಕ್ಷಿಪ್ರ ಕ್ರಾಂತಿ ನಡೆಯಿತು. ಪರಿಣಾಮವಾಗಿ ಅರಸೊತ್ತಿಗೆ ಕೊನೆಗೊಂಡಿತು. ಜನರಲ್ ಅಬ್ದುಲ್ ರಹೀಂಕಾಸಿಮನ ಬೆಂಬಲವಿರುವ ಸೈನ್ಯದ ತುಕಡಿಗೆ ಅಧಿಕಾರ ಬಂತು. ೧೯೬೩ ರಲ್ಲಿ ಈತನನ್ನು ಕರ್ನಲ್ ಆರೀಫ್ ಪದಚ್ಯುತಗೊಳಿಸಿದ. ಈಗ ಹುಸೇನರ ಸರದಿ.

ಇರಾಕಿಗೆ ಇರಾನಿನ ಮೇಲೆ ದ್ವೇಷಕ್ಕೆ ಕಾರಣವೆಂದರೆ- ಇರಾನಿನಿಂದ ತನಗೆ ಅನ್ಯಾಯವಾಗಿದೆ ಎಂಬುದು. ೧೯೭೫ರ ಆಲ್ಜಿಯರ್ಸ್ ಒಪ್ಪಂದದ ಪ್ರಕಾರ ತನ್ನ ನೆಲ ಕೈತಪ್ಪಿ ಹೋಗಿದೆ ಎಂಬುದು ಅದರ ಅಸಮಾಧಾನ. ಮುಖ್ಯವಾಗಿ ಷಟ್- ಅಲ್- ಅರಬ್ ಜಲಮಾರ್ಗ ಈ ಎರಡೂ ದೇಶಗಳ ಸಂಯುಕ್ತ ಹತೋಟಿಗೆ ಒಳಪಟ್ಟಿರವುದು ಇರಾಕಿಗೆ ಇಷ್ಟವಿಲ್ಲ. ಇರಾನಿನ ಆಂತರಿಕ ಪರಿಸ್ಥಿತಿ ಹದಗೆಟ್ಟಿರುವಾಗಲೇ ಅದರ ಮೇಲೆ ಎರಗಿ ತಮ್ಮ ನೆಲ ಹಾಗೂ ಜಲಗಳನ್ನು ತಾವು ಪಡೆದುಬಿಡಬೇಕೆಂದು ಇರಾಕಿನ ಅಧ್ಯಕ್ಷ ಸದ್ದಾಮ್ ಹುಸೇನರು ತೀರ್ಮಾನಿಸಿದರು. ಆದರೆ ಅದೇ ಈಗ ಅವರಿಗೆ ತಿರುಗುಬಾಣವಾಗಿದೆ. ಕಳೆದು ಹೋಗಿರುವುದರ ಜೊತೆಗೆ ಹುಸೇನರು ಈಗ ಮತ್ತಷ್ಟು ಕಳೆದುಕೊಂಡಿದ್ದಾರೆ.

ಆದರೂ ಯುದ್ಧವನ್ನು ಮುಂದುವರೆಸುವ ಛಲವನ್ನು ಅವರು ಬಿಟ್ಟಹಾಗೆ ಕಾಣುವುದಿಲ್ಲ. ಹೀಗಾಗಿ ಸಧ್ಯೋಭವಿಷ್ಯದಲ್ಲಂತೂ ಆ ಸಮರ ಕ್ಷೇತ್ರ ಜಾಗತಿಕ ರಾಜಕೀಯದ ಜ್ವಾಲಾಮುಖಿಯಾಗಿಯೇ ಉಳಿಯುವಂತೆ ಕಾಣುತ್ತದೆ.

ಭಸ್ಮಾಸುರನ ಕಥೆಯನ್ನು ಕೇಳಿರುವೆಯಾ? ಅದು ಗೊತ್ತೇ? ಸಿಕ್ಕಿದವರ ತಲೆಯ ಮೇಲೆಲ್ಲಾ ತನ್ನ ಕೈಯನ್ನಿಟ್ಟು ಅವರನ್ನು ಭಸ್ಮ ಮಾಡುತ್ತಿದ್ದವನು, ಅಂತಹ ತನ್ನ ಕೈಯನ್ನು ತಲೆಯ ಮೇಲೆಯೇ ಇಟ್ಟುಕೊಂಡು ತಾನೇ ಭಸ್ಮನಾದ. ಹಾಗೆಯೇ ಇತರರನ್ನು ನಿಂದಿಸುತ್ತಾ ಇದ್ದು ಕೊನೆಗೆ ತನ್ನ ವಾಕ್ಯಗಳು ತನ್ನನ್ನೇ ನಿಂದಿಸುವವು. ಅದೇ ಅವನ ಹೃದಯವನ್ನು ಹೊಕ್ಕು ಬಲವಾಗಿ ನಾಟಿಕೊಳ್ಳುವುದು.

— ಸತ್ಯ ಸಾಯಿ ಬಾಬಾ.

ನಿನಗೆ ಮನಃಶಾಂತಿ ಬೇಕಾಗಿದ್ದರ ಬೇರೆಯವರಲ್ಲಿ ತಪ್ಪು ಕಂಡು ಹಿಡಿಯಲು ಹೋಗಬೇಡ. ನಿನ್ನ ತಪ್ಪುಗಳನ್ನೇ ಕಂಡು ಕೊ. ಇಡೀ ವಿಶ್ವವೇ ನಿನ್ನದಾಗುವಂತೆ ಮಾಡಲು ಕಲಿ. ಯಾರೊಬ್ಬರೂ ಹೊರಗಿನವರಲ್ಲ ನನ್ನ ಮಗು; ಇಡೀ ಜಗತ್ತೇ ನಿನ್ನದು.

— ಶ್ರೀಶಾರದ ದೇವಿ.

ಸತಿ ಪದ್ಧತಿ

ಒಂದು ಮೀಮಾಂಸೆ

– ಪ್ರೊ॥ ಮಧು ವೆಂಕಾರೆಡ್ಡಿ

ಇತ್ತೀಚೆಗೆ ರಾಜಾಸ್ಥಾನದ ಶಿಕಾರ ಜಿಲ್ಲೆಯ ದೇವರಲಾದಲ್ಲಿ ರೂಪ ಕನ್ವರ್ ಎಂಬ ಮಹಿಳೆ ಸತಿ ಹೋದುದು ಸಾಮಾಜಿಕ ವಲಯ ಗಳಲ್ಲಿ ವೈಚಾರಿಕ ಅಲೆಗಳನ್ನೇ ಎಬ್ಬಿಸಿದೆ. ಈ ಸಂದರ್ಭದಲ್ಲಿ ಈ ಸಾಮಾಜಿಕ ಸಮಸ್ಯೆಯನ್ನು ಆಮೂಲಾಗ್ರವಾಗಿ ಪರಿಶೀಲಿಸುವುದು ಅವಶ್ಯ.

ಮಹಾಮಹೋಪಾಧ್ಯಾಯ ಕಾಣೆಯವರ ಪ್ರಕಾರ ಸತಿ ಪದ್ಧತಿ ಕುಶಾನರ ದಾಳಿಯ ಕಾಲಕ್ಕೆ ಅಂದರೆ ಕ್ರಿಸ್ತಶಕ ಒಂದನೆಯ ಶತಮಾನದಲ್ಲಿ ಈ ದೇಶದಲ್ಲಿ ಕಾಲಿಟ್ಟಿತು. ಆದರೆ ಶಿಕಂದರನು ಈ ದೇಶದ ಮೇಲೆ ದಾಳಿಯಿಟ್ಟ ಸಮಯದಲ್ಲಿ ಈ ಪದ್ಧತಿ ಕೆಲವೆಡೆ ಇದ್ದ ಉದಾಹರಣೆಗಳಿರುವುದರಿಂದ ಈ ವಿಷಯದಲ್ಲಿ ಏಕಾಭಿಪ್ರಾಯವಿಲ್ಲ.

ವೇದಕಾಲದಲ್ಲಿ ಇಂಥ ಪದ್ಧತಿ ಇರಲಿಲ್ಲವೆಂಬುದು ಸ್ಪಷ್ಟ. ಅಥರ್ವ ವೇದದಲ್ಲಿ ಬರುವ ಒಂದು ಮಾತು ಅರ್ಥಪೂರ್ಣವಾಗಿದೆ ಸತ್ತಗಂಡನ ಪಕ್ಕದಲ್ಲಿ ಮಲಗಿದ ಅವನ ಹೆಂಡತಿಗೆ ಅವಳು ಅಲ್ಲಿಂದ ಎದ್ದು ಜೀವಂತ ಪ್ರಪಂಚದಲ್ಲಿ ಉತ್ತಮ ಜೀವನ ನಡೆಸಲು ಹೇಳಲಾಗುತ್ತಿತ್ತು. ಆದರೆ ಇಲ್ಲಿಯು ಒಂದು ಸಂಹಿತೆಯ ಕೊನೆಯ ಪದ "ಅಗ್ರೆ" ಎಂದು ಇದ್ದುದನ್ನು "ಅಗ್ನೆ" ಎಂದು ತಿರುಚಿ ಸತಿ ಪದ್ಧತಿ ಆಗಲೂ ಬಳಕೆಯಲ್ಲಿ ಇತ್ತೆಂದು ಸಾಧಿಸಲಾಗುತ್ತಿದೆ. ಈ ವಾದವನ್ನು ಮ್ಯಾಕ್ಸ್ ಮುಲ್ಲರ್ ಒಪ್ಪುವುದಿಲ್ಲ.

ಗೃಹ್ಯ ಸೂತ್ರದಲ್ಲಿ ಅನೇಕ ಸಂಸ್ಕಾರಗಳ ಸವಿಸ್ತಾರ ವರ್ಣನೆಯುಂಟು. ಆದರೆ ಅಲ್ಲಿಯೂ ಈ ಬಗೆಗೆ ಉಲ್ಲೇಖವಿಲ್ಲ. ಪ್ರೊ॥ ಅಳತೇಕರ ಅವರು ಹೇಳುವಂತೆ ತೈತ್ತರೀಯೋಪನಿಷತ್ತು ಹಾಗೂ ಅರಣ್ಯಕಗಳಲ್ಲಿ ಸತ್ತವನ ಹೆಂಡತಿಯು ಪತಿಯ ಬಿಲ್ಲುಬಾಣ. ಬಂಗಾರ ಹಾಗೂ ರತ್ನಾಭರಣಗಳನ್ನು ತೆಗೆದುಕೊಂಡು ಬರುವುದರ ಬಗೆಗೆ ಉಲ್ಲೇಖ ಬರುತ್ತದೆಯೇ ವಿನಾ ಸತ್ತ ಗಂಡನೊಡನೆ ಸುಟ್ಟು ಹೋಗುವ ಪರಿಪಾಠವಿರಲಿಲ್ಲ. ಯಾಜ್ಞವಲ್ಕ್ಯರೂ ಇಂಥ ಪದ್ಧತಿಯನ್ನು ಉಲ್ಲೇಖಿಸುವುದಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಸತಿ ಪದ್ಧತಿಯ ಉಲ್ಲೇಖವಿಲ್ಲ. ಬಹುಶಃ ಇಂಥ ಪದ್ಧತಿ ಕ್ರಿಸ್ತಶಕದ ಆರಂಭದಲ್ಲಿ ಬಂದಿರಲು ಸಾಕು.

ಮಹಾಭಾರತದಲ್ಲಿ ಮಾದ್ರಿ ಸತಿಯಾದ ಉದಾಹರಣೆಯಿದೆ. ಶ್ರೀಕೃಷ್ಣನ ಮರಣದ ನಂತರ ರುಕ್ಮಿಣಿ ಸತಿಯಾದಳು. ಆದರೆ ಅನೇಕ ಯಾಧವ ನಾರಿಯರು ಅರ್ಜುನನೊಡನೆ ಹಸ್ತಿನಾವತಿಗೆ ಮರಳಿದರು. ರಾಮಾಯಣದಲ್ಲಿ ದಶರಥನ ಮರಣದ ನಂತರ ಆತನ ಯಾವ ಹೆಂಡಂದಿರೂ ಸತಿ ಹೋಗಲಿಲ್ಲ. ರಾಮಾಯಣ, ಮಹಾಭಾರತಗಳು ಕ್ರಿಸ್ತಶಕದ ಆರಂಭಕ್ಕೆ ರಚನೆಗೊಂಡಿರಲು ಸಾಕು.

ಕ್ರಿಸ್ತಶಕ ನಾಲ್ಕನೆಯ ಶತಮಾನದ ಸುಮಾರಿಗೆ ಸತಿ ಪದ್ಧತಿ ಹಿಂದೂ ಸಮಾಜವನ್ನು ಅದರಲ್ಲೂ ಕ್ಷತ್ರಿಯರನ್ನು ತನ್ನ ಕಪಿ

ಮುಷ್ಟಿಯಲ್ಲಿ ಹಿಡಿಯಿತು. ಅಂಥ ಮನೆತನಗಳಿಗೆ ಸಮಾಜದಲ್ಲಿ ದೊರೆಯುತ್ತಿದ್ದ ಗೌರವದ ದುರಾಸೆ ಇದಕ್ಕೆ ಕಾರಣವಿರಬಹುದು. ಮಹಾಕವಿ ಕಾಳಿದಾಸ, ಶೂದ್ರಕ, ಭಾಸ ಇವರ ಕೃತಿಗಳಲ್ಲಿ ಇಂಥ ಪದ್ಧತಿಯ ಉಲ್ಲೇಖ ಕಂಡು ಬರುತ್ತದೆ. ಸ್ಮೃತಿಕಾರರಾದ ಬೃಹಸ್ಪತಿ ಪರಾಶರರೂ ಇದನ್ನು ಉಲ್ಲೇಖಿಸುತ್ತಾರೆ. "ಮೇಧ ತಿಥಿ" ಮಾತ್ರ ಇಂಥ ಪದ್ಧತಿಯನ್ನು ಉಗ್ರ ವಾಗಿ ಖಂಡಿಸಿದ್ದಲ್ಲದೆ, ಇದು ಆತ್ಮಹತ್ಯೆ ಎಂದೂ ಹೇಳುತ್ತಾನೆ. ಬಾಣ ಕವಿಯ ಪ್ರಕಾರ ಇಂಥ ಕೃತಿ ಮೂರ್ಖತನದ್ದು. ಕ್ರಿಸ್ತಶಕ ಏಳನೆಯ ಶತಮಾನದ ಸುಮಾರಿಗೆ ಸತಿ ಪದ್ಧತಿಗೆ ದೈವತ್ವವನ್ನು ಕಲ್ಪಿಸಿ ಸತಿಯಾದ ನಾರಿಯರಿಗೆ ದೇವತೆಯ ಪಟ್ಟಗಟ್ಟುವ ಅನಿಷ್ಟ ಪರಂಪರೆ ಪ್ರಾರಂಭವಾಯಿತು. ಆದರೆ ಬದುಕಿದಾಗ ಪಾಪಾಚರಣೆಯಲ್ಲಿ ತೊಡಗಿದ್ದ ಕಾಶ್ಮೀರದ ರಾಣಿ ಜಯಮಾಲಿ ತನ್ನ ಗಂಡ ಸತ್ತಾಗ ಅವನೊಡನೆ ಚಿತೆಯೇರಿದ ಪ್ರಸಂಗವನ್ನು ನೆನೆದು ಕಲ್ಹಣ ಆಶ್ಚರ್ಯ ವ್ಯಕ್ತಪಡಿಸಿದ್ದಾನೆ.

ಸತಿ ಪದ್ಧತಿಯನ್ನು ಮೊದಮೊದಲು ಕ್ಷತ್ರಿಯರು ಮಾತ್ರ ಆಚರಿಸುತ್ತಿದ್ದರು. ಇದು ಸಮಾಜದಲ್ಲಿ ಪ್ರತಿಷ್ಠೆಯನ್ನು ಗಳಿಸಿಕೊಡ ಹತ್ತಿದ್ದರಿಂದ ಬ್ರಾಹ್ಮಣರೂ ಈ ಪದ್ಧತಿಯ ಆಚರಣೆಗೆ ತೊಡಗಿದರೆಂದು ಪ್ರೊ|| ಅಳತೇಕರರು ಹೇಳುತ್ತಾರೆ. ಸತಿ ಪದ್ಧತಿ ಆಗ ಈ ನಾಡಿನಲ್ಲಷ್ಟೇ ಅಲ್ಲ, ಜಾವಾ, ಬಾಲಿ ಹಾಗೂ ಸುಮಾತ್ರಗಳಲ್ಲೂ ಪ್ರಚಲಿತವಾಗಿತ್ತು.

ಸತಿ ಪದ್ಧತಿ ಅಮಾನುಷ ಹಾಗೂ ಕ್ರೂರ ಎಂಬುದರಲ್ಲಿ ಎರಡು ಮಾತೇ ಇಲ್ಲ. ಎಷ್ಟೋ ಸಲ ವಿಧವೆಯರನ್ನು ಬಲಾತ್ಕಾರವಾಗಿ ಬೆಂಕಿಯಲ್ಲಿ ನೂಕಿದ ಉದಾಹರಣೆಗಳೂ ಇವೆ.

ಸತಿ ಪದ್ಧತಿ ಮಧ್ಯಕಾಲದ ಮಹಮ್ಮದೀಯರ ದಾಳಿಯಿಂದಾಗಿ ಐತಿಹಾಸಿಕ ಅವಶ್ಯಕತೆಯಾಗಿರಲೂ ಸಾಕು. ವೈರಿಗಳ ಕೈಯಲ್ಲಿ ಸಿಕ್ಕು ಪತಿತಳಾಗುವುದಕ್ಕಿಂತ ಮರಣವೇ ಲೇಸೆಂದು ಆ ಕಾಲದ ಹೆಂಗಸರು ತಿಳಿದಿರಬೇಕು. ಆದರೆ ಇಂದು ಅಂಥ ಪ್ರಸಂಗವೇನೂ ಇಲ್ಲ. ಅಂದ ಮೇಲೆ ಅನ್ಯಾಯವನ್ನು ಸಂಪ್ರದಾಯದ ಹೆಸರಿನಲ್ಲಿ ಜೀವಂತವಾಗಿಡಬೇಕೆ? ಮೊಗಲರ ಆಳಿಕೆಯಲ್ಲಿ ಇದನ್ನು ತಡೆಗಟ್ಟುವ ಪ್ರಯತ್ನ ನಡೆಯಿತು. ಆದರೆ ಅದು ಸಫಲವಾಗಲಿಲ್ಲ. ಬ್ರಿಟಿಷರ ಆಳಿಕೆಯಲ್ಲಿ ಸಮಾಜ ಸುಧಾರಕರಾದ ರಾಜಾರಾಮ ಮೋಹನ್‌ರಾಯರಂಥವರ ಪ್ರಯತ್ನದಿಂದ ಲಾರ್ಡ್ ಬೆಂಟಿಂಕನ ಕಾಲದಲ್ಲಿ ಕಾಯಿದೆಯ ರೂಪದಲ್ಲಿ ಇದಕ್ಕೆ ಕಡಿವಾಣ ಬಿತ್ತು. ಸತಿ ಪದ್ಧತಿಯನ್ನು ಪ್ರೋತ್ಸಾಹಿಸುವವರೂ ದಂಡನಾರ್ಹರೆಂದು ಕಾಯ್ದೆಯಾಯಿತು.

ಸತಿ ಪದ್ಧತಿಯನ್ನು ತಡೆಗಟ್ಟುವ ಕಾಯಿದೆ ಬಂದು 150 ವರುಷಗಳಿಗೆ ಮೀರಿತು. ಆದರೆ ಅಲ್ಲೊಮ್ಮೆ ಇಲ್ಲೊಮ್ಮೆ ಈ ಆಚರಣೆ ತಲೆ ಎತ್ತುತ್ತಲೇ ಇದೆ. ಇದು ಯಾವುದರ ಸಂಕೇತ? ಧಾರ್ಮಿಕ ಮೂಢ ನಂಬಿಕೆಗಳು ಸುಲಭವಾಗಿ ಸತ್ತು ಹೋಗುವುದಿಲ್ಲವೆಂಬುದೆ? ಅಥವಾ ಹಿಂದೆ ತಿಳಿದಂತೆ ನಾರಿ ಪುರುಷನ ಸೊತ್ತು ಬೇಕಾದರೆ ನಾವು ಅವಳನ್ನು ಮನಬಂದಂತೆ ನಡೆಸಿಕೊಳ್ಳ ಶಕ್ತರೆಂಬುದರ ಸಂಕೇತವೆ?

ಸುಧಾರಣೆಯ ಯುಗದಲ್ಲಿ ನಾವು ಬಹು ದೂರ ಬಂದರೂ ನಾರಿಯರನ್ನು ಜೀವಂತವಾಗಿ ನಾವೇಕೆ ಇಂದು ಸುಡುತ್ತಿದ್ದೇವೆ? ಸುದೈವದಿಂದ ನಾಡಿನ ಅಗ್ರಗಣ್ಯರೆಲ್ಲರೂ ಇದನ್ನು ಖಂಡಿಸಿದ್ದಾರೆ. ಆದರೆ ಕೆಲವೊಂದು ಪ್ರತಿಗಾಮಿ ಶಕ್ತಿಗಳು ಇದರ ದುರುಪಯೋಗ ಪಡೆದು ರಾಜಸ್ಥಾನ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವುದು ಖಂಡನೀಯ. ರಾಜಸ್ಥಾನ ಸರ್ಕಾರವೇನೋ ಸತಿ ಪದ್ಧತಿಯನ್ನು ಪ್ರತಿಬಂಧಿಸಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ರಾಜೀವ ಗಾಂಧಿಯವರೂ ಇದನ್ನು ಉಗ್ರವಾಗಿ ಖಂಡಿಸಿದ್ದಾರೆ.

ಆದರೆ ಉಚ್ಚ ನ್ಯಾಯಾಲಯದ ಪ್ರತಿಬಂಧವಿದ್ದರೂ ರೂಪ ಕನ್ವರಳ ಮರಣೋತ್ತರ ಸಮಾರಂಭದಲ್ಲಿ ಅನೇಕರು ಭಾಗವಹಿಸಿದ್ದು ವಿಡಂಬನೆಗೆ ಕಾರಣವಾಗಿದೆ. ಅಲ್ಲದೆ ಐವತ್ತು ಲಕ್ಷ ಹಣ ಕೂಡಿಸಿ ಅವಳ ಸ್ಮಾರಕ ಕಟ್ಟುವ ಯೋಜನೆಯಂತೂ ಇಂದಿನ ಧಾರ್ಮಿಕ ಮೂಢ ನಂಬಿಕೆಗೆ ಹಿಡಿದ ಕೈಗನ್ನಡಿಯಾಗಿದೆ.

ಈ ಕರಾಳ ಪದ್ಧತಿ ಪುನಃ ತಲೆ ಎತ್ತದಂತೆ ಕೇವಲ ಕಾನೂನು ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈ ಅನಿಷ್ಟ ಪರಂಪರೆಯನ್ನು ತೊಡೆದು ಹಾಕಲು ನಾಡಿನ ಮೂಲೆ ಮೂಲೆಗಳಿಂದ, ಮನೆ ಮನೆಯಿಂದ ಸತಿ ಪದ್ಧತಿಯ ವಿರೋಧವಾಗಿ ಧ್ವನಿ ಏಳಬೇಕು. ಈ ಅನಾಗರೀಕ ಪದ್ಧತಿ ಸಂಪೂರ್ಣವಾಗಿ ಅಳಿದಾಗಲೇ ಈ ನಾಡಿನ ಭಾಗ್ಯರವಿ ಬೆಳಗಬಹುದು.



ಮೊನಾಲಿಸಳಿಗಾಗಿ ಹುಚ್ಚನಾದ

ಕೆ. ಶಾಂತಾಮಣಿ.

ಲಿಯೋನಾ ಮೆಕೋಸಾ ಪ್ಯಾರಿಸ್ಸಿನ ಒಬ್ಬ ಗೌರವಸ್ಥ ವ್ಯಾಪಾರಿ. ಗುಂಡಿಗಳನ್ನು ತಯಾರಿಸುವ ಅವನ ಕಾರ್ಖಾನೆಯಲ್ಲಿ ಸುಮಾರು ನೂರು ಜನ ಕೆಲಸ ಮಾಡುತ್ತಿದ್ದರು. ಅವನ ದಾಂಪತ್ಯ ಜೀವನವೂ ಸುಖಮಯವಾಗಿತ್ತು. ಅವನ ಹೆಂಡತಿ ಎಂಜೋಲಾ ಒಬ್ಬ ಪ್ರಸಿದ್ಧ ಚಿತ್ರಕಾರಳೂ ಆಗಿದ್ದಳು. ಒಂದು ದಿನ ಎಂಜೋಲಾ ತನ್ನ ಗಂಡನನ್ನು ಲೂವ್ರ ಸಂಗ್ರಹಾಲಯಕ್ಕೆ ಕರೆದೊಯ್ದಳು. ಸಂಗ್ರಹಾಲಯದಲ್ಲಿ ಸುತ್ತಾಡುತ್ತಾ ಮೆಕೋಸಾ ಲಿಯೋನಾರ್ಡೋದ ವಿಂಚಿಯ ಮೊನಾಲಿಸಾಳ ಚಿತ್ರದ ಮುಂದೆ ಬಂದಾಗ ಅವಾಕ್ಕಾಗಿ ನಿಂತುಬಿಟ್ಟ. ಬಹಳ ಹೊತ್ತು ದುರುಗುಟ್ಟಿಕೊಂಡು ಅದನ್ನೇ ನೋಡುತ್ತಿದ್ದ. ಕೊನೆಗೆ ಅದರಲ್ಲೇ ಲೀನವಾಗಿಬಿಟ್ಟ. ಎಂಜೋಲಾ ಬಹಳ ಕಷ್ಟದಿಂದ ಅವನನ್ನು ಮನೆಗೆ ಕರೆತಂದಳು.

ಐವತ್ತು ವರ್ಷದ ಮೆಕೋಸಾ ಮೊನಾಲಿಸಾಳ ಚಿತ್ರದಿಂದ ಅದೆಷ್ಟು ಮೋಹಿತನಾಗಿದ್ದನೆಂದರೆ ಪ್ರತಿನಿತ್ಯ ಸಂಗ್ರಹಾಲಯಕ್ಕೆ ಹೋಗಿ ಅವಳ ಮಧುರವಾದ ಮುಗುಳ್ನಗೆಯನ್ನು ತನ್ನ ಕಣ್ಣಲ್ಲಿ ಹೀರಿಕೊಳ್ಳುತ್ತಿದ್ದ. ಕೊನೆಗೆ ಅವನ ಸ್ಥಿತಿ ಎಲ್ಲಿಯವರೆಗೆ ಬಂತೆಂದರೆ ಒಂದು ಕ್ಷಣವೂ ಆ ಚಿತ್ರವನ್ನು ಬಿಟ್ಟಿರುವುದಾಗಲಿಲ್ಲ. ತನ್ನ ಕಾರ್ಖಾನೆಯನ್ನು ಮಾರುತ್ತೇನೆಂದು ಘೋಷಿಸಿಬಿಟ್ಟ. ಅನಂತರ ಸಂಗ್ರಹಾಲಯದ ಅಧಿಕಾರಿಯನ್ನು ಭೆಟ್ಟಿಯಾಗಿ ತನಗೆ ಮೊನಾಲಿಸಾ ಚಿತ್ರದ ಪಹರೆಯುವನ ಕೆಲಸ ಕೊಡಿ ಎಂದು ಕೇಳಿದ.

ಸಂಗ್ರಹಾಲಯದ ಅಧಿಕಾರಿಗಳಿಗೆ ಮೊದಲು ಇವನಿಗೆ ಹುಚ್ಚು ಹಿಡಿದಿರಬಹುದೆನಿಸಿತು. ಅವನು ಈ ಮಹಾನ್ ಕಲಾಕೃತಿಗೆ ಹಾನಿ ಉಂಟುಮಾಡಿದರೆ... ಎಂಬ ಯೋಚನೆಯೂ ಬಂತು. ಆದರೆ ಮೆಕೋಸಾ ಒಳ್ಳೆಯ ಮನುಷ್ಯನೆಂದು ತಿಳಿದ ಮೇಲೆ ಅವನಿಗೆ ಕಾವಲುಗಾರನ ಕೆಲಸ ಕೊಡಲೊಪ್ಪಿದರು. ಮೆಕೋಸಾ ಸಂತೋಷದಿಂದ ಓಡಿಹೋಗಿ ತನ್ನ ಪತ್ನಿಗೆ ಈ ವಿಷಯವನ್ನು ತಿಳಿಸಿದ. ಆ ಬಡಪಾಯಿ ಇದನ್ನು ಕೇಳಿ ಮೂರ್ಛೆ ಹೋಗಿದ್ದರಿಂದ ಅವಳನ್ನು ಆಸ್ಪತ್ರೆಗೆ ಸೇರಿಸಬೇಕಾಯಿತು.

ನಾನು ಈಗ ಜಗತ್ತಿನಲ್ಲೇ ಅತ್ಯಂತ ಸುಖಿಜೀವಿ. ಮೊದಲು ಮೊನಾಲಿಸಾಳನ್ನು ನೋಡಿದಾಗ ಅವಳ ಕಣ್ಣು ಮತ್ತು ಕೈಗಳಲ್ಲಿ

ಬ್ರಹ್ಮಾಂಡವೇ ಅಡಗಿದೆ ಎನ್ನಿಸಿತು. ಅವಳ ಮುಗುಳ್ನಗೆಯಲ್ಲಿ ಪ್ರಪಂಚದ ಸಾಹಿತ್ಯಕ್ಕಿಂತಲೂ ಮಿಗಿಲಾದ ಸೌಂದರ್ಯ, ಆಕರ್ಷಣೆಯಿದೆ ಎನ್ನಿಸಿತು. ಅವಳ ಆಕರ್ಷಣೆ ಎಷ್ಟೆಂದರೆ ನಾನು ಕಾರ್ಖಾನೆಯಲ್ಲಿ ಸರಿಯಾಗಿ ಕೆಲಸ ಮಾಡಲೂ ಸಾಧ್ಯವಾಗದಾಯಿತು" ಎನ್ನುತ್ತಿದ್ದ ಮೆಕೋಸಾ.

ಮೆಕೋಸಾ ತನ್ನ ಕಾರ್ಖಾನೆಯನ್ನು ಮುಚ್ಚಬೇಕೆಂದು ನಿಶ್ಚಯಿಸಿದಾಗ ಹೆಂಡತಿ ಮತ್ತು ನೆಂಟರು ಅವನನ್ನು ಹುಚ್ಚನೆಂದೇ ತಿಳಿದರು. "ಆದರೆ ಮೊದಮೊದಲು ಇದನ್ನು ಹುಚ್ಚಾಟವೆಂದೇ ತಿಳಿದಿದ್ದೆ. ಆದರೆ ಅವನನ್ನು ಕಾವಲುಗಾರನ ಸಮವಸ್ತ್ರದಲ್ಲಿ ನೋಡಿದಾಗ ಮಾತ್ರ ಬಹಳ ಹೆದರಿದ್ದೆ. ಪ್ರೇಮ ಕೂಡ ಒಂದು ಹುಚ್ಚಾಟ ತಾನೆ. ಈಗ ಅವನನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇನೆ. ನಾನು ಅವನಿಂದ ವಿಚ್ಛೇದನ ಪಡೆಯುವುದಿಲ್ಲ. ಏಕೆಂದರೆ ಅವನನ್ನು ನಾನು ತುಂಬ ಪ್ರೀತಿಸುತ್ತೇನೆ" ಎನ್ನುತ್ತಾಳೆ ಎಂಜೋಲಾ.

ಮೆಕೋಸಾನ ಆ ವರ್ತನೆ "ದಾಸನ ಮಾಡಿಕೋ ನನ್ನ ಗಿರಿಧಾರಿ, ದಾಸನಾಗಿ ನಾನು ನಿನ್ನ ನಿತ್ಯ ದರುಶನ ಪಡೆವೆ" ಎಂಬ ಮೀರಾಳ ಭಜನೆಯನ್ನು ನೆನಪಿಗೆ ತರುತ್ತದೆ. ಮೊನಾಲಿಸಾಳ ದಾಸನಾದ ಮೆಕೋಸಾ ಅವಳ ಸೇವೆ ಮಾಡಿ, ನಿತ್ಯ ದರುಶನ ಮಾಡಿ, ತನ್ನನ್ನು ಕೃತಾರ್ಥನೆಂದು ತಿಳಿಯತೊಡಗಿದ. ಆದರೆ ಮೆಕೋಸಾನ ಪ್ರಕಾರ ಮೊನಾಲಿಸಾಳ ಸಂಮ್ಮೋಹನದಲ್ಲಿ ಸಿಲುಕುವುದು ಹುಚ್ಚುತನವಲ್ಲ.

ಮೊನಾಲಿಸಾಳ ಈ ಸಮ್ಮೋಹನ ವ್ಯಕ್ತಿಯ ಮೇಲಷ್ಟೇ ಅಲ್ಲ, ರಾಷ್ಟ್ರಗಳ ಮೇಲೂ ಪ್ರಭಾವ ಬೀರಿದೆ. 1973ರಲ್ಲಿ ಜಪಾನಿನ ಆಗಿನ ಪ್ರಧಾನ ಮಂತ್ರಿ ಕಾಕುಯಿ ತನಾಕಾ ಫ್ರಾನ್ಸಿಗೆ ಹೋಗಿದ್ದರು. ಆಗ ಅವರು ಮೊನಾಲಿಸಾಳನ್ನು ಜಪಾನಿನ ಯಾತ್ರೆಗಾಗಿ ಕಳಿಸಿಕೊಡುವಂತೆ ಫ್ರಾನ್ಸ್ ಸರ್ಕಾರವನ್ನು ಕೇಳಿಕೊಂಡರು. ಇದಕ್ಕೂ ಮೊದಲು 1963 ರಲ್ಲಿ ಮೊನಾಲಿಸಾ ಅಮೆರಿಕದ ಯಾತ್ರೆ ಮಾಡಿ ಬಂದಿದ್ದಳು. ಫ್ರಾನ್ಸ್ ಸರ್ಕಾರವು ಜಪಾನಿನ ನಿವೇದನೆಯನ್ನು ಸ್ವೀಕರಿಸಿ 1974ರ ಏಪ್ರಿಲ್ ಮೂರನೆ ವಾರದಲ್ಲಿ ಸಕಲ ಭದ್ರತೆಗಳೊಡನೆ ಮೊನಾಲಿಸಾಳನ್ನು ಟೋಕಿಯೋದ ರಾಷ್ಟ್ರೀಯ ಸಂಗ್ರಹಾಲಯಕ್ಕೆ ಕಳಿಸಿಕೊಟ್ಟರು.

ಈ ಐವತ್ತು ದಿನಗಳ ಯಾತ್ರೆಯಲ್ಲಿ ಮೊನಾಲಿಸಾ ಗುಂಡು ಕೂಡ ಭೇದಿಸಲಾಗದಂಥ ಭದ್ರವಾದ ಕವಚ ತೊಟ್ಟು ಕುಳಿತಿದ್ದಳು. ಇವಳ ಆಗಮನಕ್ಕಿಂತ ಮೊದಲೇ 'ಮೊನಾಲಿಸಾ ಸಂಮ್ಮೋಹನ'ದ ಪ್ರಚಾರ ಸಾಕಷ್ಟು ನಡೆದಿತ್ತು. ಬ್ಯಾಂಕಿನ ಕ್ಯಾಲೆಂಡರುಗಳಲ್ಲಿ ಇವಳ ಚಿತ್ರಗಳನ್ನು ಪ್ರಕಟಿಸಲಾಯಿತು. ಪತ್ರಿಕೆಗಳಲ್ಲಿ ಭಾರಿ ಪ್ರಚಾರ ನೀಡಲಾಯಿತು.

ಒಬ್ಬ ಅಂಗಡಿಯವನು "ಮೊನಾಲಿಸಾ ನಮ್ಮ ಮಾಲುಗಳ ಮೇಲೆ ಮುಗುಳ್ನಗುತ್ತಿದ್ದಾಳೆ" ಎಂದು ಜಾಹೀರಾತು ಪ್ರಕಟಿಸಿದ.

ಜಪಾನಿ ಹುಡುಗಿಯೊಬ್ಬಳು ಮೊನಾಲಿಸಾಳಂಥ ಮುಖವನ್ನು ಪಡೆಯಲು ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಳು. ಫ್ಯೂಜಿ ಜಿರಾಕ್ಸ್ ಕಂಪನಿಯವರು ಕಂಪ್ಯೂಟರ್ ಮೂಲಕ ಮೊನಾಲಿಸಾಳ ಮುಖ ಮತ್ತು ಸ್ನಾಯುಗಳ ರಚನೆಯ ಅಧ್ಯಯನ ನಡೆಸಿ, ಅವಳ ಧ್ವನಿಯ ರಿಕಾರ್ಡ್ ತಯಾರು ಮಾಡಲು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿತು. ಎಲ್ಲಕ್ಕಿಂತ ಹೆಚ್ಚು ತಮಾಷೆಯ ಮಾತೆಂದರೆ, ಆ ಮೊನಾಲಿಸಾಳ ದರ್ಶಕರಲ್ಲಿ ಒಬ್ಬ, ಮೊನಾಲಿಸಾಳ ಜನ್ಮ ಫ್ಲಾರೆನ್ಸಿನಲ್ಲಲ್ಲ, ಟೋಕಿಯೋದಲ್ಲಿ ಆಗಿರಬಹುದು ಎಂದ. ಏತನ್ಮಧ್ಯೆ ಒಬ್ಬ ತಲೆ ಹಿಡುಕ ಹುಡುಗಿ ಮೊನಾಲಿಸಾಳ ಮುಖದ ಮೇಲೆ ಡಾಂಬರ್ ಬಳಿಯಲು ಯತ್ನಿಸಿದಾಗ ಅವಳನ್ನು ಬಂಧಿಸಲಾಯಿತು.

ಮೊನಾಲಿಸಾ ಜಗತ್ತಿನ ಅತ್ಯಂತ ಬೆಲೆ ಬಾಳುವ ಕಲಾಕೃತಿ ಎಂದು ಪರಿಗಣಿಸಲಾಗಿದೆ. 1962ರ ಡಿಸೆಂಬರ್ ಹದಿನಾರರಿಂದ 1963ರ ಮಾರ್ಚ್ ಹನ್ನೆರಡರವರೆಗೆ ಅದು ವಾಷಿಂಗ್ಟನ್ ಮತ್ತು ನ್ಯೂಯಾರ್ಕಿನ ಯಾತ್ರೆಯಲ್ಲಿದ್ದಾಗ ಲೂವ್ರ ಸಂಗ್ರಹಾಲಯ (ಪ್ಯಾರಿಸ್)ದವರು ಅದಕ್ಕೆ ವಿಮೆಯಿಳಿಸಬೇಕೆಂದು ಯೋಚಿಸಿದ್ದರು. ವಿಮಾ ಕಂಪನಿಯವರೊಂದಿಗೆ ಮಾತುಕತೆಯೂ ನಡೆಯಿತು. ಕೊನೆಗೆ ಒಂದು ಕಂಪನಿ 3 ಕೋಟಿ 57 ಲಕ್ಷ ಪೌಂಡುಗಳಿಗೆ ವಿಮೆ ಇಳಿಸಲು ಒಪ್ಪಿಕೊಂಡಿತು. ಆದರೆ ವಿಮೆಯ ಕಂತು ಮೊನಾಲಿಸಾಳ ಭದ್ರತೆಯ ಖರ್ಚಿಗಿಂತಲೂ ಹೆಚ್ಚಾಗಿದ್ದರಿಂದ ಈ ಯೋಜನೆಯನ್ನು ಕೈಬಿಡಲಾಯಿತು. ಜಪಾನ್ ಯಾತ್ರೆಯ ಕಾಲಕ್ಕೂ ಆ ಕೃತಿಗೆ ವಿಮೆಯಿಳಿಸಿರಲಿಲ್ಲ.

ಗಾಯ ವಾಸಿಯಾಗುವುದು ಹೇಗೆ?

— ಕಿರುಗಾವಲು ರಮೇಶ

ದೈನಂದಿನ ಜೀವನದಲ್ಲಿ ಗಾಯಗಳಾಗುವುದು ಸಹಜ. ಕ್ಷೌರ ಮಾಡಿಕೊಳ್ಳುತ್ತಿರುವಾಗ, ತರಕಾರಿ ಹೆಚ್ಚುತ್ತಿರುವಾಗ ಅಥವಾ ಮಕ್ಕಳು ಆಡುತ್ತಿರುವಾಗ ಆಗಾಗ ಚಿಕ್ಕಪುಟ್ಟ ಗಾಯಗಳಾಗುತ್ತವೆ.

ವಾಹನಾಪಘಾತಗಳಿಂದ, ಬೆಂಕಿ ಅನಾಹುತಗಳಿಂದ ಅಥವಾ ರಾಸಾಯನಿಕ ವಸ್ತುಗಳಿಂದ ದೊಡ್ಡ ಗಾಯಗಳೂ ಆಗುತ್ತವೆ. ಶಸ್ತ್ರಚಿಕಿತ್ಸೆಯ ಸಮಯದಲ್ಲೂ ಗಾಯಗಳಾಗುವುದುಂಟು. ಇಂಥ ಗಾಯಗಳು ಹೇಗೆ ವಾಸಿಯಾಗುತ್ತವೆ? ಅವುಗಳ ಶುಶ್ರೂಷೆಗೆ ಅವಶ್ಯವಾಗಿ ತಿಳಿಯಬೇಕಾದ ಅಂಶಗಳೇನು? ಈ ವಿಷಯಗಳ ಬಗ್ಗೆ ಜನಸಾಮಾನ್ಯರಿಗೆ ಪೂರ್ಣ ಅರಿವು ಇರುವುದು ಅವಶ್ಯ.

ದೇಹದಲ್ಲಿ ಗಾಯಗಳಾದಾಗ ಆಗುವ ಪ್ರಥಮ ಕ್ರಿಯೆ ರಕ್ತಸ್ರಾವ. ಆರೋಗ್ಯವಂತರಲ್ಲಿ ಗಾಯದಿಂದ ಹೊರಬರುವ ರಕ್ತ ಕೆಲವೇ ನಿಮಿಷಗಳಲ್ಲಿ ಹೆಪ್ಪುಗಟ್ಟಿ ನಿಯಂತ್ರಿಸಲ್ಪಡುತ್ತದೆ. ಗಾಯ ತೀರಾ ದೊಡ್ಡದಾಗಿದ್ದರೆ ರಕ್ತಸ್ರಾವ ನಿಲ್ಲುವುದು ತಡವಾಗುತ್ತದೆ. ಹೀಗಾಗದಂತೆ ತಡೆಯುವುದು ಅತ್ಯವಶ್ಯ. ರಕ್ತ ಹೊರಬರುತ್ತಿರುವ ಗಾಯದ ಮೇಲೆ ಒತ್ತಡ ಹೇರಿದ್ದರೆ ರಕ್ತ ಸೋರುವುದು ಕಡಿಮೆಯಾಗುತ್ತದೆ. ಇಂಥ ಸಮಯದಲ್ಲಿ ಔಷಧ ಅಂಗಡಿಗಳಲ್ಲಿ ದೊರೆಯುವ ರಕ್ತ ಸ್ರಾವ ಪ್ರತಿಬಂಧಕಗಳನ್ನು (ಹಿಮೋಸ್ಟ್ಯಾಟಿಕ್ಸ್) ಬಳಸುವುದು ಒಳ್ಳೆಯದು. ಗಾಯ ವಾಸಿಯಾಗಬೇಕಾದರೆ ರಕ್ತ ಹೆಪ್ಪುಗಟ್ಟುವುದು ಅವಶ್ಯಕ. ಇದರೊಂದಿಗೆ ಗಾಯ ವಾಸಿಯಾಗಿರುವ ವಿಧಾನ ಆರಂಭವಾಗುತ್ತದೆ. ನಿರಂತರ ರಕ್ತಸ್ರಾವ ಪ್ರಾಣಕ್ಕೆ ಗಂಡಾಂತರಕಾರಿ ಎಂಬುದು ಗೊತ್ತಿದ್ದ ವಿಷಯ. ಹೀಗೆ ಸಾವು ಸಂಭವಿಸುವುದು ಅಪರೂಪವಾದರೂ ವಂಶ ಪಾರಂಪರ್ಯವಾಗಿ ಬರುವ ರಕ್ತ ಹೆಪ್ಪುಗಟ್ಟುವ ದೋಷ (ಉದಾ: ಹಿಮೋಫಿಲಿಯಾ) ಇದ್ದಲ್ಲಿ ಗಾಯದಿಂದ ರಕ್ತಸ್ರಾವ ನಿಲ್ಲದೆ ರೋಗಿ ಮರಣ ಹೊಂದುತ್ತಾನೆ. ರಕ್ತ ಹೆಪ್ಪುಗಟ್ಟುವುದರಿಂದ ಗಾಯಗಳು ವಿಶಿಷ್ಟ ರೀತಿಯಲ್ಲಿ ಮುಚ್ಚಲ್ಪಡುತ್ತವೆ. ಹಾಗೂ ಗಾಯವು ವ್ರಣವಾಗದಂತೆ ನಿಯಂತ್ರಿಸಲ್ಪಡುತ್ತದೆ.

ಮಾನವನ ಮತ್ತು ಪ್ರಾಣಿಗಳ ದೇಹಗಳು ಗಾಯವಾಸಿಯಾಗಲು ತಮ್ಮದೇ ಆದ ವಿಶಿಷ್ಟ ರಕ್ಷಣಾ ವಿಧಾನಗಳನ್ನು ಪ್ರಕೃತಿದತ್ತವಾಗಿ ಪಡೆದಿದೆ. ಈ ವಿಧಾನಗಳು ಎಲ್ಲಾ ಜೀವಿಗಳಲ್ಲಿ ಕ್ರಮಬದ್ಧವಾಗಿ ಸಾಗುತ್ತವೆ. ಗಾಯ ವಾಸಿಯಾಗುವದು ಶರೀರದ ರಕ್ಷಣಾ ವಿಧಾನಗಳ ಅವಿಭಾಜ್ಯ ಅಂಗ. ಆದರೆ ಗಾಯವಾಸಿಯಾಗುವ ಕ್ರಿಯೆ ಹೇಗೆ ಆರಂಭಗೊಳ್ಳುತ್ತದೆ ಎಂಬುದು ಇಂದಿಗೂ ನಿಗೂಢ. ಹಾಗೆಯೇ ಗಾಯ ಪೂರ್ಣ ವಾಸಿಯಾದಾಗ ಯಾವ ರೀತಿಯಲ್ಲಿ ಈ ಕ್ರಿಯೆ ನಿಲ್ಲುತ್ತದೆ? ಔಷಧಿಗಳು ಈ ಕ್ರಿಯೆಗಳಲ್ಲಿ ಬದಲಾವಣೆ ತಂದು ಅನುಕೂಲಕರ ಫಲಿತಾಂಶ ನೀಡಬಲ್ಲವೆ? ಎಂಬುದರ ಬಗ್ಗೆ ಸಹ ಇನ್ನೂ ಪೂರ್ಣವಾಗಿ ಗೊತ್ತಾಗಿಲ್ಲ.

ಗಾಯ ಯಾವುದೇ ರೀತಿಯಲ್ಲಾದರೂ ವಾಸಿಯಾಗುವ ವಿಧಾನ ಒಂದೆ. ಗಾಯ ವಾಸಿಯಾಗುವುದಕ್ಕೆ ರಕ್ತ ಹೆಪ್ಪುಗಟ್ಟುವುದು ಹೇಗೆ ಅವಶ್ಯವೋ ಗಾಯದಲ್ಲಾಗುವ ಊತವೂ

ಅಷ್ಟೇ ಅವಶ್ಯ. ಆದರೆ ಊತದ ಪರಿಧಿ ಮತ್ತು ಅವಧಿ ಹೆಚ್ಚಾಗಬಾರದು. ಹೀಗಾದಲ್ಲಿ ಗಾಯ ಬೇಗ ವಾಸಿಯಾಗುವುದಿಲ್ಲ. 'ಊತ' ಹಲವಾರು ಕಾರಣಗಳಿಂದ ಉಂಟಾಗುತ್ತದೆ. ಮುಖ್ಯವಾಗಿ ಕಣಕೋಶ ವಲಸೆಯು ಗಾಯದಲ್ಲಾಗುವ ಊತಕ್ಕೆ ಪೂರಕ.

ಗಾಯದಲ್ಲಿರುವ ಪ್ರೋಟಿನ್ ಮತ್ತು ರಕ್ತ ಹೆಪ್ಪುನಾರು (ಫೈಬ್ರಿನ್) ಅಂಚಿನಲ್ಲಿ ಬಿಳಿರಕ್ತ ಕಣಗಳು, ನಾರುಕೋಶಗಳು (ಫೈಬ್ರೊಬ್ಲಾಸ್ಟ್) ಮತ್ತು ಗಾಯಕ್ಕೆ ರಕ್ಷಣೆ ಒದಗಿಸುವ ಇತರ ಕೋಶಗಳು ಹಾಗೂ ರಕ್ತ, ಬಿಳಿರಕ್ತ (ಲಿಂಫ್) ಮತ್ತು ಸುತ್ತಮುತ್ತಲಿನ ಕೋಶ ಸಮೂಹಗಳಿಂದ ಹಲವು ಬಗೆಯ ಕೋಶಗಳು ಗಾಯವಾದ ಸ್ಥಳಕ್ಕೆ ವಲಸೆ ಬರುತ್ತವೆ. ವಿಧ ವಿಧವಾದ ಶಾರೀರಿಕ ರಸಾಯನಿಕ ವಸ್ತುಗಳು ಕಣಕೋಶ ವಲಸೆಗೆ ಉತ್ತೇಜನ ನೀಡುತ್ತವೆ. ವಲಸೆ ಬಂದ ಕಣಕೋಶಗಳು ಬೇಡದ ವಸ್ತುಗಳನ್ನು ಹೊರಹಾಕುವುದರ ಜೊತೆಗೆ, ರೋಗಾಣುಗಳು ಗಾಯವನ್ನು ಸೇರದಂತೆ ತಡೆಹಿಡಿದು, ಗಾಯ ರಕ್ಷಣೆಗೆ ಭದ್ರ ಬುನಾದಿ ಹಾಕುತ್ತವೆ. ಗಾಯದಲ್ಲಿರುವ ಅಳಿದ ಕೋಶ ಮತ್ತು ರಾಸಾಯನಿಕ ವಸ್ತುಗಳನ್ನು ಕಣಕೋಶಗಳು ಹೊರದೂಡುವುದೇ "ಗಾಯ ನೈರ್ಮಲ್ಯೀ ಕರಣ" (ವೂಂಡ್ ಡಿಬ್ರಿಡಿಮೆಂಟ್).

ಗಾಯವಾದ ನಾಲ್ಕನೆ ದಿನದಿಂದ ನಾರು ಕೋಶ ಕೊಲ್ಲಾಜಿನ್ ತಯಾರಿಕೆಯಲ್ಲಿ ಮಗ್ನವಾಗುತ್ತದೆ. ಅಲ್ಲದೆ ಕೊಲ್ಲಾಜಿನ್ ತಯಾರಿಕೆಯಲ್ಲಿ ಪಾಲುಗೊಳ್ಳದ ಇತರ ನಾರುಕೋಶಗಳು ಗಾಯವನ್ನು ಸಂಕುಚಿತಗೊಳಿಸಿ ಗಾಯದ ಅಂಚುಗಳನ್ನು ಸೇರಿಸುವ ಪ್ರಯತ್ನಕ್ಕೆ ನಾಂದಿ ಹಾಕುತ್ತವೆ. ನಾರುಕೋಶದಿಂದ ಉತ್ಪನ್ನವಾದ ಕೊಲ್ಲಾಜಿನ್ ವಾಸಿಯಾದ ಗಾಯವು ಮಚ್ಚೆಯಾಗಿ ಪರಿವರ್ತನೆಗೊಳ್ಳುವಂತೆ ಮಾಡುತ್ತದೆ. ಒಮ್ಮೆ ವಾಸಿಯಾದ ಗಾಯದ ಸ್ಥಳದಲ್ಲಿ ಅಂಗಾಂಗ ಕೋಶ ಸಮೂಹ ರಚನೆಯ ರೀತಿ ಇಲ್ಲವೆ ಕಾರ್ಯದಕ್ಷತೆಯು ಮೊದಲಿನಂತಿರುವುದಿಲ್ಲ. ಆದರೆ ಯಕೃತ್ ಗಾಯಗಳು ಈ ಗುಂಪಿಗೆ ಸೇರುವುದಿಲ್ಲ.

ಗಾಯವಾದ 48 ಗಂಟೆಗಳೊಳಗೆ, ಮೇಲ್ಪೊರೆ ಕೋಶಗಳು (ಎಪಿಥೀಲಿಯಲ್ ಸೇಲ್ಸ್) ಅಕ್ಕಪಕ್ಕದಿಂದ ಕೋಶ ನಾಶವಾದ ಸ್ಥಳಕ್ಕೆ ಬಂದು ಸೇರಿ, ಉಂಟಾದ ಬಿರುಕನ್ನು ಗುಣಪಡಿಸಲು ಉತ್ತೇಜಿಸುತ್ತದೆ. ನಂತರ ಈ ಕೋಶಗಳು ವೃದ್ಧಿಯಾಗಿ ಮೇಲಿನ ಕೆರಾಟಿನ್ ಉತ್ಪಾದಿಸುವ ಕೋಶಗಳಾಗಿ ರಚನೆಗೊಂಡು ಗಾಯಕ್ಕೆ ಆಕಾರ ಹಾಗೂ ಬಣ್ಣಗಳನ್ನು ನೀಡುತ್ತವೆ. ಸಾಮಾನ್ಯವಾಗಿ ಗಾಯವಾದ ಸ್ಥಳದಲ್ಲಿ ಕೂದಲು ಬೆಳೆಯುವುದಿಲ್ಲ. ಮೊಲದಂಥ ಕೆಲವೇ ಪ್ರಾಣಿಗಳಲ್ಲಿ ಮಾತ್ರ ಗಾಯದ ಮಚ್ಚೆಯ ಮೇಲೆ ಕೂದಲು ಬೆಳೆಯುತ್ತವೆ.

ನಾರುಕೋಶ ತಯಾರಿಸಿದ ಕೊಲ್ಲಾಜಿನ್ ಗಾಯದ ಮಚ್ಚೆಯನ್ನು ಹೆಣೆಯುತ್ತದೆ. ಇಲ್ಲಿ ವ್ಯತ್ಯಾಸವಾದರೆ ಗಾಯಗಳ ಗುರುತುಗಳು ಆಜನ್ಮ ಇರುತ್ತವೆ. ಕೈಗೆ ಸಿಕ್ಕಿದ ಔಷಧಿಗಳನ್ನು ಅವುಗಳ ಅವಶ್ಯಕತೆಯಿಲ್ಲದಿದ್ದರೂ ಹಚ್ಚಿದಾಗ ಹೀಗಾಗುವುದುಂಟು. ಗಾಯ ಮಚ್ಚೆಯನ್ನು ಹೋಗಲಾಡಿಸುವುದು ಅಷ್ಟು ಸುಲಭವಲ್ಲ. ಶಸ್ತ್ರ ಚಿಕಿತ್ಸೆಯ ನಂತರ ಗಾಯದ ಗುರುತು ಅಳಿಯುವುದಿಲ್ಲ. ಬೇರೆ ರೀತಿಯಲ್ಲಾದ ಗಾಯ ಗುರುತುಗಳು ದಿನಗಳೆದಂತೆಲ್ಲಾ ಮಾಸಬಹುದು. ಕೆಲ ವರ್ಷಗಳ ನಂತರ ಚರ್ಮ ಮೊದಲಿನ ಬಣ್ಣಕ್ಕೆ ತಿರುಗಬಹುದು. ಆದರೆ ಗಾಯದ ಗುರುತನ್ನು ಹೋಗಲಾಡಿಸುವ ಔಷಧಿಗಳು ಇನ್ನೂ ಬಂದಿಲ್ಲ. ಹಲವು ಸಂದರ್ಭದಲ್ಲಿ, ಗಾಯವು ಮಚ್ಚೆ ನಿಯಂತ್ರಣ ಮೀರಿ ಹೆಚ್ಚಾಗಿ ಬೆಳೆದು ದಪ್ಪಗಾಯಗುರುತು (ಕೀಲಾಯಿಡ್) ಉಳಿಯುವಂತಾಗುತ್ತದೆ. ದಪ್ಪ ಗಾಯ ಗುರುತುಗಳು ಕಾಣುವುದು ಮನುಷ್ಯನಲ್ಲಿ ಮಾತ್ರ. ವಿದ್ಯುಚ್ಛಕ್ತಿ ಮತ್ತು ಬೆಂಕಿಯಿಂದಾದ ಗಾಯಗಳಲ್ಲಿ ತೀವ್ರ ಕೋಶ ನಾಶವಾದರೆ ಗಾಯಗುರುತು ವಿಭಿನ್ನವಾಗಿರುತ್ತದೆ. ಇವುಗಳನ್ನು ಸರಿದೂಗಿಸಲು ಸುಲಭ ಚಿಕಿತ್ಸೆ ಗಳು ಈಗ ಲಭ್ಯವಿಲ್ಲ.

ಗಾಯವಾಸಿಯಾಗುವ ರೀತಿ ಶರೀರದ ಎಲ್ಲಾ ಅಂಗಾಂಗಗಳಲ್ಲಿ ಒಂದೇ ತೆರನಾದರೂ, ಇದರ ತೀವ್ರತೆ ಒಂದೇ ಸಮನಾಗಿರುವುದಿಲ್ಲ. ಮೂತ್ರ ಕೋಶದಲ್ಲಾಗುವ ಗಾಯಗಳು ಸ್ವಲ್ಪ ತಡವಾಗಿ ಮತ್ತು ಮಾಂಸಖಂಡಗಳ ಬಿಳಿನಾರ ಹುರಿ (ಟೆಂಡನ್) ಗಾಯಗಳು ಮಂದಗತಿಯಲ್ಲಿ ವಾಸಿಯಾಗುತ್ತವೆ.

ಗಾಯಗಳಲ್ಲಿ ರೋಗಾಣುಗಳು ಸೇರಿಕೊಂಡಲ್ಲಿ ಗಾಯವಾಸಿಯಾಗುವುದು ಬಹಳ ನಿಧಾನವೆಂಬುದು ಗೊತ್ತಿದ್ದ ವಿಷಯ. ಆದ್ದರಿಂದ ರೋಗಾಣುಗಳು ಗಾಯವನ್ನು ಪ್ರವೇಶಿಸದಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ. ಈ ದಿಶೆಯಲ್ಲಿ ಮಾರುಕಟ್ಟೆಯಲ್ಲಿ

ಗಾಯಲೇಪನಗಳು ಸಾಕಷ್ಟು ಸಿಗುತ್ತವೆ. ಗಾಯವಾಸಿಯಾಗುವ ವಿಧಾನಕ್ಕೆ ಭಂಗ ತರದಂತೆ ರೋಗಾಣುಗಳನ್ನು ತಡೆಗಟ್ಟುವ ಗಾಯಲೇಪನಗಳನ್ನು ಉತ್ತಮ ದರ್ಜೆಯವೆಂದು ಪರಿಗಣಿಸಬಹುದು. ಗಾಯಗಳಿಗೆ ಪೆನ್ಸಿಲಿನ್ ಲೇಪ ಹಚ್ಚಬಾರದು. ಈಗಲೂ ಹಲವೆಡೆ ಸಿಗುವ ಈ ಲೇಪನ ಕೆಲಬಾರಿ ಅಪಾಯಕರವೆನಿಸಬಲ್ಲದು. ಪೆನ್ಸಿಲಿನ್ ಲೇಪ ಬಳಸುವ ವ್ಯಕ್ತಿ ಪೆನ್ಸಿಲಿನ್ ಒಗ್ಗದಿದ್ದರೆ ಅವನಿಗೆ ಅಪಾಯವಾಗಬಹುದು. ಕಣ್ಣಿನ ಗಾಯಗಳಿಗೆ ಪೆನ್ಸಿಲಿನ್ ಲೇಪಹಚ್ಚಿಕೊಂಡ ವ್ಯಕ್ತಿಗಳು ಕಣ್ಣನ್ನೇ ಕಳೆದುಕೊಂಡ ಉದಾಹರಣೆಗಳು ಸಾಕಷ್ಟಿವೆ. ಕೆಲವು ಸಂದರ್ಭಗಳಲ್ಲಿ ಈ ಲೇಪಗಳಿಂದ ಪ್ರತಿಕೂಲ ಪರಿಣಾಮಗಳು ತಕ್ಷಣ ಕಾಣಿಸಿಕೊಳ್ಳದೆ, ಗಾಯವಾಸಿಯಾಗುವ ವಿಧಾನದ ಗತಿಯನ್ನು ಕುಗ್ಗಿಸುವುದುಂಟು. ಇಂಥ ಸಮಯದಲ್ಲಿ ಹಚ್ಚಬಾರದು. ಗಾಯ ಐದರಿಂದ ಏಳು ದಿನಗಳಲ್ಲಿ ಒಣಗದಿದ್ದರೆ ವೈದ್ಯರ ಸಲಹೆ ಪಡೆಯಬೇಕು.


ಶರೀರದಲ್ಲಿ ನೀರು ಹಾಗೂ ಆಹಾರಗಳ ಅಭಾವವಿದ್ದರೆ ಗಾಯವಾಸಿಯಾಗುವುದು ನಿಧಾನವಾಗುತ್ತದೆ. ರಕ್ತ ಚಲನೆಯಿಂದ ಲಭ್ಯವಾಗುವ ಆಮ್ಲಜನಕ ದೊರೆಯದಿದ್ದರೆ ಗಾಯವಾಸಿಯಾಗುವುದಿಲ್ಲ. ಪ್ರೋಟೀನ್ ಕೊರತೆ ಗಾಯವಾಸಿಯಾಗುವ ಮಟ್ಟದಲ್ಲಿ ವ್ಯತ್ಯಯ ಉಂಟುಮಾಡುತ್ತದೆ ಮತ್ತು ಗಾಯಗಳು ಸೀಳಾಗುತ್ತವೆ. ಮಿಥಿಯೋನಿನ್ ಮತ್ತು ಸಿಸ್ಟೀನ್ ಆಮೈನೋ ಆಮ್ಲಗಳು ಗಾಯವಾಸಿಯಾಗುವುದಕ್ಕೆ ಅಗತ್ಯವೆಂದು ವಿಜ್ಞಾನಿಗಳ ಅಭಿಮತ. ಜೀವಸತ್ವ 'ಸಿ' ದೊರೆಯದಿದ್ದರೆ, ನಾರುಕೋಶಗಳು ಕೊಲ್ಲಾಜಿನ್ ತಯಾರಿಸುವುದಿಲ್ಲ. ಹೀಗಾಗಿ ಗಾಯ ಪೂರ್ಣ ತೆರೆದಂತಿರುತ್ತದೆ. ಜೀವಸತ್ವ 'ಎ' ಗಾಯ ವಾಸಿ ಯಾಗುವ ಎಲ್ಲಾ ವಿಧಾನಗಳಿಗೆ ಪೋಷಕ. ಇದು ಮೇಲ್ಪೊರೆ ಕೋಶ ರಚನೆ ಮತ್ತು ನಾರುಕೋಶಗಳ ಸಂಖ್ಯೆಯನ್ನು ವೃದ್ಧಿಸುತ್ತದೆ. ವಿಜ್ಞಾನಿಗಳು ಮೊಟ್ಟ ಮೊದಲನೆಯ ಗಾಯ ನಿವಾರಕ ಔಷಧಿಯಾಗಿ ಜೀವಸತ್ವ 'ಎ' ಯನ್ನು ಬಳಸಿದ್ದಾರೆ. ಇನ್ನು ಊತನೋವು ಮತ್ತು ಕೀಲು ನೋವುಗಳಿಗೆ ನೀಡುವ ಊತನಿವಾರಕ ಔಷಧಿಗಳು ಮತ್ತು ಕ್ಯಾನ್ಸರಿಗೆ ಕೊಡುವ ಔಷಧಿಗಳು ಗಾಯವಾಸಿಯಾಗುವ ವಿಧಾನವನ್ನು ತಡೆಹಿಡಿಯುತ್ತವೆ ಎಂಬುದು ಗಮನಾರ್ಹ.

ಔಷಧಿಗಳಿಂದ ಗಾಯವು ವಾಸಿಯಾಗುವ ಗತಿಯನ್ನು ಹೆಚ್ಚಿಸುವ ಔಷಧ ಶಾಸ್ತ್ರದ ಗುರಿ ಇಂದಿನವರೆಗೆ ನಿಖರವಾದ ಯಶಸ್ಸು ನೀಡಿಲ್ಲ. ಆದರೂ ಗಾಯವಾದ ತಕ್ಷಣ ರೋಗಾಣುಗಳು ಪ್ರವೇಶಿಸದಂತೆ ಔಷಧಿಗಳನ್ನು ಬಳಸುವುದು ರೂಢಿಯಲ್ಲಿದೆ. ಗಾಯಪಟ್ಟಿಗಳ ಉಪಯೋಗ ವಿಶ್ವವ್ಯಾಪಿಯಾಗಿದೆ. ಗಾಯಪಟ್ಟಿಗಳ ಉಪಯೋಗ ಅವಶ್ಯವೆನಿಸಿದೆಯಾದರೂ, ನೇರವಾಗಿ ಗಾಳಿಯ ಸಂಪರ್ಕ ಹೊಂದುವ ಆಳವಲ್ಲದ ಚರ್ಮಗಾಯಗಳು ಬೇಗ ವಾಸಿಯಾಗುತ್ತವೆ. ಬೆಂಕಿಯಿಂದಾದ ಗಾಯಗಳಿಗೆ ಗಾಯಪಟ್ಟಿ ಹಚ್ಚಬಾರದು.

ಸತುವಿನ ಲವಣವಿರುವ ಲೇಪನವು ಗಾಯವನ್ನು ಶೀಘ್ರವಾಗಿ ವಾಸಿಮಾಡುತ್ತದೆ. ಲೇಪನಗಳು ಮತ್ತು ಗಾಯಪಟ್ಟಿಗಳು ತೊಂದರೆ ನಿವಾರಿಸುವಲ್ಲಿ ಸಹಾಯಕ. ಆದರೆ ಇವುಗಳಿಂದ ಸಣ್ಣ ಗಾಯಗಳಿಗೆ ಆಗುವ ಪ್ರಯೋಜನ ಹೇಳಿಕೊಳ್ಳುವಂತಹುದಲ್ಲ. ಸಾಮಾನ್ಯ ಚರ್ಮ ಗಾಯಗಳಿಗೆ ಔಷಧಿಗಳ ಅಗತ್ಯವಿಲ್ಲ. ಆದರೆ ರೋಗಾಣುಗಳ ಸೇರ್ಪಡೆಯಿಂದ ಕೀವು ಉಂಟಾದಲ್ಲಿ ವೈದ್ಯ ಶುಶ್ರೂಷೆ ಅನಿವಾರ್ಯ.

ಸಿಹಿಮೂತ್ರ ರೋಗಿಗಳಲ್ಲಿ ಗಾಯವಾಸಿಯಾಗುವುದು ನಿಧಾನ. ಈ ರೋಗಿಗಳಲ್ಲಿ 'ಇನ್ಸುಲಿನ್' ಚೋದಕದ ಅಭಾವವಿರುವುದೇ ಇದಕ್ಕೆ ಕಾರಣ. ಇನ್ಸುಲಿನ್ನು ಗಾಯವಾಸಿಯಾಗುವಂತೆ ವರ್ತಿಸುತ್ತದೆ. ಸಿಹಿಮೂತ್ರ ರೋಗಿಗಳಲ್ಲಿ ಶಸ್ತ್ರ ಚಿಕಿತ್ಸೆ ಗಾಯಗಳು ವಾಸಿಯಾಗಲು ಇನ್ಸುಲಿನ್ ನೀಡುವುದು ಅತ್ಯಗತ್ಯ.

ಗಾಯದಿಂದಾಗುವ ನೋವಿಗೆ ಅನೇಕ ಸಂದರ್ಭಗಳಲ್ಲಿ ನೋವು ನಿವಾರಕ ಔಷಧಗಳ ಸೇವನೆ ಅವಶ್ಯ. ಇತ್ತೀಚಿನ ಸಂಶೋಧನಾ ವರದಿಗಳ ಪ್ರಕಾರ ಈ ನೋವು ನಿವಾರಕಗಳು ಗಾಯವಾಸಿಯಾಗುವ ವಿಧಾನದಲ್ಲಿ ಊತವನ್ನು ಕಡಿಮೆ ಮಾಡಿ, ವಾಸಿಯಾದ ನಂತರ ಗಾಯವಾದ ಅಂಗಾಂಗಗಳು ಕಾರ್ಯ ದಕ್ಷತೆಗೆ ಧಕ್ಕೆ ಉಂಟುಮಾಡುತ್ತವೆ ಎಂದು ಹೇಳಲಾಗಿದೆ. ಹೀಗೆ ಹಲವಾರು ಔಷಧಿಗಳು ಗಾಯವಾಸಿಯಾಗುವುದನ್ನು ಕುಂಠಿತಗೊಳಿಸುತ್ತವೆ. ಇವುಗಳ ಬಗ್ಗೆ ವ್ಯಾಪಕ ವೈಜ್ಞಾನಿಕ ಮಾಹಿತಿ ಇನ್ನೂ ದೊರೆತಿಲ್ಲ. ಮಿಗಿಲಾಗಿ ಆರೋಗ್ಯವಂತರಲ್ಲಿ ಗಾಯ ವಾಸಿಯಾಗುವ ವಿಧಾನ ಎಲ್ಲಾ ರೀತಿಯ ಅಡಚಣೆಗಳನ್ನು ಬದಿಗೊತ್ತಿ ಪೂರ್ಣಗೊಳ್ಳುವುದು ಪ್ರಕೃತಿಯ ವೈಶಿಷ್ಟ್ಯ.



ಕಾವ್ಯ ಪಥದ ಅನ್ವೇಷಕ 'ಅಜ್ಞೇಯ'



—ವಿ.ಡಿ. ಹೆಗಡೆ

ಕವಿತೆ ಪ್ರಯೋಗದ ವಿಷಯ. ನಾನು ಕಾವ್ಯ ಸತ್ಯವನ್ನು ಕಂಡುಕೊಂಡಿದ್ದೇನೆ ಎಂಬುದು ಮಿಥ್ಯ. ಆದ್ದರಿಂದ ಕವಿ ಗುರಿ ತಲುಪಿದವನಲ್ಲ, ಪಥಿಕ. ಪಥಿಕನೂ ಅಲ್ಲ ಪಥದ ಅನ್ವೇಷಕ" ಎಂದ 'ಅಜ್ಞೇಯ' ಈ ಶತಮಾನದ ಹಿಂದೀ ಸಾಹಿತ್ಯದ ಮೇರುಪುರುಷ. ಜ್ಞಾನಪೀಠ ಪ್ರಶಸ್ತಿ ಪಡೆದ ಅವರು ಆಧುನಿಕ ಹಿಂದೀ ಕಾವ್ಯಕ್ಕೆ ಹೊಸ ತಿರುವು ನೀಡಿ ಅದನ್ನು ವೈಚಾರಿಕತೆಯ ನೆಲೆಗಟ್ಟಿನ ಮೇಲೆ ಬೆಳೆಸಿದ ಮಹಾನ್ ವ್ಯಕ್ತಿ. ಹಿಂದೀ ಕಾವ್ಯವನ್ನು ಹೊಸ ಮೌಲ್ಯಗಳ ಅನ್ವೇಷಣೆಗೆ ಸಜ್ಜುಗೊಳಿಸಿದ ಶ್ರೇಯಸ್ಸು ಅಜ್ಞೇಯರಿಗೆ ಸಲ್ಲುತ್ತದೆ.

ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯನರ ಕಾವ್ಯನಾಮ 'ಅಜ್ಞೇಯ'. ಈ ಕ್ರಾಂತಿಕಾರಿಯ ಜನ್ಮ (೭-೩-೧೯೧೧) ಉತ್ತರ ಪ್ರದೇಶದ ದೇವರಿಯಾ ಜಿಲ್ಲೆಯ ಕಸಿಯಾ ಎಂಬಲ್ಲಿ ಆಯಿತು. ಅವರ ತಂದೆ ಹೀರಾನಂದ ಶಾಸ್ತ್ರಿ ಭಾರತೀಯ ಪುರಾತತ್ವ ಇಲಾಖೆಯಲ್ಲಿ ಲಿಪಿ ಶಾಸ್ತ್ರದ ಪಂಡಿತರಾಗಿದ್ದರು. ಅಜ್ಞೇಯರು ಲಖನೌದಲ್ಲಿ ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡುತ್ತ ತಮ್ಮ ಶಿಕ್ಷಣವನ್ನು ಆರಂಭಿಸಿದರು. ಮುಂದೆ ಜಮ್ಮುವಿನಲ್ಲಿ ಫಾರಸಿ ಮತ್ತು ಇಂಗ್ಲೀಷ್, ಪಟನಾದಲ್ಲಿ ಬಂಗಾಳಿಯ ಪ್ರಾರಂಭಿಕ ಶಿಕ್ಷಣ ಪಡೆದರು. ೧೯೨೧ರಲ್ಲಿ ಕರ್ನಾಟಕದ ಉಡುಪಿಯಲ್ಲಿ ಅಜ್ಞೇಯರ ಉಪನಯನ ನೆರವೇರಿತು. ಉಡುಪಿಯ ಮಠವೊಂದರ ಪಂಡಿತರಲ್ಲಿ ಆರು ತಿಂಗಳತನಕ 'ಅಜ್ಞೇಯ'ರು ಸಂಸ್ಕೃತ ಕಲಿತರು. ೧೯೨೭ರಲ್ಲಿ ಮದ್ರಾಸ ಕ್ರಿಶ್ಚಿಯನ್ ಕಾಲೇಜಿನಿಂದ ಇಂಟರ್, ಲಾಹೋರ್ ಕಾಲೇಜಿನಿಂದ ಬಿ.ಎಸ್ಸಿ. ಪರೀಕ್ಷೆಯನ್ನು ಅವರು ಪಾಸು ಮಾಡಿದರು.

ಲಾಹೋರಿನಲ್ಲಿದ್ದಾಗಲೇ ಅವರ ಕ್ರಾಂತಿಕಾರಿ ಜೀವನಕ್ಕೆ ನಾಂದಿಯಾಯಿತು. ಹಿಂದುಸ್ತಾನ್ ಸೋಶಿಯಲಿಸ್ಟ್ ರಿಪಬ್ಲಿಕ್ ಪಾರ್ಟಿಯ ಸದಸ್ಯರಾದಾಗ ಅವರಿಗೆ ಅಜಾದ್, ಸುಖದೇವ್ ಮತ್ತು ಭಗವತೀಚರಣ ವೋಹ್ರಾರ ಪರಿಚಯವಾಯಿತು. ೧೯೨೯ ರಿಂದ ೧೯೩೬ರ ವರೆಗಿನ ಏಳು ವರ್ಷಗಳಲ್ಲಿ ಕ್ರಾಂತಿಕಾರಿಗಳ ಸಂಘಟನೆಯೊಂದಿಗೆ ತಮ್ಮನ್ನು ಸಕ್ರಿಯವಾಗಿ ತೊಡಗಿಸಿ

ಕೊಂಡಿದ್ದು, ಭಗತ್‌ಸಿಂಹರನ್ನು ಜೈಲಿನಿಂದ ಬಿಡಿಸುವ ಯೋಜನೆಯಲ್ಲಿ ಪಾಲುಗೊಂಡದ್ದು ದಿಲ್ಲಿಯಲ್ಲಿ ಸೋಡಾ ಫ್ಯಾಕ್ಟರಿಯಲ್ಲಿದ್ದು ಕೊಂಡು ಕ್ರಾಂತಿಕಾರೀ ಗೆಳೆಯರೊಂದಿಗೆ ಬಾಂಬು ತಯಾರಿಸಿದ್ದು-ಈ ಎಲ್ಲ ಘಟನೆಗಳು ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿ ಹೋರಾಡಿದ ಅಜ್ಞೇಯರ ಬದುಕಿನ ಮಹತ್ವಪೂರ್ಣ ಮಜಲುಗಳು. ಈ ಚಟುವಟಿಕೆಗಳ ಫಲ: ಅಜ್ಞೇಯರಿಗೆ ೧೯೩೦ ರಿಂದ ೧೯೩೪ರ ವರೆಗೆ ಸೆರೆಮನೆಯ ವಾಸ. ೧೯೪೨ರಲ್ಲಿ ಅಜ್ಞೇಯ ಸೈನ್ಯವನ್ನು ಸೇರಿದರು. ಅಲ್ಲಿ ನಾಲ್ಕು ವರ್ಷ ಕ್ಯಾಪ್ಟನ್ ಆಗಿ ಸೇವೆ ಸಲ್ಲಿಸಿದರು.

'ಅಜ್ಞೇಯ'ರ ಬರಹದ ಬದುಕು ಆರಂಭವಾದದ್ದು ಸೆರೆಮನೆಯಲ್ಲಿಯೆ. ಜೈಲು ಅಧಿಕಾರಿಗಳ ಕ್ರೂರ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯನರು ತಮ್ಮ ಕೃತಿಗಳನ್ನು 'ಅಜ್ಞೇಯ' ಎಂಬ ಹೆಸರಿನಿಂದ ಪ್ರಕಟಿಸುತ್ತಿದ್ದರು. ಮುಂದೆ ಅದೇ ಅವರ ಕಾವ್ಯನಾಮವಾಯಿತು.

ಭಾರತೀಯ ಪತ್ರಿಕೋದ್ಯಮಕ್ಕೆ ಅಜ್ಞೇಯರ ಕೊಡುಗೆ ಅವಿಸ್ಮರಣೀಯ. ಅವರು ಭಾರತೀಯ ಭಾಷಾ ಪತ್ರಿಕೆಗಳಿಗೆ ಹೊಸ ಆಯಾಮವನ್ನು ಕೊಟ್ಟು ದಾಖಲೆಯನ್ನೇ ಸೃಷ್ಟಿಸಿದರು. ಬದುಕಿನುದ್ದಕ್ಕೂ ಪತ್ರಿಕೋದ್ಯಮದೊಡನೆ ಅವರು ನಂಟಸ್ತಿಕೆ ಬೆಳೆಸಿಕೊಂಡರು. 'ಸೈನಿಕ್', 'ವಿಶಾಲ ಭಾರತ್', 'ಪ್ರತೀಕ್' ಪತ್ರಿಕೆಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ೧೯೬೫ ರಿಂದ ೧೯೬೮ರ ವರೆಗೆ ಹಿಂದಿಯ ಪ್ರಸಿದ್ಧ ವಾರಪತ್ರಿಕೆ 'ದಿನಮಾನ್'ದ ಸಂಪಾದಕರಾಗಿ ಅದನ್ನು ವಿಶಿಷ್ಟವಾಗಿ ಬೆಳೆಸಿದರು. ಲೋಕನಾಯಕ ಜಯಪ್ರಕಾಶ ನಾರಾಯಣರ ಒತ್ತಾಯದ ಮೇರೆಗೆ 'ಎವರಿಮನ್ಸ್' ಪತ್ರಿಕೆಯ ಸಂಪಾದಕರಾದರು. ತರುವಾಯ ಎರಡು ವರ್ಷಗಳ ಕಾಲ 'ನವಭಾರತ ಟೈಂಸ್'ನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. ಹೀಗೆ ಅಜ್ಞೇಯರು ಹೊಸ ಹಾದಿಯನ್ನು ತುಳಿದು ಹೊಸ ಹೆಜ್ಜೆಯನ್ನು ಮೂಡಿಸುತ್ತ ಪತ್ರಿಕೋದ್ಯಮವನ್ನು ಶ್ರೀಮಂತಗೊಳಿಸಿದರು.

ಅಜ್ಞೇಯರು ತಾನು ಪಥಿಕನಲ್ಲವೆಂದೂ ಕೇವಲ ಪಥಾನ್ವೇಷಿಯೆಂದೂ ಹೇಳಿಕೊಳ್ಳುತ್ತಿದ್ದರು. ಆದರೆ ನಾನಾ ಕಾರಣಗಳಿಂದ ಬದುಕಿನಲ್ಲಿ ಅಲೆಮಾರಿತನವನ್ನು ರೂಢಿಸಿಕೊಂಡ ಅವರು ನಿಜವಾದ ಅರ್ಥದಲ್ಲಿ ಪಥಿಕರಾಗಿದ್ದರು. ೧೯೬೧ ರಿಂದ ೧೯೬೪ರ ವರೆಗೆ ಅವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಾಹಿತ್ಯದ ಪ್ರಾಧ್ಯಾಪಕರಾಗಿದ್ದರು. ಯುಗೋಸ್ಲಾವಿಯ, ರಶಿಯ, ಮಂಗೋಲಿಯ, ಆಸ್ಟ್ರೇಲಿಯ, ಜಪಾನ್, ರುಮೇನಿಯ ಮುಂತಾದ ರಾಷ್ಟ್ರಗಳಲ್ಲಿ ಯುನೆಸ್ಕೋ ಮತ್ತು ಇನ್ನೂ ಅನೇಕ ಸಂಸ್ಥೆಗಳ ಆಹ್ವಾನದ ಮೇರೆಗೆ ಪ್ರವಾಸ ಮಾಡಿ ಭಾರತೀಯ ಸಂಸ್ಕೃತಿ ಮತ್ತು ದರ್ಶನದ ಮೇಲೆ ಉಪನ್ಯಾಸ ನೀಡಿದರು. ಜೋಧಪುರ ವಿಶ್ವವಿದ್ಯಾಲಯದಲ್ಲಿ ತುಲನಾತ್ಮಕ ಸಾಹಿತ್ಯ ವಿಭಾಗದ ನಿರ್ದೇಶಕರೂ ಆಗಿದ್ದರು. ಜರ್ಮನಿಯ ಹೈಡ್ಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಆಕಾಶವಾಣಿಯ ಭಾಷಾ ಸಲಹೆಗಾರರಾಗಿಯೂ ಅವರ ಸೇವೆ ಗಮನಾರ್ಹವಾದದ್ದು. ಹೀಗೆ ನಾನಾ ಕ್ಷೇತ್ರಗಳಲ್ಲಿ, ದೇಶಗಳಲ್ಲಿ ದುಡಿದು ಅವರು ಪಡೆದ ಅನುಭವ ಶ್ರೀಮಂತವಾಗಿತ್ತು. ಅಜ್ಞೇಯರ ಕಾವ್ಯದಲ್ಲಿ ಹಿಂದೀ ಛಾಯಾವಾದೀ ಕಾವ್ಯಧಾರೆಯ ಅತಿಯಾದ ಆತ್ಮರತಿಯಾಗಲಿ, ಕಾಮನಬಿಲ್ಲಿನ ರಂಗುರಂಗಿನ ಚಿತ್ತಾರಗಳಾಗಲಿ ಇಲ್ಲ. ಅವರ ಕಾವ್ಯಗಳ ಮೂಲದ್ರವ್ಯ ವೈಚಾರಿಕತೆ. ಬದುಕಿನ ಬಗ್ಗೆ ಅಪಾರ ಕಾಳಜಿ ಹೊಂದಿದ ವೈಚಾರಿಕತೆ ಅವರದು. ಆದ್ದರಿಂದ ಅವರ ಕಾವ್ಯವನ್ನು ಈ ಯುಗದ ಸತ್ಯಾನ್ವೇಷಕನೊಬ್ಬನ ಒಡಲಾಳದ ಪ್ರಗಲ್ಭ ಅಭಿವ್ಯಕ್ತಿಯೆಂದು ಹೇಳಬಹುದು.

ಅಜ್ಞೇಯರು ಬದುಕಿನುದ್ದಕ್ಕೂ ಪಟ್ಟ ಪಾಡುಗಳು ವಾಙ್ಮಯವಾಗಿ ಅಭಿವ್ಯಕ್ತಗೊಂಡಿವೆ. ಅವರ ದೃಷ್ಟಿಯಲ್ಲಿ ಸೃಜನಶೀಲತೆ ಒಂದು ಆಂತರಿಕ ಒತ್ತಡ. "ಈ ಒತ್ತಡದಿಂದ ಬಿಡುಗಡೆ ಹೊಂದಲು, ತಟಸ್ಥನಾಗಿ ಅದನ್ನು ನೋಡಲು ಮತ್ತು ಮೌಲ್ಯವನ್ನು ನಿಷ್ಕರ್ಷಿಸಲು ನಾನು ಬರೆಯಲಾರಂಭಿಸಿದೆ" ಎಂದು ಅವರು ಹೇಳುತ್ತಾರೆ. "ಅಜ್ಞೇಯರ ಕಾವ್ಯ ಅಹಂನಿಂದ ಸಮಾಜದವರೆಗೆ, ಪ್ರೇಮದಿಂದ ದರ್ಶನದ ವರೆಗೆ, ಆದಿಮ ಗ್ರಂಥದಿಂದ ವೈಜ್ಞಾನಿಕ ಚೇತನದವರೆಗೆ, ಯಂತ್ರ ಸಂಸ್ಕೃತಿಯಿಂದ ಜನಪದ ಸಂಸ್ಕೃತಿಯವರೆಗೆ, ಯಾತನಾ ಶಿಬಿರದಿಂದ ವಿದ್ರೋಹದ ಕಿಡಿ ಕಾರುವವರೆಗೆ, ಪ್ರಕೃತಿ ಸೌಂದರ್ಯದಿಂದ ಮಾನವ ಸೌಂದರ್ಯದವರೆಗೆ ತನ್ನ ಹರಹನ್ನು ಪಡೆದುಕೊಂಡಿದೆ" ಎಂದು ವಿಮರ್ಶಕರೊಬ್ಬರು ಹೇಳುತ್ತಾರೆ.

ಆಜ್ಞೇಯರು ದುಃಖದ ಮೂಲಕ ಜೀವನದ ವಿರಾಡ್ರೂಪವನ್ನು ಅರ್ಥೈಸಲು ಯತ್ನಿಸುತ್ತಾರೆ ಅವರು ಎಂದೂ ಪುಕ್ಕಲುತನದಿಂದ ವ್ಯವಸ್ಥೆಯೊಂದಿಗೆ ರಾಜೀ ಮಾಡಿಕೊಂಡು ನಿಂತಲ್ಲಿ ಸದಾ ನಿಂತವರಲ್ಲ, ಕುಳಿತಲ್ಲಿ ಸದಾ ಕುಳಿತವರಲ್ಲ. ಬದುಕನ್ನು ಕುರಿತ ಅವರ ಅಪಾರ ಕಾಳಜಿ ಮತ್ತು ಕಳಕಳಿ ಗಮನಾರ್ಹವಾದದ್ದು.

ಆಜ್ಞೇಯರು ಹಿಂದೀ ಕಾವ್ಯಲೋಕಕ್ಕೆ ಒಂದು ಹೊಸ ಆಯಾಮವನ್ನು ತಮ್ಮ ಕೃತಿಗಳಿಂದ ತಂದುಕೊಟ್ಟರು. ಅವರು 'ಪ್ರಯೋಗವಾದ'ದ ಪ್ರವರ್ತಕರು. ಹಿಂದೀ ನವ್ಯಕವಿತೆಯ ರೂವಾರಿಯೂ ಅವರೇ. ಅವರು ಸಂಪಾದಿಸಿದ 'ತಾರು ಸಪ್ತಕ' ೧೯೪೩ರಲ್ಲಿ ಪ್ರಕಟವಾಯಿತು. ಅದರಲ್ಲಿ ಗಜಾನನ ಮಾಧವ ಮುಕ್ತಿಬೋಧ, ನೇಮಿಚಂದ್ರ ಜೈನ್, ಭಾರತ ಭೂಷಣ, ಪ್ರಭಾಕರ ಮಾಚವೆ, ಗಿರಿಜಾ ಕುಮಾರ ಮಾಥುರ್, ಡಾ॥ ರಾಮವಿಲಾಸಶರ್ಮಾ ಮತ್ತು ಆಜ್ಞೇಯ ಈ ಏಳು ಕವಿಗಳ ಕವನಗಳು ಸಂಕಲಿತವಾಗಿವೆ. 'ತಾರ ಸಪ್ತಕ'ದ ಮುನ್ನುಡಿಯಲ್ಲಿ ಆಜ್ಞೇಯರು ಹೇಳುತ್ತಾರೆ. "ಇವರು ಹೊಸಬರು ಆದರೆ ಕವಿಯಶಃಪ್ರಾರ್ಥಿಗಳು. ಆದ್ದರಿಂದ ಕಾವ್ಯಪಥದ ಅನ್ವೇಷಕರು" ತಮ್ಮ ಪ್ರಯೋಗಶೀಲತೆಗೆ 'ವಾದ'ವೆಂದು ಕೆಲವರು ಹೆಸರಿಟ್ಟಾಗ ಆಜ್ಞೇಯರು ಪ್ರತಿಭಟಿಸುತ್ತ ಹೇಳಿದರು– "ಪ್ರಯೋಗ ಒಂದು ವಾದವಲ್ಲ. ನಾವು ವಾದಿಗಳಾಗಿರಲಿಲ್ಲ, ಈಗಲೂ ಆಗಿಲ್ಲ. ಕಾವ್ಯ ಒಂದು ಮಾಧ್ಯಮ. ಕವಿ ಸತ್ಯದ ಅನ್ವೇಷಕ." ಅಂತೂ ಆಜ್ಞೇಯರ ದೃಷ್ಟಿಯಲ್ಲಿ 'ಪ್ರಯೋಗ' ಗುರಿಯಲ್ಲ, ಸಾಧನ ಮಾತ್ರ. ಅದು ಸತ್ಯವನ್ನು ಅರಿಯುವ ಸಾಧನ. ಅಂತೂ ಪ್ರಯೋಗದಲ್ಲಿ ಸೃಜನಶೀಲತೆ ಮತ್ತು ಹೊಸ ದಿಕ್ಕುಗಳ ಹುಡುಕಾಟವಿದೆಯೆಂದು ಅವರ ಅಭಿಮತ.

'ಪ್ರಯೋಗ'ದ ಮೇಲೆ ಇಷ್ಟೊಂದು ಒತ್ತು ಕೊಡುವ ಆಜ್ಞೇಯರು ಓದುಗ ಅಥವಾ ಸಹೃದಯನನ್ನು ಮರೆಯುವುದಿಲ್ಲ. ಅವರ ದೃಷ್ಟಿಯಲ್ಲಿ–"ಕವಿ ನಡೆಸುವ 'ಪ್ರಯೋಗ' ಓದುಗನಿಗೆ ಅಪ್ರಸ್ತುತವಾದದ್ದು. ಕೇವಲ ಪ್ರಯೋಗಶೀಲತೆ ಯಾವ ಕೃತಿಯನ್ನೂ ಕಾವ್ಯವನ್ನಾಗಿಸುವದಿಲ್ಲ. ಕವಿಯ ಕೃತಿ ತನ್ನ ಒಡಲಲ್ಲಿ ಹಿಡಿದಿಟ್ಟ ಸತ್ಯ ಮಾತ್ರ ಓದುಗನಿಗೆ ಮುಖ್ಯವಾದದ್ದು." ಆಜ್ಞೇಯರು ಇಂದಿನ ಕವಿಗಳ ಸಂಕಟವನ್ನು ಮನಗಂಡವರು. ಅವರ ಪ್ರಕಾರ-

"ಇಂದು ಭಾಷೆ ತನ್ನ ಹಳೆಯ ವ್ಯಾಪಕತೆಯನ್ನು ಕಳೆದುಕೊಂಡಿದೆ. ಸಾಧಾರಣ ಅರ್ಥಕ್ಕಿಂತಲೂ ಹಿರಿಯ ಅರ್ಥವನ್ನು ನಾವು ಶಬ್ದಗಳಲ್ಲಿ ತುಂಬಲು ಇಚ್ಛಿಸುತ್ತೇವೆ. ಆದರೆ ಹಿರಿಯ ಅರ್ಥವನ್ನು ಓದುಗನ ಮನಸ್ಸಿಗಿಳಿಸುವ ಸಾಧನ ಸಾಲದು. ಓದುಗ ಆ ಶಬ್ದಗಳಿಂದ ಒಂದೆಡೆ ತೀರಾ ಕಡಿಮೆ ಪಡೆಯುತ್ತಾನೆ. ಇನ್ನೊಂದೆಡೆ ತೀರಾ ಬೇರೆ ಅರ್ಥವನ್ನು ಪಡೆಯುತ್ತಾನೆ."

ಅಂತೂ 'ದೂಸರಾ ಸಪ್ತಕ' (೧೯೫೧) 'ತೀಸರಾ ಸಪ್ತಕ' (೧೯೫೯) 'ಚೌಥಾ ಸಪ್ತಕ' (೧೯೭೮) ಮುಂತಾಗಿ ಈ ಸಪ್ತಕ ಮಾಲೆ ಹಿಂದೀಗೆ ಇಪ್ಪತ್ತೊಂದು ಜನ ಕವಿಗಳನ್ನು ನೀಡಿದ ಗೌರವಕ್ಕೆ ಪಾತ್ರವಾಗಿವೆ. ಈ ಪುಸ್ತಕ ಮಾಲೆಯನ್ನು ಆಜ್ಞೇಯರು ಸ್ವತಃ ಸಂಪಾದಿಸಿ ಇವುಗಳ ಮೂಲಕ ಹಿಂದೀ ಕಾವ್ಯಕ್ಕೆ ಕೆಲವು ಸೂಕ್ಷ್ಮ ಹಾಗೂ ಅಪೂರ್ವ ಕಾವ್ಯ ದನಿಗಳನ್ನು ಪರಿಚಯಿಸಿದರು. ಅವರಲ್ಲಿ ಬಹಳಷ್ಟು ಕವಿಗಳು ಇಂದು ಹಿಂದೀ ಕಾವ್ಯದ ಮುಖ್ಯ ದನಿಗಳಾಗಿದ್ದಾರೆ. 'ಚೌಥಾ ಸಪ್ತಕ'ದ ಮುನ್ನುಡಿಯಲ್ಲಿ ಆಜ್ಞೇಯರು ಹೇಳುತ್ತಾರೆ. "ಇಂದಿನ ಕವಿತೆಯನ್ನು ಆವರಿಸಿರುವ 'ನಾನು', ಅದರ ಬಹುದೊಡ್ಡ ದೋಷವಾಗಿದೆ. ಇಂದಿನ ಕಾವ್ಯ ಅತಿಯಾಗಿ ಮಾತಾಡುತ್ತದೆ.. ಆದರೆ ಅತಿಯಾದ ಮಾತು ಕಾವ್ಯದ ಕೆಲಸವಲ್ಲ. ಅತಿಯಾದ ಮಾತು ಮಾತಿನ ಹೊಳಪನ್ನೇ ಕೊಲ್ಲುತ್ತದೆ." ಆದ್ದರಿಂದ ಆಜ್ಞೇಯರು ಚರ್ಚಾಸ್ಪರ್ಧೆಯ ವಾಗ್ಮಿಗಳಂತೆ ಅತಿಯಾಗಿ ಮಾತಾಡುವ ಕವಿಗಳನ್ನು ಕೊಂಡಾಡುವುದಿಲ್ಲ.

ಆಜ್ಞೇಯರ ಸೃಜನಶೀಲತೆ ವ್ಯಕ್ತಿತ್ವಕ್ಕಿಂತಲೂ ಉನ್ನತವಾದದ್ದು. ಕವಿ, ಕಾದಂಬರಿಕಾರ, ಕತೆಗಾರ, ನಿಬಂಧಕಾರ, ನಾಟಕಕಾರನಾಗಿಯೂ, ಸಂಪಾದಕನಾಗಿಯೂ ಆಜ್ಞೇಯರು ವಿಜೃಂಭಿಸುತ್ತಾರೆ. ಇಲ್ಲಿಯ ತನಕ ಆಜ್ಞೇಯರು ಅನೇಕ ಗೌರವಗಳಿಗೆ ಪಾತ್ರರಾಗಿದ್ದಾರೆ. ೧೯೬೮ರಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನದ 'ಸಾಹಿತ್ಯ ವಾಚಸ್ಪತಿ' ಹಾಗೂ ವಿಕ್ರಮ ವಿಶ್ವವಿದ್ಯಾಲಯದ ಗೌರವ ಡಿ ಲಿಟ್ ಪದವಿಗಳು ಅವರಿಗೆ ಸಂದಿವೆ. ಅವರ 'ಆಂಗನ ಕೇ ಪಾರದ್ವಾರ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ತನ್ನ ಪುರಸ್ಕಾರವನ್ನು ನೀಡಿ ೧೯೬೪ರಲ್ಲಿ ಗೌರವಿಸಿದೆ. 'ಕಿತ್ನೀ ನಾವೋಂ ಮೇಂ ಕಿತ್ನೀ ಬಾರ್' (ಎನಿತೂ ನಾವೆಗಳಲ್ಲಿ ಎನಿತೂ ಸಲ) ಎಂಬ ಕವಿತಾ ಸಂಕಲನಕ್ಕೆ ಭಾರತೀಯ ಜ್ಞಾನಪೀಠದ ಪ್ರಶಸ್ತಿ

೧೯೭೭ರಲ್ಲಿ ಲಭಿಸಿದೆ. ಈ ಕವಿತಾ ಸಂಕಲನದಲ್ಲಿ ಆಜ್ಞೇಯರು ೧೯೬೨ ರಿಂದ ೧೯೬೬ರ ತನಕ ಬರೆದ ಕವನಗಳು ಸಂಕಲಿತವಾಗಿವೆ.

ಆಜ್ಞೇಯರ ಕಾದಂಬರಿ 'ಶೇಖರ: ಏಕ್ ಜೀವನಿ' ಒಂದು ಶ್ರೇಷ್ಠ ಕೃತಿ. ಈ ಕಾದಂಬರಿ ರೋಮಾರೋಲಾರ "ಜಾಕ್ರಿಸ್ತಾಫೇ"ಗೆ ಋಣಿಯಾಗಿದ್ದರೂ ಇಲ್ಲಿಯ ಬದುಕು, ಜೀವನದೃಷ್ಟಿ ಬೇರೆಯಾಗಿವೆ. ಶ್ರಿ ವಿಶ್ವಂಭರ್ 'ಮಾನವ' ರವರ ದೃಷ್ಟಿಯಲ್ಲಿ– "ಪ್ರೇಮಚಂದರ 'ಗೋಧಾನ್', ಜಯಶಂಕರ ಪ್ರಸಾದರ 'ಕಾಮಾಯನೀ' ಮತ್ತು ಆಜ್ಞೇಯರ 'ಶೇಖರ್ ಏಕ್ ಜೀವನಿ'–ಈ ಮೂರು ಕೃತಿಗಳು ಇಪ್ಪತ್ತನೆಯ ಶತಮಾನದಲ್ಲಿ ರಚಿಸಲ್ಪಟ್ಟ ಹಿಂದಿಯ ಮಹಾನ್ ಕೃತಿಗಳು. 'ಗೋದಾನ' ದಲ್ಲಿ ಭಾರತದ ಮಣ್ಣನ್ನೂ 'ಕಾಮಾಯನೀ' ಯಲ್ಲಿ ಹಿಮಾಲಯವನ್ನೂ ಮತ್ತು 'ಶೇಖರ್: ಏಕ್ ಜೀವನಿ'ಯಲ್ಲಿ ಅಪೂರ್ಣವಾದ ತಾಜ್ ಮಹಲನ್ನೂ ಕಾಣುತ್ತೇವೆ". ಆಜ್ಞೇಯರು ಚಿತ್ರಿಸಿರುವ ಶೇಖರ ದೇಶ, ಕಾಲ, ಸಮಾಜದಿಂದ ಪೂರ್ಣತಃ ಮುಕ್ತನಾಗಿ ದೇಶಾತೀತ-ಕಾಲಾತೀತನಾಗಿ ಬೆಳೆಯುವ ಪಾತ್ರ. ಆತ್ಮಾನ್ವೇಷಣೆಯಲ್ಲಿ ಸದಾ ತಲ್ಲೀನನಾಗಿದ್ದರೂ ಎಲ್ಲ ಸ್ಥಿತಿಗಳಿಗೂ ಸ್ಪಂದಿಸುವ ಸಂಪೂರ್ಣ ಕ್ರಾಂತಿಯ ಹರಿಕಾರ.

ಅಂತೂ ಆಜ್ಞೇಯರ 'ಅಲೆಮಾರಿತನ'ದ ಅನುಭವಗಳು ಅವರ ಪ್ರವಾಸ-ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆದರೆ ಅವುಗಳ ಸಂವೇದನಾಶೀಲ ರೂಪಕತೆ-ಕವನಗಳಲ್ಲಿ ಅಭಿವ್ಯಕ್ತಿ ಪಡೆದಿದೆ. ೧೯೩೩ ರಿಂದ ೧೯೮೭ರ ವರೆಗೆ ನಿರಂತರ ಅರ್ಧ ಶತಮಾನದ ದೀರ್ಘಾವಧಿಯಲ್ಲಿ ತಾನೂ ಬೆಳೆಯುತ್ತ, ತನ್ನ ಅನುಯಾಯಿಗಳನ್ನೂ ಬೆಳೆಸುತ್ತ ಹೋದ ಆಜ್ಞೇಯರು ಹಿಂದೀ ಕಾವ್ಯಕ್ಕೆ ಹೊಸ ತಿರುವನ್ನು ಕೊಟ್ಟಿದ್ದಾರೆ. ಪರಂಪರಾಗತ ಕಾವ್ಯಶಾಸ್ತ್ರದಿಂದ ಬೇರ್ಪಟ್ಟು ದೂರ ಸರಿದು ತಮ್ಮದೇ ಕಾವ್ಯಶಾಸ್ತ್ರವನ್ನವರು ನಿರ್ಮಿಸಿದ್ದಾರೆ. ಕಾವ್ಯ ಸತ್ಯವನ್ನು ಕುರಿತ ಅವರ ಹುಡುಕಾಟ, ಕಾಣ್ಕೆ ಮತ್ತು ಕೊಡುಗೆ ಅವಿಸ್ಮರಣೀಯವಾದದ್ದು.

ಆಜ್ಞೇಯರು ಅತ್ಯಂತ ಮಹತ್ವಾಕಾಂಕ್ಷೆಯ ಕವಿ, ಅತಿ ಆತ್ಮಪ್ರತಿಷ್ಠೆಯ ಲೇಖಕ ಎಂದೆಲ್ಲ ಹೇಳಲಾಗುತ್ತಿದೆ. ಆದರೂ ಅವರು ಈ ಶತಮಾನದ ಹಿಂದೀ ಸಾಹಿತ್ಯದ ಮಹಾಪುರುಷ.

"ಎನಿತೋ ದೂರಗಳಿಂದ ಎನಿತೊ ಸಲ
ಎನಿತೊ ಚಂಚಲ ನಾವೆಗಳಲಿ ಕುಳಿತು
ನಾ ನಿನ್ನ ಬಳಿ ಬಂದಿಹೆ
ಎನ್ನ ಪುಟ್ಟ ಬೆಳಕೆ"

೧೯೮೭ರ ಏಪ್ರಿಲ್ ನಾಲ್ಕರಂದು ನಿಧನರಾದ ಅಖಂಡ ಸತ್ಯದ ಅನ್ವೇಷಕ ಆಜ್ಞೇಯರ ಒಡಲಾಳದಿಂದ ಹೊಮ್ಮಿದ ಈ ಸಾಲುಗಳು ಸುರುಳಿ ಸುರುಳಿಯಾಗಿ ಅರ್ಥದ ಸಾರ್ಥಕತೆಯನ್ನು ಬಿಚ್ಚುತ್ತ, ಸಹೃದಯ ಓದುಗರ ಕಣ್ಣುಗಳನ್ನು ತೋಯಿಸುತ್ತವೆ. ಅಂತೂ ಕೀರ್ತಿಶರೀರಿಯಾದ ಆಜ್ಞೇಯರು ತಮ್ಮ ಕೃತಿಗಳ ಮೂಲಕ ಒಂದು ಜೀವಂತ ಪ್ರಭಾವವಾಗಿ ಉಳಿಯುತ್ತಾರೆ.

ಒಮ್ಮೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಭಾಷೆಯ ಸಾಹಿತ್ಯ ವ್ಯಾಸಂಗ ಮಾಡುತ್ತಿದ್ದ ಕನ್ನಡ ನಾಡಿನ ವಿದ್ಯಾರ್ಥಿಯೊಬ್ಬ ತನ್ನ ಪರೀಕ್ಷೆಯಲ್ಲಿ ತುಂಬ ಚೆನ್ನಾಗಿ ಬರೆದ. ಆದರೆ ಬಾಯಿ ಪರೀಕ್ಷೆ (ಮುಖತಃ ಪ್ರಶ್ನೆ ಕೇಳುವಿಕೆ) ಮಾತ್ರ ಉಳಿದಿತ್ತು. ಆ ಪರೀಕ್ಷೆಯ ಮುಂಚಿನ ದಿನವೇ ಈ ಕನ್ನಡಿಗ ತೀವ್ರ ಹೊಟ್ಟೆ ನೋವಿನಿಂದ ಆಸ್ಪತ್ರೆ ಸೇರಿದ. ನಾಲ್ಕಾರು ದಿನಗಳ ಜೀವ-ನೋವುಗಳ ನಡುವೆ ಉಯ್ಯಾಲೆಯಾಡಿ, ಶಸ್ತ್ರಕ್ರಿಯೆಯ ಬಳಿಕ ಸಮಾಧಾನಕರ ಸ್ಥಿತಿಗೆ ಬಂದ. ಆತನಿಗೆ ಪ್ರಜ್ಞೆ ಬಂದಾಗ ಆಸ್ಪತ್ರೆಯ ಅಧಿಕಾರಿಗಳಲ್ಲಿ ತನ್ನ ಪರೀಕ್ಷೆಯ ಕುರಿತು ಹೇಳಿಕೊಂಡ. ಅವರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಜೊತೆ ಸಂಪರ್ಕ ನಡೆಸಿ, ಈ ಹುಡುಗನ ಪರೀಕ್ಷೆ ಆಸ್ಪತ್ರೆಯಲ್ಲೇ ನಡೆಯುವುದೆಂದು ತಿಳಿಸಿದರು.

ಆದರೆ ಪರೀಕ್ಷೆ ನಡೆಯಲೇ ಇಲ್ಲ. ನಡೆಸುವ ಕಾರಣವೂ ಇರಲಿಲ್ಲ. ಈ ವಿದ್ಯಾರ್ಥಿ ಲಿಖಿತ ಪರೀಕ್ಷೆಯಲ್ಲೇ ಸಾಕಷ್ಟು ಬರೆದಿದ್ದ. ಆತನ ಉತ್ತರ ಪತ್ರಿಕೆಗಳು ನಿರ್ವಿವಾದವಾಗಿ ಪ್ರಥಮ ಶ್ರೇಣಿಯವೆಂದು ತೀರ್ಮಾನಿಸಲ್ಪಟ್ಟಿದ್ದವು. ಇನ್ನೊಂದು ಸಲ ಮುಖತಃ ಪರೀಕ್ಷಿಸುವ ಅಗತ್ಯವಿಲ್ಲವೆಂದು ಭಾವಿಸಿದ್ದ ಅಧಿಕಾರಿಗಳು, ಫಲಿತಾಂಶವನ್ನು ಪ್ರಕಟಿಸಿದ್ದರು.

ಲಿಖಿತ ಪರೀಕ್ಷೆಯ ಮೂಲಕವೇ ಅತ್ಯಧಿಕ ಅಂಕಗಳಿಸಿ ಪ್ರಥಮ ಶ್ರೇಣಿಯಲ್ಲಿ ಪಾಸಾದ ಈ ಪ್ರತಿಭಾವಂತರೇ ಡಾ॥ ವಿ.ಕೃ. ಗೋಕಾಕರು.

–ನಾಗೇಶ್ ಜಿ. ವೈದ್ಯ.

ಸೂಳ್ಪಡೆಯುಲಪ್ಪುದು ಕಾಣಾ

—ವಾಸುಕೃಷ್ಣ

ಈಗ್ಗೆ ಕೆಲವು ತಿಂಗಳುಗಳ ಹಿಂದೆ ಬ್ರಿಟಿಶ್ ಸರಕಾರದ ಮಂತ್ರಿ ಮಹೋದಯರನ್ನೂ ಒಳಗೊಂಡಂತೆ ಎಲ್ಲರೂ ಭಾರತ ಯೂರೋಪಿನೊಳಗೆ ನುಸುಳುತ್ತಿರುವ ಮಾದಕ ಔಷಧಗಳ ತಡೆಗೆ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲವೆಂದು ಭಾರತವನ್ನು ಟೀಕಿಸಿದರು. ಒಲ್ಲದ ಮನಸ್ಸಿನಿಂದ ಕ್ರಮ ಕೈಗೊಳ್ಳುತ್ತಿದೆ; ಪರೋಕ್ಷವಾಗಿ ಮಾದಕ ವಸ್ತುಗಳ ಕಳ್ಳಸಾಗಾಟಕ್ಕೆ ಬೆಂಬಲ ನೀಡುತ್ತಿದೆ, ಇಲ್ಲವೆ ಈ ಬಗ್ಗೆ ಅರಿತೂ ನಿಷ್ಕ್ರಿಯವಾಗಿದೆ ಎಂಬುದು ಅವರ ಟೀಕೆಯ ಸಾರಾಂಶ. ಯುರೋಪಿಗೆ ಮಾದಕ ಔಷಧಗಳ ಕಳ್ಳಸಾಗಾಟ ಚಿನ್ನದ ತ್ರಿಕೋನ* (Golden Triangle)ದ ಮೂಲಕ ನಡೆಯುತ್ತಿದೆಯೆಂಬುದನ್ನು ಎಲ್ಲರೂ ಬಲ್ಲರು. ಈ ಮಾದಕ ಔಷಧದ ಪಿಡುಗು ಯುರೋಪಿನ ಯುವ ಜನಾಂಗವನ್ನು (ಭಾರತದಲ್ಲಿಯೂ ಈ ಪಿಡುಗು ತಲೆಯೆತ್ತುತ್ತಿದೆ) ಶನಿಯಂತೆ ಹಿಡಿದು ನರಳಿಸುತ್ತಿದೆ. ಯುರೋಪಿನ ಸಮಾಜ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುತ್ತ ಭೂತಾಕಾರವಾಗಿ ಕಾಡುತ್ತಿದೆ. ಈ ವಿಷಮ ಸಮಸ್ಯೆಯನ್ನು ಬಿಡಿಸಲಾಗದೆ ಬ್ರಿಟಿಶ್ ಸರಕಾರ ಹೆಣಗಾಡುತ್ತಿದೆ. ತನ್ನ ವೈಫಲ್ಯಕ್ಕಾಗಿ ಇತರರನ್ನು ದೂಷಿಸುತ್ತಿದೆ. ಇಂಗ್ಲೀಷಿನಲ್ಲಿ ಒಂದು ಗಾದೆ ಹೇಳುತ್ತಾರೆ "The wearer of the shoes knows where it pinches" (ಬೂಟು ಎಲ್ಲಿ ಕಚ್ಚುತ್ತದೆಂದು ಅದನ್ನು ಧರಿಸಿದವನಿಗೆ ಗೊತ್ತು.)

ಈಗ್ಗೆ ಒಂದೂವರೆ ಶತಮಾನದ ಹಿಂದೆ ಚೀನ ದೇಶದೊಳಗೆ ಅಫೀಮಿನ ಕಳ್ಳಸಾಗಾಟಣೆಯಲ್ಲಿ ಹೇಯ ಪಾತ್ರವಹಿಸಿ ಅದರ ವಿರುದ್ಧ ಪ್ರತಿಭಟನೆ ತೀವ್ರವಾದಾಗ ಅನ್ಯಾಯದ ಯುದ್ಧಕ್ಕೂ ತೊಡಗಿದ ಬ್ರಿಟಿಶರು ಇತಿಹಾಸವನ್ನು ಮರೆತಿರುವಂತೆ ಕಾಣುತ್ತದೆ. ಬಿಳಿಯರು ಬಿಳಿಯರಲ್ಲದವರನ್ನು ಪ್ರಯೋಗಪಶುಗಳಂತೆ ನಡೆಸಿಕೊಳ್ಳುತ್ತಿರುವುದಕ್ಕೆ ಇತಿಹಾಸದಲ್ಲಿ ಹೇರಳ ಉದಾಹರಣೆಗಳಿವೆ. ಈಗಲೂ ಅದು ಮುಂದುವರಿಯುತ್ತಿದೆ. ಚೀನಿಯರ ಒಂದು ಪೀಳಿಗೆಯನ್ನೇ ಹಾಳು ಮಾಡಿದ ಬ್ರಿಟಿಶರ ಅಪೇಯ ಕೃತ್ಯದ ವಿವರ ತಿಳಿಯುವುದು ಅಪ್ರಸ್ತುತವೆನಿಸಲಾರದು.

ಚೀನದೊಡನೆ ವ್ಯಾಪಾರ ಸಂಬಂಧ ಬೆಳೆಸಿದವರಲ್ಲಿ ಪೋರ್ಚುಗೀಸರೇ ಮೊದಲಿಗರು. ತರುವಾಯ ಯೂರೋಪಿನ ಉಳಿದ ರಾಷ್ಟ್ರಗಳೂ ಸಂಬಂಧ ಬೆಳೆಸಿದವು. ಚೀನದಿಂದ ಮುಖ್ಯವಾಗಿ ಟೀ ಹಾಗೂ ರೇಷ್ಮೆಗಳನ್ನು ಯೂರೋಪಿಯನ್ನರು ಖರೀದಿಸುತ್ತಿದ್ದರು. ಪ್ರತಿಯಾಗಿ ಚೀನಕ್ಕೆ ಯಾವ ವಸ್ತುವನ್ನು ಮಾರಬೇಕೆಂದೇ ತಿಳಿಯಲಿಲ್ಲ. ಏಕೆಂದರೆ ಚೀನಿಯರಿಗೆ ಯೂರೋಪಿನ ಯಾವ ವಸ್ತುವಿನ ಅಗತ್ಯವೂ ಇರಲಿಲ್ಲ. ಅವರಿಗೆ ಬೇಕಾದದ್ದೆಲ್ಲವೂ ಚೀನದಲ್ಲಿಯೇ ಇತ್ತು. ಇಂಗ್ಲೆಂಡಿನ ರಾಯಭಾರಿ ಚೀನದ ಚಕ್ರವರ್ತಿಗೆ ತನ್ನ ಸಾಮ್ರಾಟನ ಪತ್ರ ಕೊಟ್ಟಾಗ ಚಕ್ರವರ್ತಿ ಹೀಗೆ ಉತ್ತರಿಸಿದ: "ನಮಗೆ ಬೇಕಾದ್ದೆಲ್ಲವೂ ನಮ್ಮ ಬಳಿ ಇದೆ. ನಿಮ್ಮ ಚಮತ್ಕೃತಿಯ ವಸ್ತುಗಳ ಅಗತ್ಯ ನಮ

---

* ಭಾರತ ಪಾಕಿಸ್ತಾನ ಹಾಗೂ ಆಫ್ಘಾನಿಸ್ತಾನಗಳ ಗಡಿಗಳು ಕೂಡುವೆಡೆ.

ಗಿಲ್ಲ." ಪರಿಸ್ಥಿತಿ ಹೀಗಿರುವಾಗ ಚೀನಿಯರು ಅಫೀಮನ್ನು ಪ್ರೀತಿಸುತ್ತಾರೆಂದು ಕಂಡು ಬಂತು ಇಲ್ಲಿ ಕಂಡು ಬಂತೆಂದು ಹೇಳುವುದು ತಪ್ಪಾಗಬಹುದು. ಏಕೆಂದರೆ ಯಾವುದೇ ವಸ್ತುವಿಗೆ ಬೇಡಿಕೆ ಕುದುರಿಸುವ ತಂತ್ರ ಬಂಡವಾಳಶಾಹಿಗಳ ವ್ಯಾಪಾರದ ಮರ್ಮ. ಅವರು ಬೇಡಿಕೆ-ಸರಬರಾಜಿನ ಸಿದ್ಧಾಂತವನ್ನೇ ತಿರುಚಬಲ್ಲರು. ಆ ಕಾಲದ ಒಬ್ಬ ಬ್ರಿಟಿಶ್ ವರ್ತಕ ಹೀಗೆ ಹೇಳಿದ್ದಾನೆ"—"ಇಂಗ್ಲೆಂಡಿನ ಉದ್ದಿಮೆಗಳು 'ನಮಗೆ ಮಾರುಕಟ್ಟೆ ಕೊಡಿ: ಏನು ಬೇಕೆಂದರೂ ಎಷ್ಟು ಬೇಕೆಂದರೂ ಒದಗಿಸಲು ಸಿದ್ಧ' ಎಂದು ಕಿರುಚುತ್ತಿವೆ." ಚೀನದಲ್ಲಿ ಅಫೀಮು ಸೇವನೆಯ ಚಟವನ್ನು ವ್ಯಾಪಕವಾಗಿ ಬೆಳೆಸುವ ಮೂಲಕ ಈಸ್ಟ್ ಇಂಡಿಯ ಕಂಪನಿಯ ವರ್ತಕರು ತಮ್ಮ ವ್ಯಾಪಾರಕ್ಕೆ ಸಮರ್ಥನೆಯನ್ನು ಕಂಡುಕೊಂಡರು. ಆ ವೇಳೆಗೆ ಭಾರತದಲ್ಲಿ ಅಫೀಮಿನ ವ್ಯವಸಾಯ ಸಾಕಷ್ಟು ಕುದುರಿತ್ತು. ವಾರನ್ ಹೇಸ್ಟಿಂಗ್ಸ್ ಅಫೀಮು ಕೃಷಿಯನ್ನು ಈಸ್ಟ್ ಇಂಡಿಯಾ ಕಂಪನಿಯ ಏಕಸ್ವಾಮ್ಯವನ್ನಾಗಿ ಮಾಡಿದ. ಚೀನಕ್ಕೆ ಭಾರತದಿಂದ ಈಸ್ಟ್ ಇಂಡಿಯಾ ಕಂಪನಿ ಅಫೀಮು ಸರಬರಾಜು ಮಾಡತೊಡಗಿತು. ಚೀನದಲ್ಲಿ ಅಫೀಮು ವ್ಯಾಪಾರವು ೧೭೨೯ರಷ್ಟು ಹಿಂದೆಯೇ ಚಕ್ರವರ್ತಿಯ ಆಜ್ಞಾನುಸಾರ ನಿಷೇಧಿಸಲ್ಪಟ್ಟಿತ್ತು. ಹಾಂಗ್* ವರ್ತಕರು ಅಫೀಮು ವ್ಯಾಪಾರ ಮಾಡುತ್ತಿರಲಿಲ್ಲ. ಕಂಪನಿಯು ಅಫೀಮಿನ ವ್ಯಾಪಾರಕ್ಕೆ ಬೇರೊಂದು ತಂತ್ರವನ್ನು ಕಂಡುಕೊಂಡಿತು. ಕಂಪನಿಯ ಪರವಾನಗಿ ಉಳ್ಳ ಸ್ಥಳೀಯ ನಾವೆಗಳಲ್ಲಿ ಅಫೀಮನ್ನು ಕಳ್ಳತನದಿಂದ ಸಾಗಿಸಿ ಒಳನಾಡಿನ ವರ್ತಕರಿಗೆ ಯಥೇಚ್ಛ ಮಾರುವುದು. ಅವರು ಅದನ್ನು ಚೀನೀ ಜನತೆಗೆ ಮಾರುವುದು. ಹೀಗೆ ಅಫೀಮಿನ ಕಳ್ಳಸಾಗಾಟ ಅವ್ಯಾಹತವಾಗಿ ನಡೆಯುತ್ತ ಬಂದಿತು. ೧೮೩೩ರ ವೇಳೆಗೆ ಚೀನ ಆಯಾತ ಮಾಡಿಕೊಂಡ ವಸ್ತುಗಳಲ್ಲಿ ಶೇಕಡಾ ೫೦ ಭಾಗ ಅಫೀಮಾಗಿತ್ತು. ಕಂಪನಿಯ ವ್ಯಾಪಾರ ಹಕ್ಕಿನ ಏಕಸ್ವಾಮ್ಯವನ್ನು ಇಂಗ್ಲೆಂಡಿನ ಪಾರ್ಲಿಮೆಂಟು ರದ್ದು ಪಡಿಸಿದಾಗ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ನಿಯಮ ಬಾಹಿರ ಖಾಸಗಿ ವರ್ತಕರನ್ನು ಕೇಳುವವರೇ ಇಲ್ಲವಾಯಿತು. ಕ್ಯಾಂಟನ್ ಬಂದರಿನಲ್ಲಿ ಅಫೀಮು ವ್ಯಾಪಾರಕ್ಕೆ ನಿರ್ಬಂಧವಿದ್ದ ಕಾರಣ ಅಫೀಮನ್ನು ನಾವೆಗಳಲ್ಲಿ ಸಾಗಿಸಿ ಸಮೀಪದ ಕ್ಯಾಂಟನ್ ನದೀ ಮುಖದ ಬಳಿಯ ಲಿಂಟನ್ ಎಂಬ ದ್ವೀಪಕ್ಕೆ ಕಳ್ಳತನದಿಂದ ಸಾಗಿಸಲಾಗುತ್ತಿತ್ತು. ತರುವಾಯ ಅದನ್ನು ಹೊರಗಿನ ವ್ಯಾಪಾರಿಗಳಿಗೆ ಮಾರಲಾಗುತ್ತಿತ್ತು. ಇದರ ಮೇಲೆ ನಿಗಾ ಇಡದಂತೆ ಸ್ಥಳೀಯ ಚೀನಿ ಅಧಿಕಾರಿಗಳಿಗೆ ಲಂಚಕೊಟ್ಟು ಒಲಿಸಿಕೊಳ್ಳಲಾಗಿತ್ತು. ಇದಲ್ಲದೆ ಅಫೀಮನ್ನು ಕಳ್ಳಸಾಗಾಟಮಾಡುತ್ತಿದ್ದ ನಾವೆಗಳಿಗೆ ಸಶಸ್ತ್ರ ನೌಕೆಗಳ ರಕ್ಷಣೆಯಿತ್ತು. ಈ ನಾವೆಗಳು ಸಮುದ್ರ ವ್ಯಾಪಾರದ ಎಲ್ಲ ಅಂತರ್ರಾಷ್ಟ್ರೀಯ ನಿಯಮಗಳನ್ನೂ ಗಾಳಿಗೆ ತೂರಿ ಹಾಡುಹಗಲೇ ಕಳ್ಳತನದಲ್ಲಿ ತೊಡಗಿದ್ದವು. ೧೮೩೧ರಲ್ಲಿ ಕ್ಯಾಂಟನ್ ಬಂದರಿನಲ್ಲಾದ ಒಟ್ಟು ವ್ಯಾಪಾರದ ಮೊತ್ತ ಎಪ್ಪತ್ತು ಲಕ್ಷ ಡಾಲರುಗಳಾದರೆ ಲಿಂಟನ್ ದ್ವೀಪದಲ್ಲಾದ ಅಫೀಮಿನ ವ್ಯಾಪಾರದ ಮೊತ್ತವೇ ನೂರಾಹತ್ತು ಲಕ್ಷ ಡಾಲರುಗಳಾಗಿತ್ತು.

ಅಫೀಮು ಸೇವನೆಯ ದುಶ್ಚಟಕ್ಕೆ ಬಲಿಯಾದ ಚೀನದ ಜನತೆಯ ಪರಿಸ್ಥಿತಿ ಚಿಂತಾಜನಕವಾಯಿತು. ಉಚ್ಚಾಧಿಕಾರಿಗಳೂ, ವಿದ್ವಾಂಸರೂ ದಿಗಿಲೆದ್ದು ಚಕ್ರವರ್ತಿಗೆ ದೂರಿದರು. ಪರಿಸ್ಥಿತಿಯನ್ನು ತಹಬಂದಿಗೆ ತರಲು ಚಕ್ರವರ್ತಿ ಹೂಕ್ವಾಂಗ್ ಪ್ರಾಂತದ ವೈಸ್‌ರಾಯ್ ಆಗಿದ್ದ ಲಿನ್‌ತ್ಸೇಷೂ ಎಂಬಾತನನ್ನು ಕ್ಯಾಂಟನ್‌ಗೆ ಕಳಿಸಿಕೊಟ್ಟನು. ಷೂ ಜನಪ್ರಿಯನೂ ಕುಶಲನೂ ದಕ್ಷನೂ ಆಗಿದ್ದ. ಅಫೀಮಿನ ಕಳ್ಳಸಾಗಾಟವನ್ನು ನಿರ್ಮೂಲನಗೊಳಿಸಲು ಆತ ನಿಶ್ಚಯಿಸಿದ. ಅದೇ ಸಮಯದಲ್ಲಿ ನ್ಯಾಯಬದ್ಧ ವ್ಯಾಪಾರಸ್ಥರಿಗೆ ಉತ್ತೇಜನ ಕೊಡಲೂ ನಿರ್ಧರಿಸಿದ್ದ. ತಾನು ಬಂದ ಕೂಡಲೇ ಎಲ್ಲ ವರ್ತಕರೂ ತಮ್ಮ ಬಳಿ ಇರುವ ಅಫೀಮು ದಾಸ್ತಾನನ್ನು ಒಪ್ಪಿಸಲು ಆಜ್ಞಾಪಿಸಿದ. ಹೀಗೆ ಪಡೆದ ಅಗಾಧ ಪ್ರಮಾಣದ ಅಫೀಮನ್ನು ಬಹಿರಂಗವಾಗಿ ಸುಟ್ಟುಹಾಕಿದ. ವರ್ತಕರಿಗೆಲ್ಲಾ

* ಚೀನದೊಡನೆ ವ್ಯಾಪಾರ ಮಾಡುವವರು ಒಂದು ಸ್ಥಳೀಯ ವರ್ತಕ ಮಂಡಳಿಯ ಮುಖಾಂತರ ವ್ಯಾಪಾರ ಮಾಡಬೇಕಿತ್ತು. ಅದರ ಹೆಸರೇ ಹಾಂಗ್. ಹೊರಗಿನ ವ್ಯಾಪಾರಿಗಳಿಗೆ ಚಕ್ರವರ್ತಿಯೊಂದಿಗೆ ಅಥವಾ ಚೀನಿ ಜನತೆಯೊಂದಿಗೆ ನೇರ ವ್ಯಾಪಾರ ಮಾಡಲು ಅವಕಾಶವಿರಲಿಲ್ಲ. ಹೊರಗಿನ ವ್ಯಾಪಾರಿಗಳ ಮೇಲೆ ಸಾಕಷ್ಟು ನಿರ್ಬಂಧವಿತ್ತು. ಪಶ್ಚಿಮ ರಾಷ್ಟ್ರಗಳ ವ್ಯಾಪಾರಿಗಳಿಗೆ ಈ ನಿರ್ಬಂಧಗಳು ಇರಿಸುಮುರುಸಾಗಿದ್ದವು.

ಒತ್ತಾಯಮಾಡಿ ಈ ದುರ್ವ್ಯವಹಾರವನ್ನು ಮುಂದುವರಿಸುವುದಿಲ್ಲವೆಂದು ಪ್ರಮಾಣ ಮಾಡಿಸಿಕೊಂಡು ಮುಚ್ಚಳಿಕೆಗಳನ್ನು ಬರೆಸಿಕೊಂಡ. ತಮಗಾದ ಅವಮಾನ ಹಾಗೂ ನಷ್ಟವನ್ನು ಬ್ರಿಟಿಶ್ ವರ್ತಕರು ಸಹಿಸದಾದರು. ಅವರು ಒಳಗೊಳಗೇ ಕುದಿಯುತ್ತಿದ್ದು ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿದ್ದರು. ಮುಚ್ಚಳಿಕೆ ಬರೆದುಕೊಟ್ಟಿದ್ದರೂ ಫಿಲಿಪೈನ್ಸಿನ ಮನಿಲಾ ದ್ವೀಪದ ಮುಖಾಂತರ ಕಳ್ಳಸಾಗಾಟ ಮಾಡಲು ಹೊಂಚು ಹಾಕಿದರು. ಕೆಲಕಾಲ ಎಲ್ಲವೂ ಚೆನ್ನಾಗಿಯೇ ಇತ್ತು. ಒಂದುಸಲ ಕುಡಿದು ಮತ್ತರಾದ ಬ್ರಿಟಿಶ್ ನಾವಿಕರು ಒಬ್ಬ ಚೀನೀ ನಾಗರಿಕನನ್ನು ನಿಷ್ಕಾರಣವಾಗಿ ಕೊಂದರು. ಅಪರಾಧಿಗಳನ್ನು ಒಪ್ಪಿಸಲು ಲಿನ್ ಕೋರಿಕೊಂಡಾಗ ಬ್ರಿಟಿಶರು ತಿರಸ್ಕರಿಸಿದರು. ಇದನ್ನು ಲಿನ್ ತನ್ನ ಅಧಿಕಾರಕ್ಕೆ ಒಡ್ಡಿದ ಸವಾಲೆಂದು ಭಾವಿಸಿ ಬಂದರಿನಲ್ಲಿರುವ ಬ್ರಿಟಿಶ್ ನೌಕೆಗಳೆಲ್ಲವೂ ಹಿಂತಿರುಗಬೇಕೆಂದು ಆಜ್ಞಾಪಿಸಿದ. ಸಶಸ್ತ್ರ ನಾಡನೌಕೆಗಳನ್ನು ಒಟ್ಟುಗೂಡಿಸಿ ತನ್ನ ಆಜ್ಞೆಯನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿದ. ಬ್ರಿಟಿಶರು ವೋಲ್ಗಾ ಮತ್ತು ಹೈಸಿಂಗ್ ಎಂಬ ಸಮರ ನೌಕೆಗಳನ್ನು ತಂದು ಇದ್ದಕ್ಕಿದ್ದಂತೆ ಫಿರಂಗಿ ದಾಳಿ ಆರಂಭಿಸಿ ಹಲವಾರು ನಾಡ ನೌಕೆಗಳನ್ನು ಮುಳುಗಿಸಿದರು. ಈ ಘಟನೆ ಚೀನ ಹಾಗೂ ಬ್ರಿಟನ್ ನಡುವೆ ನಡೆದ ಮೊದಲ ಅಫೀಮು ಯುದ್ಧಕ್ಕೆ ಕಾರಣವಾಯಿತು. (೧೮೪೨).

ಯುದ್ಧದಲ್ಲಿ ಸೋತು ಚೀನಿಯರು ಅವಮಾನಕರವಾದ ನ್ಯಾಂಕಿಂಗ್ ಕೌಲಿಗೆ ಸಹಿ ಹಾಕಬೇಕಾಯಿತು. ಅದೇನೇ ಇರಲಿ. ಅಫೀಮಿನ ಕಳ್ಳಸಾಗಾಟದಲ್ಲಿ ಬ್ರಿಟಿಶ್ ಸರ್ಕಾರದ ಪಾತ್ರ ನಾಚಿಕೆಗೇಡಿನ ಪ್ರಸಂಗ. ಅಫೀಮಿನ ಕಳ್ಳಸಾಗಾಟದಲ್ಲಿ ಬ್ರಿಟಿಶ್ ಸರ್ಕಾರದ ಹಸ್ತಕ್ಷೇಪವಿಲ್ಲವೆಂದು ಭಾವಿಸಿ ಲಿನ್ ವಿಕ್ಟೋರಿಯ ರಾಣಿಗೆ ಪತ್ರ ಬರೆದು ಈ ಕಳ್ಳ ಸಾಗಾಟವನ್ನು ನಿಲ್ಲಿಸಬೇಕೆಂದು ವಿನಂತಿಸಿಕೊಂಡಿದ್ದ. "ಗೌರವಾನ್ವಿತ ರಾಣಿಯವರೆ, ತಮ್ಮ ಅಧೀನದ ಪ್ರಾಂತಗಳಲ್ಲಿ ಅಫೀಮನ್ನು ರಹಸ್ಯವಾಗಿ ಕಳ್ಳತನದಿಂದ ಸಾಗಿಸಲಾಗುತ್ತಿದೆ. ಈ ದುರ್ವ್ಯವಹಾರದಲ್ಲಿ ತಮ್ಮ ಸರ್ವಮಾನ್ಯ ಸರ್ಕಾರದ ಪಾಲೇನೂ ಇಲ್ಲವೆಂದು ಬಲ್ಲೆವು. ತಮ್ಮ ದೇಶದಲ್ಲಿಯೇ ಅಫೀಮಿನ ಸೇವನೆ ಮಾರಕವೆಂದು ಭಾವಿಸಿ ನಿಷೇಧಿಸಲ್ಪಟ್ಟಿರುವಾಗ ಕೇವಲ ಲಾಭಕ್ಕೆಂದೇ ಈ ಅಪಾಯಕಾರಿ ವಸ್ತುವಿಗೆ ನಮ್ಮ ಜನರು ಬಲಿಯಾಗುವಂತೆ ಮಾಡುವುದು ಆದಾವ ನ್ಯಾಯ?" ಆದರೆ ವಾಸ್ತವವಾಗಿ ಅಫೀಮಿನ ವ್ಯಾಪಾರವು ಬ್ರಿಟಿಶ್ ಸರ್ಕಾರದ ಪ್ರತ್ಯಕ್ಷ ಹಾಗೂ ಪರೋಕ್ಷ ಅನುಮೋದನೆಯೊಂದಿಗೆ ನಡೆಯುತ್ತಿದೆಯೆಂಬ ಸಂಗತಿಯನ್ನು ಲಂಡನ್ ಈಸ್ಟ್ ಇಂಡಿಯಾ ಮತ್ತು ಚೈನಾ ಸಮಿತಿಯೊಂದು ಆಳವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸಿತ್ತು. ನೀತಿಯೇ ರಾಜ್ಯದ ಬುನಾದಿ ಎಂಬ ಕನ್‌ಫ್ಯೂಶಿಯಸ್ಸನ ಸುಸಂಸ್ಕೃತ ಪರಂಪರೆಯಲ್ಲಿ ಬೆಳೆದು ಬಂದ ಚೀನದ ಉಚ್ಚಾಧಿಕಾರಿಗಳಿಗೆ ಬ್ರಿಟಿಶ್ ಸರ್ಕಾರವೇ ಇದನ್ನು ಬೆಂಬಲಿಸುತ್ತಿದೆ ಎಂಬುದನ್ನು ಊಹಿಸಲು ಸಹ ಕಷ್ಟವಾಗಿತ್ತು. ಒಂದು ಸಂಗತಿಯಂತೂ ಸ್ಪಷ್ಟ: ಇತಿಹಾಸ ಒಂದು ಚಕ್ರವಿದಂತೆ. ಅದು ಮರುಕಳಿಸುತ್ತಿರುತ್ತದೆ. ಪ್ರತಿ ರಾಷ್ಟ್ರದ್ದೂ ಒಂದೊಂದು ಸರದಿ. "ಸೂಳ್ಪಡೆಯುಲಪ್ಪುದು ಕಾಣಾ" ಎಂದಷ್ಟೇ ಶೋಷಿತ ರಾಷ್ಟ್ರಗಳು ಹೇಳಬಹುದು. ●

1968 ರಲ್ಲಿ ತನ್ನ ಮೂವತ್ತರ ಹರಯದಲ್ಲಿದ್ದ, ನ್ಯೂಜಿಲೆಂಡಿನ ಮೇಯರ್ ಐಸ್‌ಲ್ಯಾಂಡಿನ ಮೀನುಗಾರ ಡೊನಾಲ್ಡ್ ಹೀಟ್ಲೆ ಎಂಬಾತ ಸಾಗರದಲ್ಲಿ 20 ಅಡಿ ಉದ್ದದ, 1500 ಪೌಂಡು ಭಾರದ ಬ್ಲ್ಯಾಕ್ ಮರ್ಲಿನ್ ಜಾತಿಯ ಮೀನಿನೊಂದಿಗೆ ಹೋರಾಟಕ್ಕಿಳಿದ. ಆ ಭೀಕರ ಹೋರಾಟದಲ್ಲಿ ಮೀನಿಗಿಂತ ಆತನೂ, ಆತನಿಗಿಂತ ಮೀನೂ ತುಂಬ ಎಚ್ಚರದಿಂದ, ಮರಣಾಂತಿಕ ಪ್ರಹಾರಗಳೊಂದಿಗೆ ಜೀವವುಳಿಸಿಕೊಳ್ಳುವ ಯತ್ನದಲ್ಲಿದ್ದರು. ಕೊನೆಗೂ ಮೀನು ಸೋತು ಸಾವನ್ನಪ್ಪಬೇಕಾಯಿತು.

ಈ ಭೀಕರ ಸೆಣಸಾಟದ ಒಟ್ಟು ಅವಧಿ ಮೂವತ್ತೆರಡು ಗಂಟೆ. ಐದು ನಿಮಿಷಗಳು!

ಪ್ರತಿಕ್ರಮ



ಪ್ರಾಯ ಕಳೆದುಕೊಂಡಿರುವ ವ್ಯಕ್ತಿಯ ಚರ್ಮ ಹೊಸರೂಪ ಪಡೆಯುವ ಹಾಗೆ ಕಾಲಸರ್ಪ ಹಗಲಿನ ಪೊರೆಯನ್ನು ತ್ಯಜಿಸಿ ರಾತ್ರಿಯ ಪೊರೆ ಯನ್ನು ಧರಿಸಲು ಅತ್ತಿತ್ತ ಹೊರಳಾಡುತ್ತಿರು ವಂತೆಯೇ, ಕಾದು ಕಾದು ಬೇಸತ್ತು ಸಿಗರೇಟು ಒಂದನ್ನನುಸರಿಸಿ ಇನ್ನೊಂದು ಭಸ್ಮೀಭೂತ ವಾಗುತ್ತಿರುವಂತೆಯೇ, ಪದೇ ಪದೇ ಆಕಳಿಸಿ ಕಣ್ಣಲ್ಲಿ ನೀರು ಒಸರುತ್ತಿರುವಂತೆಯೇ, ಕಾದ ಎಂಜಿನ್ನಿನಿಂದ ಬಿಸಿಯ ಹೊಗೆ ಹೊರಬೀಳುವ ರೀತಿಯಲ್ಲಿ ನಿಟ್ಟುಸಿರು ಹೊರಹೊಮ್ಮುತ್ತಿರು ವಂತೆಯೇ ನೀನು ಬಂದೆ; ಸರಿತ್ಪತಿಯನ್ನು ಕೂಡುವ ಆತುರದಿಂದ ಪ್ರವಹಿಸಿ ಬರುವ

— ಗಣಪತಿ ವರ್ಧನ್



ನದಿಯ ಆಸೆಯ ಸಜೀವ ರೂಪವಾಗಿ ನಿನ್ನನ್ನು ನೋಡಿ ನಕ್ಕೆ ನಾನು. ಪಕ್ಕದಲ್ಲಿ ಕೂಡ್ರುವಂತೆ ಸನ್ನೆ ಮಾಡಿದೆ. ನೀನೂ ಕುಳಿತೆ ಸುಮ್ಮನೆ. ಮಾತಾಡದೆ ಕುಳಿತೇ ಇದ್ದೆವು. ಬಹಳ ಹೊತ್ತಿನವರೆಗೂ ಕಲ್ಲಿಗೆ ಕಲ್ಲಾಗಿ, ಮರಕ್ಕೆ ಮರವಾಗಿ, ಸೃಷ್ಟಿಗೆ ಸೃಷ್ಟಿ ನಿರ್ಮಿತ ವಸ್ತುವಾಗಿ, ಮುಳುಗುತ್ತಿರುವ ಸೂರ್ಯ, ಧೂಳುತುಂಬಿದ ಮಣ್ಣು ರಸ್ತೆಯಲ್ಲಿ ಕೆಂಪು ಬಸ್ಸನ್ನೇರಿ ನಾಳೆ ಬರುತ್ತೇನೆಂದು ಕೈಬೀಸಿ ಹೊರಟುಹೋಗುತ್ತಿರುವ ಆತ್ಮೀಯ ಗೆಳೆಯನಂತೆ ಕೆಂಬಣ್ಣ ತುಂಬಿದ ಬಾನಂಗಳದಲ್ಲಿ ಸಾಗಿದ್ದ. ಆಪ್ತರನ್ನು ಕಳಿಸಿಕೊಟ್ಟಾಗ ಅವ್ಯಕ್ತ ಒಂಟಿತನ, ನೀರವತೆ ಮನಸ್ಸನ್ನಾವರಿಸು ವಂತೆ ಸುತ್ತಲೂ ಕತ್ತಲೆ ಮುಸುಕುತ್ತಿದೆ. ಪರಿ ಚಯವಾದ, ಹತ್ತಿರವಾದ, ಒಂದೇ ಎಂಬ ಭಾವನೆ ಬೆಳೆದ, ಬಿಟ್ಟಿರಲಾರದಷ್ಟು ಹಚ್ಚಿ ಕೊಂಡ– ಈ ಆರುತಿಂಗಳ ಅವಧಿಯಲ್ಲಿ ಪ್ರಪ್ರಥಮವಾಗಿ ಹತ್ತಿಕ್ಕಿದ ಆಸೆಗೆ ವಿದಾಯ ಹೇಳುವಂತೆ ನಿನ್ನ ಕೈ ಹಿಡಿದೆ. ನೀನು ನಿಷ್ಕ್ರಿಯ ಳಾಗಿದ್ದೆ. ನಿನ್ನನ್ನು ಬಳಸಿ ಹಿಡಿದಾಗಲೂ ಪ್ರತಿಕ್ರಿಯಾಹೀನಳಾಗಿದ್ದೆ. ನಾನು ಉತ್ತೇಜಿತನಾದೆ. ನಿನ್ನ ಅವಯವಗಳೆಲ್ಲಾ ನನ್ನವೇ ಎಂಬಂತೆ ವರ್ತಿಸಿದೆ. ನೀನು ಅತ್ತೆ. ಗುಲಾಬಿ ಹೂವಿನ ಪಕಳೆಗಳೆರಡರ ಮೇಲೆ ಇಬ್ಬನಿಯ ಎರಡು ಬಿಂದುಗಳು ಹೊಳೆಯುವಂತೆ ಕತ್ತಲಿನಲ್ಲಿಯೂ ಕಣ್ಣೀರಿನ ಹನಿ ಮಿನುಗಿ ತನ್ನ ಅಸ್ತಿತ್ವವನ್ನು ಸಾರಿತು. ನಿನ್ನನ್ನು ಬಿಟ್ಟು ಕುಳಿತೆ. ನಮ್ಮೀರ್ವರ ನೆರಳುಗಳೂ ಬೇರೆಯಾದವು. ವಸ್ತುಗಳಿಗೆ ಬಲಪ್ರಯೋಗವಾಗದಿರುವಾಗ ವಸ್ತುಗಳು ನಿಶ್ಚಲಸ್ಥಿತಿ ಅಥವಾ ಸಮವೇಶದಲ್ಲಿ ಮುಂದುವರಿಯುವುವೆಂಬುದು ವಿಜ್ಞಾನದ ಹೇಳಿಕೆಯಷ್ಟೇ. ಹಾಗೇ ಈ ಛಾಯೆಗಳು. ಮೂಲ ಆಕಾರ ಚಲಿಸಿದ ಹೊರತು ಅವು ಅಲುಗಾಡಲಾರವು ಕೂಡಾ.

ಈಗಲೂ ನಾವು ಮಾತನಾಡದೆಯೇ ಇದ್ದೆವು. ನೀನು ಅತ್ತ ಕಾರಣ ಕೇಳುವ ಮನಸ್ಸಾದರೂ ಧೈರ್ಯ ಇರಲಿಲ್ಲ. ಅಪರಾಧೀಭಾವನೆ ಹುಟ್ಟ ಲಾರಂಭಿಸಿತ್ತು. ನೀನೂ ಹೇಳಲಿಲ್ಲ. ಕೆಲವು ಸಲ ನೀನು ಹಾಗೇ. ಕೇಳಿದರೆ ಮಾತ್ರ ಉತ್ತರ- ಮುತ್ತು ಸುರಿದಂತೆ. ಅದನ್ನು ನಾನು ಬಲ್ಲೆ. ನನ ಗೇನೂ ಹೊಸದಲ್ಲ ಅದು.

ಕತ್ತಲು ಕವಿಯುತ್ತಿರುವುದು ಕಾಣಿಸಿತು. ಮೊದಲು ನೀನೆದ್ದೆ. ಆಮೇಲೆ ನಾನು. ನೀನು

ಮೈಮುರಿದು ಬಲಗೈಯನ್ನು ಉದ್ದಕ್ಕೂ ಚಾಚಿ ಕೊಡವಿ ಶಬ್ದ ಬರುವಂತೆ ಮಾಡಿದೆ. ಸಾಲದೆಂಬಂತೆ ಎರಡೂ ಕೈಗಳನ್ನು ಎರಡು ಕೆನ್ನೆಗೊತ್ತಿ ಬೆರಳುಗಳ ಕೀಲು ಮಡಿಸಿ ಲಟಿಕೆ ಮುರಿದೆ. ನಾನು ಆಕಳಿಸುತ್ತಲೇ ಚಿಟಿಕೆ ಹೊಡೆದೆ. ರಾಮಾ ಎಂದೆ ನನಗೆ ಮಾತ್ರ ಕೇಳುವಷ್ಟು ದೊಡ್ಡದಾಗಿ. ಗುಡ್ಡವನ್ನು ಇಳಿಯತೊಡಗಿದೆವು. ನಿನ್ನ ಹಿಂದೆ ನಾನು. ಪರಿಚಿತ ದಾರಿ, ಬೇಗ ಬೇಗ ಇಳಿದೆವು. ಮುಕ್ಕಾಲು ಭಾಗವನ್ನು ಕ್ರಮಿಸಿದಾಗ ಇರುವೆ ಕಚ್ಚಿ ನೀನು ನನ್ನನ್ನು ಹಿಡಿದುಕೊಂಡೆ. "ಹಾಯ್" ಎಂದೆ, ಕಾಲು ಅಪ್ಪಳಿಸುತ್ತ ಕುಣಿದಾಡಿದೆ. "ಗ್ರಹಚಾರ ಇದೊಂದು" ದೊಡ್ಡದಾಗಿ ಬೈದೆ. ಕಿವಿಯಬಳಿ ಮುಖತಂದು "ಸಾರೀ" ಎಂದೆ. ನಾನು ಮಾತ್ರ ನನ್ನದೇ ಲೋಕದಲ್ಲಿದ್ದೆ. "ಹಾಂ, ಹ್ಞೂ" ಎಂದೆ ಅಷ್ಟೆ, ನಿನ್ನನ್ನು ಗಟ್ಟಿಯಾಗಿ ಆಲಂಗಿಸಿದೆ. ಯಾವುದೋ ಸೂತ್ರಕ್ಕೆ ಕಟ್ಟುಬಿದ್ದಂತವರಾದೆವು ಇಬ್ಬರೂ. ನಡುವೆ ಜಾಗವೇ ಇರದಷ್ಟು ಹತ್ತಿರವಾದೆವು. ನಿನ್ನ ಬೆವರಿನ ವಾಸನೆ ಅಪ್ಯಾಯಮಾನವಾಗಿತ್ತು. ಆ ಕ್ಷಣ ರಬ್ಬರ್ ಚೆಂಡಿನಂತಹ ಮೊಲೆಗಳು ಸ್ಪಂಜಿನಂತೆ ಹಿತವಾಗಿ ಎದೆಯನ್ನು ನೀವುತ್ತಿದ್ದವು. ಸೆಟೆದು ನಿಂತು, ಒಂದು ಕೈಯನ್ನು ಮಾತ್ರ ಅಲಂಕರಿಸಿರುವ ನಾಲ್ಕೇ ಬಳೆಗಳು ತಮ್ಮತಮ್ಮೊಳಗೆ ಪಿಸುಗುಟ್ಟಿದವು.

ದೇವಾಲಯದಲ್ಲಿ ಜಾಗಟೆಯ ಸದ್ದು. ಇಬ್ಬರೂ ಎಚ್ಚೆತ್ತೆವು. ರಸ್ತೆಗೆ ಇಳಿದು ನಡೆಯತೊಡಗಿದೆವು. ಜನ ಸಂಚಾರ ಕಡಿಮೆ. ಅಲ್ಲಲ್ಲಿ ಅರ್ಧರ್ಧ ಹೊತ್ತಿ ಫಕ ಫಕ ಮಿನುಗುವ ಬೀದಿ ಟ್ಯೂಬ್‌ಲೈಟುಗಳು ನೀನು ಹಾಡನ್ನು ಗುನುಗುತ್ತಿದ್ದೆ. ನಾನು ಸಣ್ಣಗೆ ಸಿಳ್ಳೆ ಹಾಕುತ್ತಿದ್ದೆ. ಮುಸ್ಸಂಜೆಯ ಹೊತ್ತಿನಲ್ಲಿ ಸಿಳ್ಳೆ ಹಾಕುವುದು ನಿನಗಿಷ್ಟವಿಲ್ಲವೆಂಬುದು ಗೊತ್ತಿದ್ದರೂ. ಇದಕ್ಕೆ ಖಾರವಾಗಿ ಉತ್ತರಿಸುತ್ತಿದ್ದ ನೀನು ಈಗ ಮೌನಗೌರಿಯಾಗಿದ್ದೆ. ನಿನಗೆ ಅಂಟಿಕೊಂಡೇ ನಡೆದೆ. ಜನರ ದೃಷ್ಟಿಯೆಲ್ಲಾ ನಮ್ಮ ಮೇಲೇ. ಸಂಶಯದ ಸಾಕ್ಷಾತ್ಕಾರ ಅಲ್ಲಾಗಿತ್ತು. ನಮಗೆ ದ್ವೇಷವಿಲ್ಲ ರೋಷವಿಲ್ಲ, ಯಾವ ಕೆಟ್ಟ ಭಾವನೆಯೂ ಇಲ್ಲ, ಈ ಇವರೆಲ್ಲರ ಬಗ್ಗೆ ಸ್ವಲ್ಪ ಅನುಕಂಪ. "ಅಯ್ಯೋ ಪಾಪ" ಎನ್ನಬಹುದಾದ ಮರುಕ. ಏನೋ ನೆನಪಾಗಿ ಸಶಬ್ದವಾಗಿ ನಕ್ಕೆ. ನೀನು ತಿರುಗಿ ನೋಡಿದೆ. ಏನು ಎನ್ನುವಂತೆ ಕಣ್ಣುಗಳಲ್ಲಿಯೇ ಮಾತಾಡಿದೆ. ನನ್ನ ಮನಸ್ಸನ್ನು ಕವಿದಿರುವ ಭಾವನೆಗಳನ್ನು ಸಂಪೂರ್ಣವಾಗಿ ಓದುವಳಂತೆ ತದೇಕ ದೃಷ್ಟಿಯಿಂದ ದಿಟ್ಟಿಸಿದೆ. ಏನಿಲ್ಲವೆಂಬಂತೆ ತಲೆಯಾಡಿಸಿದ್ದೇ ನನ್ನುತ್ತರ. ನೀನು ಮುನ್ನಡೆದಾಗ ಅನುಸರಿಸಿದೆ.

ದಡ್ಡಭಟ್ಟನ ಸಾರ ಬಂತು. ನೀನು ನಿಂತೆ, ನಾನೂ. "ಕೂತುಕೊಳ್ಳೋಣ" ನೀನೆಂದೆ. ನಾನೊಪ್ಪಿದೆ. ಕಟ್ಟೆಯ ಮೇಲೆ ಕುಳಿತೆವು. ಒಬ್ಬರಿಗೊಬ್ಬರು ಎದುರಾಗಿ. ಹರಿಯುವ ನೀರಿನ ಕಲರವ ಮಧುರವಾಗಿದೆ. ಹಿಮಕರನ ಕದಿರು ಹಿತವಾಗಿದೆ. ತಂಗಾಳಿ ಆನಂದದಾಯಕವಾಗಿದೆ. ನಿನ್ನ ಮನಸ್ಸಿನಲ್ಲಿ ಏಕೋ ಏನೋ ದುಗುಡ ತುಂಬಿದೆ. ಯಾವುದೋ ವೇದನೆಯಿದೆ, ತಿಂಗಳು ಬೆಳಕಿನಲ್ಲಿ ನಾನಿದನ್ನು ಕಂಡೆ. ಸದಾ ನಳನಳಿಸುತ್ತಿದ್ದ ಮಂದಾರ ಹೂವು ಇಂದೇಕೋ ಬಸವಳಿದಿದೆ. ನಿನ್ನ ಪರಿಯೇ ಅರ್ಥವಾಗುತ್ತಿಲ್ಲವಲ್ಲ ಪ್ರಿಯೇ... ನನ್ನಷ್ಟಕ್ಕೆ ಮಾತಾಡಿಕೊಂಡೆ- "ಯಾಕೇ ಒಂಥರಾ ಇದೀಯಾ?" ನಾನೇ ಮೌನ ಮುರಿದೆ. ಪರಸ್ಪರ ಬೆಸೆದಿದ್ದ ನಿನ್ನ ತುಟಿಗಳು ಈಗ ಬಿರಿದವು. "ಅವರಿಗೆಲ್ಲಾ ಗೊತ್ತಾಗಿಬಿಟ್ಟಿದೆ" ಧ್ವನಿಯಲ್ಲಿ ಕಂಪನವಿತ್ತು. ಮುಂದೇನೋ ಎಂಬ ಭಯವಿತ್ತು. ಗ್ರಹಣಕ್ಕೊಳಗಾಗುತ್ತಿರುವ ಸೂರ್ಯನಂತೆ ಗೋಚರಿಸಿದೆ ನೀನಾಗ. "ಗೊತ್ತಾದ್ರೇನು?" ನಿರ್ವಿಕಾರನಾಗಿ ಕೇಳಿದೆ.

"ನೀನೆಷ್ಟೆಂದರೂ ಗಂಡಸು. ಜಗತ್ತಿನ ಬೆಂಬಲ-ಸಹಾಯ-ಸಹಕಾರ ನಿನಗಿದೆ. ನಾನು ಹೇಳಿ ಕೇಳಿ ಹೆಣ್ಣು. ಅಬಲೆ. ನಮ್ಮನ್ನು ಕೇಳುವವರು ಯಾರಿದ್ದಾರೆ?" . ಆಕ್ಷೇಪದ ಲೇಪವಿತ್ತು, ಅಸಹಾಯಕತೆಯ ಧ್ವನಿಯಿತ್ತು ನಿನ್ನ ಮಾತಿನಲ್ಲಿ.

ನಾನು ಮಾತ್ರ ಗಟ್ಟಿಯಾಗಿ ನಕ್ಕೆ. "ಹುಚ್ಚೀ ಇಷ್ಟಕ್ಕೇ ಇಷ್ಟೊಂದು ದುಃಖವಾ? ಅದಕ್ಕೆ (ಹೆಂಗಸರ ಬುದ್ಧಿ ಮೊಳಕಾಲಕೆಳಗೆ) ಎನ್ನುವುದು ನೀನು ಗಂಡುಬೀರಿ ಅಲ್ಲದಿದ್ದರೂ ಸಾಮಾನ್ಯ ಹುಡುಗಿಯಂತೂ ಅಲ್ಲ. ಧೈರ್ಯವಂತೆ, ಬುದ್ಧಿ ವಂತೆ, ವ್ಯವಹಾರಸ್ಥೆ, ಕಲಿತವಳು, ಸೋಷಿ ಯಲ್ಲಾಗಿ ಇರುವವಳು, ಆಧುನಿಕತೆಯ ಗಾಳಿ ಕುಡಿದವಳು.... ಇನ್ನೂ ಏನೇನೊ. ನೀನೇ ಹೀಗೆ ಹೇಳಿದರೆ ಹೇಗೆ? ಕಾಲೇಜಿನಲ್ಲಿ ಓದುತ್ತಿ ದ್ದಾಗ ಭಾಷಣ ಸ್ಪರ್ಧೆಯಲ್ಲಿ, ನಿಬಂಧ ಸ್ಪರ್ಧೆ ಯಲ್ಲಿ, ಚರ್ಚಾಕೂಟದಲ್ಲಿ ಆಂಧೋಲನವೆಬ್ಬಿಸುವ ಮಾತನ್ನು ಹೇಳುತ್ತಿದ್ದವಳು... ಕ್ರಾಂತಿ ಕಾರಿ

ಧೋರಣೆಯ ವಿಚಾರ ಮಂಡಿಸುತ್ತಿದ್ದವಳು... ಇಲ್ಲಿ ಹೆದರಿದರೆ? ಅಷ್ಟಲ್ಲದೆ ಈಗ ಅಂಥ ತಪ್ಪು ಘಟಿಸಿದಾದರೂ ಏನು? ನಾವೇನು ಕನ್ನಾ ಹಾಕಿದ್ದೇವೆಯೇ? ತಲೆಕಡಿದಿದ್ದೇವೆಯೇ? ಬುತ್ತಿ ಕಸಿದಿದ್ದೇವೆಯೇ? ಆಸ್ತಿ ನುಂಗಿದ್ದೇವೆಯೇ? ಏನೋ ಇಬ್ಬರಲ್ಲೂ ಒಂದೇ ಆಸೆ ಹುಟ್ಟು (ನಂಗೆ ನೀನೇ ಬೇಕೂ ಅಂತ, ನಿಂಗೆ ನಾನೇ ಬೇಕೂ ಅಂತ) ಗೆಳೆತನ ಮಾಡಿದೆವು. ಅದೇನಂಥಾ ಅಕ್ಷಮ್ಯ ಅಪರಾಧವಲ್ಲ. ಜಗತ್ತಿನಲ್ಲಿ ನಡೆಯದೇ ಇರುವಂಥಾದ್ದು ಯಾರೂ ಮಾಡದೇ ಇರುವಂಥಾದ್ದು ಅಲ್ಲ. ಅಂದಾಗ ತಲೆಕೆಡಿಸಿಕೊಳ್ಳೋದು ಯಾತಕ್ಕೆ? ಇನ್ನೊಂದು ವಿಚಾರ ಅಂತರ್ವರ್ತ್ನಿಯಾದವಳು ಒಂದಲ್ಲ ಒಂದುದಿನ ಹಡೆಯಲೇ ಬೇಕು. ಇಲ್ಲವೇ ಗರ್ಭಪಾತಕ್ಕೊಳಗಾಗಬೇಕು ಇದು ನಿಸರ್ಗನಿಯಮ. ಅಪ್ರತಿಹತವಾದದ್ದು ಅಪ್ರತಿಷೇಧವಾದದ್ದು. ಹಾಗೆ ನಡೆಯದಿದ್ದರೆ ಅರ್ಥಾತ್ ಆ ನಿಯಮದ ಉಲ್ಲಂಘನೆಯಾದರೆ ಆ ವ್ಯಕ್ತಿಗೆ ಮರಣ ಸಂಭವಿಸಿತೆಂದೇ ಅರ್ಥ. ಅದೇ ರೀತಿ ನಮ್ಮ ಪ್ರೇಮ" ವ್ಯಾಖ್ಯಾನಿಸಿದೆ.

"ಅದೇನೇ ಇದ್ದಿರಬಹುದು. ಆದರೆ ನನ್ನ ಈಗಿನ ಅಭಿಪ್ರಾಯದ ಪ್ರಕಾರ ಮನುಷ್ಯ ಬಸವನ ಹುಳು ಇದ್ದ ಹಾಗೆ. ಬಸವನ ಹುಳು ಚಿಪ್ಪುಳ್ಳ ಮೃದ್ವಂಗಿ. ಅದು ಚಿಪ್ಪಿನೊಳಗೇ ಸೇರಿಕೊಂಡಿರುತ್ತ. ಚಲಿಸುವಾಗ ಶರೀರ ಹೊರ ಬಂದರೂ ಚಿಪ್ಪನ್ನು ಬಿಡಲಾರದು. ಮನುಷ್ಯನು ಸಮಾಜದಿಂದ ದೂರ ಸರಿಯಲು ಎಷ್ಟೇ ಯತ್ನಿಸಿದರೂ ಮನುಷ್ಯ ನಿರ್ಮಿತವೇ ಆಗಿದ್ದರೂ ಸಮಾಜ ಮನುಷ್ಯನನ್ನು ಬಿಡಲಾರದು. ಮನುಷ್ಯನೂ ಬಹುಕಾಲ ಸಮಾಜದಿಂದ ದೂರಾಗಿ ಬಾಳಲಾರ".

ನೀನು ಮುಂದೇನೋ ಹೇಳಲಿಕ್ಕಿದ್ದೆ ನಾನು ನಡುವೆಯೇ ತಡೆದೆ: "ನೀನು ಬಸವನ ಹುಳುವಿನ ಉದಾಹರಣೆಯನ್ನೇ ಯಾಕೆ ತೆಗೆದುಕೊಳ್ಳಬೇಕು? ಕೋಗಿಲೆಯ ಮರಿ ತನ್ನ ತಾಯಿ-ತಂದೆಯರನ್ನೇ ತೊರೆದು ಹೋಗುವುದಿಲ್ಲವೇ?" ವಿತಂಡವಾದಕ್ಕಿಳಿದೆ.

"ಆದರೂ ಮಾತಿಗೂ, ಕೃತಿಗೂ, ವಿಚಾರಕ್ಕೂ ಅಜಗಜಾಂತರ" ಹೊಸದೇನೋ ಹೇಳುವವಳಂತೆ ನೀನೆಂದೆ.

"ನೋಡು, ವಿಚಾರದಂತೆ ಮಾತಾಡಬೇಕು. ಆಡಿದ ಮಾತು ಕೃತಿಯಲ್ಲಿ ಬರಲೇ ಬೇಕು. ಇದು ನನ್ನ ಪಾಲಿಸಿ. ನಿನ್ನನ್ನು ಪ್ರೇಮಿಸುವ ವಿಚಾರ ಬಂದದ್ದೇ ನಿನ್ನ ಸಹಕಾರಾನೂ ದೊರೆತಾಗ ಪ್ರೀತಿಸ್ದೆ. ನಿನ್ನನ್ನು ಬಿಡಲೇಬಾರದೆಂದು ಇಚ್ಛಿಸಿದ್ದೇನೆ. ಈಗ ಯಾರೇ ಅಡ್ಡಬಂದರೂ ಏನೇ ಆದರೂ ಆಸರೆ ನೀಡುವ ಅಚಲ ನಿರ್ಧಾರವನ್ನು ಪುನರುಚ್ಚರಿಸುವಲ್ಲಿ ಮಾತ್ರ ಅತಿಶಯೋಕ್ತಿಯನ್ನು ಆರೋಪಿಸಲಾರೆ" ಭಾವಾವೇಶದಿಂದ ಮಾತಾಡಿದೆ. ಕೈಯಲ್ಲಿ ಕೈಯಿಟ್ಟು ನಡು ರಸ್ತೆಯಲ್ಲಿ ಭಾಷೆಯಿತ್ತೆ.

ಬಿಗಿಯುಡುಪಿನಲ್ಲಿದ್ದ ನೀನು ಒಂಟಿಕಾಲಿನ ಮೇಲೆ ನಿಂತು ಬೆನ್ನನ್ನು ಅರ್ಧ ಶಿಥಿಲವಾದ ಸಿಮೆಂಟಿನ ಕಟ್ಟೆಗೆ ಆನಿಸಿದೆ. ನಾಗಕನ್ಯೆಯಂತೆ ಕಂಡು ಬಂದೆ. ನಿನ್ನ ಬಗೆಗಿನ ಮೋಹ ಇಮ್ಮಡಿಯಾಯಿತು. ನಿನಗೆ ಮಾತ್ರ ನನ್ನ ಮಾತು ಸಂತಸ ತಂದಂತೆ ಕಾಣಲಿಲ್ಲ. ನೋವು ಯಾವುದರ ಕುರಿತೆಂದು ನಾನು ಕೇಳುವ ಮೊದಲೇ ನೀನು ಶ್ರುತಿಪೆಟ್ಟಿಗೆಯ ಧ್ವನಿಯನ್ನು ಹೊರಗೆಡವಿದೆ. ಸುಮಾರು ದೊಡ್ಡದಾಗಿಯೇ-ಮುಖ ಮುಚ್ಚಿಕೊಂಡು ಬಿಕ್ಕಿದೆ. ನಿನ್ನ ಬೆನ್ನು ನೇವರಿಸಿದೆ. ಬಲವಂತದಿಂದ ಕೈ ಕಿತ್ತೊಗೆದೆ ನೀನು. ನನಗೀ ಅನುಭವ ಹೊಸದು. ಪ್ರೀತಿಯಿಂದ ನಡೆದುಕೊಳ್ಳುವವರನ್ನು ಪುರಸ್ಕರಿಸುವ ಹೆಣ್ಣನ್ನು ಕಂಡಿದ್ದೆ. ಅವರ ಬಗ್ಗೆ ಓದಿದ್ದೆ, ಕೇಳಿದ್ದೆ. ನಿನ್ನದು ಅದಕ್ಕೆ ವ್ಯತಿರಿಕ್ತ ನೀನೇಕೋ ಒಗಟಾದೆ. ಉಕ್ಕಿನ ಕಡಲೆಯಾದೆ ನನ್ನ ಪಾಲಿಗೆ ಈಗ.

ನಿನ್ನಷ್ಟಕ್ಕೆ ನಿನ್ನನ್ನು ಬಿಟ್ಟು ನಾನೊಂದು ಸಿಗರೇಟಿಗೆ ಅಗ್ನಿಸ್ಪರ್ಶ ಮಾಡಿದೆ. ಒಂದೆರಡು ದಮ್ಮೆಳೆದಾಗ ಹಾಯೆನಿಸಿತು. ನಿನ್ನ ಉದ್ವಿಗ್ನತೆ ಸ್ವಲ್ಪ ಹೊತ್ತಿಗೆ ನಶಿಸಿತು. ಮಾಮೂಲು ಸ್ಥಿತಿಗೆ ಬಂದೆ. ಸೊಂಟಕ್ಕೆ ಸಿಕ್ಕಿಸಿದ್ದ ಕರ್ಚೀಫಿನಿಂದ ಮುಖ ಒರೆಸಿಕೊಂಡೆ. ಮೂಗಿನಿಂದ ಸುರಿಯುತ್ತಿದ್ದ ನೀರನ್ನು ಶಬ್ದಸಹಿತವಾಗಿಯೇ ತೆಗೆದೆಸೆದೆ. ನಮ್ಮಿಬ್ಬರ ನಡುವೆ ನಿಂತಿದ್ದ ಅಸಹ್ಯವಾದ ಮೌನದ ಗೋಡೆಯನ್ನು ನೀನೇ ಕೆಡವಿದೆ. "ಮನು, ನಿನ್ನ ಪ್ರೀತಿಗೆ ನಾನು ಯೋಗ್ಯಳೆ ಅಲ್ಲ ಎನ್ನುತ್ತದೆ ಮನ. ನಿಜ ಹೇಳಬೇಕೆಂದರೆ ನಾನು ಕಳಂಕಿನಿ. ಎಂಜಲು ಮಾಡಲ್ಪಟ್ಟವಳು. ಬಲಾತ್ಕಾರಕ್ಕೆ ಗುರಿಯಾದವಳು.. ಪತಿತೆ" ಅರೆಕ್ಷಣ ನಿಲ್ಲಿಸಿದೆ. ಬಹುತರವಾಗಿ ನನ್ನ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಬೇಕು. ನಾನು ತುಟಿ ಎರಡು ಮಾಡಲಿಲ್ಲ. ನೀನು ಮುಂದುವರಿದೆ: "ಅದೊಂದು ದಿನ ಕಾಲೇಜಿನಲ್ಲಿ ಬೋರಾಯಿತೆಂದು ಒಬ್ಬಳೇ ಸಿನಿಮಾಕ್ಕೆ ಹೋಗಿದ್ದೆ.

ಸಿನಿಮಾ ಮಂದಿರದಲ್ಲಿ ಅಷ್ಟೇನೂ ಜನದಟ್ಟಣೆಯಿರಲಿಲ್ಲ. ಖಾಲಿ ಹೊಡೆಯುತ್ತಿತ್ತೆಂದರೂ ತಪ್ಪಲ್ಲ. ಮಧ್ಯೆ ಕರೆಂಟು ಹೋಯಿತು. ಜನರೆಲ್ಲಾ ಎದ್ದು ಹೊರಹೋಗ ಹತ್ತಿದ್ದರು. ನಾನೂ ಎದ್ದೆ, ಯಾರೋ ನನ್ನನ್ನು ಬಿಗಿಯಾಗಿ ತಬ್ಬಿಕೊಂಡರು... ಆತ ನನ್ನನ್ನು ಉದ್ರೇಕಿಸಲು ಏನೆಲ್ಲಾ ಪ್ರಯತ್ನಮಾಡಿದ. ನಾನೇನೂ ಮಾಡಲಾರದವಳಾಗಿದ್ದೆ. ಅವನ ತುಟಿಗಳು ನನ್ನ ಅಧರೋಷ್ಠಿಗಳನ್ನು ಬಂಧಿಸಿದ್ದುದರ ಜೊತೆಗೆ ಕರವಸ್ತ್ರವು ನನ್ನ ಬಾಯನ್ನು ಕಟ್ಟಿತ್ತು. ಕೊಸರಾಡಿದೆ, ಮಿಸುಕಾಡಿದೆ ಅವನ ಕಬಂಧ ಬಾಹುವಿನಲ್ಲಿ ಅದಮ್ಯ ಸತ್ವವಿತ್ತು. ಅದರಲ್ಲಿ ಸಿಲುಕಿ ನುಗ್ಗಾದೆ, ನಲುಗಿದೆ. ಆದರೆ... ಅಷ್ಟರಲ್ಲೇ ಕರೆಂಟು ಬಂದಿದ್ದರಿಂದ ಅವನು ಅಷ್ಟಕ್ಕೆ ತೃಪ್ತಿಪಡಬೇಕಾಯಿತು. ಜನರ ನಡುವೆ ನುಸುಳಿ ತಪ್ಪಿಸಿಕೊಂಡು ಬಿಟ್ಟ. ನಾನಂತೂ ಕೂಗಲೂ ಅಸಮರ್ಥಳಾಗಿದ್ದೆ. ಕುರ್ಚಿಯಲ್ಲೇ ಕುಸಿದು ಕುಳಿತೆ... ಏನೇ ಆದರೂ ನನ್ನ ಮೈಸವಿಯನ್ನು ಅವನಿಗುಣಿಸಿದ ಪಾಪ ನನ್ನನ್ನು ದಹಿಸುತ್ತಿದೆ ಮನು, ನಿನ್ನ ಮಂಜುಳಗಾನವನ್ನು ನುಡಿಸುವ ಕೊಳಲಿನ ಸುಶ್ರಾವ್ಯ ಸ್ವರಕ್ಕೆ ಸರಿಸಮನಾದ ಶ್ರುತಿ ನಾನಾಗಲಾರೆ. ನನ್ನನ್ನು ಕ್ಷಮಿಸಿಬಿಡು" ನಿನ್ನ ಕಂಠ ಬಿಗಿಯಿತು. ಕಣ್ಣಲ್ಲಿ ನೀರು ಜಿನುಗಿತು.

ನಾನೆಂದೆ: "ಅನು, ಅದೇನೂ ದೊಡ್ಡ ವಿಷಯ ವಲ್ಲ, ಸೂರ್ಯನ ಕಿರಣಗಳ ಸ್ಪರ್ಶ ಹೂವಿಗೆ ಆಗುತ್ತದೆ. ದುಂಬಿಗಳು ಮಕರಂದ ಹೀರುತ್ತವೆ. ಅದೇ ಹೂವನ್ನು ಒಬ್ಬ ಹೆಂಗಸು ಸೌಂದರ್ಯದ ಗುರುತಾಗಿ ತನ್ನ ಮುಡಿಗೇರಿಸಿಕೊಳ್ಳಬಹುದು. ಭಕ್ತಿಯ ಕುರುಹಾಗಿ ದೇವರಿಗೆ ಸಮಾಜದಲ್ಲಿ ಗಣ್ಯವ್ಯಕ್ತಿ ಗಳೆಂದು ಕರೆಸಿಕೊಳ್ಳುವವರಿಗೆ ಗೌರವದ ಸೂಚಕವಾಗಿ ನೀಡಬಹುದು. ಆಗೆಲ್ಲಾ ಹೂವು ಅಪವಿತ್ರವೆಂಬ ಭಾವನೆ ಬರುವುದು ಅಸಹಜ. ಹಾಗೆ ನಿನ್ನದು. ಮೇಲಾಗಿ ನೀನು ಹೇಳಿದ ಘಟನೆಯಲ್ಲಿ ನಿನ್ನ ಪಾತ್ರವೇನೂ ಇಲ್ಲವಲ್ಲ. ಸಮ್ಮತಿಯೂ ಇರಲಿಲ್ಲವಲ್ಲ ನಿನ್ನದು. ಹೀಗಿರುವಾಗ ಪೆಚ್ಚಿಗೆ ಭಾವುಕಳೇಕಾಗುವೆ? ಅತಿಯಾಗಿ ಸೆಂಟಿಮೆಂಟಲ್ ಆಗಿರುವುದು ಅಪಾಯವೇ. ಟೂ ಮಚ್ ಈಸ್ ಟೂ ಬ್ಯಾಡ್ ಅಂತಾರಲ್ಲ ಹಾಗೆ. ನಿನ್ನಿಂದ ಈ ಪೂರ್ವದಲ್ಲಿ ಯಾವುದೇ ತಪ್ಪಾಗಿದ್ದರೂ, ನೀನು ಏಡಿ ದರೂ ಮರೆಯಲು, ಕ್ಷಮಿಸಲು ನಾನಂತೂ ಸಿದ್ಧ" ದಾರ್ಶನಿಕನ ಧಾಟಿಯಲ್ಲಿ ಮಾತಾಡಿದೆ.

ನಿನ್ನ ಮುಖ ಬೆಳಗಿತು. ಸಹಜ ಅಂತಃಸ್ಫೂರ್ತಿ ಜಾಗೃತವಾದವಳಂತೆ ನೀನು ನನ್ನ ಮೇಲೆರಗಿದೆ. ನನಗೆ ಉಸಿರಾಡಲೂ ಅವಕಾಶ ವಿಡದೆ ಲೊಚ ಲೊಚನೆ ಅಧರಾಮೃತಪಾನ ಮಾಡಿಸಿದೆ. ನನ್ನ ತಲೆಯನ್ನು ನಿನ್ನೆದೆಗೆ ಗಟ್ಟಿಯಾಗಿ ಒತ್ತಿಕೊಂಡೆ. ಹಿತವಾಗಿ ಮುಲುಗಿದೆ. ನನ್ನ ಸಾರಸರ್ವಸ್ವವನ್ನೆಲ್ಲಾ ಹೀರಿ ನಿನ್ನ ದೇಹದೊಳಗೆ ತುಂಬಿಸಿಕೊಂಡು ಹೊಸರೂಪ ಪಡೆಯುವವಳಂತೆ, ನಿನ್ನ ಹುರುಳನ್ನೆಲ್ಲಾ ನನಗೆ ವರ್ಗಾಯಿಸುವವಳಂತೆ ನೀನು ನಡೆದುಕೊಂಡೆ ಬಣ್ಣಬಣ್ಣದ ಉಡುಪು ತೊಟ್ಟು ನಿಂತಿದ್ದ ಗೌರವರ್ಣದ ನೀನು ಕಾಮನಬಿಲ್ಲಿನ ನೆನಪು ಮೂಡಿಸಿದೆ. ಯಾರದೋ ಅಸ್ಪಷ್ಟ ಆಕೃತಿ ಕೆಮ್ಮಿನ ಸದ್ದಿನೊಂದಿಗೆ ದೂರದಲ್ಲಿ ಬರುತ್ತಿರುವುದು ಕಾಣಿಸಿ "ಸಿಗೋಣ" ಎಂದು ಹೇಳಿ ನೀನು ಲಗುಬಗೆಯಿಂದ ಹೊರಟೇಹೋದೆ; ಕಾಲಿನ ಗೆಜ್ಜೆಯ ನಾದ, ಹೆಜ್ಜೆಯ ಸದ್ದನ್ನು ಮಾತ್ರ ಕೇಳಲು ಬಿಟ್ಟು. ಅಡಿಕೆ ಮರಗಳ ನೆರಳಿನಲ್ಲಿ ನೀನೊಂದು ನೆರಳಾದೆ. ಆ ನೆರಳಿನಲ್ಲಿ ಒಂದಾದೆ. ಕಗ್ಗತ್ತಲೆಯ ಗರ್ಭದಲ್ಲಿ ಭ್ರೂಣವಾದೆ.

ಹತ್ತಿರ ಬಂದ ಆಕೃತಿ ನಮ್ಮ ತಂದೆಯವರದೇ. "ಏನೋ ಮಾಣೀ ಇನ್ನು ಮನೆ ಸೇರೋಕಾಗ್ಲಿಲ್ವಾ?" ಎಂದಾಗ ಮನಸ್ಸಿಲ್ಲದಿದ್ದರೂ ನಡೆಯತೊಡಗಿದೆ. "ಆದ್ಯಾರೋ, ನಿನ್ನತ್ರ ಮಾತ್ನಾಡ್ತಾ ಇದ್ದೋರು?" ಎಂಬ ಮಾತು ಕೇಳಿದರೂ ಕೇಳದವನಂತೆ ಅಲಕ್ಷ್ಯದಿಂದ ಸಾಗಹತ್ತಿದೆ. ವಿಷಯ ಮರೆಸಲು ಮನೆಯ ಸಂಗತಿಯ ಬಗ್ಗೆ ಮಾತಾಡಲು ಸುರುಮಾಡಿದೆ.

ಅನು... ನನ್ನ ಮುಂದಿರುವ ಸಮಸ್ಯೆ ಒಂದೇ ಈಗ. ಭಾವೋದ್ವೇಗಕ್ಕೆ ಗುರಿಯಾಗಿ ನಾನೇನೋ ನಿನಗೆ ಮಾತುಕೊಟ್ಟೆ. ಸಿನಿಮಾದ ಸಮಾಜ ಸುಧಾರಕನಂತೆ ಡೈಲಾಗ್ ಹೊಡೆದ ಸ್ಟೈಲಾಗಿ. ನಿನ್ನನ್ನೇ ವರಿಸುವೆನೆಂದು. ಮನಸ್ಸೇನೊ ಇದೆ. ಆದರೆ... ನಿಜವಾಗಿಯೂ ಹಾಗೆ ಮಾಡುವೆನೇ? ನನ್ನ ನಿನ್ನ ತಂದೆಯರನ್ನು ಎದುರಿಸಬಲ್ಲೆನೇ? ಜಯ ಹೊಂದುವೆನೇ? ಅಥವಾ ಒತ್ತಡಕ್ಕೆ ಮಣಿಯುವೆನೇ? ಕಾಲದ ಬಸಿರಿನಲ್ಲಿ ಅಡಗಿರುವ ರಹಸ್ಯ..... ಕಾಲವೇ ಇದಕ್ಕೆ ಸಮಜಾಯಿಷಿ ನೀಡಬೇಕು.

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1) ಅಜ್ಞೇಯ
ಅ) ತಿಳಿಯಲಸಾಧ್ಯ
ಆ) ಅಪ್ಪಣೆ ಪಾಲಿಸುವುದು
ಇ) ಬೆಂಕಿಯಂಥ
ಈ) ಪೂರ್ವ ದಕ್ಷಿಣಗಳ ನಡುವಣ ದಿಕ್ಕು

2) ಇಷ್ಟಾಲಾಪ
ಅ) ಸಂಗೀತದ ಒಂದು ಪದ್ಧತಿ
ಆ) ತಲೆಹರಟೆ
ಇ) ಪ್ರೀತಿಯ ಮಾತು
ಈ) ಬಾಣ ಹೊಡೆಯುವುದು

3) ತೋಪು
ಅ) ದೊಡ್ಡ ಬಂದೂಕು
ಆ) ಹಸಿರೆಲೆಯ ರಾಶಿ
ಇ) ಮರಗಳ ಗುಂಪು
ಈ) ಸೆರಗು

4) ಖೋಡಿ
ಅ) ಮೂಲೆ
ಆ) ದುರುಳ
ಇ) ನಕಲಿ
ಈ) ಒಂಟಿ

5) ಇರಸಾಲು
ಅ) ತುಂತುರು ಮಳೆ
ಆ) ಹೊಳೆಯ ದಂಡೆಯ ಗದ್ದೆ
ಇ) ಎರಡು ವರ್ಷ
ಈ) ವಾರ್ಷಿಕ ಕಂದಾಯ

6) ಚಾವಡಿ
ಅ) ಅಗಲವಾದ ಜಗಲಿ
ಆ) ಒಂದು ಉಗ್ರ ದೇವತೆ
ಇ) ಮನೆಯ ಮೇಲು ಹೊದಿಕೆ
ಈ) ಒಂದು ಬಗೆಯ ಹಾಡು

7) ನಿಸ್ತ್ರಿಂಶ
ಅ) ಕ್ರೂರ
ಆ) ಮದುವೆ ಇಲ್ಲದವ
ಇ) ಮೂವತ್ತು ವಯಸ್ಸಿನ
ಈ) ಹೆಣ್ಣನ್ನು ಪೀಡಿಸುವಾತ

8) ನುಜುಗು
ಅ) ಹುಳು
ಆ) ಕ್ಷುಲ್ಲಕ
ಇ) ಪುಡಿಯಾಗು
ಈ) ಒಂದು ತರಕಾರಿ

9) ಪರಾವೃತ್ತ
ಅ) ಪಾಪಕ್ಕೆ ಪರಿಹಾರ
ಆ) ಉಪಕಾರ
ಇ) ಮುಪ್ಪಿನವ
ಈ) ಹಿಂತಿರುಗಿದ

10) ಕೂಜನ
ಅ) ಗಟ್ಟಿಯಾಗಿ ಒದರುವುದು
ಆ) ನೀರು ತುಂಬುವ ಕೊಂಬು ಗಿಂಡಿ
ಇ) ಕೂಗು
ಈ) ನಿಂದೆ

11) ಖೋಟಾ
ಅ) ಕೃತ್ರಿಮ
ಆ) ಕುದುರೆಯ ಒಂದು ಜಾತಿ
ಇ) ದಪ್ಪವಾದ ಅಂಗಿ
ಈ) ಕಡಿಮೆ

12) ಕೂಚು
ಅ) ದಡ್ಡತನ
ಆ) ತಂಡದ ಚಲನೆ
ಇ) ಅಲ್ಪತನ
ಈ) ಚಾಡಿ ಪೋಕತನ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1) ಅಜ್ಞೇಯ

ಅ) ತಿಳಿಯಲು ಅಸಾಧ್ಯ. ಉದಾ:- ಪರಮಾತ್ಮನ ಸ್ವರೂಪ ಅಜ್ಞೇಯವಾದದ್ದು. (ಸಂ.ಅ = ಅಲ್ಲ+ಜ್ಞೇಯ= ತಿಳಿಯಲು ಸಾಧ್ಯ= ಜ್ಞಾ= ತಿಳಿ)

2) ಇಷ್ಟಾಲಾಪ

ಇ) ಪ್ರೀತಿಯ ಮಾತು. ಇಬ್ಬರಿಗೂ ಇಷ್ಟವಾಗುವ ಮಾತುಕತೆ. ಸುಖ ಸಂಕಥೆ. ಉದಾ:- ಇಷ್ಟಾಲಾಪದಲ್ಲೇ ಬೆಳಗಾಯಿತು (ಸಂ.ಇಷ್ಟ = ಮೆಚ್ಚಿದ+ಆ+ಲಾಪ = ಹಗುರಾದ ಮಾತುಕತೆ)

3) ತೋಪು

ಇ) ಮರಗಳ ತೋಟ, ಕೊಪ್ಪಲು ಉದಾ:- ಮಾವಿನ ತೋಪಿನಲ್ಲಿ ಗುಟ್ಟಾಗಿ ಸೇರುತ್ತಿದ್ದರು. (ದೇಶ್ಯ)

4) ಖೋಡಿ

ಅ) ದುರುಳ, ತಂಟೆಕೋರ, ದುರುಳತನ, ಕೇಡಿತನ, ಕಿಡಿಗೇಡಿ, ಕಿಡಿಗೇಡಿತನ. ಉದಾ:- ಈ ಖೋಡಿ ಹುಡುಗನ್ನ ಏನು ಮಾಡೋಣ? (ಮರಾಠಿ-ಸಂ. ಗೋಷ್ಠ = ಹೊಟ್ಟು ಪೌರುಷ)

5) ಇರಸಾಲು

ಈ) ವಾರ್ಷಿಕವಾಗಿ ಸಲ್ಲತಕ್ಕ ಕಂದಾಯ. ಕಂದಾಯದ ಕಂತು. ಉದಾ:- ಇರಸಾಲು ಕಟ್ಟುವುದು (ಅರಬ್ಬಿ-ಇರಸಾಲ್ = ಕಳಿಸತಕ್ಕದ್ದು)

6) ಜಾವಡಿ

ಈ) ಶೃಂಗಾರ ರಸ ಪ್ರಧಾನವಾದ ಹಾಡು. ಜಾವಳಿಯೆಂದೂ ಹೇಳುತ್ತಾರೆ. ಉದಾ:- ಜಾವಳಿಯಿಂದ ಕಚೇರಿ ಮುಕ್ತಾಯವಾಯಿತು. (ದೇಶ್ಯ)

7) ನಿಸ್ತ್ರಿಂಶ

ಅ) ಕ್ರೂರ, ಕಠೋರ, ನಿರ್ದಯ, ಕತ್ತಿ, ಖಡ್ಗ, ಉದಾ:- ನಿಸ್ತ್ರಿಂಶನಾದ ಮನುಷ್ಯ (ಸಂ)

8) ನುಜುಗು

ಅ) ಕ್ಷುಲ್ಲಕ, ಕ್ಷುದ್ರ, ಸಾಮಾನ್ಯ. ಉದಾ:- ಈ ನುಜುಗು ಪ್ರಾಣಿಗೆ ಅಂಜುವೆನೆ? (ದೇ. ನುರ್ಗು - ನುರಿ)

9) ಪರಾವೃತ್ತ

ಈ) ಹಿಂದಿರುಗಿದ, ಹಿಂಜರಿದ, ಹಿಮ್ಮೆಟ್ಟಿದ ಉದಾ:- ದುಷ್ಕರ್ಮದಿಂದ ಪರಾವೃತ್ತನಾಗು. (ಸಂ. ಪರ = ಹಿಂದೆ+ಆವೃತ್ತಿ = ತಿರುಗಿದ)

10) ಕೂಜನ

ಇ) ಕೂಗು, ಪಕ್ಷಿಗಳ ಅಥವಾ ಅದರಂಥ ಕೀರಲೂ, ಮಧುರವೂ ಆದ ಧ್ವನಿ. ಆನಂದದ ಧ್ವನಿ. ಉದಾ:- ಕೋಕಿಲ ಕೂಜನ (ಸಂ)

11) ಖೋಟಾ

ಅ) ಕೃತ್ರಿಮ, ನಕಲಿ, ಮೋಸದ, ಖೊಟ್ಟಿ. ಉದಾ:- ಖೋಟಾಮಾಲು (ಹಿಂದಿ)

12) ಕೂಚು

ಅ) ತಂಡ ಅಥವಾ ಸೈನ್ಯದ ಚಲನೆ, ವ್ಯವಸ್ಥಿತವಾಗಿ ಸಾಲಾಗಿ ನಡೆಯುವಿಕೆ, ಮಾರ್ಚ್ (ಇಂಗ್ಲೀಷ್) ಉದಾ:- ಸ್ವಯಂ ಸೇವಕರ ಕೂಚು (ಫಾರಸಿ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಯದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದ ಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ.... ಸಾಧಾರಣ
9-10 " .... ಉತ್ತಮ
11-12 " .... ಅತ್ಯುತ್ತಮ

‘ಆದರ್ಶ ರಾಜ್ಯ’ದ ಥಾಮಸ್ ಮೋರ್

ಎಸ್.ಬಿ. ಖೋದಾನಪುರ

ಹೆಣ್ಣಿಗಾಗಿ ಮಿತ್ರರಲ್ಲಿ ಜಗಳ ಸಂಭವಿಸಿ ಅನಾಹುತಗಳಾದ ಪ್ರಸಂಗಗಳು ಇತಿಹಾಸದಲ್ಲಿ ಸಾಕಷ್ಟಿವೆ. ಇದರಿಂದ ಎಷ್ಟೋ ಸಲ ಭಾರಿ ಯುದ್ಧಗಳೂ ಸಂಭವಿಸಿದ್ದುಂಟು. ಇಂಥ ಜಗಳಕ್ಕೆ ಬಲಿಯಾಗಿ ಮಿತ್ರನಿಂದಲೇ ಕೊಲ್ಲಲ್ಪಟ್ಟವರಲ್ಲಿ ‘ಯುಟೋಪಿಯಾ’ (ಆದರ್ಶ ರಾಜ್ಯ) ಗ್ರಂಥದ ಕರ್ತೃ ಥಾಮಸ್ ಮೋರ್‌ನೂ ಒಬ್ಬ.

ಗ್ರೀಕ್ ದಾರ್ಶನಿಕ ಪ್ಲೇಟೋನ ಆದರ್ಶವನ್ನು ಆಧುನಿಕ ಸಾಮಾಜಿಕ ತತ್ವಜ್ಞಾನದಲ್ಲಿ ಅಳವಡಿಸಲು ಬಹಳ ಪ್ರಯತ್ನಿಸಿದ ಥಾಮಸ್ ಮೋರ್ ಇಂಗ್ಲೆಂಡಿನ ದೊರೆ ಎಂಟನೆಯ ಹೆನ್ರಿಯ ಪರಮಮಿತ್ರ. ಹೆನ್ರಿ ಅರಗಾನಿನ ಕಾಥರಿನ್‌ಳನ್ನು ಮದುವೆಯಾಗಿದ್ದ. ಆದರೆ ನಂತರ ಅವಳಿಂದ ವಿಚ್ಛೇದನ ಪಡೆಯಲಿಚ್ಛಿಸಿ ಅನುಮತಿಗಾಗಿ ಪೋಪ್‌ರನ್ನು ಕೇಳಿಕೊಂಡ. ಪೋಪರು ತಮ್ಮ ನಿರ್ಣಯ ಕೊಡುವಲ್ಲಿ ತಡಮಾಡಿದಾಗ ಅವರ ಅಧಿಕಾರವನ್ನೇ ಮೊಟಕುಗೊಳಿಸಿದ. ರೋಮ್ ಮತ್ತು ಇಂಗ್ಲೆಂಡಿನ ಚರ್ಚುಗಳ ನಡುವೆ ತಾತ್ತ್ವಿಕ ಅಂತರ ಹೆಚ್ಚುತ್ತಾ ಅವು ಬೇರೆ ಬೇರೆಯಾದದ್ದು ಈ ನ್ಯಾಯ ಸಂಬಂಧಕ್ಕಾಗಿ.

ಪೋಪ್‌ರ ಅಧಿಕಾರ ಮೊಟಕುಗೊಳಿಸಿದ ನಂತರ ಹೆನ್ರಿ ತನ್ನ ವಿದೇಶ ಸಚಿವನಾಗಿದ್ದ ಮೋರ್‌ನನ್ನೇ ಧರ್ಮೋಪದೇಶಕನೆಂದು ನೇಮಿಸಿದ. ಆದರೆ ಆದರ್ಶವಾದಿಯಾಗಿದ್ದ ಮೋರ್ ಮಿತ್ರನ ವಿವಾಹ ವಿಚ್ಛೇದನಕ್ಕೆ ಅನುಮತಿ ಕೊಡಲಿಲ್ಲ. ಅದರ ನಂತರ ಕ್ಯಾಂಟರ್‌ಬರಿಯ ಅರ್ಚಕ ಬಿಶಪ್‌ನಾಗಿ ಅಧಿಕಾರ ವಹಿಸಿಕೊಂಡ. ಥಾಮಸ್ ಕ್ರಾನರ್ ಮಾಡಿದ ಮೊದಲ ಕೆಲಸವೆಂದರೆ ಹೆನ್ರಿ ದೊರೆಯ ವಿವಾಹ ವಿಚ್ಛೇದನಕ್ಕೆ ಅನುಮತಿ ನೀಡಿದ್ದು ಮತ್ತು ಆನ್ ಎಂಬುವಳನ್ನು ಹೆನ್ರಿ ಮದುವೆಯಾದದ್ದು ನ್ಯಾಯಬದ್ಧವೆಂದು ತೀರ್ಮಾನಿ

ಸಿದ್ದು. ಹೀಗಾಗಿ ಅನ್ ಪಟ್ಟದ ರಾಣಿಯಾದಳು. ಮೊದಲೇ ಮೋರ್‌ನನ್ನು ದ್ವೇಷಿಸುತ್ತಿದ್ದ ಅವಳು ಈಗ ಅವನನ್ನು ಬಂಧಿಸಿ ಸೆರೆಮನೆಗೆ ತಳ್ಳಿದಳು. ಇದೆಲ್ಲಾ ನಡೆದದ್ದು 1553 ರಲ್ಲಿ. ಮುಂದೊಂದು ವರ್ಷದಲ್ಲೇ ಹೆನ್ರಿ ಅಕ್ಟ್ ಆಫ್ ಸುಪ್ರಿಮಸಿ ಮಂಡಿಸಿ ತಾನೇ ಇಂಗ್ಲಂಡಿನ ಚರ್ಚಿನ ಮುಖ್ಯಸ್ಥನೆಂದು ಘೋಷಿಸಿಕೊಂಡ. ಇದನ್ನು ಮೋರ್ ವಿರೋಧಿಸಿದಾಗ ಹೆನ್ರಿ ತನ್ನ ಹೆಂಡತಿಯ ಒತ್ತಾಸೆಗೆ ಮಣಿದು ಅವನನ್ನು ಗಲ್ಲಿಗೇರಿಸಿದ. ಆದರ್ಶ ರಾಜ್ಯದ ಕನಸು ಕಂಡ ಮೋರ್ ಈ ರೀತಿ ದುರ್ಮರಣವನ್ನಪ್ಪಿದ್ದು ದುರ್ದೈವದ ಸಂಗತಿ.

ಸಾಧುಸಂತರಂತಿದ್ದ ಥಾಮಸ್ ಮೋರ್‌ನಲ್ಲಿ ಹಾಸ್ಯ ಪ್ರವೃತ್ತಿಯೂ ಬೆಳೆದು ಬಂದಿತ್ತು. ವಧಾಸ್ತಂಭದಲ್ಲಿ ಕಟುಕರವನ ಕೈಯಲ್ಲಿ ತನ್ನ ಕುತ್ತಿಗೆ ಕೊಟ್ಟಾಗ ತನ್ನ ಉದ್ದವಾದ ಗಡ್ಡ ಯಾವ ತಪ್ಪೂ ಮಾಡಿಲ್ಲವೆಂದು ಅದನ್ನು ಎತ್ತಿಹಿಡಿದು ಕುತ್ತಿಗೆಯನ್ನಷ್ಟೇ ಮುಂದೆ ಚಾಚಿದ್ದುಂಟು. ಅವನ ಗ್ರಂಥ ಯುಟೋಪಿಯಾದಲ್ಲಿ ಆದರ್ಶವೂ ಇದೆ. ಸಮಕಾಲೀನ ಪರಿಸ್ಥಿತಿಯ ವಿಡಂಬನೆಯೂ ಇದೆ. ಇದನ್ನೆಲ್ಲಾ ಕಾಲ್ಪನಿಕ ಪ್ರವಾಸಿ ರಾಫರ್ ಹಿಥಲ್ಲೇ ನುಡಿಸಿದ್ದಾನೆ. "ಧರ್ಮ ಸಹಿಷ್ಣುತೆಗೆ ಮೋರ್ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದ್ದಾನೆ. ಆದರ್ಶ ರಾಜ್ಯದಲ್ಲಿ ನಿರುದ್ಯೋಗಕ್ಕೆ ಬಡತನಕ್ಕೆ ಆಸ್ಪದವಿಲ್ಲ. ಸಹಕಾರ ಮತ್ತು ಒಕ್ಕಲುತನಕ್ಕೆ ಹೆಚ್ಚು ಮಹತ್ವ. ಕೋಟಿ ವಿದ್ಯೆಯಲ್ಲಿ ಮೇಟಿ ವಿದ್ಯೆಯೇ ಮೇಲು ಎನ್ನುವ ವಿಶ್ವಾಸ ಇವನಿಗೆ. 'ಕಾಯಕವೇ ಕೈಲಾಸ' ಎಂದು ನಂಬಿದ ಥಾಮಸ್ ಮೋರ್. ಪ್ರತಿಯೊಬ್ಬನೂ ಕೆಲಸ ಮಾಡಬೇಕು. ನಿರುದ್ಯೋಗ ಸಮಸ್ಯೆ ಕಾಣಿಸಿಕೊಂಡಾಗ ಒಬ್ಬನ ಕೆಲಸದ ಅವಧಿಯನ್ನು ಕಡಿಮೆ ಮಾಡಿ ಇನ್ನೊಬ್ಬನಿಗೆ ಉದ್ಯೋಗಾವಕಾಶ ದೊರಕಿಸಿ ಕೊಡಬೇಕೆಂಬುದು ಮೋರ್‌ನ ಸಲಹೆ.

ಶಿಕ್ಷಣವು ಕಡ್ಡಾಯವಾಗಿರಬೇಕು. ಶಿಕ್ಷಣ ಪ್ರಸಾರವು ಅನೇಕ ಸಮಸ್ಯೆಗಳಿಗೆ ರಾಮಬಾಣ. ಅದಕ್ಕಾಗಿ ಆತ ಸ್ತ್ರೀ ಶಿಕ್ಷಣಕ್ಕೆ ಅಡಿಪಾಯವನ್ನು ಹಾಕಿದ. ವಾಚನಾಭಿರುಚಿ ಬೆಳೆಸಿಕೊಂಡಂತೆ ಮತಿ ನಿಶಿತವಾಗುತ್ತದೆ. ಹೃದಯ ವಿಶಾಲವಾಗುತ್ತದೆ. ಇದರಿಂದ ಆತ್ಮೋನ್ನತಿ ಸಿದ್ಧಿಸುತ್ತದೆ ಎಂದು ನಂಬಿದ್ದ ಥಾಮಸ್ ಮೋರ್.

ಅವನಲ್ಲಿ ವಿಚಾರ ಶ್ರೀಮಂತಿಕೆಯೊಂದಿಗೆ ಆಚಾರ ಶ್ರೀಮಂತಿಕೆಯೂ ಇತ್ತು. ಯುದ್ಧ ಪಶುಗಳ ಕೆಲಸವೆಂಬುದು ಅವನ ಅಭಿಪ್ರಾಯ.

ಒಂದು ಸಾವಿರ ನಾಲ್ಕುನೂರಾ ಎಪ್ಪತ್ತೆಂಟು (1478) ಫೆಬ್ರುವರಿ 7 ರಂದು ಮಿಲ್ಕ್ ಸ್ಟ್ರೀಟ್ ಚೀಫ್ ಸೈಡ್ ಎನ್ನುವಲ್ಲಿ ಜನ್ಮ ತಾಳಿದ ಥಾಮಸ್ ಮೋರ್ ನ್ಯಾಯಾಧೀಶನಾಗಿದ್ದ ತಂದೆಯ ಒತ್ತಾಯಕ್ಕೆ ಮಣಿದು ಕಾಯ್ದೆ ಅಭ್ಯಾಸವನ್ನು ಮಾಡಿದ. ಸಾಹಿತ್ಯವನ್ನು ಓದಿದ. ಗ್ರೀಕ್, ಫ್ರೆಂಚ್ ಸಾಹಿತ್ಯವನ್ನಲ್ಲದೆ ಇತಿಹಾಸ, ಗಣಿತವನ್ನು ಅವನು ಆಳವಾಗಿ ಅಭ್ಯಾಸ ಮಾಡಿದ.

ನಾಲ್ಕುವರ್ಷ ಸಂತನಾಗಿ ಕಾರ್ಯ ಮಾಡಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಗಟ್ಟಿಯಾದ ಅಡಿಪಾಯವನ್ನು ನಿರ್ಮಾಣ ಮಾಡಿದ. ಕೇವಲ ಐದು ಗಂಟೆ ನಿದ್ದೆಮಾಡಿ, ಉಳಿದೆಲ್ಲ ಸಮಯವನ್ನು ಪ್ರಾರ್ಥನೆ ಮತ್ತು ಧ್ಯಾನದಲ್ಲಿ ಸದುಪಯೋಗ ಮಾಡುತ್ತಿದ್ದ. ಆಧ್ಯಾತ್ಮಿಕ ಮಹತ್ವವನ್ನು ಜನರ ಮನಸ್ಸಿನಲ್ಲಿ ಮೂಡಿಸಲು ಸಾಕಷ್ಟು ಶ್ರಮ ವಹಿಸಿದ. ಈ ಮಧ್ಯೆ ಅವನು ಕೆಲ ವಿಡಂಬನಾತ್ಮಕ ಕವಿತೆಗಳನ್ನು ಬರೆದಿದ್ದು, ಅವುಗಳಲ್ಲಿ ಗಾಂಭೀರ್ಯ ಮನೆಮಾಡಿದೆ.

ಚಿಕ್ಕ ವಯಸ್ಸಿನಲ್ಲಿಯೇ ತನ್ನ ಪ್ರಾಮಾಣಿಕತೆ ಪಾಂಡಿತ್ಯದಿಂದ ಜನಪ್ರಿಯನಾದ ಅವನು ಪಾರ್ಲಿಮೆಂಟಿಗೆ ಆರಿಸಿ ಬಂದು ಅತಿ ಚಿಕ್ಕ ವಯಸ್ಸಿನ ಸದಸ್ಯನೆನಿಸಿಕೊಂಡ. ಈ ಹಾಲುಗಲ್ಲದ ಹುಡುಗ ಪಾರ್ಲಿಮೆಂಟ್ ಸದಸ್ಯನಾದದ್ದನ್ನು ಕಂಡು ಜನ ಚೇಷ್ಟೆ ಮಾಡಿದ್ದುಂಟು. ಅದೇ ಸಮಯಕ್ಕೆ ಅವನ ಪಾಂಡಿತ್ಯ ಕಂಡು ತಲೆದೂಗಿದ್ದೂ ನಿಜ.

ಏಳನೆಯ ಹೆನ್ರಿಯ ಹಣಕಾಸಿನ ಮಸೂದೆಗೆ ಮೋರ್ ಕಡು ವಿರೋಧ ವ್ಯಕ್ತಪಡಿಸಿದ್ದು ಅನೇಕರು ಬೆರಳು ಕಚ್ಚುವಂತಾಯಿತು. ಅರಸನ ಪ್ರಿವಿ ಚೇಂಬರಿನ ಮೇಸ್ಟರ್ ಟೈಲರ್ "ಈ ಹಾಲುಗಲ್ಲದ ಹುಡುಗನಿಂದ ಪೂರ್ಣ ನಿರಾಶೆ ಹೊಂದಬೇಕಾಯಿತು" ಎಂದು ದೊರೆಗೆ ವರದಿ ಒಪ್ಪಿಸಿದ.

ನಂತರ ಸ್ಪೀಕರ್, ಲಾರ್ಡ್ ಚಾನ್ಸಲರ ಮುಂತಾದ ಕಾರ್ಯಗಳನ್ನು ಉತ್ತಮ ರೀತಿಯಿಂದ ನಿರ್ವಹಿಸಿದ್ದಕ್ಕಾಗಿ ಅವನಿಗೆ "ನೈಟ್ ಹುಡ್" ಬಿರುದು ದಯಪಾಲಿಸಲ್ಪಟ್ಟಿತು. ಶಾಸನ ಸಭೆಯಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ಯೋಗ್ಯ ಸ್ಥಾನ ಸಿಗುವಲ್ಲಿ ಥಾಮಸ್

ಮೋರ್‌ನ ಪಾತ್ರ ಹಿರಿಯದು. ಮೋರ್‌ನನ್ನು ಯುರೋಪಿಯನ್ ಸಂಸ್ಕೃತಿಯ ಮತ್ತು ವೈಭವದ ಪ್ರತೀಕದಂತಿದ್ದ ಇರ್ಯಾಸಮಸ್‌ನು ಇಂಗ್ಲೆಂಡಿನ ಅಸಾಧಾರಣ ಪ್ರತಿಭಾಶಾಲಿ ಎಂದು ಕರೆದಿದ್ದಾನೆ.

1505ರಲ್ಲಿ ಜೇನ ಕಾಲ್ಟಳನ್ನು ಮದುವೆಯಾದ ಮೋರ್ ನಾಲ್ಕು ಮಕ್ಕಳ ತಂದೆಯಾಗಿದ್ದ. ಕಾಲ್ಟಳ ಮರಣದ ನಂತರ ಅವನು ಮರುಮದುವೆ ಮಾಡಿಕೊಂಡಿದ್ದ. ಅವನ ವೈವಾಹಿಕ, ಕೌಟುಂಬಿಕ ಜೀವನ ಸುಖಕರವಾಗಿತ್ತು.

ನ್ಯಾಯವಾದಿ ಧಾರ್ಮಿಕ ಪ್ರವೃತ್ತಿಯುಳ್ಳ ಮತ್ತು ಬಡವರ ನಿಜವಾದ ಮಿತ್ರನಾದ ಮೋರ್‌ನ ಜೊತೆ ಸಮಯ ಕಳೆಯುವುದೆಂದರೆ ದೊರೆ ಎಂಟನೇ ಹೆನ್ರಿಗೆ ಬಹಳ ಸಂತೋಷ. ಆದ್ದರಿಂದ ಹೆಚ್ಚು ಹೆಚ್ಚು ವೇಳೆಯನ್ನು ಇಬ್ಬರೂ ಕೂಡಿಯೇ ಕಳೆಯುತ್ತಿದ್ದರು. ಗಣಿತದಿಂದ ಧರ್ಮ, ತತ್ವಜ್ಞಾನದವರೆಗೆ ಅವರಿಬ್ಬರ ಹರಟೆಯ ವಿಷಯಗಳಾಗಿರುತ್ತಿದ್ದವು. ದೇಹ ಎರಡು, ಜೀವ ಒಂದು ಎನ್ನುವಷ್ಟರ ಮಟ್ಟಿಗೆ ಅವರಿಬ್ಬರ ಗೆಳೆತನ ಬೆಳೆಯಿತು. ಆದರೆ ಈ ಮಿತ್ರತ್ವ ಯಾವುದೇ ಕ್ಷಣದಲ್ಲಿ ಮುರಿದುಬೀಳಬಹುದೆಂದು ಮೋರ್‌ನಿಗೆ ಗೊತ್ತಿತ್ತು. "ದೊರೆಯ ಸ್ನೇಹ ವಿಶ್ವಾಸಕ್ಕೆ ಯೋಗ್ಯವಾದುದಲ್ಲ. ಫ್ರಾನ್ಸ್ ದೇಶದಲ್ಲಿ ಒಂದು ಕೋಟೆ ದೊರೆಯುತ್ತದೆಂದರೆ ಇವನು (ದೊರೆ) ನನ್ನ ತಲೆ ಕತ್ತರಿಸಿ ಹಾಕಲೂ ಹಿಂಜರಿಯಲಾರ" ಎಂದು ಮೋರ್ ಹೇಳುತ್ತಿದ್ದ. ಧಾರ್ಮಿಕ ಕಾರಣಕ್ಕಾಗಿ ಬಂಧಿಸಲ್ಪಟ್ಟವರ ಸಲುವಾಗಿ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದ. ಮೋರ್‌ನು ಅವರ ವಿಮೋಚನೆಗೆ ತನ್ನನ್ನು ಅರ್ಪಿಸಿಕೊಂಡಿದ್ದ. ಆದರೆ ತಾನು ಅದೇ ಕಾರಣಕ್ಕಾಗಿ ಬಂಧಿಸಲ್ಪಟ್ಟು ಕೊಲ್ಲಲ್ಪಟ್ಟ. ಏತನ್ಮಧ್ಯೆ ಸೆರೆಮನೆಯಲ್ಲಿಯೇ ಅವನು ವಿಚಾರಾತ್ಮಕ ಪುಸ್ತಕ ಬರೆದಿದ್ದರಿಂದ ಲೇಖನಿ ಮತ್ತು ಬರೆಯುವ ಸಾಧನೆಗಳನ್ನೆಲ್ಲ ಕಸಿದುಕೊಳ್ಳಲಾಗಿತ್ತು. ಸದ್ಗುಣಿಗೆ ಬಹುಮಾನ ಸಿಗಲಿಕ್ಕಿಲ್ಲ. ಆದರೆ ನಿಶ್ಚಯವಾಗಿ ಸಮಾಧಾನ ಸಿಕ್ಕೇ ಸಿಗುತ್ತದೆ. ಅದಕ್ಕಿಂತ ದೊಡ್ಡ ಬಹುಮಾನ ಯಾವುದು? ●

ನೆನಪು

ನಮ್ಮ ತಂದೆಯವರು ಹೈಸ್ಕೂಲ್ ಓದುತ್ತಿರುವಾಗಿನ ವಿಷಯ. ಅವರೂ ಸೇರಿದಂತೆ ಸುಮಾರು ನಾಲ್ಕೈದು ವಿದ್ಯಾರ್ಥಿಗಳು ರಾಜಾರಾವ್ ಎಂಬುವರ ಬಳಿ ಪಾಠಕ್ಕೆ ಹೋಗುತ್ತಿದ್ದರಂತೆ. ರಾಜಾರಾವ್ ಮೇಷ್ಟರೇನಲ್ಲ. ಆದರೂ ಮಕ್ಕಳ ಮನಸ್ಸಿಗೆ ನಾಟುವಂತೆಯೂ, ಎಂದೆಂದು ಮರೆಯದಂತೆಯೂ ಪಾಠ ಹೇಳಿಕೊಡುವ ಕಲೆ ಅವರಿಗೆ ತಿಳಿದಿತ್ತೆಂಬುದಕ್ಕೆ ಈ ವಿಷಯವೇ ಸಾಕ್ಷಿ. ಚರಿತ್ರೆಯ ಪಾಠದಲ್ಲಿ ಬರುವ ಹದಿನಾಲ್ಕು ಜನ ಗೌರ್ನರ್‌ಗಳ ಹೆಸರನ್ನು ಹುಡುಗರು ಚೆನ್ನಾಗಿ ನೆನಪಿನಲ್ಲಿರಿಸಿಕೊಳ್ಳಲು ಈ ಕೆಳಗಿನಂತೆ ಶ್ಲೋಕ ರಚಿಸಿ ಹೇಳಿಕೊಟ್ಟಿದ್ದರಂತೆ.

ವಾರನ್ ಹೇಸ್ಟಿಂಗ್, ಕಾರನ್ ವಾಲೀಸ್।
ಸರ್ ಜಾನ್ ಷೋರ್, ವೆಲ್ಲೆಸ್ಲಿ ತಥಾ॥
ಸರ್ ಜಾರ್ಜ್ ಬಾರ್ಲೋ, ಲಾರ್ಡ್ ಮೆಂಟೋ।
ಲಾರ್ಡ್ ಹೇಸ್ಟಿಂಗ್, ಆಮರಷ್ಟಯಃ॥
ವಿಲಿಯಂ ಬೆಂಟಿಂಕ್, ಆಕ್ಲೆಂಡಶ್ಚ।
ಲಾರ್ಡ್ ಎಲೆನ್ ಬರೋ, ಹಾರ್ಡಿಂಜಯಃ॥
ಡಾಲ್ ಹೌಸಿ, ಕ್ಯಾನಿಂಗಶ್ಚ।
ಫೋರ್ಟೀನ್ ಗೌರ್ನರ್ ಸಮರ್ಪಣಂ॥

ರಾಜಾರಾವ್ ಈಗಿರುವರೋ ಇಲ್ಲವೋ ತಿಳಿದಿಲ್ಲ. ಆದರೆ ಎಂಬತ್ತು ವರ್ಷದ ನಮ್ಮ ತಂದೆ ಇವತ್ತಿಗೂ ಈ ಶ್ಲೋಕವನ್ನು ಚೆನ್ನಾಗಿ ನೆನಪಿನಲ್ಲಿರಿಸಿಕೊಂಡಿದ್ದಾರೆ.

ರಾಮಧ್ಯಾನಿ

ಕೈಗಾ ಅಣುವಿದ್ಯುತ್ ಸ್ಥಾವರ ವಿವಾದ: ಒಂದು ವಿವೇಚನೆ

ವಿದ್ಯುತ್ ಮತ್ತು

ಕೈಗಾ ಅಣುಸ್ಥಾವರ ವಿವಾದಕ್ಕೆ ಸಿಲುಕಿದೆ. ಈ ವಿವಾದದ ಹಿಂದೆ ಸಾಕಷ್ಟು ಕಾರಣಗಳಿದ್ದರೂ ಮುಖ್ಯವಾಗಿ ಹೆಚ್ಚುತ್ತಿರುವ ವಿದ್ಯುತ್ ಕೊರತೆ ಮತ್ತು ಬೇಡಿಕೆಗಳನ್ನು ನೀಗಲು ಅಣುಶಕ್ತಿಯೇ ಸಮರ್ಥ ಎಂಬುದೊಂದು ಅಭಿಪ್ರಾಯವಾದರೆ, ಈ ಅಣುಸ್ಥಾವರ ತುಂಬ ಅಪಾಯಕಾರಿ. ದುರಂತಗಳ ಸರಮಾಲೆಗೇ ಕಾರಣವಾಗುತ್ತದೆ ಎಂಬುದು ಮತ್ತೊಂದು ನಿಟ್ಟಿನ ಅಭಿಪ್ರಾಯ.

ಈವರೆಗೆ ಜಲ ಸಂಪನ್ಮೂಲವೇ ವಿದ್ಯುತ್ ಉತ್ಪಾದನೆಯ ಮೂಲವಾಗಿದ್ದುದು ಈಚಿನ ವರ್ಷಗಳಲ್ಲಿ ಕಾಲಕ್ಕೆ ಸರಿಯಾಗಿ ಬಾರದ ಮಳೆಯಿಂದಾಗಿ ಬರಿದಾಗುತ್ತಿರುವ ಜಲಾಶಯಗಳು ತಮ್ಮ ಸಾಮರ್ಥ್ಯದಷ್ಟು ವಿದ್ಯುತ್ ಉತ್ಪಾದಿಸಲೂ ಸಾಧ್ಯವಾಗದೆ ವಿದ್ಯುದುತ್ಪಾದನೆ ನಿತ್ಯದ ಸಮಸ್ಯೆಯಾಗುತ್ತಿದೆ. ವಿದ್ಯುತ್ ಪೂರೈಕೆಯಲ್ಲಿನ ಖೋತಾ ಹೆಚ್ಚುತ್ತಿರುವಂತೆ ಅದು ದುಬಾರಿಯುದೂ ಆಗುತ್ತಿದೆ.

ಸಾವಿರಾರು ವರ್ಷಗಳು ವಿದ್ಯುತ್ ಇಲ್ಲದೆ ಬದುಕುತ್ತ ಬಂದಿದ್ದ ಮಾನವ ಕಳೆದ ನೂರು ವರ್ಷಗಳ ಅವಧಿಯಲ್ಲೇ ತನ್ನ ಬದುಕನ್ನು ಇಡಿಯಾಗಿ ವಿದ್ಯುತ್ತಿನ ವೇಗಕ್ಕೆ ಒಡ್ಡಿಕೊಳ್ಳುತ್ತಿರುವುದು ಸುಸ್ಪಷ್ಟ. ವಿದ್ಯುತ್ ಇಲ್ಲದ ಒಂದು ದಿನದ ಬದುಕೂ ತಟಸ್ಥವಾಗಿಬಿಡುವಂತಾಗಿದೆ. ಇಷ್ಟು ಅನಿವಾರ್ಯವಾಗಿರುವ ವಿದ್ಯುತ್ ಉತ್ಪಾದನೆಗೆ ಅಣುಶಕ್ತಿಯೇ ಪರಿಹಾರವೇ? ಈ ವಿಷಯವನ್ನು ಹಲವು ನಿಟ್ಟಿನಿಂದ ಗಂಭೀರವಾಗೇ ಯೋಚಿಸಬೇಕಿದೆ. ಕೈಗಾ ಅಣುಸ್ಥಾವರ ರಾಜ್ಯದ ವಿದ್ಯುತ್ ಕೊರತೆಯನ್ನು ಎಷ್ಟರ ಮಟ್ಟಿಗೆ ನೀಗಿತು? ಇದು ತರಲಿರುವ ಅಪಾಯಗಳೆಂಥವು? ಈ ಎರಡು ಪ್ರಶ್ನೆಗಳಲ್ಲೇ ಈ ವಿವಾದದ ಎಲ್ಲ ಹಿನ್ನೆಲೆಗಳನ್ನೂ ನೋಡಬಹುದು.

ಕರ್ನಾಟಕದ ವಿದ್ಯುತ್ ಕೊರತೆ

ಕೆಲವೇ ವರುಷಗಳ ಹಿಂದೆ ದೇಶದಲ್ಲೇ ಹೆಚ್ಚು ವಿದ್ಯುತ್ತನ್ನು ಒಳಗೊಂಡಿದ್ದ ಕರ್ನಾಟಕ ಈಗ ತೀವ್ರ ವಿದ್ಯುತ್ ಕೊರತೆಯಲ್ಲಿ ಸಿಲುಕಿಕೊಂಡಿರುವುದೇಕೆ?

ಕಾರಣಗಳು ಸಾಕಷ್ಟಿವೆ. ಹೆಚ್ಚಿನದಾಗೇ ಕಂಡ ಜಲಸಂಪನ್ಮೂಲದಿಂದ ವಿದ್ಯುತ್ ಉತ್ಪಾದಿಸುವುದರೊಂದಿಗೇ ನೀರಾವರಿ ಯೋಜನೆಯ ಅಣೆಕಟ್ಟುಗಳು ನಿರ್ಮಾಣಗೊಳ್ಳುವಾಗ ಕೆಲವೆಡೆ ಯೋಜಕರು ಎಡವಿದರು. ಹೆಚ್ಚು ಜಲಸಂಗ್ರಹದ ನಿರೀಕ್ಷೆಯಲ್ಲಿ ಅಣೆಕಟ್ಟುಗಳನ್ನು ಅಳತೆಮೀರಿ ಕಟ್ಟಿ ಇವೆಲ್ಲಾ ಪೂರ್ಣಮಟ್ಟಕ್ಕೆ ತುಂಬಿಕೊಳ್ಳುತ್ತವೆಂದು ಕಾಗದದ ಮೇಲೆ ಅಂಕಿಸಂಖ್ಯೆಗಳನ್ನು ತೋರಿ ಹೇರಳ ವಿದ್ಯುತ್ ಉತ್ಪಾದನೆಯ ಭರವಸೆಯನ್ನು ತೋರಿದರು. ಆದರೆ ಮಳೆಯ ಪ್ರಮಾಣ ಪ್ರತಿ ವರ್ಷ ಕಡಿಮೆಯಾಗುತ್ತ ಬಂತು.

ಮೊದಲಿಗೆ ಹೆಚ್ಚು ವಿದ್ಯುತ್ ಉತ್ಪಾದಿಸಲ್ಪಡುತ್ತಿದ್ದುದರ ಜೊತೆಗೆ ನಿರೀಕ್ಷಿತ ಪ್ರಮಾಣಕ್ಕೆ ಸರಿಯಾಗಿ ಹೊಸ ಉದ್ಯಮಗಳ ಸ್ಥಾಪನೆಗೆ ಅವಕಾಶವೀಯಲಾಯಿತು. ಆದರೆ ಹೊಸದಾಗಿ ಆರಂಭಗೊಳ್ಳಬೇಕಿದ್ದ ಯೋಜನೆಗಳಿಗೆ ಹೆಚ್ಚಿನ ಹಣ ಮೀಸಲಿಡದ ತಪ್ಪನ್ನೂ ಮಾಡಲಾಯಿತು. ಇದಲ್ಲದೆ ಉತ್ಪಾದಿತ ವಿದ್ಯುತ್ ಸಾಗಾಟದಲ್ಲೇ ಶೇಕಡಾ 25 ರಷ್ಟು ಸೋರುತ್ತಿದೆ. ಬಳಕೆಯಾಗುತ್ತಿರುವ ವಿದ್ಯುತ್ತಿನಲ್ಲೂ ಅದಕ್ಷತೆಯಿಂದ ಎಷ್ಟೋ ಪ್ರಮಾಣ ಪೋಲಾಗುತ್ತಿದೆ ಎಂಬ ವಿಷಯಗಳತ್ತ ನಾವು ಗಮನ ಹರಿಸಲೇ ಇಲ್ಲ.

ಉದಾಹರಣೆಗೆ ಫ್ರಾನ್ಸಿನಲ್ಲಿ 574ರಷ್ಟು ಟನ್ ತೈಲಕ್ಕೆ ಸಮವಾದ ಶಕ್ತಿಗೆ ಕರ್ನಾಟಕದಲ್ಲಿ 10413ರಷ್ಟು ಶಕ್ತಿ ಬೇಕಿದೆ. ಯಾಕೆ? ಉಳಿದ ದೇಶಗಳಲ್ಲಿ ಈ ಪ್ರಮಾಣ ಕಡಿಮೆಯಾಗುತ್ತಿದ್ದರೆ ನಮ್ಮಲ್ಲಿ ಹೆಚ್ಚುತ್ತಿದೆ. ಕಾರಣವೇನು? ಇಂಥವೇ ವಿಪರ್ಯಾಸ ಅಮೂಲ್ಯ ವಿದ್ಯುತ್

ಅಣು ಸ್ಥಾವರಗಳು

● ಲಿಂಗರಾಜ್

ಬಳಕೆಯಲ್ಲೂ ಕಾಣಬರುತ್ತಿದೆ. ಭಾರಿ ಉದ್ದಿಮೆಗಳಲ್ಲದೆ ರೇಶಿಮೆಯ ಗೂಡಿನಿಂದ ದಾರ ತೆಗೆಯುವಂಥ ಸರಳ ಉದ್ದಿಮೆಗಳಿಗೆ ನೀರು ಕಾಯಿಸಲೂ ವಿದ್ಯುತ್ತಿನ ಬಳಕೆಯಾಗುತ್ತಿರುವುದು ಎಷ್ಟು ಸರಿ? ರಾಜ್ಯದಲ್ಲಿರುವ ಐದು ಲಕ್ಷ ಪಂಪ್‌ಸೆಟ್ಟುಗಳಲ್ಲಿ ಶೇಕಡಾ 80ರಷ್ಟಕ್ಕೆ ವಿದ್ಯುತ್ತು ಬೇಕು! ಈ ಅಂಶ ಇತರ ಶಕ್ತಿಮೂಲಗಳನ್ನು ಬಳಸಿಕೊಳ್ಳುವಲ್ಲಿನ ನಮ್ಮ ವೈಫಲ್ಯದತ್ತ ಬೆರಳು ಮಾಡಿ ತೋರುತ್ತಿದೆ.

ನಮ್ಮಲ್ಲಿ 5000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ ಅವಕಾಶವಿದ್ದರೂ 2040 ಮೆಗಾವ್ಯಾಟ್‌ನಷ್ಟು ಮಾತ್ರ ಉತ್ಪಾದಿಸಿಕೊಳ್ಳುವಷ್ಟಕ್ಕೆ ನಿಂತುಕೊಂಡಿರುವುದರ ವೈಫಲ್ಯವೂ ಸೇರಿ ಸದ್ಯದ ಇಕ್ಕಟ್ಟಿನ ಪರಿಸ್ಥಿತಿಗೆ ಕಾರಣವಾಗಿದೆ. ಈಚೆಗೆ ವಿದ್ಯುತ್ತಿನ ಸಾಗಾಟದ ಸೋರಿಕೆಯ ಅಂಶ ಕಡಿಮೆಯಾಗುತ್ತಿದೆ ಎಂದು ಹೇಳಲಾಗುತ್ತಿದ್ದರೂ ಈ ಕಾರ್ಯ ಸ್ವಿಚ್ ಒತ್ತಿ ಟೀಪ ಹಾಕಿದಷ್ಟು ಸುಲಭದ್ದಾಗಿಲ್ಲ!

ಕೈಗಾ ಅಣುಸ್ಥಾವರ

ಕೈಗಾ ಅಣುಸ್ಥಾವರ ತಾನು ತರಲಿರುವ ಅಪಾಯಗಳನ್ನು ಮೀರಿಯೂ ರಾಜ್ಯದ ವಿದ್ಯುತ್ ಕೊರತೆಯನ್ನು ನೀಗೀತೆ? ಎಂದು ನೋಡುವಾಗ ನಿರಾಶೆಯೇ ಕಾಣುತ್ತದೆ. 235 ಮೆಗಾವ್ಯಾಟ್ ಶಕ್ತಿಯ ಒಂದು ಮತ್ತು ಎರಡನೇ ಘಟಕಗಳು ವಿದ್ಯುತ್ ಉತ್ಪಾದಿಸಲು ಇನ್ನೂ ಹತ್ತು ವರ್ಷಗಳಿಗೂ ಮಿಕ್ಕು ಕಾಲ ಬೇಕಿದೆ. ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಬಳಸುವ ಉದ್ದಿಮೆಗಳು ದೂರದ ಪಟ್ಟಣಗಳಲ್ಲಿರುವುದರಿಂದ ಸಾಗಾಟದಲ್ಲೇ ಶೇಕಡಾ 20ರಷ್ಟು ಸೋರೀತು. ಜೊತೆಗೆ ಈ ಸ್ಥಾವರ ವಿದ್ಯುದುತ್ಪಾದನೆಗಾರಂಭವಾದಾಗ ನೆರೆಯ ರಾಜ್ಯಗಳೂ ಉತ್ಪಾದಿತ ವಿದ್ಯುತ್ತಿನಲ್ಲಿ ಪಾಲುದಾರರಾಗಲಿರುವುದರಿಂದ ರಾಜ್ಯಕ್ಕೆ ದಕ್ಕುವುದು ಶೇಕಡಾ 30ರಷ್ಟು ವಿದ್ಯುತ್ ಮಾತ್ರ. ನಿರ್ಮಾಣದ ಹಂತದಲ್ಲಿ ರಾಜ್ಯವೇ ಇದಕ್ಕೆ ವಿದ್ಯುತ್ ಪೂರೈಸಬೇಕಾದ್ದಂತೂ ಅನಿವಾರ್ಯ. ನಂತರದ ವರ್ಷಗಳಲ್ಲಿ ಮೂರು ಮತ್ತು ನಾಲ್ಕನೇ ಘಟಕಗಳು ತಲಾ 500 ಮೆಗಾವ್ಯಾಟ್ ಸಾಮರ್ಥ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಆರಂಭವಾದಾಗ ಇಲ್ಲಿ 1470 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾದರೂ ಇದರಿಂದ ರಾಜ್ಯಕ್ಕೆ ಲಭ್ಯವಾಗುವುದು 422 ಮೆಗಾವ್ಯಾಟ್ ಮಾತ್ರ.

ರಾಜ್ಯದ ಉದ್ದಿಮೆಗಳಲ್ಲೇ ಶೇಕಡಾ 20ರಷ್ಟು ವಿದ್ಯುತ್ತನ್ನು ಬೇಡುವ ಬೆಳಗಾವಿಯ 'ಇಂಡಾಲ್' ಉದ್ದಿಮೆಯ ಉದಾಹರಣೆ ನೀಡುವುದಾದರೆ ಕೈಗಾ ಸ್ಥಾವರದಿಂದ ರಾಜ್ಯಕ್ಕೆ ಲಭ್ಯವಾಗುವ ವಿದ್ಯುತ್ತು ಇಂಡಾಲ್‌ಗೆ ಮಾತ್ರ ಸಾಕಾದೀತು. ಅಂದರೆ ಇನ್ನು ಹತ್ತು ವರ್ಷಗಳ ನಂತರವೂ ರಾಜ್ಯದ ವಿದ್ಯುತ್ ಕೊರತೆ ಹೀಗೆ ಉಳಿದಿರುತ್ತದೆ ಎಂದ ಹಾಗಾಯಿತು.

1470 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ, 422 ಮೆಗಾವ್ಯಾಟ್‌ನಷ್ಟನ್ನು ರಾಜ್ಯಕ್ಕೆ ನೀಡುವ ಈ ಸ್ಥಾವರ ತರಲಿರುವ ಇತರ ಅಪಾಯಗಳತ್ತ ನೋಡಬೇಕು. ಅಣುಶಕ್ತಿ ಇಲಾಖೆ ಉತ್ತರ ಪ್ರದೇಶದ ನರೋರ ಸ್ಥಳವನ್ನು ಅಣುಸ್ಥಾವರಕ್ಕೆಂದು ಆಯ್ಕೆ ಮಾಡಿಕೊಳ್ಳುವಾಗ ಎಡವಿರುವಂತೆ, ಕೈಗಾ ಸ್ಥಾವರದ ಆಯ್ಕೆಯಲ್ಲೂ ಎಡವಿರುವುದು ಸ್ಪಷ್ಟವಾಗಿ ಕಾಣುತ್ತದೆ. ನರೋರ ಸ್ಥಾವರಕ್ಕೆ 1956ರಲ್ಲಿ ಬುಲಂದ ಶಹರಿನಲ್ಲಿ ಸಂಭವಿಸಿದ್ದ ಭೂಕಂಪದ ಬಿರುಕುಗಳ ಅಪಾಯ ಕಾಣುತ್ತಿದ್ದರೆ ಕೈಗಾಕ್ಕೆ 1968ರಲ್ಲಿ ಕೊಯಿನಾ ಭೂಕಂಪದಿಂದ ನೆಲದಾಳದಲ್ಲಿ ಕಾಳಿ ನದಿಯ ಅಡಿಯವರೆಗೂ ಹರಿದಿರುವ ಬಿರುಕುಗಳ ಮತ್ತು ಇನ್ನಿತರ ಅಪಾಯಗಳೂ ಕಾಣುತ್ತಿವೆ.

ಕೈಗಾಕ್ಕೆ 25 ಕಿಲೋಮೀಟರುಗಳ ಸುತ್ತಿನಲ್ಲಿ

ಏಳು ದೊಡ್ಡ ಅಣೆಕಟ್ಟುಗಳು ಜಲಸಂಗ್ರಹದಲ್ಲಿ ನಿಲ್ಲಲಿದ್ದು ಇವುಗಳ ನಡುವೆ ಈ ಸ್ಥಾವರ ಎಷ್ಟು ಭದ್ರವಾಗಿ ನಿಂತೀತು? ಅಲ್ಲದೆ ಕೈಗಾದಿಂದ 30 ಕಿಲೋಮೀಟರು ದೂರದಲ್ಲಿ ನಿರ್ಮಾಣಗೊಳ್ಳಲಿರುವ, ಏಶಿಯದಲ್ಲೇ ದೊಡ್ಡದೆನಿಸುವ 'ಸೀಬರ್ಡ್' ನೌಕಾನೆಲೆ, ಮಿಲಿಟರಿ ಚಟುವಟಿಕೆಗಳ ತಾಣವಾಗಲಿದೆ. ಆಗ ಶತ್ರು ರಾಷ್ಟ್ರಗಳ ಕಣ್ಣು ನೌಕಾನೆಲೆಯ ಬದಲು ಈ ಸ್ಥಾವರದತ್ತ ಹರಿದರೆ? ಊಹೆಗೂ ನಿಲುಕದ ಅಪಾಯಗಳು ಸಂಭವಿಸಬಹುದು. ಇಷ್ಟಲ್ಲದೆ ಪರಿಸರಕ್ಕೆ ಅಣುಸ್ಥಾವರಗಳು ತರಲಿರುವ ಮಾಲಿನ್ಯಕ್ಕೆ ಹೊರತಾಗಿ ಈ ಸ್ಥಾವರ ನಿರ್ಮಾಣಗೊಂಡೀತೆಂಬ ಬಗ್ಗೆಯೂ ಭರವಸೆಯಿಲ್ಲ.

ಜಗತ್ತಿನಲ್ಲಿ ಈವರೆಗೆ ಎಲ್ಲಿಯೂ ಮಳೆಕಾಡಿನ ನಡುವೆ ಅಣುಸ್ಥಾವರ ನಿರ್ಮಾಣಗೊಂಡಿಲ್ಲ. ಆದರೆ ಕೈಗಾದಲ್ಲೀಗ ಇನ್ನೂ ಅಳಿಯದೇ ಉಳಿದ ದಟ್ಟಕಾಡು ಈ ಸ್ಥಾವರದ ಕಾರಣದಿಂದಾಗಿ ಕೊಡಲಿಯೇಟಿಗೆ ತುತ್ತಾಗುವುದರಲ್ಲಿದೆ. ಅಣುಶಕ್ತಿ ಇಲಾಖೆ ಈ ಸ್ಥಾವರಕ್ಕೆ ನಾಲ್ಕು ಸಾವಿರ ಹೆಕ್ಟೇರ್ ಭೂಮಿಯನ್ನು ಮಾತ್ರ ಬಳಸಿಕೊಳ್ಳುವುದಾಗಿ ಹೇಳಿದ್ದರೂ, ಯುರೇನಿಯಂ ಗಣಿಗಳಿಗೆ, ನೌಕರರ ವಸತಿ, ರಸ್ತೆ ನಿರ್ಮಾಣ ಮತ್ತಿತರ ಕಾರಣಗಳಿಂದ ಅಮೂಲ್ಯ ವನ್ಯ ಸಂಪತ್ತು ನಾಶವಾಗಿ ಈ ಪ್ರದೇಶ ಬೆಂಗಾಡಾಗುತ್ತದೆ. ಮರಳಿ ಅರಣ್ಯ ಬೆಳೆಸುವ ಯತ್ನ ಎಷ್ಟು ಸಫಲವಾದೀತು? ಅಲ್ಲದೆ ಭೂಮಿಯಿಂದ ಅಗೆದ ಒಂದು ಟನ್ ಅದಿರಿನಲ್ಲಿ ಒಂದು ಕೆ.ಜಿ. ಯುರೇನಿಯಂ ಸಂಗ್ರಹಿಸಿ ಉಳಿದ 999 ಕೆ.ಜಿ. ಹುಡಿಮಣ್ಣನ್ನು ರಾಶಿ ಹಾಕುತ್ತ ಹೋದರೆ ವಿಕಿರಣಯುಕ್ತ ಮಣ್ಣಿನ ಸಂಗ್ರಹ ಅಪಾಯದ ಕಲ್ಪನೆ ಮಾಡಿಕೊಳ್ಳಿ. ಕೆಲವೇ ವರ್ಷಗಳಲ್ಲಿ ಪಶ್ಚಿಮ ಘಟ್ಟ ಯಾವ ಮಟ್ಟಿಗೆ ಬಯಲಾಗಿ ನಿಂತೀತೆಂಬುದು ವಿದ್ಯುತ್ ಸಮಸ್ಯೆಯ ನಿವಾರಣೆ ಯತ್ನದಲ್ಲಿ ನಾವು ಮಾಡುವ ಮತ್ತೊಂದು ದೊಡ್ಡ ತಪ್ಪಾಗುವ ಸಂಭವವಿದೆ.

ಹೀಗೆ ತಾನು ನಿಲ್ಲುವಲ್ಲೇ ಭದ್ರತೆಯ ಬಗೆಗೆ ಸಂಶಯ ಮೂಡಿಸುವ ಸ್ಥಾವರದಲ್ಲಿ ಕಾಳಿನದಿಯಿಂದ ಹರಿಸಿಕೊಳ್ಳುವ ನೀರನ್ನು ಯುರೇನಿಯಂ ಧಾತುಗಳ ಸಿಡಿತದ ಕ್ರಿಯೆಗೊಳಪಡಿಸಿಕೊಳ್ಳಬೇಕೆಂದಿದ್ದಾರಂತೆ. ಈ ನೀರನ್ನು ಮತ್ತೆ ಕಾಳೀ ನದಿಗೆ ಬಿಡಬೇಕು. ಹೀಗಾಗಿ ಬಿಸಿ ಮತ್ತು ವಿಕಿರಣಯುಕ್ತ ನೀರಿನಿಂದ ಇಡೀಯ ಕಾಳಿ ನದಿಯೇ ಕಲುಷಿತವಾಗುತ್ತದೆ. ನದಿಯನ್ನು ನಂಬಿರುವ ಬೆಸ್ತರಿಗಲ್ಲದೆ, ಮುಂದೆ ಅದು ಸೇರುವ ಸಮುದ್ರ ತೀರದುದ್ದಕ್ಕೆ ಕರಾವಳಿಯಲ್ಲೂ ವಿಕಿರಣ ಮಿಶ್ರಣ ಬೆಸ್ತರಿಗೆ ಕಂಟಕಕಾರಿಯಾಗುವುದು. ಅಲ್ಲದೆ ಸಮುದ್ರದಲ್ಲಿಯೂ ಮಾಲಿನ್ಯ ತುಂಬುತ್ತದೆ. ಕಾಳಿ ನದಿಯ ಮೇಲೆ ಥಟ್ಟನೆ ಇದರ ಅಪಾಯ ಗೋಚರಿಸುತ್ತದೆ.

ಒಂದು ಸ್ಥಾವರದ ಜೀವಮಾನ ಗರಿಷ್ಠ 25 ಅಥವಾ 30 ವರ್ಷಗಳು. ಆಮೇಲೆ ನಿಷ್ಕ್ರಿಯಗೊಳ್ಳುವ ಸ್ಥಾವರ, ನಂತರದಲ್ಲೂ ಜನರನ್ನು ದೂರದಲ್ಲೇ ಇರಿಸುತ್ತದೆ. ಗೋರಿಯಂತೆ ನಿಂತರೂ ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ವಿಕಿರಣಗಳನ್ನು ಸಾವಿರಾರು ವರ್ಷಗಳವರೆಗೆ ಹೊರಸೂಸುತ್ತಲೇ ಇರುವುದರಿಂದ ಸ್ಥಾವರವನ್ನು ನಂತರವೂ ಸುರಕ್ಷಿತವಾಗಿ ಕಾಪಾಡುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಅಣು ವಿಜ್ಞಾನಿಗಳು ಅಣು ಸ್ಥಾವರ ನಿರ್ಮಾಣದ ಕನಸು ಕಂಡದ್ದರ ಜೊತೆಯಲ್ಲೇ ಶಾಪದ ಗೋರಿಗಳಾಗಿ ನಿಲ್ಲಲಿರುವ ಸ್ಥಾವರಗಳನ್ನು ಕೊನೆಯಲ್ಲಿ ಏನು ಮಾಡಬೇಕೆಂಬುದಕ್ಕೆ ಈವರೆವಿಗೂ ಒಂದು ಪರಿಹಾರವನ್ನು ಕಾಣುವಲ್ಲಿ ಅಸಮರ್ಥರಾಗಿದ್ದಾರೆ.

ಭಾರತದಲ್ಲಿ ಅಣುಶಕ್ತಿಯ ಬಳಕೆ

ಸ್ವಾತಂತ್ರ್ಯಾನಂತರದ ಪ್ರಗತಿ ಪಥದಲ್ಲಿ ಭಾರತವೂ ಅಣುಶಕ್ತಿ ಬಳಕೆಯಲ್ಲಿ ತೊಡಗಿ 1962ರಲ್ಲಿ ಅಣುಶಕ್ತಿ ಕಾಯಿದೆಯನ್ನು ಜಾರಿಗೆ ತಂದಿತು. 'ಅಪ್ಸರ' ಪ್ರಾಯೋಗಿಕ ಘಟಕದಿಂದ ವಿದ್ಯುತ್ ಉತ್ಪಾದನೆಗೆ ಅಣುಶಕ್ತಿಯನ್ನು ಬಳಸಿಕೊಂಡದ್ದು ಈಗ ಆ ಘಟಕಗಳಿಂದ 1330 ಮೆಗಾವ್ಯಾಟಿನಷ್ಟು ವಿದ್ಯುತ್ತನ್ನು ಪಡೆಯಲಾಗುತ್ತಿದೆ.

ಜಗತ್ತಿನ ಎಲ್ಲ ಅಣುಸ್ಥಾವರಗಳಂತೆ ಇವು ಕೂಡ ವಿಕಿರಣವನ್ನು ಹೊರಸೂಸುತ್ತಿದ್ದು ತಾರಾಪುರ ಸ್ಥಾವರ ಜಗತ್ತಿನಲ್ಲೇ ಅತಿ ಹೆಚ್ಚು ವಿಕಿರಣ ಹೊರಸೂಸುವಂಥದೆಂಬ ಖ್ಯಾತಿ ಪಡೆದಿದೆ. 1979ರಲ್ಲಿ ಈ ಸ್ಥಾವರದಿಂದ ಸಾವಿರಾರು ಲೀಟರ್ ವಿಕಿರಣಯುಕ್ತ ನೀರು ಹೊರಹರಿದು ವಾತಾವರಣ ಮಾಲಿನ್ಯಕ್ಕೆ ಕಾರಣವಾದುದನ್ನು ಪಿ.ಟಿ.ಐ.ನ ವಿಜ್ಞಾನ ವಾರ್ತಾ ಪ್ರತಿನಿಧಿ ಡಾ|| ಕೆ.ಎಸ್. ಜಯರಾಮ ಪತ್ತೆಹಚ್ಚಿ ಬಹಿರಂಗಪಡಿಸಿದರು. ಆದರೆ ಇದನ್ನು ಅಲ್ಲಗಳೆಯದ ಅಣುಶಕ್ತಿ ಇಲಾಖೆ 'ಪಿನ್ ಹೋಲ್'ನ ತೊಂದರೆ ಹೇಳಿಕೊಂಡು ಜಾರಿತ್ತು. ಇಲ್ಲಿಯ ಕೆಲಸಕ್ಕೆ ನೇಮಿಸಿಕೊಳ್ಳುತ್ತಿರುವುದು ಅಗ್ಗದ ದಿನಗೂಲಿ ಕಾರ್ಮಿಕರನ್ನು. ಪ್ರತಿವರ್ಷ ಮೂರುಸಾವಿರ ಜನರಿಗೆ ವಿಕಿರಣ ಪರಿಣಾಮದಿಂದ ಹಲವು ಬಗೆಯ ಕ್ಯಾನ್ಸರ್ ರೋಗಗಳು ಕಾಣಿಸಿಕೊಳ್ಳುತ್ತಿವೆ. ಆದರೆ ಇವರನ್ನೆಲ್ಲಾ ಎತ್ತ ಸಾಗಿಸುತ್ತಿದ್ದಾರೆಂಬುದು ಮಾತ್ರ ರಹಸ್ಯವಾಗೇ ಉಳಿದಿದೆ.

ಮದರಾಸು ಬಳಿಯ ಕಲ್ಪಾಕಂ ಸ್ಥಾವರದಿಂದ ಸಮುದ್ರಕ್ಕೆ ಸೇರುತ್ತಿರುವ ವಿಕಿರಣಯುಕ್ತ ನೀರಿನ ಅಂಶ ದಿನದಿನಕ್ಕೂ ಹೆಚ್ಚುತ್ತಿದ್ದು ಸುತ್ತಮುತ್ತಲಿನ ಜನರಿಗೂ ವಿಕಿರಣಗಳ ಪರಿಣಾಮದಿಂದ ಕ್ಯಾನ್ಸರ್ ರೋಗದ ಲಕ್ಷಣಗಳು ಕಾಣಿಸಿಕೊಳ್ಳುವುದು ಹೆಚ್ಚುತ್ತಿದೆ. 1984ರಲ್ಲಿ ಈ ಸ್ಥಾವರ ಕೇವಲ 64 ದಿನ ಕಾರ್ಯ ನಿರ್ವಹಿಸಿ ತಂದ ಮೇಲೆ ವಿದ್ಯುತ್ತಿಗೆಂದು ಅಣುಸ್ಥಾವರಗಳನ್ನು ನಾವು ನೆಚ್ಚುವಂತಿಲ್ಲ ಎಂದಾಯಿತಲ್ಲವೆ? ರಾಜಸ್ಥಾನದ ಕೋಟಾದಲ್ಲಿ 1982ರ ಫೆಬ್ರವರಿಯಲ್ಲಿ ಆರಂಭವಾದ ಮೊದಲ ಘಟಕ ಆರಂಭದಿಂದಲೇ ತಾಂತ್ರಿಕ ತೊಂದರೆಗೀಡಾಗುತ್ತ ಬಂದು ಕಾರ್ಯ ನಿರ್ವಹಿಸಲಾಗದೆ 1985ರ ಮೇ ತಿಂಗಳಲ್ಲಿ ಸಂಪೂರ್ಣವಾಗಿ ಮುಚ್ಚಿಕೊಂಡು ಕೋಟ್ಯಂತರ ರೂಪಾಯಿಗಳ ನಷ್ಟಕ್ಕೆ ಗುರಿಯಾಯಿತು. ಇಷ್ಟಲ್ಲದೆ ತಾರಾಪುರ ಸ್ಥಾವರ ಹನ್ನೊಂದು ವರ್ಷಗಳಲ್ಲಿ 344 ಸಲ, ರಾಜಸ್ಥಾನದ ಕೋಟಾ ಸ್ಥಾವರ ಹತ್ತು ವರ್ಷಗಳಲ್ಲಿ 251 ಸಲ ಕೆಟ್ಟು ನಿಂತಿದ್ದುಂಟು.

ಇಂಥ ಸ್ಥಾವರಗಳ ವೈಫಲ್ಯದ ಜೊತೆಗೆ ಯುರೇನಿಯಂ ಶುದ್ಧೀಕರಿಸುವ ಹೈದರಾಬಾದಿನ ಘಟಕದಲ್ಲೂ ಅಪಾಯ ತೋರಿದೆ. ದೇಶದ ಹಲವು ಭಾಗದ ಯುರೇನಿಯಂ ಗಣಿಗಳಿಂದ ಇಲ್ಲಿಗೆ ಅದಿರು ಸಾಗಿಸುವಾಗ ದಾರಿಯುದ್ದಕ್ಕೂ ವಿಕಿರಣವುಂಟಾಗುವುದು ಕಂಡೂ ಕಾಣದಂತಾಗಿದ್ದರೆ ಈ ಘಟಕದ ಸುತ್ತ ಪೇರಿಸುತ್ತಾ ಬಂದ ಅಣುಕೊಳೆ ನೇರವಾಗಿ ವಾತಾ

ಕೈಗಾ ಅಣುಸ್ಥಾವರ ಕನ್ನಡಿಗರಿಗೆ, ಕರ್ನಾಟಕದ ನಿವಾಸಿಗಳಿಗೆ ತನ್ನಲ್ಲಿ ಕೆಲಸವೊದಗಿಸೀತೇ ಎಂದು ನೋಡು ವಾಗಲೂ ನಿರಾಶೆಯೇ ಕಾದಿದೆ. ಇನ್ನು ಐದು ವರ್ಷಗಳಲ್ಲಿ ತನ್ನ ಆಯಸ್ಸಿನ ಕೊನೆ ಕಾಣಲಿರುವ ತಾರಾಪುರ ಅಣು ಸ್ಥಾವರದ ಎಲ್ಲ ಸಿಬ್ಬಂದಿಯೂ ಕೈಗಾಕ್ಕೆ ಇಡಿಯಾಗಿ ವರ್ಗಾಯಿಸಲ್ಪಡಲಿದ್ದು, ಅಣುಶಕ್ತಿ ಇಲಾಖೆ ಇಲ್ಲಿಯ ನಿರುದ್ಯೋಗ ಸಮಸ್ಯೆಗೆ ಯಾವುದೇ ರೀತಿಯಲ್ಲಿ ಸಹಕಾರಿಯಾಗಿಲ್ಲ. ದಿನಗೂಲಿಯ ಅಗ್ಗದ ಕೆಲಸ ಗಾರರು ಮತ್ತು ಗಣಿಯಲ್ಲಿಯ ಕಾರ್ಮಿಕರನ್ನೇ ಬೇಡುತ್ತದೆ, ರೋಗಗಳನ್ನು ಅಂಟಿಸಿಕೊಳ್ಳುವ ಕೆಲಸಗಳನ್ನೇ ಮಾಡಿಸಲು.

ಒಂದು ಸಾಧಾರಣ ಅಣು ಸ್ಥಾವರವೂ ಒಂದು ವರುಷದ ಅವಧಿಯಲ್ಲಿ ಹಿರೋಷಿಮಾ ಬಾಂಬಿನ ಒಂದು ಸಾವಿರದಷ್ಟು ಪ್ರಮಾಣದ ವಿಕಿರಣಗಳನ್ನು ಹೊರಸೂಸುವಂಥದಾಗಿದ್ದು ಹೆಚ್ಚು ಪರಿಸರ ಮಾಲಿನ್ಯಕ್ಕೂ ಅತೀ ಹೆಚ್ಚು ಅಪಾಯಕ್ಕೂ ಕಾರಣವಾಗುತ್ತದೆ. ಈ ವಿಕಿರಣಗಳ ಪ್ರಭಾವ ತಕ್ಷಣದಲ್ಲಿ ಗೋಚರವಾಗದೇ ಜಗತ್ತಿನಲ್ಲಿ ಹಲವಾರು ರೀತಿಯ ರೋಗಗಳು ಹೊಸವಾಗೇ ಕಾಣಿಸಿಕೊಳ್ಳಲು ಕಾರಣವಾಗಿದೆ.

1985ರಲ್ಲಿ ಪಶ್ಚಿಮ ರಾಷ್ಟ್ರಗಳಲ್ಲಿ 30 ಅಣು ಸ್ಥಾವರ ಘಟಕಗಳು ಹೊಸದಾಗಿ ಕಾರ್ಯಾರಂಭಕ್ಕೆ ತೊಡಗಿವೆ. ಆದರೆ ಪೂರ್ವ ರಾಷ್ಟ್ರಗಳಲ್ಲಿ ಒಂದು ಘಟಕ ಮಾತ್ರ ಝೆಕೋಸ್ಲೋವಾಕಿಯದಲ್ಲಿ ಕಾರ್ಯಾರಂಭ ಮಾಡಿದ್ದು ಅಣುಸ್ಥಾವರಗಳ ಬಗೆಗಿದ್ದ ಆಕರ್ಷಣೆ ಹಲವು ಕಾರಣಗಳಿಂದ ಹೇಗೆ ಕುಂಠಿತಗೊಳ್ಳುತ್ತಿದೆಯೆಂಬುದನ್ನು ತೋರಿಸುತ್ತಿದೆ. ಕಳೆದ ವರ್ಷ ಜಗತ್ತಿನಾದ್ಯಂತ 375 ಘಟಕಗಳು ವಿದ್ಯುತ್ ಉತ್ಪಾದನೆಯಲ್ಲಿ ನಿರತವಾಗಿದ್ದರೆ ಸದ್ಯ 359ಕ್ಕೆ ಇಳಿದಿದೆ. ಇವುಗಳ ಸಂಖ್ಯೆ ಇಳಿಯುತ್ತಲೇ ಇದೆ. ಆಯಸ್ಸು ಮುಗಿದ ಘಟಕಗಳು ಗೋರಿಗಳಂತೆ ನಿಲ್ಲುತ್ತಿವೆ.

ಅಣುಶಕ್ತಿ ಬಳಕೆಯನ್ನು ವಿರೋಧಿಸುತ್ತಿರುವವರನ್ನು ನಮ್ಮಲ್ಲಿ ಹಳದಿಗಣ್ಣಿನಿಂದಲೇ ನೋಡಲಾಗುತ್ತಿದೆ. ಅಭಿವೃದ್ಧಿ ಕಾರ್ಯವೊಂದಕ್ಕೆ ಅಡ್ಡಗಾಲು ಹಾಕುತ್ತಿರುವವರು, ಪ್ರತಿಗಾಮಿಗಳು ಎಂದೂ ಟೀಕಿಸಲಾಗುತ್ತಿದೆ. ಆದರೆ ಇವರ ವಿರೋಧದ ಹಿಂದೆ ಪರಿಸರ ಪ್ರೇಮವಿರುವುದನ್ನೂ ಅಣುಶಕ್ತಿ ಬಳಕೆಯಿಂದ ಸಂಭವಿಸುವ ಅಪಾಯಗಳನ್ನು ತಪ್ಪಿಸಬಹುದು ಎಂಬ ಮಾನವೀಯ ಕಳಕಳಿಯನ್ನೂ ಮುಕ್ತಮನದಿಂದ ಅರಿಯಬೇಕಿದೆ.

ನಮ್ಮ ದೇಶದಲ್ಲಿನ ಅಣು ಸ್ಥಾವರಗಳು ನಿರ್ಮಾಣದ ಹಂತದಿಂದಲೇ ಭಾರಿ ಉದ್ಯಮ ಪತಿ ಬಂಡವಾಳ ಗಾರರಾದ ಟಾಟಾರಂಥವರ ಹಿಡಿತಕ್ಕೊಳಪಡುತ್ತಿವೆ. ನಿರ್ಮಾಣದ ಹಂತದಲ್ಲಿ ಇವುಗಳ ಕಂಟ್ರಾಕ್ಟಿನ ಹೆಚ್ಚಿನ ಪಾಲು ಇವರಿಗೇ ಸಿಕ್ಕುವಂತೆ, ನಂತರದಲ್ಲೂ ಉತ್ಪಾದಿತ ವಿದ್ಯುತ್ತಿನ ಹೆಚ್ಚಿನ ಭಾಗ ಇವರಿಗೆ ಪೂರೈಕೆಯಾಗ ಬೇಕಾಗಿ ಹೆಚ್ಚಿನ ಲಾಭ (ಅಂದರೆ ಶೇಕಡಾ 60 ರಷ್ಟು) ಟಾಟಾರಂಥವರಿಗೇ ಸಲ್ಲುತ್ತದೆ.

'ಅಣು ವಿದ್ಯುತ್ ಶಕ್ತಿಯ ತಂತ್ರಜ್ಞಾನ ಶಕ್ತಿ ಮೂಲಗಳಲ್ಲಿ ತುಂಬಾ ಸುರಕ್ಷಿತವಾಗಿದೆ' ಎಂಬ ಮಾತನ್ನು ಬ್ರಿಟನ್ನಿನ ವಿದ್ಯುತ್ ಸಚಿವ ಪೀಟರ್ ವಾಕರ್‌ರು ಚೆರ್ನೋಬಿಲ್ ದುರಂತಕ್ಕೆ ಒಂದು ತಿಂಗಳು ಮೊದಲಷ್ಟೇ ಘೋಷಿಸಿದ್ದರು. ಇಂಥದೇ ಮಾತನ್ನು ಎಲ್ಲ ಅಣು ವಿಜ್ಞಾನಿಗಳು ಮತ್ತೆ ಮತ್ತೆ ಹೇಳುತ್ತಿದ್ದು, ನಮ್ಮಲ್ಲಿಯೂ ರಾಜಾರಾಮಣ್ಣ ಮತ್ತು ಶ್ರೀನಿವಾಸನ್ನರೂ ಹೇಳುತ್ತಿದ್ದಾರೆ. ಇತರೇ ಶಕ್ತಿ ಮೂಲಗಳಿಗೆ ಹೀಗೆ ಹೇಳಬೇಕಿಲ್ಲದ ಮಾತನ್ನು ಇದಕ್ಕೇ ಏಕೆ ಒತ್ತಿ ಹೇಳಬೇಕಿದೆ ಎಂಬುದೇ ಇದರಲ್ಲಿನ ಆತಂಕವನ್ನು ಎತ್ತಿ ತೋರುತ್ತದೆ. ಮೇಧಾವಿ ಆಲ್ಬರ್ಟ್ ಐನ್‌ಸ್ಟೈನ್ ತುಂಬಾ ಹಿಂದೆಯೇ ಹೇಳಿರುವ 'ಅಣು ಬಿಡುಗಡೆ ಮಾಡುವ ಶಕ್ತಿ ನಮ್ಮ ಆಲೋಚನೆಯನ್ನೂ ಮೀರಿ ಮಾರ್ಪಡುವಂತಹದು' ಎಂಬ ಮಾತುಗಳು ಈ ಕ್ಷೇತ್ರದಲ್ಲಿ ಸಂಭವಿಸುತ್ತಾ ಬಂದಿರುವ ದುರಂತಗಳಿಗೆ ಕನ್ನಡಿ ಹಿಡಿಯುತ್ತಿವೆ.

ಒಬ್ಬ ಆರೋಗ್ಯವಂತ ಮಾನವ ತನ್ನ ಮೇಲಾಗುವ ವಿಕಿರಣಗಳ ಪರಿಣಾಮದ ಪ್ರಮಾಣ ಒಂದು ವರ್ಷ ದಲ್ಲಿ ಐದು ರೆಮ್‌ಗಳವರೆಗಿದ್ದರೆ ಮಾತ್ರ ತನ್ನ ಆರೋಗ್ಯವನ್ನು ವಿಕಿರಣ ಅಪಾಯದಿಂದ ತಡೆದುಕೊಳ್ಳುತ್ತಿರುತ್ತಾನೆ. ಹಲವು ಕಡೆ ನಡೆಸಿರುವ ಅಧ್ಯಯನಗಳಲ್ಲಿ, ಅದರಲ್ಲೂ ಅಣು ಸ್ಥಾವರದ ಸುತ್ತಲಿನ ನಿವಾಸಿಗಳು ಮತ್ತು ಇಲ್ಲಿನ ಕಾರ್ಮಿಕರು 14 ರಿಂದ 15 ರೆಮ್‌ವರೆಗೆ ವಿಕಿರಣಗಳನ್ನು ಹೊಂದಿದ್ದು ಹಲವು ಬಗೆಯ ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದಾರೆ. ಮಕ್ಕಳು ಲುಕೇಮಿಯಾ, ಅಂಗಹೀನತೆಯಂಥದಕ್ಕೆ ಬಲಿಯಾಗುತ್ತಿದ್ದಾರೆ. ಅಂತರ್ರಾಷ್ಟ್ರೀಯ ವಿಕಿರಣ ಪ್ರತಿರೋಧ ಕಮೀಶನ್ನಿನ ಮಾಜಿ ಚೇರ್‌ಮನ್, ವಿಜ್ಞಾನಿ ಕಾರ್ಲ್ ಜಡ್ ಮೇರ್ಗಾನ್‌ರು 'ವಿಕಿರಣಗಳಿಂದಾಗುತ್ತಿರುವ ಹಾನಿಯನ್ನು ಪೂರ್ಣವಾಗಿ ಸರಿಪಡಿಸಲಾಗದಂತಿದೆ' ಎಂದಿದ್ದಾರೆ. ಅಣು ವಿಜ್ಞಾನಿಗಳು ವಿಕಿರಣ ರೋಗದಿಂದ ಸಾವಿಗೀಡಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ ಎಂಬುದಕ್ಕೆ ಜಗತ್ತಿನಲ್ಲಿ 25 ಮಿಲಿಯ ಜನ ಪ್ರತಿ ವರ್ಷ ಪ್ರಕೃತಿ ವಿಕೋಪದಿಂದ, ಅಂದರೆ ಬರಗಾಲ, ನೆರೆ, ಅತಿವೃಷ್ಟಿಯಂಥದರಲ್ಲಿ ಸಿಲುಕಿ ಸಾಯುತ್ತಾರಲ್ಲ ಎಂಬ ಕಾರಣವೊಡ್ಡಿ ವಿಕಿರಣ ರೋಗದಿಂದ ಸಾವಿಗೀಡಾಗುವವರ ಸಂಖ್ಯೆ ಕಡಿಮೆ ಎಂದು ಮರೆ ಮಾಚಲೆತ್ನಿಸುತ್ತಿದ್ದಾರೆ. ಮಾನವೀಯ ಕಳಕಳಿಯುಳ್ಳ ಯಾವೊಬ್ಬ ವಿಜ್ಞಾನಿಯೂ ಇಂಥ ಮಾತನ್ನು ಹೇಳಿಯಾನೆ?

ವರಣವನ್ನು ಸೇರುತ್ತಿದೆ. ಈ ಅಣುಕೊಳೆಯತ್ತ ನಿರ್ಲಕ್ಷ್ಯ ತಾಳಿದುದರಿಂದಾಗಿ ಈ ಭಾಗದಲ್ಲಿರುವ ಲಂಬಾಣಿ ನಿವಾಸಿಗಳಲ್ಲಿ ಹಲವು ಬಗೆಯ ವಿಕಿರಣ ಪರಿಣಾಮದ ಕ್ಯಾನ್ಸರ್ ಬರಲು ಕಾರಣವಾಗಿದೆ. ಮತ್ತು ಸಮೀಪದ ಹಳ್ಳಿಗಳ ಬಾವಿಗಳ ನೀರಿನಲ್ಲೂ ವಿಕಿರಣದ ಅಂಶ ಕೂಡಿಕೊಂಡು ಅಲ್ಲಿಯ ಜನಕ್ಕೆ ಕಂಟಕಪ್ರಾಯವಾಗಿದೆ. ಲಂಬಾಣಿಗಳನ್ನು ಒಕ್ಕಲೆಬ್ಬಿಸಿದ ಘಟಕ ತನ್ನ ತಪ್ಪುಗಳನ್ನು ಮರೆಮಾಚಿಕೊಳ್ಳುತ್ತಲೇ ಇದೆ. "ಈ ಘಟಕ ಈಚಿನ ವರ್ಷಗಳಲ್ಲಿ ಅಪಾಯದ ಎಲ್ಲೆ ಮೀರುತ್ತಿದೆ" ಎಂದು ಇದೇ ಘಟಕದಲ್ಲಿ ಅಧಿಕಾರಿಯಾಗಿದ್ದ ಅಹ್ಮದ್ ಅಲಿಖಾನರು ನೊಂದು ನುಡಿದಿರುವುದು ಗಮನಿಸಬೇಕಾದ ಅಂಶ.

ಒಂದು ಅಂದಾಜಿನಂತೆ ಜಗತ್ತಿನಾದ್ಯಂತ ಈಗ 200 ಟನ್ನಿನಷ್ಟು ಪ್ಲುಟೋನಿಯಂ ಬೂದಿ ಅಣು ಸ್ಥಾವರಗಳಿಂದಲೇ ಸಂಗ್ರಹವಾಗಿದ್ದು, ಇದನ್ನು ಹೇಗೆ ಸಂರಕ್ಷಿಸಬೇಕೆಂದು ತಿಳಿಯದಾಗಿದೆ.

ನಮ್ಮ ದೇಶದ ಅಣುಕೊಳಚೆಯನ್ನು, ಅದರಲ್ಲೂ 24,600 ವರ್ಷಗಳಷ್ಟು ದೀರ್ಘಕಾಲದಲ್ಲಿ ತನ್ನಲ್ಲಿನ ಕಾಲು ಭಾಗದಷ್ಟು ವಿಕಿರಣ ಶಕ್ತಿಯನ್ನು ಕುಂಠಿತಗೊಳಿಸಿಕೊಳ್ಳುವ ಪ್ಲುಟೋನಿಯಂ ಬೂದಿಯಂಥದನ್ನು ಕೋಲಾರದ ಚಿನ್ನದ ಗಣಿಗಳ ಕೆಲವೆಡೆ ಇಡಲು ಯೋಚಿಸಿದ್ದಾರಂತೆ!

ಇತರ ಸಮಸ್ಯೆಗಳು

ಹಿರೋಷಿಮಾ-ನಾಗಸಾಕಿಗಳ ಮೇಲಿನ ಬಾಂಬ್ ಪ್ರಯೋಗದಲ್ಲಿ ತನ್ನ ಶಕ್ತಿಯನ್ನು ತೋರಿದ್ದ ಅಣುಶಕ್ತಿ ಭೂಮಿಯಿಂದ ಹೊರದೆಗೆದ ಮೊದಲ ಹಂತದಿಂದ ಕೊಳಚೆಯಾಗಿ ಸಂಗ್ರಹವಾಗುವವರೆಗೆ ವಿಕಿರಣಗಳನ್ನು ವಾತಾವರಣಕ್ಕೆ ಕೂಡುತ್ತಾ ಬರುತ್ತಿದ್ದು 2000 ಬಗೆಯ ಹೊಸ ಕಾಯಿಲೆಗಳಿಗೆ ಕಾರಣವಾಗಿದೆ.

ಜಗತ್ತಿನಾದ್ಯಂತ ಹೆಲನ್ ಕಾಲ್ಡಿಕಾಟರು ಸಂಘಟಿಸಿರುವ ಡಾಕ್ಟರುಗಳ ಸಮೀಕ್ಷೆಯಲ್ಲಿ ವಿಕಿರಣಗಳ ಪರಿಣಾಮದಿಂದ ರಕ್ತದ ಕ್ಯಾನ್ಸರ್, ಕರುಳಿನ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ನಪುಂಸಕತ್ವ, ಕೂದಲುದುರುವಿಕೆ ಮುಂತಾದ ಲಕ್ಷಣಗಳು ಕಂಡಿರುವಂತೆಯೆ ಈ ವಿಕಿರಣದ ಪರಿಣಾಮ ಚಿಕ್ಕ ಮಕ್ಕಳ ಮೇಲೆ ಶೀಘ್ರದಲ್ಲೇ ಉಂಟಾಗುತ್ತಿದೆ. ಇದು ಹೀಗೆ ಸಾಗಿದರೆ ಮಾನವ ಸಂತತಿಯೇ ಅಣು ಬಳಕೆಯ ಶಾಪದಿಂದ ನರಳುವ ಪರಿಸ್ಥಿತಿಯನ್ನು ತಲುಪುತ್ತದೇನೋ. ಅಣು ಶಕ್ತಿಯಿಂದ 257911 ಮೆಗಾವ್ಯಾಟಿನಷ್ಟು ವಿದ್ಯುತ್ತು ಜಗತ್ತಿನಲ್ಲೀಗ ಉತ್ಪಾದಿಸಲ್ಪಡುತ್ತಿದ್ದು ಇತರ ಶಕ್ತಿ ಮೂಲಗಳಿಂದ ಸಂಭವಿಸಿದ ಅಪಾಯಗಳನ್ನು ಹಲವು ಬಗೆಯಲ್ಲಿ ಅಣುಶಕ್ತಿ ಉಂಟುಮಾಡುತ್ತಿದೆ. ನಲವತ್ತು ವರ್ಷಗಳಲ್ಲೇ ಜಗತ್ತನ್ನು ವಿಕಿರಣಗಳಿಂದ ತುಂಬಿರುವ ಅಣುಶಕ್ತಿ ಆಗಾಗ ಸಂಭವಿಸಿರುವ ದುರಂತಗಳಲ್ಲಿ ಅಣುಶಕ್ತಿ ಬಳಕೆಯ ಅಪಾಯವನ್ನು ಇನ್ನಷ್ಟು ಹೆಚ್ಚಿನದಾಗಿಯೇ ತೋರಿದೆ.

1957ರಲ್ಲಿ ಇಂಗ್ಲೆಂಡಿನ ವಿಂಡ್‌ಸ್ಕೇಲಿನಲ್ಲಿ ಯುರೇನಿಯಂ ಇಂಧನಕ್ಕೆ ಬೆಂಕಿಬಿದ್ದು ಅಯೋಡಿನ್ ವಿಕಿರಣ ವಾತಾವರಣಕ್ಕೆ ಕೂಡಿ 65 ಕಿಲೋಮೀಟರ್ ವಿಸ್ತಾರಕ್ಕೆ ಹರಡಿತ್ತು. ಅಮೆರಿಕದ ಥ್ರೀಮೈಲ್ ಐಲೆಂಡ್ ಸ್ಥಾವರಕ್ಕೆ 1979ರಲ್ಲಿ ಬೆಂಕಿ ತಗುಲಿ ಸ್ಥಾವರವೇ ಕರಗುವ ಮಟ್ಟಕ್ಕಿಳಿದಿತ್ತು. ರಷ್ಯಾದ ಸೈಬೀರಿಯಾ ಪ್ರಾಂತ್ಯದ ರಿಷ್ಟಿಮ್‌ನಲ್ಲಿ ಮೋಡಗಳ ಮೂಲಕ ವಿಕಿರಣ ಮಳೆ ಸುರಿವಂಥ ಅಪಾಯ ಕಾರಿ ದುರ್ಘಟನೆ 1957-58 ನಡುವೆ ಯಾವ ಮುನ್ಸೂಚನೆಯೂ ಇಲ್ಲದೆ ಸಂಭವಿಸಿ ಈ ಪ್ರಾಂತ್ಯದ ಜನವಸತಿಯನ್ನೇ ಖಾಲಿ ಮಾಡಬೇಕಾಯಿತು.

ಎರಡು ವರ್ಷಗಳ ನಂತರ ಈ ಸ್ಥಳವನ್ನು ಕಂಡ ರಷ್ಯದ ವಿಜ್ಞಾನಿ "ನಾನು ನೋಡಿದುದು ಬರಿದಾದ ಭೂಮಿಯನ್ನು. ಭೂಮಿ ಸತ್ತಿತ್ತು. ಹಳ್ಳಿಗಳಿರಲಿಲ್ಲ, ಪಟ್ಟಣಗಳಿರಲಿಲ್ಲ, ಹಾಳು ಸುರಿವ ಮನೆಗಳ ಚಿಮಣಿಗಳು... ಉತ್ತು ಬೆಳೆಯದ ಶುಷ್ಕ ಭೂಮಿ... ಕುರಿ ಹಿಂಡುಗಳಿರಲಿಲ್ಲ, ಜನರಿರಲಿಲ್ಲ. ಎಲ್ಲಾ ಬರಿದು" ಎಂದು ಹೇಳಿದ. ಈ ಸ್ಥಳ ಹೀಗೇ ಇನ್ನೂ ನೂರಾರೂ ವರ್ಷ ಬರಿದಾಗಿರಬೇಕಾದ್ದು ಅನಿವಾರ್ಯವೆ.

ಅಣು ಸ್ಥಾವರ ದುರಂತಗಳಲ್ಲೆ ಭೀಕರವಾಗಿ ಸಂಭವಿಸಿ, ಜಗತ್ತನ್ನೇ ತಲ್ಲಣಗೊಳಿಸಿದ ಚೆರ್ನೊಬಿಲ್ ಸ್ಥಾವರ ಕರಗುತ್ತ ಅಂತರ್ಜಲವನ್ನು ಸೋಕುವ ಮಟ್ಟಕ್ಕಿಳಿದು ಜ್ವಾಲಾಮುಖಿಯಂತೆ ಮಾರ್ಪಡಲಿದ್ದುದನ್ನು ತಡೆಯಲು. ಸ್ಥಾವರದ ಕೆಳಭಾಗಕ್ಕೆ ಉಕ್ಕಿನ ಹಾಳೆಗಳನ್ನು ಪ್ರಯಾಸದಿಂದ ದೂರದಿಂದಲೇ ಕೂರಿಸಿದ್ದಲ್ಲದೆ, ವಿಮಾನ-ಹೆಲಿಕಾಪ್ಟರುಗಳಿಂದ ಉಕ್ಕಿನ ಪುಡಿ, ಸಿಮೆಂಟು ಕಾಂಕ್ರೀಟುಗಳಂಥ ಘನ

ವಸ್ತುಗಳನ್ನು ಭಾರಿ ಪ್ರಮಾಣದಲ್ಲೇ ಸುರಿಸ ಬೇಕಾಯಿತು.

ಈ ಸ್ಥಾವರ ಸ್ಫೋಟಗೊಂಡ ಸಂದರ್ಭದಲ್ಲಿ ಪಶ್ಚಿಮ ಮುಖಿಯಾಗಿದ್ದ ಗಾಳಿಯಲ್ಲಿ ಸೇರಿದ ವಿಕಿರಣಗಳು ಇಡಿಯ ಯುರೋಪಿನ ರಾಷ್ಟ್ರಗಳಿಗೆ ಹದಿನೈದು ದಿನಗಳವರೆಗೆ ಹರಡಿಕೊಂಡಿದ್ದವು. ಸ್ವೀಡನ್ನಿನಂಥ ಪುಟ್ಟ ರಾಷ್ಟ್ರವೊಂದಕ್ಕೆ ಈ ವಿಕಿರಣ ಹರಡಿದ ಪರಿಣಾಮದಿಂದ ಒಂದು ಬಿಲಿಯನ್ ಸ್ವೀಡಿಶ್ ಕ್ರೋನರ್ (140 ಮಿಲಿಯನ್ ಅಮೆರಿಕನ್ ಡಾಲರ್)ನಷ್ಟು ನಷ್ಟವುಂಟಾಯಿತು. ಇದು ಇತರ ರಾಷ್ಟ್ರಗಳಲ್ಲಿಯ ನಷ್ಟದ ಪ್ರಮಾಣದ ಅಂದಾಜನ್ನು ನೀಡುತ್ತದೆ.

ರಿಷ್ಟಿಮ್ ಪ್ರಾಂತ್ಯ ಬರಿದಾಗಿರುವಂತೆ ಬರಿದಾಗಬೇಕಾದ ಚೆರ್ನೊಬಿಲ್ ಸುತ್ತಮುತ್ತಲೀಗ ಒಂದು ಹನಿ ಮಳೆನೀರು ನೆಲಕ್ಕೆ ಸೋಕದಷ್ಟು ಎಚ್ಚರ ವಹಿಸಲಾಗುತ್ತಿದ್ದು, ಮಳೆಯ ಲಕ್ಷಣ ಕಂಡಾಗೆಲ್ಲಾ ಇಬ್ಬನಿ ಪ್ರವೇಶಕ್ಕೆ ಪ್ಲಾಸ್ಟಿಕ್ ಹಾಳೆಯನ್ನು ತಕ್ಷಣದಲ್ಲೆ ಸೃಷ್ಟಿಸಿ ಹರಡುವ ಯಂತ್ರಗಳು ಸಿದ್ಧವಾಗಿ ನಿಂತಿವೆ. ದುರಂತದ ನಂತರ ಆಗ ಗರ್ಭಿಣಿಯಾಗಿದ್ದರೆಂದು ಕಂಡ ಎಲ್ಲರನ್ನೂ ಗರ್ಭಪಾತಕ್ಕೊಳಪಡಿಸಿದ್ದಲ್ಲದೆ ಮತ್ತೆ ಗರ್ಭ ಧರಿಸಲು ಎರಡು ವರ್ಷಕ್ಕೂ ಮಿಕ್ಕಿ ಅವಧಿಯ ಎಚ್ಚರಿಕೆಯನ್ನು ನೀಡಲಾಗಿದೆ. ಇದು ಅಣುಶಕ್ತಿಯ ಜೀವಮಾರಕತನಕ್ಕೆ ಘೋರ ಸಾಕ್ಷಿ. ಜತೆಗೆ ದುರಂತದ ಭಯದ ನೆರಳಲ್ಲೇ ಬದುಕಬೇಕಾದ ದುರ್ಭರ ಪ್ರಸಂಗ ಇಲ್ಲಿಯ ಜನಕ್ಕೆ.

ಅಣು ಸ್ಥಾವರಗಳು ವಿದ್ಯುತ್ ಉತ್ಪಾದಿಸಲಾರಂಭಿಸಿದರೆ ವಿದ್ಯುತ್ ತುಂಬ ಅಗ್ಗವಾಗುತ್ತದೆ ಎಂಬ ಪ್ರಚಾರದಲ್ಲಿ ಜಗತ್ತಿನ ಹಲವು ರಾಷ್ಟ್ರಗಳು ಮೊದಮೊದಲು ಅಣು ಸ್ಥಾವರ ನಿರ್ಮಿಸಲು ತುಂಬ ಉತ್ಸುಕತೆಯಿಂದ ಮುಂದಾದವಾದರೂ ನಂತರ ಇವರ ಅಪಾಯವನ್ನು ಕಾಣುತ್ತ ಬಂದವು. ಅಣು ಸ್ಥಾವರಗಳ ನಿಮಿತ್ತ ಆರ್ಥಿಕ ರಂಗವನ್ನು ಏರುಪೇರಾಗಿಸುವ ಅಣುಶಕ್ತಿ ಅತಿ ವೆಚ್ಚಕ್ಕೆ ಕಾರಣವಾಗುವ ಅಂಶವನ್ನೂ ಅರಿತರು. ಒಂದು ಸ್ಥಾವರದ ನಿರ್ಮಾಣ ಹಂತದಲ್ಲಿ ಬೇಕಾಗುವಷ್ಟು ವಿದ್ಯುತ್ತನ್ನು ಅದು ಮರಳಿ ಉತ್ಪಾದಿಸಿಕೊಳ್ಳಲು ಮೂರರಿಂದ ಐದು ವರ್ಷಗಳ ಅವಧಿಯನ್ನು ತೆಗೆದುಕೊಳ್ಳುತ್ತದೆಂಬ ಸತ್ಯವೂ ಈಗ ಗೊತ್ತಾಗಿದೆ.

1975ರಲ್ಲಿ ಅಮೆರಿಕ ಕ್ರಿಸ್ತಶಕ 2000ದ ವೇಳೆಗೆ 1000 ಅಣು ಸ್ಥಾವರಗಳನ್ನು ಹೊಂದಲು ಯೋಜನೆ ತಯಾರಿಸಿತ್ತು. ಆದರೆ 1980ರಲ್ಲಿ ಈ ಸಂಖ್ಯೆಯನ್ನು 200ಕ್ಕೆ ಇಳಿಸಿತು. ಥ್ರೀಮೈಲ್ ಐಲೆಂಡ್ ದುರಂತದ ನಂತರವಂತೂ ಅಣು ಸ್ಥಾವರ ನಿರ್ಮಾಣವನ್ನು ಪೂರ್ತಿ ಕೈಬಿಟ್ಟು ಶಾಖೋತ್ಪನ್ನ ವಿದ್ಯುದಾಗಾರಗಳಿಂದಲೇ ಹೆಚ್ಚು ವಿದ್ಯುತ್ತು ಪಡೆಯುವತ್ತ ಗಮನಹರಿಸಿ ಯಶಸ್ವಿಯಾಯಿತು.

ಫ್ರಾನ್ಸ್ ಜಗತ್ತಿನಲ್ಲಿ ಅಣು ಶಕ್ತಿಯಿಂದ ಹೆಚ್ಚು (ಶೇ. 58.7) ವಿದ್ಯುತ್ತನ್ನು ಪಡೆಯುತ್ತಿದ್ದರೂ ಈ ಸ್ಥಾವರಗಳ ನಿರ್ಮಾಣಕ್ಕಾಗಿ ಮಾಡಿರುವ ಸಾಲದ ಹೊರೆಯಿಂದ ಮುಕ್ತವಾಗಲು ಚಾಕಲೇಟು, ಬಿಸ್ಕತ್ತು ಮತ್ತು ಟೂತ್‌ಪೇಸ್ಟ್ ಮೊದಲುಗೊಂಡು ಎಲ್ಲದರ ಮೇಲೂ ವಿಶೇಷವಾದ 'ಅಣು ತೆರಿಗೆ'ಯನ್ನು ಹಾಕುತ್ತಿದೆ.

ಜಪಾನು ಜನರ ವಿರೋಧವನ್ನು ಲೆಕ್ಕಿಸದೆ ಕೃತಕ ದ್ವೀಪಗಳನ್ನು ನಿರ್ಮಿಸಿ ಸ್ಥಾವರ ನಿರ್ಮಾಣ ಸಾಧನೆಯಲ್ಲಿ ತನ್ನ ಆರ್ಥಿಕ ರಂಗದಲ್ಲೂ ಏರುಪೇರನ್ನು ಕಾಣುತ್ತಿದೆ.

ಅಣು ಶಕ್ತಿ ಬಳಕೆಗೆ ವಿರೋಧಗಳು

ಹಿರೋಷಿಮಾ-ನಾಗಸಾಕಿಗಳ ದುರಂತ ನಡೆದಂದಿನಿಂದಲೆ ಅಣು ಶಕ್ತಿ ಬಳಕೆಗೆ ವಿರೋಧ ವ್ಯಕ್ತವಾಗುತ್ತ ಬಂದಿದೆ. ಮಹಾ ಮೇಧಾವಿ ರಸಲ್‌ನಂಥವರೂ ಅಣುಶಕ್ತಿಯ ಬಳಕೆ ಅಪಾಯ ತರುತ್ತದೆಂದು ಮನಗಂಡು ಅದಕ್ಕೆ ಕೊನೆ ಹಾಡಲು ಮನವಿಯಿತ್ತರು.

ಆಸ್ಟ್ರೇಲಿಯದ ನಾಗರಿಕರು ಯುರೇನಿಯಂ ಅದಿರನ್ನು ಭೂಮಿಯಿಂದ ತೆಗೆದು ರಫ್ತು ಮಾಡುವ ಸರ್ಕಾರದ ನೀತಿಯ ವಿರುದ್ಧ ಭಾರಿ ಪ್ರಮಾಣದಲ್ಲಿ ಪ್ರತಿಭಟಿಸಿ ಸರ್ಕಾರವನ್ನು ಮಣಿಸಿದರು.

ಯಾವ ರೀತಿಯ ವಿರೋಧವನ್ನೂ ಕಾಣದಿದ್ದ ರಷ್ಯ 1982ರ ಡಿಸೆಂಬರಿನಲ್ಲಿ ಸ್ಮೋಲೆನ್ಸಿನಲ್ಲಿ 1000 ಮೆಗಾವ್ಯಾಟ್ ಸಾಮರ್ಥ್ಯದ ಘಟಕವನ್ನು ಆರಂಭಿಸಿದಾಗ ಅದನ್ನು ಟೀಕಿಸಿ ಆ ದೇಶದ ಲೇಖಕರೆಲ್ಲ 'ಟ್ರಾಡ್' ದಿನ ಪತ್ರಿಕೆಯಲ್ಲಿ ಒಕ್ಕೊರಲಿನಿಂದ ವಿರೋಧ ತೋರಿದಾಗ ಹಲವಾರು ಸಬೂಬುಗಳನ್ನು ಸರ್ಕಾರ ಹೇಳಿಕೊಳ್ಳಬೇಕಾಯಿತು.

ಆಸ್ಟ್ರೇಲಿಯ-ಫಿಲಿಪೈನ್ಸ್ ದೇಶಗಳು ಸಂಪೂರ್ಣ ಸಿದ್ಧವಾಗಿ ವಿದ್ಯುತ್ ಉತ್ಪಾದನೆಗೆ

ಭಾರತದಲ್ಲಿ ಅಣು ಕೊಳಚೆಯ ಅಂದಾಜು ಉತ್ಪಾದನೆ (ಘನ ಮೀಟರುಗಳಲ್ಲಿ)

(ಮೂಲ:. ಹೆಚ್.ಎನ್. ಸೇಥ್ನಾ, ವಿಯನ್ನಾ ಭಾಷಣದಲ್ಲಿ)

ಸಾಧಾರಣ ಗಟ್ಟಿ ಕೊಳಚೆ	ಕ್ರಿ.ಶ. 1982 ರಲ್ಲಿ	1700	ಕ್ರಿ.ಶ.2000 ರಲ್ಲಿ	10,7000
ಕಡಿಮೆ ಮಟ್ಟದ ವಿಕಿರಣಶೀಲ ಕೊಳಚೆ	,,	2500	,,	77100
ಮಧ್ಯಮ ಮಟ್ಟದ ವಿಕಿರಣಶೀಲ ಕೊಳಚೆ	,,	650	,,	19900
ಘೋರ ಮಟ್ಟದ ವಿಕಿರಣ ಕೊಳಚೆ	,,	350	,,	8000

ತೊಡಗಬೇಕಿದ್ದ ಸ್ಥಾವರಗಳನ್ನು ಚೆರ್ನೊಬಿಲ್ ದುರಂತದ ನಂತರ ಅಷ್ಟಕ್ಕೇ ಮುಚ್ಚಿಬಿಟ್ಟವು.

ಭಾರತದಲ್ಲೂ ಅಣು ಶಕ್ತಿಯ ಬಳಕೆಯ ವಿರುದ್ಧ ಸುಪ್ರೀಂ ಕೋರ್ಟಿನ ಮಾಜಿ ನ್ಯಾಯಾಧೀಶ ವಿ.ಆರ್. ಕೃಷ್ಣ ಅಯ್ಯರ್, ವಿಜಯಲಕ್ಷ್ಮಿ ಪಂಡಿತರಲ್ಲದೆ ಹಲವು ಲೇಖಕರು, ಮತ್ತಿತರರು ಮೂರು ಬಾರಿ ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸಿದ್ದಾರೆ. ಆದರೆ ಅಣುಶಕ್ತಿ ಬಳಕೆ ಪ್ರತಿಷ್ಠೆಯದೆಂದುಕೊಂಡಿರುವ ನಮ್ಮ ಸರ್ಕಾರ ಈ ಮನವಿಯನ್ನು ನಿರ್ಲಕ್ಷಿಸಿ ಮುಂದೆ ಸಾಗುತ್ತಿದೆ.

ಕೇರಳದ ಕೊತ್ತಮಂಗಲಮ್ ಬಳಿ ಅಣು ಸ್ಥಾವರ ನಿರ್ಮಿಸಲು ತೊಡಗಿದ್ದ ಅಣುಶಕ್ತಿ ಇಲಾಖೆ ಕೇರಳದ ಪ್ರಜ್ಞಾವಂತ ಜನರಿಂದ ಬಂದ ಉಗ್ರ ಪ್ರತಿಭಟನೆಯಿಂದಾಗಿ ಅಲ್ಲಿಂದ ಮರಳಬೇಕಾಯಿತು. ಭಾರತದಲ್ಲಿ ಅಣು ಶಕ್ತಿ ಬಳಕೆಯ ವಿರುದ್ಧ ಹೆಚ್ಚಿನ ವಿರೋಧ ಕಾಣದಿರುವುದಕ್ಕೆ ಇದರಿಂದ ಸಂಭವಿಸುವ ಅಪಾಯಗಳ ಅರಿವು ಕೆಲವರಿಗಷ್ಟೇ ಇದ್ದು ಮತ್ತೆ ಕೆಲವರಿಗೆ ಅರೆಬರೆಯೆಂಬಂತೆ ತಿಳಿದಿದ್ದು, ನಮ್ಮ ವಿಜ್ಞಾನಿಗಳೂ ಈ ವಿಷಯಗಳಲ್ಲಿ ಒಮ್ಮುಖದ ಸತ್ಯಗಳನ್ನು ಹೇಳುತ್ತ ಉಳಿದ ಅಂಶಗಳನ್ನು ಮರೆಮಾಚುತ್ತಿರುವುದು ಕಾರಣವಾಗಿದೆ.

ಈ ಎಲ್ಲ ವಿವರಗಳಲ್ಲಿ ಕೈಗಾ ವಿವಾದವನ್ನು ನೋಡುವಾಗ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವವರ ಕಳಕಳಿ ಎಂಥದೆಂದು ತಿಳಿಯುತ್ತದೆ. ಕೈಗಾ ಸ್ಥಾವರ ನಿರ್ಮಾಣಕ್ಕೆ ಮುನ್ನ ಕೇಂದ್ರ ಸರ್ಕಾರದ ತೀರ್ಮಾನವನ್ನು ಸ್ವಾಗತಿಸಿದ್ದ ರಾಜ್ಯ ಸರ್ಕಾರ, ಅಣು ಶಕ್ತಿ ಬಳಕೆ ಕುರಿತಂತೆ ರಾಷ್ಟ್ರ ಮಟ್ಟದ ಚರ್ಚೆ ನಡೆಸುತ್ತೇನೆಂದು ಹೇಳಿಕೊಂಡಿತ್ತು. ಆದರೆ ನಂತರದಲ್ಲಿ ಈ ಬಗ್ಗೆ ಮೌನ ತಾಳಿ ಸಂಶಯ ಹುಟ್ಟಿಸಿತ್ತು. ಸರ್ಕಾರ ಮಾಡದ ಈ ಕೆಲಸವನ್ನು ಕೈಗಾ ಸುತ್ತಲಿನ ಪರಿಸರ ಪ್ರೇಮಿಗಳು 1986ರ ಫೆಬ್ರುವರಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ವಜ್ರಳ್ಳಿಯಲ್ಲಿ ಕರೆದ ಅಧಿವೇಶನದಲ್ಲಿ ಈ ಸ್ಥಾವರ ತರಲಿರುವ ಅಪಾಯಗಳನ್ನು ಇದು ನೀಡಲಿರುವ ವಿದ್ಯುತ್ತಿನೊಂದಿಗೆ ತೂಗಿ ನೋಡಿ ಈ ಅಣು ಸ್ಥಾವರ ಕರ್ನಾಟಕಕ್ಕೆ ಹೊರೆಯಾಗುತ್ತದೆ ಎಂಬ ಹಲವು ಸಂಗತಿಗಳನ್ನು ಬಯಲು ಮಾಡಿದರು.

ಅಣು ಶಕ್ತಿಯ ಬಳಕೆಯ ನೆಪದಲ್ಲಿ ಜಗತ್ತಿನಲ್ಲಿ ಪ್ರತಿವರ್ಷ ಒಂಬತ್ತು ಬಿಲಿಯನ್ ಡಾಲರ್ ಹಣ ಅಣು ವಿದ್ಯುತ್ ಸಂಶೋಧನೆಗೆಂದೇ ವ್ಯಯವಾಗುತ್ತಿದೆ. ಇದರಲ್ಲಿ ಅಧಿಕಾರಾರೂಢರ ಸ್ವಹಿತ ಚಿಂತನೆ, ರಾಜಕೀಯ ಹಿತಾಸಕ್ತಿಗಳು, ಅಣುಶಕ್ತಿ ಮಿಲಿಟರಿ ಶಕ್ತಿಗಳ ಕೈವಾಡವಿದೆ. ಎರಡನೇ ಮಹಾಯುದ್ಧ ಜಗತ್ತಿಗೆ ಬಿಟ್ಟು ಹೋದ ಕರಿ ನೆರಳೇ ಈ ಅಣು ಶಕ್ತಿ.

ಬದಲಿ ಶಕ್ತಿ ಮೂಲಗಳು

ಕ್ರಿಸ್ತಶಕ 2000ದ ವೇಳೆಗೆ 22 ಅಣು ಸ್ಥಾವರ ಘಟಕಗಳನ್ನು ನಿರ್ಮಿಸಲು ಹೊರಟಿರುವ ಭಾರತ ಅಣು ಶಕ್ತಿಗೆ ಹೊರತಾದ ಶಕ್ತಿ ಮೂಲಗಳತ್ತ ಯೋಚಿಸಿದೆಯೆ? ಇಲ್ಲ. ಜಗತ್ತಿನ ಇತರ ರಾಷ್ಟ್ರಗಳಿಗಿಲ್ಲದ ಬದಲಿ ಶಕ್ತಿ ಮೂಲಗಳ ಸೌಲಭ್ಯ ಕರ್ನಾಟಕದಂತೆ ಭಾರತಕ್ಕೂ ವರವಾಗುವಂತಿದ್ದು ವರ್ಷದ ಹತ್ತು ತಿಂಗಳು ಹೇರಳ ಸೌರ ಶಕ್ತಿ ಇಲ್ಲಿ ಲಭ್ಯವಿದೆ.

ಕರ್ನಾಟಕದ ಕರಾವಳಿಯ ಬ್ರಹ್ಮಗಿರಿ ಶ್ರೇಣಿ


ಯಲ್ಲಿ ದೇಶದಲ್ಲೇ ಅತಿ ಹೆಚ್ಚು ಪ್ರಮಾಣದ ವೇಗದ ಗಾಳಿ ಬೀಸುತ್ತಿದ್ದು ಇಲ್ಲಿ ವಿದ್ಯುತ್ ಉತ್ಪಾದಿಸಬಹುದೆಂದು ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ ವಿಜ್ಞಾನಿ ಎಸ್.ಕೆ. ತಿವಾರಿ ಈಚೆಗಷ್ಟೇ ಬೆಂಗಳೂರಿನಲ್ಲಿ ಹೇಳಿದ್ದಾರೆ.

ಹೀಗೆ ಇನ್ನೂ 200 ವರ್ಷಗಳವರೆಗೆ ಲಭ್ಯವಿರುವ ಕಲ್ಲಿದ್ದಲಿನಿಂದ ರಾಯಚೂರಿನಲ್ಲಿರುವ ಶಾಖೋತ್ಪನ್ನ ವಿದ್ಯುದಾಗಾರದಂಥವುಗಳನ್ನು ಸ್ಥಾಪಿಸಬಹುದು. ಸಮುದ್ರ ಭರತಿ, ಗೊಬ್ಬರ ಅನಿಲಗಳಿಂದಲೂ ಪಡೆಯಬಹುದಾದ ಶಕ್ತಿಯತ್ತ ಗಮನ ಹರಿಯಬೇಕಿದೆ. ಈ ಕ್ಷೇತ್ರಗಳ ವಿಜ್ಞಾನಿಗಳಿಗೆ ಹೆಚ್ಚಿನ ಬೆಂಬಲ ಸಿಕ್ಕಬೇಕಿದೆ.

ಈಗಾಗಲೇ ಕ್ಯಾಲಿಫೋರ್ನಿಯದಲ್ಲಿ ಮೂರು ವರ್ಷಗಳಲ್ಲೇ 3000 ಮೆಗಾವ್ಯಾಟ್ ವಿದ್ಯುತ್ತನ್ನು ಗಾಳಿ ಯಂತ್ರಗಳಿಂದ ಉತ್ಪಾದಿಸುತ್ತಿದ್ದು, ಇಸ್ರೇಲಿನಲ್ಲಿ ಉಕ್ಕನ್ನು ಕರಗಿಸುವ ಸೌರ ತಂತ್ರಜ್ಞಾನವೂ ಫಲ ನೀಡಿದೆ. ಬ್ರಿಟನ್ನಿನಲ್ಲಿ ಸೋಲಾರ್ ಸೆಲ್‌ಗಳಿಂದ ನೀರೆತ್ತುವ ಪಂಪುಗಳು ಬಳಕೆಯಲ್ಲಿವೆ.

ರಾಜ್ಯದಲ್ಲಿ ಶೇಕಡಾ 30 ರಷ್ಟು ವಿದ್ಯುತ್ ಕೇವಲ ನೀರಾವರಿ ಪಂಪ್ ಸೆಟ್ಟುಗಳಿಗೇ ವ್ಯಯವಾಗುತ್ತಿದ್ದು, ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿರುವ ಸೌರ ಶಕ್ತಿಯ ಪಂಪ್ ಸೆಟ್‌ಗಳಂಥ ಯಂತ್ರಗಳ ಮೂಲಕ ಇವುಗಳಿಗೆ ಬೇಕಾದ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಬಹುದು. ಅಲ್ಲದೆ ಪ್ರತಿಯಾಗಿ ಕೈಗಾದ ಮೂರುಪಟ್ಟು ವಿದ್ಯುತ್ತಿನ ಜೊತೆಗೇ ನಾಲ್ಕು ಸಾವಿರ ಟನ್ ಅಲ್ಯೂಮಿನಿಯಂ ಕೇಬಲನ್ನೂ ಸರ್ಕಾರ ಪಡೆಯಬಹುದು. ಹೀಗೆಯೇ ಕೇವಲ ಇಪ್ಪತ್ತು ಚದುರ ಕಿಲೋಮೀಟರ್ ಬಿಸಿಲಿನಿಂದ ಕೈಗಾದ ಎರಡು ಪಟ್ಟು ವಿದ್ಯುತ್ತನ್ನು ಪಡೆಯಬಹುದಾಗಿದೆ. ಈ ನಿಟ್ಟಿನ ಪ್ರಯತ್ನಗಳು ಪರಿಸರದ ಮೇಲೆ ಅಪಾಯ ತಾರದಂಥವು. ವಿದ್ಯುತ್ ಸಮಸ್ಯೆಯನ್ನು ನೀಗಿಸುವಂಥವು.

ಕೈಗಾ ಸ್ಥಾವರ ಬೇಕೆ? ಬೇಡವೆ? ಎಂಬುದನ್ನು ಈ ಎಲ್ಲ ವಿವರಗಳ ಹಿನ್ನೆಲೆಯಲ್ಲಿ ಯೋಚಿಸಬೇಕಾದ್ದು ಸಕಾಲಿಕ. ಮತ್ತೊಂದು ತಪ್ಪು ಮಾಡದ ಎಚ್ಚರಿಕೆಯನ್ನೂ ನಾವು ತಂದುಕೊಳ್ಳಲು ನೆರವಾಗುವ ಸಂಗತಿ. ●


ಇಣುಕಿ ನೋಡುವ ಪ್ರಕೃತಿ
ಪ್ರಯೋಗ ಶಾಲೆಗಳ ಕೊಠಡಿಯೊಳಗಿಂದ
ಇಣುಕಿ ನೋಡುತಿದೆ ಪ್ರಕೃತಿ
ಆತಂಕ ಮಿಶ್ರಿತ ಕುತೂಹಲದಿಂದ
ಅವರೆದೆಯು ಢವಗುಟ್ಟುತಿದೆ
ತನ್ನ ಗುಟ್ಟು ರಟ್ಟಾಗಿ ಬಿಡುವುದೋ
ಎಂಬ ಭಯದಿಂದ.
ಉಪನಿಷತ್ತುಗಳಲ್ಲಿ ಬಯಲಾಗಿ ಬಿಡುವ ಭಯ.
ಶ್ವೇತವಾರಾಹ ಕಲ್ಪವಲ್ಲವೇ ಇದು ಇನ್ನೂ?
ವೈವಸ್ವತ ಮನ್ವಂತರ. ಕಲಿಯ ಪ್ರಥಮಪಾದ.
ಕಲಿಗೆ ಕೈವಶ. ಅದೊಂದೇ ಅದಕೆ ಪರವಾದ ವಾದ
ಇನ್ನೂ ಅಕೃತ ಇದೆ ಬಹಳ.
ಕೃತಕ್ಕೆ ಬಹುದೂರ
ಋತಕ್ಕೂ ದೂರ.
ತ್ರಿಗುಣಗಳಿಂ ಬಡಿದಾಡುತಿವೆ, ಮಥಿಸುತಿವೆ.
ಸಾಮ್ಯಾವಸ್ಥೆ ಲಕ್ಷಾಂತರ ವರುಷಗಳಾಚೆ.
ಇವರ ಲೆಕ್ಕವೆಲ್ಲ ಮಬ್ಬು ಮಬ್ಬು,
ಉರುಳಿದ್ದೇ ಉರುಳುತಿದೆ
ಬಂದದ್ದೇ ಬರುತಿದೆ.
ಧಾತಾ ಯಥಾ ಪೂರ್ವಮಕಲ್ಪಯತ್-ಎಂಬಂತೆ
ಬುದ್ಧಿಯೊಂದನ್ನು ಬಿಟ್ಟು
ಕಾಲಕ್ಕೇ ಅರುಳು ಮರುಳು
ಹೇಳಿದ್ದನ್ನೇ ಹೇಳುತಿದೆಯಲ್ಲ!
ನಾವು ಮಾಡಿದ್ದನ್ನೇ ಮಾಡುತಿದ್ದೇವೆ,
ನಮಗೇನೂ ಲೆಕ್ಕವಿಲ್ಲ
ಏಕೆಂದರೆ-
ನಮ್ಮ ಬುದ್ಧಿಯೂ ದೈವವನ್ನು ದಾಟಿಲ್ಲವಲ್ಲ.
-ಡಾ|| ಪಿ.ಎಸ್. ರಾಮಾನುಜಂ.

ಇದು ನಮ್ಮ ಜೀವ ಇದು ಜೀವನ

ಸುಮಾರು ಐದು ವರ್ಷಗಳ ಹಿಂದೊಂದು ದಿನ ಬೆಳಿಗ್ಗೆ ನಮ್ಮ ಮನೆಯಲ್ಲಿ ಹಣದ ವಿಷಯದಲ್ಲಿ ಜಗಳವಾಯಿತು. ಕೋಪದಲ್ಲಿ ಬೆಳಿಗ್ಗೆ ತಿಂಡಿಯನ್ನು ತಿನ್ನದೆ ಕಚೇರಿಗೆ ಹೋದೆ. ಸಾಯಂಕಾಲ ಕಚೇರಿ ಮುಗಿಸಿ ಮನೆಗೆ ಬರುವ ಬದಲು ನೆಟ್ಟಗೆ ಬಾರ್‌ಗೆ ಹೋಗಿ ಕುಳಿತು ಬ್ರಾಂದಿ ಕುಡಿಯಲು ಪ್ರಾರಂಭಿಸಿದೆ. ರಾತ್ರಿ ಸುಮಾರು ಹತ್ತು ಗಂಟೆಗೆ ಬೇರರ್ ಒತ್ತಾಯ ಪೂರ್ವಕ ಹೊರಗೆ ಕಳುಹಿಸಿದ. ಅಲ್ಲಿಂದ ಎದ್ದು ಪಕ್ಕದಲ್ಲಿರುವ ಇನ್ನೊಂದು ಬಾರ್‌ಗೆ ಹೋಗಿ ಕುಡಿಯಲು ಪ್ರಾರಂಭಿಸಿದೆ. ಅಲ್ಲಿಯೂ ರಾತ್ರಿ ಹನ್ನೊಂದುವರೆಯಾದುದರಿಂದ ಬಲಾತ್ಕಾರವಾಗಿ ಹೊರಗೆ ಹಾಕಿಸಿಕೊಂಡದ್ದಷ್ಟೆ ನನಗೆ ಜ್ಞಾಪಕವಿದ್ದುದು.

ನನಗೆ ಜ್ಞಾನ ಬಂದಾಗ ಮರುದಿನ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ನಾನು ಮನೆಯಲ್ಲಿರದೇ ಪೊಲೀಸ್ ಸ್ಟೇಶನ್ನಿನ ಒಂದು ಕೋಣೆಯಲ್ಲಿ ಮಲಗಿದ್ದೆ. ನಾನು ಎಚ್ಚರಗೊಂಡುದನ್ನು ಕಂಡು ಒಬ್ಬ ಪೊಲೀಸ್ ದಫೇದಾರ ನನ್ನ ಬಳಿ ಬಂದು "ನಿನ್ನೆ ನೀವು ರಾತ್ರಿ ಒಂದು ಗಂಟೆಗೆ ರಸ್ತೆ ಪಕ್ಕದ ಮೋರಿಯಲ್ಲಿ ಬಿದ್ದಿದ್ದಿರಿ" ಎಂದು ಹೇಳಿ ನಾನು ಕೆಲಸ ಮಾಡುವ ಕಚೇರಿ ಹಾಗೂ ಮನೆಯ ವಿಳಾಸವನ್ನು ಕೇಳಿದ. ನಡೆದ ವಿಷಯವನ್ನು ಅವನಿಗೆ ಹೇಳಿದಾಗ "ತಗೊಳ್ಳಿ, ನಿಮ್ಮ ನಿಕ್ಕರ್ ಜೇಬಿನಲ್ಲಿದ್ದ ಹಣ" ಎಂದು ಹೇಳಿ ನೂರು ರೂಪಾಯಿಗಳನ್ನು ಕೊಟ್ಟುದಲ್ಲದೆ ರಿಕ್ಷಾವೊಂದರಲ್ಲಿ ನನ್ನನ್ನು ಕೂರಿಸಿ ಅವನೂ ನನ್ನ ಮನೆತನಕ ಬಂದಾಗ ನನಗೆ ಕೃತಜ್ಞತೆಯಿಂದ ಕಣ್ಣೀರು ಬರುವಂತಾಯಿತು. "ಕಾಫಿ ಕುಡಿಯಿರಿ" ಎಂದು ಒಂದಷ್ಟು ಕೊಡಲು ಹೋದೆ. ಆದರೆ ಆತ ಅದನ್ನು-ನಿರಾಕರಿಸಿ "ನೀವು ಇನ್ನು ಮುಂದೆ ಯಾವುದೇ ಸಂದರ್ಭದಲ್ಲಿ ಕುಡಿಯುವುದಿಲ್ಲವೆಂದು ಭಾಷೆ ಕೊಡಿ. ಅಷ್ಟೇ ಸಾಕು" ಎಂದು ಹೇಳಿ ನಾನು ಭಾಷೆಕೊಟ್ಟ ಮೇಲೆ ಹೊರಟುಹೋದ. ನನ್ನ ಅಪರಿಚಿತ ಹಿತೈಷಿಗೆ ಕೊಟ್ಟ ಮಾತನ್ನು ನಾನು ತಪ್ಪಿಲ್ಲ.

ಜಿ. ರಾಮಣ್ಣ ಅಲೆಟ್ಟಿ

ನನ್ನೊಬ್ಬ ಸ್ನೇಹಿತನಿಗೆ ತುಂಬಾ ತೊಂದರೆಯಿದ್ದುದರಿಂದ ಸಾಲ ಕೇಳಿದನೆಂದು 1,800 ರೂಪಾಯಿಗಳನ್ನು ಕೊಟ್ಟಿದ್ದೆ. ಎರಡು ವರ್ಷಗಳ ಹಿಂದೆ ಕೇಳಿದಾಗೊಮ್ಮೆ ತೊಂದರೆಯ ಪಟ್ಟಿಯನ್ನೇ ಲಂಬಿಸಿ ನನ್ನೆದುರು ಆತ ಇಡುತ್ತಿದ್ದನಾದ್ದರಿಂದ ಮುಂದೆ ಕೇಳುವುದನ್ನೇ ಬಿಟ್ಟಿದ್ದೆ. ಆದರೆ ಇತ್ತೀಚೆಗೆ ತನ್ನ ಸಾಲಗಳನ್ನೆಲ್ಲ ತೀರಿಸಿಬಿಡುವುದಕ್ಕಾಗಿ ಆತ ಮನೆಯನ್ನು 1.80 ಲಕ್ಷ ರೂಪಾಯಿಗಳಿಗೆ ಮಾರಿದನೆಂದು ಗೊತ್ತಾಗಿ, ನನಗೂ ಹಣದ ಅವಶ್ಯಕತೆಯಿದ್ದುದರಿಂದ ಈಗಲಾದರೂ ಕೊಟ್ಟಾನೆಂಬ ಆಸೆಯಿಂದ ಆತನ ಮನೆಗೆ ಹೋದೆ. ಆತ ಮನೆಯಲ್ಲಿರಲಿಲ್ಲ. ಆತನ ಹೆಂಡತಿಗೆ ನನ್ನ ಪರಿಚಯವೂ ಇರಲಿಲ್ಲ. ಮತ್ತೆ ಬರುವುದಾಗಿ ಹೇಳಿ ಬಂದೆ. ಹತ್ತಾರು ಬಾರಿ ಇದೇ ಪುನರಾವರ್ತಿಸಿತು.

ಕೊನೆಗೊಮ್ಮೆ ಆತ ಮನೆಯಲ್ಲೇ ಸಿಕ್ಕಿ. ಅದೂ ಇದೂ ಮಾತಾಡಿ "ಬನ್ನಿ ಸ್ವಲ್ಪ

ಹೊರಗೆ ಹೋಗಿ ಬರೋಣ" ಎಂದ. ಹೊರಗೆ ಬಂದು ಹೋಟಲೊಂದರಲ್ಲಿ ಕಾಫಿ ಕುಡಿಯುತ್ತ, "ನೋಡಿ, ನಾನು ನಿಮ್ಮಿಂದ ಪಡೆದ ಸಾಲದ ವಿಷಯ ನನ್ನ ಹೆಂಡತಿಗೆ ತಿಳಿಯದು. ಅಲ್ಲದೆ ಮೊನ್ನೆ ಮನೆ ಮಾರಿ ಬಂದ ಹಣವೆಲ್ಲ ಆಕೆಯ ಹೆಸರಲ್ಲೇ ಬ್ಯಾಂಕಿನಲ್ಲಿದೆ. ಈಗ ನಿಮ್ಮ ಹಣ ವಾಪಸ್ಸು ಕೊಡಬೇಕೆಂದರೆ ನಾನು ಆಕೆಯಿಂದ ಸಾಲ ಪಡೆದು, ಅದೂ 'ನಿಮಗೆ ಸಾಲ ಬೇಕಾಗಿದೆ' ಎಂಬ ಸಬೂಬು ಹೇಳಿ ಕೇಡಬೇಕು ಒಂದು ಕೆಲಸ ಮಾಡಿ, ನಮ್ಮ ಮನೆಗೆ ಬಂದು ನನ್ನ ಹೆಂಡತಿಯೆದುರೇ ಇದರ ಪ್ರಸ್ತಾಪ ಮಾಡಿ, ಅಂದರೆ ನಿಮಗೆ ಸಾಲ ಕೊಟ್ಟಾಳು?" ಎಂದಾಗ ಇನ್ನು ಹೆಚ್ಚು ಹೊತ್ತು ಅಲ್ಲಿ ನಿಲ್ಲುವುದು ಸಾಧ್ಯವಾಗದೇ ಹೊರಬಂದೆ.

—ಕಾ.ವಿ. ಅಭಯಕುಮಾರ

ನನ್ನ ಸ್ನೇಹಿತನ ಮಗು— ಸುಮಾರು ಐದು ವರ್ಷದ್ದು- ಮನೆಗೊಂದೇ ಮಗು. ಚೆನ್ನಾಗಿಯೇ ಆಟವಾಡಿಕೊಂಡಿದ್ದು ಒಂದು ದಿನ ಬೆಳಿಗ್ಗೆ ಹತ್ತು ಘಂಟೆ ಸುಮಾರಿಗೆ ತಪ್ಪಿಸಿಕೊಂಡುಹೋಯಿತು. ಬಹು ವರ್ಷಗಳ ಕೊರಗಿನ ನಂತರ ಆಪ ರೂಪಕ್ಕೆ ಗಂಡು ಮಗುವಿನ ತಂದೆ ಯಾಗಿದ್ದ ಆ ನನ್ನ ಸ್ನೇಹಿತ. ಮಗು ಕಳೆದು ಹೋದದ್ದು ಆತನಿಗೆ, ಆತನ ಹೆಂಡತಿಗೆ ತೀವ್ರ ಆಘಾತವನ್ನುಂಟು ಮಾಡಿತ್ತು. ಬೆಳಗಿನಿಂದ ಹುಡುಕಿ ಹುಡುಕಿ ಸಂಜೆ ಐದರ ವೇಳೆಗೆ ಅಂತೂ ಮಗು ಅವರಿಗೆ ಸಿಕ್ಕಿತು. ಆಗ ನನ್ನ ಸ್ನೇಹಿತನ ಆನಂದಕ್ಕೆ ಮಿತಿಯೇ ಇಲ್ಲ ದಾಯ್ತು. ತುಂಬ ಸಂತೋಷದಿಂದ ಮನೆಗೆ ಕರೆದುಕೊಂಡು ಬಂದ ಆ ದಂಪತಿಗಳು ಮಗುವನ್ನು ಎತ್ತಿ ಮೇಲಕ್ಕೆ ಹಾರಿಸಿ ಮಗುವಿನ ಕೇಕೆಯನ್ನು ಕೇಳಿ ಸಂಭ್ರಮಿಸುವ ಆಸೆಯಿಂದ ಮೇಲಕ್ಕೆ ಹಾರಿಸಿದ್ದಾರೆ. ಆದರೆ... ಆದರೆ... ದುರದೃಷ್ಟವಶಾತ್ ಮೇಲೆ ಭರ್ರನೇ ತಿರುಗುತ್ತಿರುವ ಫ್ಯಾನಿನ ಕಡೆ ಅವರ ಗಮನ ಹರಿದಿದ್ದರೆ.... ಎಸೆಯಲ್ಪಟ್ಟ ಮಗು ಫ್ಯಾನಿಗೆ ಬಲಿಯಾಗಿ ತುಂಡಾಗಿ ಕೆಳಬಿದ್ದಿತ್ತು!

"ಕೊಟ್ಟೆ ಏಕೆ ದೇವಾ ಕೊಟ್ಟು ಕಸಿದೆಯೇಕೆ?"

-ಎನ್ನಾರ್ ವಾಸುದೇವರಾವ್

ಒಂದು ಸಲ ನಮ್ಮ ದೊಡ್ಡಮ್ಮನವರ ಮನೆಗೆ ಹೋಗಿದ್ದೆ. ಮನೆಯ ಜವಾಬ್ದಾರಿಯನ್ನು ನನಗೆ ಬಿಟ್ಟು ಮನೆಯವರೆಲ್ಲಾ ಎಲ್ಲಿಗೋ ಹೋಗಿದ್ದರು. ಒಬ್ಬನೇ ಕುಳಿತು ಬೇಸರವಾಗುತ್ತಿತ್ತು. ಒಂದು ಬೆಕ್ಕು ಮನೆಯ ಒಳಗಡೆ ಬಂತು. ಮನೆಗೆ ಕಿಟಕಿಗಳಿರಲಿಲ್ಲ.

ನಾನು ಬಾಗಿಲನ್ನು ಹಾಕಿ, ಒಂದು ಕೋಲನ್ನು ತೆಗೆದುಕೊಂಡು ಒಳಗಡೆ ಹೋದೆ. ಬೆಕ್ಕು ನನ್ನನ್ನು ಕಂಡು ಹೆದರಿ ಮಡಕೆ ಸಾಲಿನ ಸಂದಿಯಲ್ಲಿ ಸೇರಿಕೊಂಡಿತು. ನಾನು ಕೋಲಿನಿಂದ ತಿವಿದೆ. ಹೊರಗೆ ಬಂದು ಬೇರೆ ಕಡೆ ಅವಿತುಕೊಂಡಿತು. ಅಲ್ಲಿಗೂ ಹೋಗಿ ಕೋಲಿನಿಂದ ತಿವಿದೆ. ಅನಂತರ ಬಾಗಿಲ ಕಡೆ ಓಡಿತು. ಅಲ್ಲಿಗೂ ಓಡಿಸಿಕೊಂಡು ಹೋದೆ. ಬಾಗಿಲು ಭದ್ರವಾಗಿ ಮುಚ್ಚಿದ್ದೆನಲ್ಲ. ಹೊರಗೆ ಓಡಿ ಹೋಗಲು ತುಂಬಾ ಪ್ರಯತ್ನಿಸಿತು. ಆದರೆ ಎಲ್ಲಿಯೂ ಜಾಗ ವಿರಲಿಲ್ಲ. ಕೊನೆಯ ಸಲ ಹೊಡೆಯಲು ಕೋಲನ್ನೆತ್ತಿದೆ. ಆ ಬೆಕ್ಕಿಗೆ ಅದೇನು ರೋಷ ಬಂದಿತ್ತೋ ಏನೋ! ತನ್ನ ಕಾಲುಗಳಲ್ಲಿದ್ದ ಉಗುರುಗಳನ್ನು ನಿಮಿರಿಸಿ, ಮುಖವನ್ನು ಗಂಟಿಕ್ಕಿಕೊಂಡು 'ಫ಼ೊರ್' ಎಂದು ಹುಲಿಯಂತೆ ಘರ್ಜಿಸಿತು.

ಆಕಸ್ಮಿಕವಾಗಿ ನಡೆದ ಈ ಘಟನೆ ಯಿಂದ ನನ್ನ ಶಕ್ತಿಯೆಲ್ಲ ಉಡುಗಿ ಭೂಮಿಗೆ ಇಳಿದು ಹೋಯಿತು. ನನ್ನ ಶರೀರವಿಡಿ ಕಂಪಿಸಲಾರಂಭಿಸಿತು. ಶಿಲೆಯ ಪ್ರತಿಮೆಯಂತೆ ಸುಮ್ಮನೆ ನಿಂತು ಬಿಟ್ಟೆ! ಕೈಯಲ್ಲಿದ್ದ ಕೋಲು ಜಾರಿ ನನ ಗರಿವಿಲ್ಲದೆಯೇ ಕೆಳಗೆ ಬಿದ್ದಿತ್ತು. ಮೆಲ್ಲನೆ ಹೋಗಿ ಬಾಗಿಲನ್ನು ತೆರೆದೆ! ಹೊರಗೆ ಹೋಗಲು ಜಾಗವನ್ನು ಕಾಯುತ್ತಿದ್ದ ಬೆಕ್ಕು ಕೂಡಲೇ ಪರಾರಿಯಾಯಿತು. ಆಗ ಸ್ವಲ್ಪ ಜೀವ ಬಂದಂತಾಯಿತು.

ಪ್ರಾಣಭಯವುಂಟಾದಾಗ ಪ್ರಾಣಿ ಎಂಥ ಶತ್ರುವನ್ನೂ ಎದುರಿಸಲು ಎದೆಸೆಟೆಸಿ ನಿಲ್ಲುತ್ತದೆಂಬ ವಿಷಯ ನನಗೆ ಮನವರಿಕೆಯಾಗಿ 'ಹುಡುಗಾಟಕ್ಕಾದರೂ ಯಾವಾಗಲೂ ಎಚ್ಚರವಾಗಿರು' ಎಂದು ನನಗೆ ನಾನೇ ಹೇಳಿಕೊಂಡೆ.

-ಎಂ.ಬಿ. ಮಂಜುನಾಥಾಚಾರ್


ಮೂಲ: ಶ್ರೀಪಾದ ಕಾಳೆ
ಅನುವಾದ: ಶಾಮಸುಂದರ ಕ್ಯ. ದೇಶಪಾಂಡೆ

ಮರಾಠಿ ಕತೆ

ಪಟ್ಟಣ ಎನ್ನುವುದಕ್ಕಿಂತ ಆ ಊರಿಗೆ ಒಂದು ದೊಡ್ಡ ಹಳ್ಳಿ ಎನ್ನುವುದೇ ಸೂಕ್ತ. ಹಾಗೆಯೇ ಅಲ್ಲೊಂದು ಕಾರ್ಯಾಲಯ, ಅಂದರೆ ಒಂದು ದೊಡ್ಡ ಮನೆ. ಅಲ್ಲಿ ಯಾವ ಕೆಲಸಗಾರನೂ ಇಲ್ಲ. ತಮ್ಮ ತಮ್ಮ ಕೆಲಸಗಳನ್ನು ಅವರವರೇ ಮಾಡಿಕೊಳ್ಳಬೇಕು. ಆ ಮನೆಯವರಿಗೆ ತಿಳಿದ ಏಕಮಾತ್ರ ಪಕ್ವಾನ್ನ 'ಸಾಖರಭಾತ್' ಊಟದ ಜೊತೆಗೆ ಎಂಥದೋ ಒಂದು ಉಪ್ಪಿನ ಕಾಯಿ, ಹಲಸಿನ ಕಾಯಿ ಪಲ್ಯೆ, ಹೆಸರು ಕಾಳಿನ ಸಾರು, ಹೆಸರಿಗೆ ತುಪ್ಪ, ಮಜ್ಜಿಗೆ ಎಂಬ ಬಿಳಿ ನೀರು ಅಥವಾ ಅಂಬಸೋಲಿನ ಸಾರು, ನೀರು ಮಾತ್ರ ವಿಪುಲ ಪ್ರಮಾಣದಲ್ಲಿ ಸಿಕ್ಕುತ್ತದೆ. ಸಾಕಷ್ಟು ಶುದ್ಧ ಹವೆ. ಇನ್ನೊಂದೆಡೆ ಲಯ ರಹಿತ ಬಾಜಂತ್ರಿ ನಡೆಯುತ್ತಿದೆ. ಅಲ್ಲಿ ಮದುವೆ ಇತ್ತು. ಇದರ ಅವಶ್ಯಕತೆಯಿದ್ದದ್ದು ಇತರರಿಗೇ ಹೊರತು ಕಾರ್ಯಾಲಯದವರಿಗಲ್ಲ.

ಒಂದು ಬದಿಯಿಂದ ವರನ ಕಡೆಯಿಂದ ನಾಲ್ಕಾರು ಜನ ಮತ್ತೊಂದು ಬದಿಯಿಂದ ವಧುವಿನ ಕಡೆಯವರು ಬಂದರು. ಯಾವುದೇ ಗಡಿಬಿಡಿ, ಗದ್ದಲವಿಲ್ಲ. ಸ್ವಲ್ಪ ಗಟ್ಟಿಯಾಗಿ ಮಾತಾಡಿದರೆ ಎಲ್ಲರಿಗೂ ಕೇಳಿಸುವ ಸ್ಥಿತಿ. ನಾನೇ ಪುರೋಹಿತ, ವರ ಹಾಗೂ ವಧು ಬೇರೆ ಬೇರೆ ಊರಿನವರು, ವರಮಹಾಶಯ ಸಾಧು ಸ್ವಭಾವದವ. ಕಷ್ಟಪಟ್ಟು ದುಡಿದು ಹೊಟ್ಟೆ ಹೊರೆದು ಕೊಳ್ಳುತ್ತಿದ್ದ. ಒಟ್ಟಿನಲ್ಲಿ ಹೇಳುವುದಾದರೆ ಎಂದಾದರೊಂದು ದಿನ ಉಚ್ಛ್ರಾಯ ಸ್ಥಿತಿಗೆ ಬರಬಹುದು. ಆತನ ಪರಿಚಯ ಮುಂಚೆ ನನಗಿರಲಿಲ್ಲವಾದರೂ ಆತನ ಬಗ್ಗೆ ಸಹಾನುಭೂತಿ ಮೂಡಿತು. ಬೇರೆಯವರ ಋಣದಲ್ಲಿ ಬೀಳುವ ಸ್ವಭಾವ ಅವನದಲ್ಲ. ಮದುವೆಯ ಗಡಿಬಿಡಿಯಲ್ಲೂ ಸ್ವಲ್ಪ ವಿರಾಮ ಸಿಕ್ಕೊಡನೆ ತನ್ನ ಕಥೆಯನ್ನು ನನಗೆ ಹೇಳುತ್ತಿದ್ದ.

ಯಾವುದೇ ವಿವಾಹ ನೆರವೇರಿಸಿ ಬರುತ್ತಿದ್ದ ಹಾಗೆ ನನ್ನ ಅರ್ಧಾಂಗಿ ಮೂರು ಪ್ರಶ್ನೆಗಳನ್ನು ಕೇಳುತ್ತಾಳೆ. ವಧು ಹೇಗಿದ್ದಾಳೆ? ಅವಳ ಹೆಸರೇನುಇಟ್ಟಿದ್ದಾರೆ? ಮೈಮೇಲೆ ಯಾವ ಒಡವೆಗಳನ್ನು ಹಾಕಿದ್ದಾರೆ? ಈ ಸಂಗತಿಗಳ ಕಡೆ ನನ್ನ ಗಮನವೇ ಇರುವುದಿಲ್ಲ. ಒಮ್ಮೊಮ್ಮೆ ಕೆಲ ವಿನೋದದ ಪ್ರಸಂಗಳಾಗುತ್ತಿದ್ದವು. ಒಬ್ಬ ವಧುವಿನ ಹೆಸರನ್ನು 'ಪ್ರಜ್ಞಾ' ಎಂದು ಇಡಲಾಗಿತ್ತು. ಆದರೆ ವರನಿಗೆ ಅರ್ಥ ತಿಳಿಯಲೇ ಇಲ್ಲ, ಆತ 'ಪ್ರತಿಜ್ಞಾ' ಎಂದೇ ಅವಳನ್ನು ಕರೆಯುತ್ತಿದ್ದ. ನಗು ಉಕ್ಕಿ ಬಂದರೂ ಆತನಿಗೆ ಅವಮಾನವಾದೀತೆಂದು ಸುಮ್ಮನಿದ್ದೆ, ಇಂಥ ಪ್ರಸಂಗಗಳಲ್ಲಿ ಹೆಸರು ಜ್ಞಾಪಕದಲ್ಲುಳಿಯುತ್ತಿತ್ತು.

ವಧು ಹೇಗಿದ್ದಾಳೆ ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಿತ್ತು. ಏಕೆಂದ್ರೆ ವಧು 'ವಾಗ್ನಿಶ್ಚಯಕ್ಕೆ' ಹೊರಬರುತ್ತಿದ್ದಂತೆ ಆಕೆ ಚಾಣಾಕ್ಷಳಾಗಿರಬಹುದೆ?ಜಗಳಗಂಟಿ ಇರಬಹುದೆ? ಸಂಸಾರವನ್ನು ನಡೆಸಿಕೊಂಡು ಹೋಗಬಹುದೆ ಇಲ್ಲವೆ? ಎಂದು ನನ್ನ ಮನದಲ್ಲಿ ಅಂದಾಜು ಹಾಕುತ್ತೇನೆ. ಈ ಅಂದಾಜನ್ನೇ ನಾನು ನನ್ನ ಅರ್ಧಾಂಗಿಗೆ ಹೇಳುವುದು ಮತ್ತೆ ಈ ವರೆಗೆ ನನ್ನ ಅಂದಾಜು ತಪ್ಪಿದ ಪ್ರಸಂಗಗಳು ಬಹಳ ಕಡಿಮೆ.

ಈಗ ಕಾರ್ಯಾಲಯಕ್ಕೆ ಬಂದ ವಧು ನಸುಗಪ್ಪು ಬಣ್ಣದವಳು. ಮುಖದ ಮೇಲೆ ಕಳೆಯಿತ್ತು.ಶಿಕ್ಷಣ ಹೆಸರಿಗೆ ಮಾತ್ರ. ಆದರೆ ಎದುರಿಸಬೇಕಾಗಿ ಬರಬಹುದಾದ ಪ್ರಸಂಗಗಳನ್ನು ಧೈರ್ಯವಾಗಿ ಎದುರಿಸುವ ಮಾನಸಿಕ ಶಕ್ತಿ ಅವಳಲ್ಲಿದೆ ಎನಿಸಿತು. ಅವಳ ವಯಸ್ಸನ್ನು ಊಹಿಸೂವುದು ನನಗೆ ಸಾಧ್ಯವಾಗಲಿಲ್ಲ. ಆದರೆ ಎಳೆ ವಯಸ್ಸಿನವಳೇ ಇರಬೇಕು. ತಿಳ್ಳಗಿದ್ದು ತಂದೆ ತಾಯಿಗಳಿಲ್ಲದ ಅನಾಥೆ. ಅಣ್ಣ ಹೆಸರಿಗೆ ಇಸ್ತ್ರಿ ಮಾಡಿದ ಶರ್ಟಧರಿಸಿದ್ದ ಮದುವೆಗಿಂತ ಶರ್ಟಿನ ಕಾಲರ್ ಹೊಲಸಾಗದಂತೆ ನೋಡಿ ಕೊಳ್ಳುವುದರಲ್ಲೆ ಅವನಿಗೆ ಹೆಚ್ಚಿನ ಆಸಕ್ತಿ. ಸದಾ ಬೀಡಿ ಸೇದುತ್ತಿದ್ದ, ಅವಳು ಪಿಸುದನಿಯಲ್ಲಿ ನನಗೆ ಹೇಳಿದಳು, ಪರಿಸ್ಥಿತಿ ಹೇಗಿದೆ ನೋಡಿದಿರಲ್ಲವೆ? ಸಾಗಿಸಿ ಕೊಂಡು ಹೋಗಿ "ಅಣ್ಣ ಎಡಬಿಡದೆ ಬೇಗ ಮುಗಿಸಿ, ಬೇಗಮುಗಿಸಿ" ಎನ್ನುತ್ತಿದ್ದ.

ಕೊಡುವ- ತೆಗೆದು ಕೊಳ್ಳುವ ಪ್ರಶ್ನೆಯೇ ಇರಲಿಲ್ಲ. ಮದುವೆ ಮುಗಿಯುತ್ತಿದ್ದಂತೆ ಅಣ್ಣ

ಹೊರಟು ನಿಂತ. ಬಸ್ಸಿನ ಚಾರ್ಜನ್ನು ತಂಗಿಯಿಂದ ಪಡೆಯಲು ಮರೆಯಲಿಲ್ಲ. ನನಗೆ ಎಲ್ಲ ಸಂಗತಿಗಳು ಸ್ಪಷ್ಟವಾಗಿ ತಿಳಿದು ಬಂದವು ದಕ್ಷಿಣೆಗೆಂದು ಹಣವನ್ನು ನನ್ನ ಕೈಯಲ್ಲಿ ಇಡುತ್ತಿದ್ದಂತೆ, ಅದನ್ನೆ ಅವಳಿಗೆ ಉಡುಗೊರೆ ಎಂದು ನೀಡಿದೆ.

"ಇದೇನು?" ಎಂದು ಅವಳು ಸಂಕೋಚ ವ್ಯಕ್ತಪಡಿಸಿದಳು.

"ಇದು ಮಗಳಿಗೆ ನೀಡಿದ ಉಡುಗೊರೆ. ಏನಾದರೂ ಬೇಕಾದರೆ ತಿಳಿಸು. ಮುಂದೆ ಎಂದಾದರೂ ಭೇಟಿಯಾದರೆ ನಿನ್ನ ಸುಖಸಂಸಾರ ಕಾಣಲಿ ಎಂದು ಆಶಿಸುವೆ". ನಾನೇ ಅವಳನ್ನು ಅತ್ತೆ ಮನೆಗೆ ಕಳುಹಿಸುತ್ತಿರುವವನಂತೆ ನುಡಿದೆ.

ಕಂಬನಿ ಒರೆಸಿಕೊಂಡು "ನಿಮ್ಮ ಆಶೀರ್ವಾದ ಇರಲಿ" ಎಂದು ನುಡಿದು ಬಗ್ಗಿ ನಮಸ್ಕರಿಸಿದಳು.

ಮದುವೆಯ ಅಲ್ಪ ಖರ್ಚನ್ನು ನಿಭಾಯಿಸುವುದು ಅವಳಿಗೆ ಕಷ್ಟವಾಗಿತ್ತು. ಎಲ್ಲವನ್ನೂ ಅವಳೇ ನೋಡಿಕೊಳ್ಳಬೇಕಾಗಿತ್ತು. ದುಡಿದು ಹುಷಾರಾಗಿರಬೇಕೆಂದು ಅಣ್ಣನಿಗೆ ಸೂಚಿಸುತ್ತಿದ್ದಳು. ಆತ ದನಕಾಯುತ್ತಿದ್ದ. ಎಲ್ಲೋ ಒಂದು ಚಿಕ್ಕ ಮನೆ ಹಾಗೂ ನಾಲ್ಕು ತೆಂಗಿನ ಮರಗಳಿದ್ದವು, ಆ ಮರಗಳನ್ನೇ ಒತ್ತೆ ಇಟ್ಟು ಮದುವೆಗೆ ಹಣ ಹೊಂದಿಸಿದ್ದಳು.

ಆಕೆ ನಗುಮೊಗದಿಂದಿರಲು ಪ್ರಯತ್ನಿಸುತ್ತಿದ್ದಳು. ಯಾವುದೇ ಸಹೃದಯಿಯ ಕರುಳನ್ನು ಹಿಂಡುವ ಆ ಕರುಣ ನಗೆ ನನ್ನ ಮನದಲ್ಲಿ ಉಳಿಯಿತು. ಅಂಥ ನಗುಮೊಗವನ್ನು ನಾನು ಈವರೆಗೆ ನೋಡಿರಲಿಲ್ಲ.

ಹೆಸರಿಡುವ ಪ್ರಸಂಗ ಬಂದಾಗ ಅವಳ ಗಂಡ "ಗುರೂಜಿ, ನೀವೇ ಒಂದು ಒಳ್ಳೆಯ ಹೆಸರು ಸೂಚಿಸಿ ಹೇಗೂ ನೀವು ಲೇಖಕರಿದ್ದೀರಾ" ಎಂದ.

"ನಾನು ಹೆಸರು ಸೂಚಿಸಲಾ? ಅದೇ ಹೆಸರನ್ನು ಇಡುವೆ ತಾನೆ?" ನಾನು ಪ್ರಶ್ನಿಸಿದೆ.

"ಹಾ ನಿಮಗೆ ಕೇಳಿದ್ದೇನೆ ಎಂದ ಮೇಲೆ ಖಂಡಿತ ನಿಮ್ಮ ಮಾತಿಗೆ ಬೆಲೆ ಕೊಡುತ್ತೇನೆ" ಎಂದ.

"ಸರಿ ಹಾಗಾದರೆ ತಟ್ಟೆಯಲ್ಲಿ ಬರೆ-ಕರುಣಾ!"

"ಕರುಣಾ" ಆತನಿಗೆ ಹೆಸರು ಹಿಡಿಸಿದಂತೆ ಅನಿಸಿತು ಅವಳೂ ಸಂತೃಪ್ತ ನಗೆ ನಕ್ಕಳು. ಮನುಷ್ಯ ತೃಪ್ತಿ ಹಾಗೂ ಅಸಂತೃಪ್ತಿಯನ್ನು ನಗೆಯಿಂದ ಸೂಚಿಸ ಬಲ್ಲ. ಸಾದಾ ಸೀರೆ, ಬಂಗಾರದಲ್ಲಿ ಪೋಣಿಸಿದ ಮಾಂಗಲ್ಯ ಬಿಟ್ಟರೆ ಇನ್ನಾವ ಒಡವೆ ಅವಳಿಗೆ ಇರಲಿಲ್ಲ. ಕಿವಿಯಲ್ಲಿ ಸಾದಾ ಬೆಂಡೋಲೆ ಹಾಗೂ ಕೈಗಳಲ್ಲಿ ಸಾದಾ ಬಳೆಗಳು.

ವಾಡಿಕೆಯಂತೆ ಮನೆಗೆ ಬರುತ್ತಿದ್ದಂತೆ ಅರ್ಧಾಂಗಿ ಪ್ರಶ್ನಿಸಿದಳು.

"ಹುಡುಗಿ ಹೇಗಿದ್ದಾಳೆ?"

"ಸಾದಾ ಇದ್ದಾಳೆ. ಬಡವಿ ಕೂಡ. ಅವಳ ತಮ್ಮನ ಕೈಯಿಂದ ನನಗೆ ಕೊಡಿಸಿದ ದಕ್ಷಿಣೆ ತೆಗೆದುಕೊಳ್ಳಲಾಗಲಿಲ್ಲ. ಅವಳು ಅಕ್ಷರಸ್ಥೆಯಲ್ಲ ನಿಜ. ಆದರೆ ಯಾವುದೇ ಪ್ರಸಂಗವನ್ನು ಧೈರ್ಯದಿಂದ ಎದುರಿಸಬಲ್ಲಳು. ಸಂಸಾರ ತೂಗಿಸಿಕೊಂಡು ಹೋಗಬಲ್ಲಳು".

"ಹೆಸರೇನಿಟ್ಟರು?" ಪತ್ನಿಯ ಎರಡನೆ ಪ್ರಶ್ನೆ.

"ಕರುಣಾ -ನಾನೇ ಸೂಚಿಸಿದ್ದು".

"ಥೂ...ಇದೆಂಥ ಹೆಸರಪ್ಪ? ಕರುಣಾ ಇದೇನು ಮದುವೆಯಲ್ಲಿ ಇಡುವ ಹೆಸರೆ...? ಇರಲಿ ಒಡವೆಗಳೇನಿದ್ದವು?"

"ಕೇವಲ ಬಂಗಾರದಲ್ಲಿ ಪೋಣಿಸಿದ ಮಾಂಗಲ್ಯ, ಬೇರೇನೂ ಹುಡುಗನ ಬಳಿಯೂ ಇರಲಿಲ್ಲ ಅವಳು ದನಗಳನ್ನು ಕಾಯುತ್ತಿದ್ದಳು. ತಂದೆ ತಾಯಿಗಳಿಲ್ಲದ ತಬ್ಬಲಿ. ಮದುವೆ ನಡೆದದ್ದೇ ದೊಡ್ಡ ಸಂಗತಿ".

"ಕರುಣಾಬಾಯಿ ಏನೆನ್ನುತ್ತಾಳೆ? ಸ್ವಲ್ಪ ವಿಚಾರಿಸಿಕೊಂಡುಬನ್ನಿ" ಎಂದು ನನ್ನ ಅರ್ಧಾಂಗಿ ಆಗಾಗ ಹೇಳುತ್ತಿದ್ದಳು. ದಿನಗಳು ಉರುಳುತ್ತಿದ್ದವು. ವಿವಾಹ ನಡೆಸಲು ಹೋದಾಗ, ವಧು ಹೊರ ಬರುತ್ತಿದ್ದಂತೆ ಕರುಣಾಳ ನೆನಪು ಬರುತ್ತಿತ್ತು. ಆದರೆ ಅವಳ ಕುರಿತು ವಿಚಾರಿಸಲು ಸಾಧ್ಯವಾಗಲೇ ಇಲ್ಲ. ಅವಳ ಬಗ್ಗೆ ಮಾಹಿತಿ ಇರುವವರೂ ಸಿಕ್ಕಲಿಲ್ಲ. ಕಾಲಾಂತರದಲ್ಲಿ ಅವಳ ನೆನಪು ಮಸುಕಾಗ ತೊಡಗಿತು. ಆ ಎರಡು ಜೀವಗಳು ಎಲ್ಲಿದ್ದವೋ ನನಗೆ ಗೊತ್ತಾಗಲೇ ಇಲ.

ಹೀಗೆ ಯಾವುದೋ ಒಂದು ಮಂಗಳ ಕಾರ್ಯಾಲಯದಲ್ಲಿ ಅವಳನ್ನು ನೋಡಿದೆ. ಅವಳು ಕಿರುನಗೆ ಬೀರಿದಳು. ಆ ನಗೆಯಿಂದಾಗಿಯೇ ನಾನು ಅವಳನ್ನು ಗುರುತಿಸಿದ್ದು. ಅವಳ ಸ್ಥಿತಿ ಸುಧಾರಿಸಿತ್ತು. ಕಾರ್ಯಾಲಯದ ಕಾಂಟ್ರ್ಯಾಕ್ಟರನ ಉದ್ಯಮವೂ ಬೆಳೆಯುತ್ತಿತ್ತು. ಅಂತೆಯೇ ಕೆಲಸಕ್ಕಾಗಿ ಹೊಸಬರನ್ನು ನೇಮಿಸಿ ಕೊಳ್ಳುತ್ತಿದ್ದ. ಅವಳೂ ಇಲ್ಲಿ ಕೆಲಸದವಳಾಗಿದ್ದಳು.

"ಒಂದು ಸಲ ನಮ್ಮ ಮನೆಗೆ ಬನ್ನಿ" ಅವಳು ವಿನಂತಿಸಿದಳು.

"ಅವಶ್ಯವಾಗಿ ಬರುವೆ ಹೇಗಿದ್ದರೂ ನಾಳೆಯೇ ನನಗೆ ಹಿಂತಿರುಗುವುದಿದೆ. ಇಂದು ಸಾಯಂಕಾಲ ಬರುವೆ ಸರಿ ತಾನೆ. ಮನೆಯಲ್ಲಿ ಎಲ್ಲವೂ ಸರಿಯಾಗಿದೆಯಲ್ಲವೆ?" ನಾನು ನುಡಿದೆ.

ಅವಳು ಮೋಹಕವಾಗಿ ನಕ್ಕಳು. ಆ ನಗೆ ಅವಳು ಸಮಾಧಾನಿಯಾಗಿರುವುದನ್ನು ಸೂಚಿಸಿತು. ಊಟ ಮುಗಿಯುತ್ತಿದ್ದಂತೆ ಅವಳು ನನ್ನೆಡೆ ಬಂದು "ನನ್ನ ಜೊತೆಗೇ ಬಂದು ಬಿಡಿ, ಮನೆ ಹುಡುಕುವುದು ನಿಮಗೆ ಕಷ್ಟವಾದೀತು" ಎಂದಳು. ಸರಿ ಅವಳೊಂದಿಗೆ ಹೋದೆ.

ಒಂದು ಚಿಕ್ಕ ಕೋಣೆ ವ್ಯವಸ್ಥಿತವಾಗಿ ಜೋಡಿಸಿಟ್ಟ ಮನೆ ಸಾಮಾನು, ಗೋಡೆಗೆ ಅವರಿಬ್ಬರ ಒಂದು ಸುಂದರ ಫೋಟೋ ತೂಗು ಹಾಕಲಾಗಿತ್ತು. ಗಂಡ ಹಾಲು, ಊದಿನಕಡ್ಡಿ ಇತ್ಯಾದಿ ಸಣ್ಣಪುಟ್ಟ ವಸ್ತುಗಳ ಮಾರಾಟ ಮಾಡುತ್ತಿದ್ದ. ಸಾಯಂಕಾಲ ಮನೆಗೆ ಬರುತ್ತಿದ್ದಂತೆ ಊಟಮಾಡುವಂತೆ ಒತ್ತಾಯಿಸಿದ. ನಾನು ಒಪ್ಪಲಿಲ್ಲ. ಅವರಿಬ್ಬರೂ ಬೆವರು ಸುರಿಸಿ ದುಡಿಯುತ್ತಿದ್ದರು. ಸಾಯಂಕಾಲ ಸಂತಸದಿಂದ ಒಟ್ಟಿಗೆ ಸೇರುತ್ತಿದ್ದರು. ಇಬ್ಬರೂ ಬಹಳ ಅನ್ಯೋನ್ಯವಾಗಿದ್ದರು. ಒಮ್ಮೊಮ್ಮೆ ತಿರುಗಾಡಲು ಅಥವಾ ಸಿನಿಮಾಕ್ಕೂ ಹೋಗುತ್ತಿದ್ದರು.

"ಈ ಮನೆ ಮಾಲಿಕ ನಮ್ಮಿಂದ ಬಾಡಿಗೆ ಸ್ವೀಕರಿಸುವುದಿಲ್ಲ. ನಾವು ಬಾಡಿಗೆ ಕೊಡುವಷ್ಟು ಶಕ್ತರಾಗಿದ್ದೇವೆ. ಆದರೆ ಆತ ಹೇಳುತ್ತಾನೆ. 'ನಿಮ್ಮ ಮುಖದರ್ಶನದಿಂದಲೇ ನನ್ನ ದಿನ ಚೆನ್ನಾಗಿ' ಕಳೆದು ಹೋಗುತ್ತದೆ. ಅಪೇಕ್ಷಿತ ಕೆಲಸಗಳು ನಿರಾಯಾಸವಾಗಿ ಪೂರ್ತಿಯಾಗುತ್ತವೆ. ನೀವು ಇಲ್ಲೇ ಇರಿ. ಇನ್ನೊಂದು ಕೋಣೆ ಖಾಲಿಯಾದಾಗ ಅದನ್ನೂ ನಿಮಗೆ ಕೊಡುತ್ತೇನೆ ನಾನೇನೂ ಬಾಡಿಗೆಯನ್ನೇ ಅವಲಂಬಿಸಿಲ್ಲ" ಎನ್ನುತ್ತಾನೆ.

"ನಾವು ಹೋದಲ್ಲೆಲ್ಲ ಒಳ್ಳೆಯ ಜನ ಸಿಗುತ್ತಿದ್ದಾರೆ" ಕರುಣಾ ಹೇಳಿದಳು.

"ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು" ನಾನು ನುಡಿದೆ. ಈ ಜೀವಗಳೊಂದಿಗೆ ನನ್ನದೇನೊ ಋಣಾನು ಬಂಧವಿರಬೇಕೆಂದೆನಿಸತೊಡಗಿತ್ತು.

ನನ್ನ ದೈವದಲ್ಲಿ ಒಂದು ಒಳ್ಳೆಯ ಸಂಗತಿಯಿದೆ. ನಾನು ನಡೆಸಿದ ವಿವಾಹಗಳ ಎಲ್ಲ ವಧುಗಳೂ ಒಂದಿಲ್ಲೊಂದು ಕಡೆ ಆಕಸ್ಮಿಕವಾಗಿ ಸಿಕ್ಕುತ್ತಾರೆ, ವಂದಿಸುತ್ತಾರೆ. ತಾವು ಸಂತೋಷದಿಂದಿರುವುದಾಗಿ ತಿಳಿಸುತ್ತಾರೆ. ಹಣಕ್ಕಿಂತ ಈ ಪ್ರೀತಿಯನ್ನೇ ನಾನು ವಿಪುಲವಾಗಿ ಗಳಿಸಿರುವುದು.

ನಾನು ಹೊರಬರುತ್ತಿರುವಂತೆಯೇ ಕರುಣಾ "ನೀವು ನಮ್ಮ ರಕ್ತಸಂಬಂಧಿಗಳಲ್ಲವಾದರೂ ತಂದೆಯ ಸ್ಥಾನದಲ್ಲಿದ್ದೀರ. ಎಂದಾದರೂ ನಮ್ಮನ್ನು ನೆನೆಸಿ ಬಿಕ್ಕಳಿಗೆ ಬಂದೀತು" ಎನ್ನುತ್ತ ಮೋಹಕವಾಗಿ ನಕ್ಕಳು ಪಟ್ಟಣದ ವಾತಾವರಣಕ್ಕೆ ಅವಳು ಹೊಂದಿಕೊಂಡಿದ್ದಳು. ಒಂದೇ ಜಡೆ ಹಾಕುತ್ತಿದ್ದಳು. ಮೇಲೊಂದು ಹೂವನ್ನು ಧರಿಸಿರುತ್ತಿದ್ದಳು. ನಡೆನುಡಿ ವೇಷಭೂಷಣ ವ್ಯವಸ್ಥಿತವಾಗಿತ್ತು.

"ನನ್ನದಿರಲಿ ನಿಮ್ಮದಿರಲಿ, ಎಲ್ಲ ಕೈಕಾಲು ಗಟ್ಟಿಮುಟ್ಟಾಗಿರುವವರೆಗೆ ಮಾತ್ರ. ಅದಕ್ಕಾಗಿ ಈಗಿನಿಂದಲೇ ಹುಶಾರಾಗಿರಬೇಕು. ವೃದ್ಧಾಪ್ಯಕ್ಕಾಗಿ ಒಂದಿಷ್ಟು ಹಣವನ್ನು ಉಳಿಸಿಡ ಬೇಕು. ಮುಂದಿನದನ್ನು ಯಾರು ಬಲ್ಲರು? ಸ್ವಂತ ಕಾಲ ಮೇಲೆ ಉಳಿಯುವ ಭರವಸೆಯಿರ ಬೇಕು. ಇದು ಜ್ಞಾಪಕದಲ್ಲಿರಲಿ" ಎಂದು ನಾನು ಹೊರಬರುತ್ತಿರುವಾಗ ಅವಳಿಗೆ ಬುದ್ಧಿ ವಾದ ಹೇಳಿದೆ.

ಮನೆಗೆ ಬರುತ್ತಿದ್ದಂತೆ ದೈನಂದಿನ ಕೆಲಸಗಳಲ್ಲಿ ಮುಳುಗಿ ಹೋದೆ.

ದಿನಗಳು ಉರುಳುತ್ತಿದ್ದವು ಪ್ರತಿ ವಿವಾಹ ಕಾರ್ಯಮುಗಿಸಿ ಬರುತ್ತಿದ್ದಂತೆ ಅರ್ಧಾಂಗಿ ಹುಡುಗಿ ಹೇಗಿದ್ದಾಳೆ? ಹೆಸರೇನಿಟ್ಟರು? ಎಂದು ಪ್ರಶ್ನಿಸಿದಾಗ ಕ್ಷಣಕಾಲ ಕರುಣಾಳ ನೆನಪು ಕಣ್ಮುಂದೆ ಸುಳಿಯುತ್ತದೆ. ನನ್ನನ್ನು ಅಸ್ವಸ್ಥ ನನ್ನಾಗಿಸುತ್ತಿದ್ದ ಅವಳ ಆ ನಗೆ ಈಗ ಬದಲಾಯಿಸಿರಬಹುದು. ಪ್ರಶ್ನೆಗಳಿಗೆ ಉತ್ತರವನ್ನು ನಗುವಿನಿಂದಲೇ ನೀಡುವ ತಿಳುವಳಿಕೆಯ ಹುಡುಗಿ ಕಾಣಸಿಗುವುದು ವಿರಳ. ಅವಳ ನಗೆಯಲ್ಲಿ ಬದಲಾವಣೆಯಾಗಿದ್ದರೂ ಅವಳ ಸ್ವಭಾವ ಬದಲಾವಣೆ ಹೊಂದಿರಲಿಕ್ಕಿಲ್ಲ ಎನಿಸುತ್ತದೆ.

ಕೆಲವು ವರ್ಷಗಳ ನಂತರ ಮತ್ತೆ ಆ ಊರಿಗೆ ಹೋದೆ. ಕಾರ್ಯಾಲಯದಲ್ಲಿ ಮದುವೆಗಾಗಿ. ಈಗ ಕಾಲ ಬದಲಾಗಿದೆ. ಅದಕ್ಕನುಗುಣವಾಗಿ ಕಾರ್ಯಾಲಯ 'ಅಪ್‌ಟುಡೇಟ್' ಆಗಿತ್ತು. ಈಗ ಊಟದ ವ್ಯವಸ್ಥೆ ಇತ್ತು. ಆದರೆ ಊಟ ಬಡಿಸಲು ಕರುಣಾ ಬರಲಿಲ್ಲ. ಬೇರಾವುದೋ ಕೆಲಸದಲ್ಲಿರಬಹುದು. ಅಥವಾ ಬೇರೆ ಕಾರ್ಯಾಲಯ ಸೇರಿರಬಹುದು ಎಂದುಕೊಂಡೆ. ಊರಿನಿಂದ 'ಪ್ರಾಸಂಗಿಕ ಕರಾರಿ'ನ ಬಸ್ಸಿನಲ್ಲಿ ಬಂದಿದ್ದರಿಂದ ಹೊರಡಲು ಇನ್ನೂ

ಅವಕಾಶವಿತ್ತು. ಕರುಣಾ ಇರುತ್ತಿದ್ದ ಮನೆ ನನಗೆ ಗೊತ್ತಿತ್ತು. ಕಳೆದ ಸಲ ನಾನು ಹೋಗಿ ಅನೇಕ ವರ್ಷಗಳಾಗಿವೆ. ಕರುಣಾಳ ನಗೆಯಲ್ಲಿ ಬದಲಾವಣೆ ಆಗಿರಲಿಕ್ಕಿಲ್ಲ. ಮನೆ ಮಾಲಿಕರ ಕುರಿತು ಶ್ರದ್ಧೆ ಹಾಗೇ ಇರಬಹುದು ಎನಿಸಿತು. ಊರಿನಲ್ಲಿ ವಿಶೇಷ ಬದಲಾವಣೆ ಕಂಡುಬರಲಿಲ್ಲ. ಕಾರ್ಯಾಲಯದ ಕೆಲಸಗಳು ಮುಗಿಯುವ ಹಂತಕ್ಕೆ ಬಂದಿರುವ ಸೂಚನೆಯನ್ನು ಖಾಲಿ ಪಾತ್ರೆಗಳ ಸದ್ದು ಕೊಡುತ್ತಿತ್ತು. ಯಾರೋ ಪಾತ್ರೆಗಳನ್ನು ಎಣಿಸುತ್ತಿರಬೇಕು.

ಕರುಣಾಳ ಮನೆ ಬಹಳ ದೂರವಿರಲಿಲ್ಲ. ರಸ್ತೆ ಬದಿಯ ಫಲಕಗಳು ಹಾಗೇ ಇದ್ದವು. ಬಿಸಿಲು ಇಳಿಯತೊಡಗಿತ್ತು.

ಕರುಣಾಳ ಮನೆಗೆ ಬಂದೆ. ಬಾಗಿಲು ಮುಚ್ಚಿತ್ತು. ಮನೆ ಎದುರು ಧೂಳು ತುಂಬಿತ್ತು. ತುಸು ಮುನ್ನ ತುಂತುರು ಮಳೆ ಬಿದ್ದಿದ್ದರಿಂದ ಏನೋ ಕೊಳೆತ ವಾಸನೆ ಬರುತ್ತಿತ್ತು. ನಾನು ಕಳೆದ ಬಾರಿ ಬಂದಾಗ ಕರುಣಾಳ ಮನೆ ಎದುರು ಒಂದು ಡಬ್ಬದಲ್ಲಿ ತುಳಸಿ ಗಿಡವಿತ್ತು. ಅದೂ ಕಾಣಲಿಲ್ಲ. ರಂಗೋಲಿಯೂ ಕಾಣಲಿಲ್ಲ. ಮನೆ ಎದುರಿನ ಕೊಳಚೆ ನನಗೆ ಒಪ್ಪಿಗೆಯಾಗಲಿಲ್ಲ. ಸ್ವಚ್ಛವಾದ ಮನೆ ಅಂಗಳವನ್ನು ನಾನು ಅಪೇಕ್ಷಿಸಿದ್ದೆ. ಆದರೆ ಯಾವುದೇ ವಾಸ್ತವ್ಯದ ಕುರುಹು ಕಾಣುತ್ತಿರಲಿಲ್ಲ ಸುತ್ತಲೂ ವಿಚಿತ್ರ ನೀರವತೆ ಪಸರಿಸಿತ್ತು. ನಾನು ಮೆಟ್ಟಿಲ ಮೇಲೆ ನಿಂತೆ. ಒಳಗಿನಿಂದ ಯಾವ ಶಬ್ದವೂ ಕೇಳಿಸಲಿಲ್ಲ. ನಿಧಾನವಾಗಿ ಬಾಗಿಲು ನೂಕಿ ಒಳಗೆ ಹೋದೆ. ಮಂಚದ ಮೇಲೆ ಕರುಣಾಳ ಗಂಡ ಮಲಗಿದ್ದ. ಸೊಂಟದವರೆಗೆ ಹೊದಿಕೆ ಇತ್ತು. ಎರಡು ಕಂಗಳು ಅಲುಗಿದವು "ಕುಳಿತು ಕೊಳ್ಳಿ" ಆತ ನುಡಿದ.

ನಾನು ಮಂಚದ ಒಂದು ಮೂಲೆಯಲ್ಲಿ ಕುಳಿತೆ. "ಹೊದಿಕೆ ಸ್ವಲ್ಪ ಸರಿಪಡಿಸಿ" ಆತ ಕೇಳಿಕೊಂಡ.

ನಾನು ಹೊದಿಕೆ ಸರಿಪಡಿಸಲು ಸ್ವಲ್ಪ ಸರಿಸಿದೆ. ಆತನ ಕಾಲ್ಗಳು ಹರಡಿ ಕೊಂಡಿದ್ದವು. ಕಾಲುಗಳನ್ನು ಸರಿಪಡಿಸುವಂತೆ ಆತ ವಿನಂತಿಸಿದ.

ಒಂದು ಕಾಲನ್ನೆತ್ತಿಟ್ಟೆ. ಕಾಲ್ಗಳನ್ನು ಒಂದಕ್ಕೊಂದು ಸೇರಿಸುತ್ತಿರುವಾಗ ಅವು ಬಹಳ ತಣ್ಣಗಿರುವಂತೆ, ಸಂವೇದನೆ ಕಳೆದು ಕೊಂಡಿರುವಂತೆ ಅನಿಸಿತು. "ಎರಡೂ ಕಾಲ್ಗಳು ನಿಶಕ್ತವಾಗಿವೆಯೇ?" ಎಂದೆ.

"ಹೌದು" ಆತ ಕತ್ತನ್ನು ಅಲ್ಲಾಡಿಸಿದ.

"ಯಾವಾಗಿನಿಂದ?"

"ಎರಡು ವರ್ಷಗಳಾದವು. ಜ್ವರ ಬಂದಿತ್ತು. ಡಾಕ್ಟರಿಗೆ ತೋರಿಸಿಯಾಯ್ತು. ಬೇರೆಡೆ ತಜ್ಞರಿಗೆ ತೋರಿಸುವ ಅವಶ್ಯಕತೆ ಇತ್ತು. ಕೈಯಲ್ಲಿ ಹಣವಿರಲಿಲ್ಲ. ಈಗ ಏನೂ ಪ್ರಯೋಜನವಿಲ್ಲ. ಇನ್ನು ಹೀಗೆ ಜೀವನ ಕಳೆಯಬೇಕು. ದಿನಗಳನ್ನು ಎಣಿಸುವದು ಅಷ್ಟೆ. ಕೈಗಳೂ ನೋಯುತ್ತವೆ. ಕೇವಲ ಬಾಯಿ ನಡೆಯುತ್ತದೆ. ದೇಹಕ್ಕೆ ಹಸಿವೂ ಆಗುತ್ತದೆ..."

ಆತ ಎಡಬಿಡದೆ ಹೇಳುತ್ತಿದ್ದ. ಏಕಾಕಿತನ ಆತನಿಗೆ ಸಾಕಾಗಿತ್ತು. ಆದರೆ ಆತ ಕರುಣಾಳ ವಿಷಯವನ್ನೇ ಎತ್ತಲಿಲ್ಲ. ಅವನ ಮನಸ್ಸಿಗೆ ನೋವಾಗಬಹುದೆಂದು ನಾನು ಪ್ರಶ್ನಿಸಲಿಲ್ಲ.

"ಊಟ ತಿಂಡಿ ಯಾರು ತಂದುಕೊಡುತ್ತಾರೆ" ಸಹಜ ದನಿಯಲ್ಲಿ ನಾನು ಕೇಳಿದೆ.

"ಒಬ್ಬ ಬಂದು ಹೋಗುತ್ತಾನೆ. ಬೇಸರವಿಲ್ಲದೆ ಮಾಡುತ್ತಾನೆ. ಅವನ ಋಣ ನಾನು ನೆನಸಬೇಕಷ್ಟೆ. ಆದರೆ ಆತನಾದರೂ ಎಷ್ಟು ದಿನ ಮಾಡಲು ಸಾಧ್ಯ".

ಆತನ ಮುಖಕ್ಷೌರ ಎರಡು ಮೂರು ದಿನಗಳ ಹಿಂದೆ ಮಾಡಿರುವಂತೆ ತೋರುತ್ತಿತ್ತು. ಮುಖ ನೋಡಿದರೆ ಆತನಿಗೆ ಇಂತಹ ಭಯಂಕರ ಕಾಯಿಲೆ ಆಗಿರಬಹುದೆಂದು ಅನಿಸುತ್ತಿರಲಿಲ್ಲ ಅಷ್ಟರಲ್ಲಿ ಆತ ಹೇಳಿದ ವ್ಯಕ್ತಿ ಬಂದ. ಕೈಯಲ್ಲಿ ಚಹವಿತ್ತು.

"ನೀವು ಸ್ವಲ್ಪ ಚಹ ತೆಗೆದುಕೊಳ್ಳುವಿರಾ" ಬಂದಾತ ಕೇಳಿದ.

ಅವನ ಮಾತಿನಲ್ಲಿ ಬೇಸರವಿರಲಿಲ್ಲ. ಸಹಾನು ಭೂತಿ ಇತ್ತು. "ಈಗ ತಾನೇ ಊಟವಾಯ್ತು. ಸಹಜವಾಗಿ ಭೇಟಿಯಾಗಲೆಂದು ಬಂದೆ. ನನಗೆ ಚಹ ಬೇಡ. ನಾನು ನುಡಿದೆ. ಆ ವ್ಯಕ್ತಿ ಮತ್ತೆ ಹೇಳಿದ ಏನು ಮಾಡುವದು ನೋಡಿ. ತುಂಬು ತಾರುಣ್ಯದಲ್ಲಿ ಕಷ್ಟಪಟ್ಟು ದುಡಿದು ಹೊಟ್ಟೆ ಹೊರೆದು ಕೊಳ್ಳುತಿದ್ದ. ದೈವ ಅವನನ್ನು ಮುದ್ದೆ ಮಾಡಿದೆ. ಯಾರು ಬಲ್ಲರು? ನನಗೂ ಹೀಗಾಗಬಹುದು. ಮುಂದಿನ ಜೀವನದ ದೃಶ್ಯ ಕಣ್ಮುಂದೆ ಸುಳಿಯುತ್ತದೆ. ಅದಕ್ಕೆ ಅಲಸ್ಯ ಮಾಡು ವುದಿಲ್ಲ". ಆ ವ್ಯಕ್ತಿ ನುಡಿದ.

"ನನ್ನಿಂದ ಸಹಾಯವೇನಾದರೂ ಬೇಕಿದ್ದರೆ ಹೇಳು. ಈಗ ಬಸ್ ಹೊರಡುವ ಸಮಯವಾಗಿದೆ. ನಾನು ಊರಿಗೆ . ಇಂದೇ ಹೋಗಬೇಕು" ಎಂದು ಹೊರಡಲನುವಾದೆ.



"ನನಗೇನೂ ಬೇಡ. ಎಂದಾದರೂ ಬಂದರೆ ಒಂದೆರಡು ಗಂಟೆ ಕಾಲಾವಕಾಶ ಇಟ್ಟುಕೊಂಡು ಬನ್ನಿ. ಹರಟೆ ಹೊಡೆಯೋಣ. ಯಾವುದಾದರೂ ಕತೆ ಹೇಳಿ ನಿಮ್ಮ ಪುಸ್ತಕ ಕೊಡಿ".

"ಊರು ಬಹಳ ದೂರವಾಗುತ್ತೆ. ಇದಕ್ಕಾಗಿಯೇ ಬರಬಹುದು. ಆದರೆ ಈ ದೇಹ ಕಷ್ಟ ಸಹಿಸಲು ಸಿದ್ಧವಿಲ್ಲ. ಮತ್ತೆ ಎಂದಾದರೂ ಬರುವೆ. ಸರಿ ನಾನಿನ್ನು ಬರಲಾ?"

"ಸ್ವಲ್ಪ ಇರಿ. ನಾನು ಏಳನೇ ಈಯತ್ತೆ ಪಾಸಾಗಿದ್ದೇನೆ. ಮೆಟ್ರಿಕ್ ಪರೀಕ್ಷೆಗೆ ಕುಳಿತು ಕೊಳ್ಳಬಹುದೆ?"

ಇದೆಂಥ ಹುಚ್ಚು ಪ್ರಶ್ನೆ: ಈ ಸ್ಥಿತಿಯಲ್ಲಿ ಇವನಿಗೆ ಇಂಥ ಆಲೋಚನೆಯೆ? ತಬ್ಬಿಬ್ಬಾದೆ.

"ಇಲ್ಲಿ ನನ್ನೊಬ್ಬ ಸ್ನೇಹಿತ ಶಿಕ್ಷಕರಿದ್ದಾರೆ. ಅವರಿಗೆ ನಿಮ್ಮನ್ನು ಕಾಣಲು ಹೇಳುವೆ". ಎಂದೆ ನಂತರ ಸಾವರಿಸಿಕೊಂಡು.

"ಹಾ ಆ ರೀತಿ ಮಾಡಿದರೂ ಪರವಾಗಿಲ್ಲ. ಹೇಗಾದರೂ ಸಮಯ ಕಳೆಯಬೇಕಲ್ಲವೆ? ಸಂಬಂಧಿಕರು ಪರಿಚಿತರು ಎಲ್ಲರೂ ಒಮ್ಮೊಮ್ಮೆ ಬಂದು ಹೋಗಿದ್ದಾರೆ. ಮೇಲಿಂದ ಮೇಲೆ ಯಾರು ಬರುತ್ತಾರೆ ಹೇಳಿ?"

"ಹೌದು ನಿಜ" ನಾನು ನುಡಿದೆ.

ನನ್ನೊಂದಿಗೆ ಚಹದ ಖಾಲಿ ಕಪ್ಪನ್ನು ತೆಗೆದು ಕೊಂಡು ಅಲ್ಲಿದ್ದ ಇನ್ನೊಬ್ಬ ವ್ಯಕ್ತಿಯೂ ಹೊರ ಬಂದ. ನೀರು ಬಂದಿದೆಯೆ ಎಂದು ಕರುಣಾಳ ಗಂಡ ಪ್ರಶ್ನಿಸಿದ. ಸ್ವಲ್ಪ ಸಮಯದಲ್ಲಿ ಬರಬಹುದು ಎಂದ ಆ ವ್ಯಕ್ತಿ.

ಹೊರಬಂದ ನಂತರ ನಾನು ಅವನನ್ನು ಪ್ರಶ್ನಿಸಿದೆ. "ಈತನ ಹೆಂಡತಿ ಕಾಣುತ್ತಿಲ್ಲವಲ್ಲ?"

"ಅವಳು ಮರು ಮದುವೆ ಮಾಡಿಕೊಂಡಳು"

"ಈತ ಹೀಗೆ ಕಾಯಿಲೆ ಬಿದ್ದಾಗ್ಲೂ...?"

"ಹೌದು".

ಆತನ ಉತ್ತರ ನನ್ನನ್ನು ದಂಗು ಬಡಿಸಿತು.

ಇಬ್ಬರೂ ಬೇರೆ ಬೇರೆ ದಾರಿಗಳ ಪ್ರವಾಸಿಗಳಾದರು. ಎಷ್ಟೇ ಆದರೂ ಮನುಷ್ಯ

ಮನುಷ್ಯನೆ. ಮನುಷ್ಯ ಆತ್ಮ ತೃಪ್ತಿಗಿಂತ ದೇಹ ತೃಪ್ತಿಗೇ ಒತ್ತು ಕೊಡುತ್ತಾನೆ. ಆದರೆ ಕರುಣಾ ಹೀಗೆ ಸಾಮಾನ್ಯರಲ್ಲಿ ಒಬ್ಬಳಾಗಬಹುದೆಂದು ಅನಿಸಿರಲಿಲ್ಲ. "ಅವಳು ಎಲ್ಲರಂತಿಲ್ಲ. ಸೌಮ್ಯವಾಗಿದ್ದಾಳೆ. ಆದರೆ ಬಂದ ಪ್ರಸಂಗಗಳನ್ನು ಎದುರಿಸುವ ಸಾಮರ್ಥ್ಯ ಅವಳಲ್ಲಿದೆ". ಎಂದು ಕರುಣಾಳ ಬಗ್ಗೆ ನನ್ನ ಹೆಂಡತಿಗೆ ಹೇಳಿದ್ದು ನೆನಪಾಯಿತು. ಅಂದರೆ ಅವಳು ಈ ಮುದ್ದೆಯ ಸೇವೆ ಮಾಡುತ್ತ ತನ್ನ ಜೀವನವನ್ನು ಕಳೆಯಬೇಕೆ? ಆಸೆ ಆಕಾಂಕ್ಷೆಗಳನ್ನೆಲ್ಲಾ ಹೊಸಕಿ ಹಾಕಬೇಕೆ? ಅವಳು ತನ್ನ ಪೂರ್ವಾಯುಷ್ಯವನ್ನು ಮರೆತಿರಬೇಕು. ನಾನು ಅದರ ಕುರಿತು ವಿಚಾರಿಸಿರಲಿಲ್ಲ. ಈಗ ಪ್ರಶ್ನಿಸಿ ಪ್ರಯೋಜನವಿರಲಿಲ್ಲ. ಅವಳ ಹೊಸ ಗಂಡ ಬಹುಶಃ ಬಹಳ ಶ್ರೀಮಂತನಿರಬೇಕು. ಅವಳ ಜಗತ್ತೇ ಬದಲಾಗಿರಬೇಕು. ನಾನು ಭೇಟಿಯಾದರೆ ಬಹುಶಃ ಗುರುತು ತೋರಿಸಿಕೊಳ್ಳಲಿಕ್ಕಿಲ್ಲ. ಐಶ್ವರ್ಯದ ಮದವೇರಿರಲೂಬಹುದು. ನನ್ನನ್ನು ಅವಮಾನ ಮಾಡಲು ಹಿಂಜರಿಯಲಿಕ್ಕಿಲ್ಲ.

ಆದರೆ ತನ್ನ ಮುಗುಳ್ನಗೆ ಮಾತ್ರದಿಂದಲೇ ಇತರರ ಕರುಳನ್ನು ಹಿಂಡುವ ಕರುಣಾ ಹೀಗೆ ಮಾಡುವುದು ಸಾಧ್ಯವಿರಲಿಲ್ಲ. ಇಷ್ಟೊಂದು ಸಾಮಾನ್ಯ... ಒಂದು ಸಮಯದಲ್ಲಿ ತನ್ನ ಬಾಳನ್ನು ಬೆಳಗಿದವನನ್ನು ಹೀಗೆ ತಿರಸ್ಕರಿಸಿ ಹೋಗುವುದು ಸಾಧ್ಯವಿರಲಿಲ್ಲ. [illegible]ರೊಂದು ಮಾರ್ಗವನ್ನು ಹುಡುಕಬಹುದಿತ್ತು.. ಇರಲಿ ಅಂತೂ ನನ್ನ ಲೆಕ್ಕ ತಪ್ಪಿದ್ದು ನಿಜ ಎಂದು ಒಪ್ಪಿಕೊಳ್ಳುವುದೇ ಒಳ್ಳೆಯದು. ತಂದೆ, ತಾಯಿ, ಸಮಾಜ ಎಲ್ಲರನ್ನೂ ಧಿಕ್ಕರಿಸಿ ಸಾಮಾನ್ಯ ಹೆಣ್ಣುಗಳ ದಾರಿಯಲ್ಲೇ ಹೋದ ಕರುಣಾ ನನಗೆ ಅಸ್ವಸ್ಥತೆ ಉಂಟು ಮಾಡಿದ್ದಳು. ಒಂದು ಸಾರಿ ಕಾರ್ಯಾಲಯದಲ್ಲಿ ಮದುವೆ ಮುಗಿಸಿಬಿಟ್ಟರೆ ನನ್ನ ಕೆಲಸ ಮುಗಿಯುತ್ತದೆ. ವಧು ಹೇಗಿದ್ದರೂ ಅದನ್ನು ತೆಗೆದುಕೊಂಡು ನನಗೇನು ಮಾಡುವುದಿರುತ್ತೆ. ಮತ್ತೆ ಬೇರೆಯವರ ಜೀವನದಲ್ಲಿ ಇಣುಕುವ ಅವಶ್ಯಕತೆಯೂ ಇಲ್ಲ. ಪ್ರತಿ ಪ್ರಾಣಿಯೂ ತನ್ನ ದೈವದ ಅಧೀನವಾಗಿರುತ್ತದೆ. ನಾವು ಸುಮ್ಮನೆ ಇತರರ ಸುಖ ದುಃಖಗಳನ್ನು ಹುಡುಕುತ್ತಿರುತ್ತೇವೆ. ಯಾರದೇ ಜೀವನ ಹೇಗೇ ಇರಲಿ. ಎಷ್ಟೇ ಕಷ್ಟದಾಗಿರಲಿ ನಾವು ಅಸಹಾಯಕರಾಗುವ [illegible]

ಇದೆಲ್ಲ ನಿಜವಾದರೂ ಮನುಷ್ಯನ ಸ್ವಭಾವವನ್ನು ಅದೂ ಆತ ಐವತ್ತರ ಗಡಿ ದಾಟಿದ ಮೇಲೆ ಬದಲಾಯಿಸಲು ಸಾಧ್ಯವೆ? ಮೊದಲಿನಿಂದಲೂ ನನಗೆ ಎಲ್ಲವನ್ನೂ ಬಹಳ ಹಚ್ಚಿಕೊಳ್ಳುವ ಸ್ವಭಾವ. ಆದ್ದರಿಂದಲೇ ಕರುಣಾಳ ಬಗ್ಗೆ ಮನಸ್ಸು ಬಹಳ ಅಸ್ವಸ್ಥವಾಯಿತು. "ಎಲ್ಲೋ ಲೆಕ್ಕ ತಪ್ಪಿರಬೇಕು". ನಾನು ನನ್ನಷ್ಟಕ್ಕೆ ಸಾಂತ್ವನ ಹೇಳಿಕೊಂಡೆ.

ನಾನಾಗಿ ಕರುಣಾಳ ಕುರಿತು ಹೆಚ್ಚು ಮಾಹಿತಿ ಸಂಗ್ರಹಿಸಲು ಯತ್ನಿಸಲಿಲ್ಲ. ಅವಳ ಜೀವನದ ಬಗ್ಗೆ ಕುತೂಹಲವಿತ್ತು. ಬಹುಶಃ ಅವಳು ಸುಖವಾಗಿರಬಹುದು. ಇಂಥ ಸ್ತ್ರೀಯರಿಗೆ ಅವರ ಪೂರ್ವಾಯುಷ್ಯದ ನೆನಪು ಮಾಡಿಕೊಡುವುದು ತಪ್ಪಾಗುತ್ತದೆ. ಆದರೆ ಅವರು ಬಹಳ ಬದಲಾಗಿರುತ್ತಾರೆ. ಸುಖದ ಜೀವನದೊಂದಿಗೆ ಸಮರಸವಾಗಿರುತ್ತಾರೆ. ಹಳೆಯ ಜನ ಭೇಟಿಯಾದರೂ ಗುರುತೂ ಹಿಡಿಯುವುದಿಲ್ಲ. ಕರುಣಾಳದ್ದು ಹೀಗೆ ಆಗಿರಬೇಕು. ಅವಳೂ ಸಾಮಾನ್ಯ ಸ್ತ್ರೀಯಾಗಿದ್ದಾಳೆ. ಎಲ್ಲೋ ಮಿಂಚಿ ಹೋಗುವ ಅವಕಾಶ ಅವಳಿಗೆ ಸಿಕ್ಕಿರಲಿಕ್ಕಿಲ್ಲ. ಕೊನೆಗೆ ಪ್ರಾರಬ್ಧ ಇದ್ದೇ ಇದೆ.

ಮತ್ತೊಮ್ಮೆ ಕರುಣಾಳ ಗಂಡನಿರುವ ಊರಿಗೆ ಹೋಗುವ ಅವಕಾಶ ಬಂತು. ಮದುವೆಗಾಗಿ ಅಲ್ಲ. ಬೇರೆ ಯಾವುದೋ ಕೆಲಸವಿತ್ತು. ಕೆಲಸ ಬೇಗ ಮುಗಿಯಿತು. ಆದರೆ ಮರುದಿನ ತನಕ ನನ್ನ ಊರಿಗೆ ಬಸ್ಸಿರಲಿಲ್ಲ. ಬೇಜಾರು ಬಂದಿತ್ತು. ಜೊತೆಗೆ ಕರುಣಾಳ ಗಂಡನನ್ನು ನೋಡಬೇಕೆಂದೂ ಅನಿಸುತ್ತಿತ್ತು. ನಾನು ಇಳಿದುಕೊಂಡಿದ್ದ ಮನೆಯಲ್ಲಿ ಬಟ್ಟೆ ಬರೆ ಇಟ್ಟು ಹೊರಟೆ. ಅನೇಕ ಸುಪರಿಚಿತ ಸ್ಥಳಗಳಿದ್ದವು. ಇದೇ ಊರಿನ ಕಾರ್ಯಾಲಯದಲ್ಲಿ ಕರುಣಾ ಹೊಸಬಾಳು ಸ್ವೀಕರಿಸಿದ್ದನ್ನು ಕಂಡಿದ್ದೆ ಇಲ್ಲಿಯೇ ಅವರು ಸಂಸಾರ ಹೂಡಿದ್ದು. ಕಡು ಬಡತನದಲ್ಲೂ ಸಮಾಧಾನಿಯಾಗಿದ್ದನ್ನು ಕಂಡಿದ್ದೆ. ಮತ್ತೆ ಅದೇ ಸ್ಥಳದಲ್ಲಿ ಕಾಲದ ಕ್ರೂರ ಚೇಷ್ಟೆಯನ್ನು ನೋಡಿದ್ದೆ. ಉತ್ಸಾಹಿ ತರುಣ ಮುದ್ದೆಯಾಗಿದ್ದು ಭಿಕ್ಷೆ ಬೇಡಲೂ ಹೊರ ಹೋಗಲಾಗದ ದುಸ್ಥಿತಿ. ಕೆಲಸಮಯದ ನಂತರ ಕೈಗಳೂ ಸ್ಥಗಿತಗೊಂಡಲ್ಲಿ ಬದುಕೊಂದು ಶಾಪ. ಶಾಪದಿಂದ ಮುಕ್ತಿ ಎಂದೋ? ಎಲ್ಲದಕ್ಕೂ ಮೇಲಾಗಿ ಯಾವ ವ್ಯಕ್ತಿ ನಾಲ್ಕು ತುತ್ತು ಅನ್ನ ಹಾಕಬಹುದೆಂದು ಆಸೆ ಇತ್ತೋ ಆ ವ್ಯಕ್ತಿ ಏನನ್ನೂ ಯೋಚಿಸದೆ ದೂರ ಹೊರಟು ಹೋಗಿತ್ತು. ಹಿಂತಿರುಗಿಯೂ ನೋಡದೆ. ಆತನ ಒಂದು ಕಾಲನ್ನು ಇನ್ನೊಬ್ಬರು ಎತ್ತಿ ಇಡಬೇಕಾದಂಥ

ಸ್ಥಿತಿ. ನನಗೆ ನಿಜಕ್ಕೂ ಕನಿಕರ ಎನಿಸಿತ್ತು. ನನಗೆ ಅವನ ಬಗ್ಗೆ ಸಹಾನುಭೂತಿ ಇದ್ದಾಗ್ಯೂ ಸಹ ನಾನು ಏನೂ ಮಾಡುವುದೂ ಸಾಧ್ಯವಿರಲಿಲ್ಲ.

ಮತ್ತೆ ನಾನು ಈಗ ಏನನ್ನು ನೋಡಲು ಹೊರಟಿದ್ದೇನೆ? ಈಗ ಆತ ಇನ್ನಷ್ಟು ವಿಕಲಾಂಗನಾಗಿರಬಹುದು. ಆತ ಹಸಿವೆಯಿಂದ ಬಾಯಿ ತೆರೆದಲ್ಲಿ ಬಾಯಿಯಲ್ಲಿ ಹಾಕುವಂತಹದು ನನ್ನ ಬಳಿ ಏನಿದೆ? ಇದೆಲ್ಲಕ್ಕಿಂತ ಮಿಗಿಲಾಗಿ ಆತ ಅಲ್ಲಿದ್ದಾನೆಯೋ ಇಲ್ಲವೊ? ಮನೆ ಬಿಡಿಸಿರಬಹುದು. ಹೊಸ ಸಂಸಾರ ಬಂದಿರಲೂ ಬಹುದು ಎಂದು ವಿಚಾರ ಮಾಡುತ್ತ ರಸ್ತೆಯ ಬದಿಯಿಂದ ಹೋಗುತ್ತಿದ್ದೆ. ಬದಿಯಲ್ಲಿಯ ದೇವಸ್ಥಾನದ ಜೀರ್ಣೋದ್ಧಾರವಾಗಿದ್ದು ಗೊತ್ತಾಗುತ್ತಿತ್ತು. ಪ್ರಶಸ್ತ ಸಭಾಂಗಣಕ್ಕೆ ಬಣ್ಣ ಹಚ್ಚಿದ್ದರು. ಕೆಲವು ಮನೆಗಳು, ಮನೆಗೆ ತಗುಲಿಸಿದ್ದ ನಾಮಫಲಕ ಗಳು ಬದಲಾಗಿದ್ದವು. ಆ ಹಳ್ಳಿಗೆ ತಾಲ್ಲೂಕಿನ ಸ್ವರೂಪ ಬಂದಿತ್ತು. ಊರಿಗೆ ಒಂದು ರೀತಿಯ ಕಳೆ ಬಂದಿತ್ತು. ಹಾಗೆ ನೋಡಿದರೆ ಮೊದಲಿನಿಂದಲೇ ಇದು ಒಂದು ಶಾಂತ ಹಾಗೂ ಸ್ವಚ್ಚ ಊರು. ಸೊಳ್ಳೆಗಳ ಕಾಟವಿಲ್ಲ. ನಾನು ಸರಿಯಾಗಿ 'ಆ' ಮನೆಗೆ ಹೋದೆ. ಕೋಣೆಯ ಹೊರಗೆಲ್ಲ ಸ್ವಚ್ಛತೆಯಿತ್ತು. ಕರುಣಾ ಬಾಗಿಲಲ್ಲಿ ನಿಂತಿದ್ದಳು.!

"ಬನ್ನಿ, ಬನ್ನಿ, ನಿಮಗೆ ನನ್ನ ಗುರ್ತು ಸಿಕ್ಕಿತೆ? ನಾನು ನಿಮ್ಮ ಕರುಣಾ". ಅವಳಲ್ಲಿ ಉತ್ಸಾಹ ಉಕ್ಕಿ ಹರಿಯುತ್ತಿತ್ತು. ಮದುವೆ ನಂತರ ಮೊದಲ ಬಾರಿ ನೋಡಿದಾಗ ಅವಳ ಮುಖದಲ್ಲಿ ಏನೋ ಒಂದು ಥರದ ಕಳೆ ಇತ್ತು. ಈಗ ಸ್ವಲ್ಪ ಸೊರಗಿರುವಂತೆ ಅನಿಸಿತು. ಕೊರಳಲ್ಲಿ ಮಾಂಗಲ್ಯ, ಹಳೆಯದಾದ ಸೀರೆ, ನಗೆ ಮಾತ್ರ ಅದೇ-ಬೇರೆಯವರ ಕರುಳನ್ನು ಹಿಂಡುವಂತಹುದು. ಅವಳು ಮುಗುಳ್ನಕ್ಕು ಕುಳಿತುಕೊಳ್ಳಲು ಕುರ್ಚಿ ನೀಡಿದಳು. ಗಂಡ ಮಂಚದ ಮೇಲೆ ಕುಳಿತಿದ್ದ.

"ನಿಮಗೆ ಬಹಳಷ್ಟು ಹೇಳುವದಿದೆ" ಅವಳು ಹೇಳಲಾರಂಭಿಸಿದಳು. ಇವರಿಗೆ ಮೆಟ್ರಿಕ್ ಪಾಸಾಗುವುದು ಸಾಧ್ಯವಾಗಲಿಲ್ಲ. ಆದರೂ ಕಲಿಸಲು ಓರ್ವ ಸಹೃದಯಿ ಬರುತ್ತಾರೆ. ಈಗ ಇಂಗ್ಲೀಷ್ ಮತ್ತು ಸಂಸ್ಕೃತ ಅರ್ಥವಾಗುತ್ತಿದೆ. ಓದಲೂ ಬರುತ್ತದೆ. ಜೊತೆಗೆ ತಮ್ಮ ಅನಾರೋಗ್ಯವನ್ನು ಮರೆಯುತ್ತಾರೆ". ನಾನು



ಕುಟುಂಬ ಯೋಜನೆ ಯಶಸ್ವಿಯಾಗ ಬೇಕಾದರೆ ಹೆಚ್ಚು ಹೆಚ್ಚು ಜನ ಬ್ರಹ್ಮಚಾರಿಗಳಾಗಲು ನಾವು ಪ್ರೋತ್ಸಾಹಿಸ ಬೇಕು...

ಅವನೆಡೆ ನೋಡಿದೆ. ಆತ ತೃಪ್ತಿಯ ಮುಗುಳ್ನಗೆ ನಕ್ಕ. ತಲೆದಿಂಬಿನ ಬಳಿ ಒಂದೆರಡು ಪುಸ್ತಕಗಳು, ಕೆಲವು ದಿನಪತ್ರಿಕೆಗಳಿದ್ದವು.

"ಈಗ ಹೇಗಿದೆ?" ನಾನು ಪ್ರಶ್ನಿಸಿದೆ.

"ವಾಚನದೊಂದಿಗೆ ಒಂಟಿತನವನ್ನು ಹೊಂದಿಸಿಕೊಳ್ಳಬಹುದು" ಆತ ವೇದಾಂತಿಯಂತೆ ನುಡಿದ. "ಇಂದು ಇಲ್ಲೇ ಉಳಿಯುವವರಿದ್ದೀರಿ ತಾನೆ?" ಕರುಣಾಳ ಪ್ರಶ್ನೆ.

"ಹೌದು, ಆದರೆ ನಿಮ್ಮ ಮನೆಯಲ್ಲಲ್ಲ. ನೀನು ಇಲ್ಲಿ ಬೆಟ್ಟಿಯಾಗಬಹುದೆಂದು ನಾನು ನಿರೀಕ್ಷಿಸಿರಲಿಲ್ಲ".

"ಅದು ಸರಿ, ನನಗೆ ಹತ್ತು ಹದಿನೈದು ದಿನಗಳಲ್ಲಿ ಒಂದೆರಡು ಬಾರಿ ಇಲ್ಲಿಗೆ ಬರಲು ಅವಕಾಶ ಸಿಗುತ್ತದೆ. ಮಕ್ಕಳನ್ನು ನೋಡಿಕೊಳ್ಳಬೇಕಲ್ಲವೆ?" ಅವಳು ನಿಸ್ಸಂಕೋಚವಾಗಿ ನುಡಿದು ಮತ್ತೆ ಮುಂದುವರೆಸಿದಳು.

"ಸಮಯ ಸಿಕ್ಕ ತಕ್ಷಣ ಇಲ್ಲಿಗೆ ಧಾವಿಸಿ ಬರುತ್ತೇನೆ. ಇವರ ಕೈಗೆ ಸಿಕ್ಕುವಂತೆ ತಿಂಡಿ ತಿನಿಸುಗಳನ್ನು ಮಾಡಿ ಇಡುತ್ತೇನೆ. ಸ್ನಾನಕ್ಕೆ ಹಾಕುತ್ತೇನೆ. ನಮ್ಮವರಿಗೆ ನಾವು ಮಾತಾಡಿದರೆ ಸಮಾಧಾನವಿರುತ್ತದೆಯೆ?"

"ನೀನು ಇರುವುದಾದರೂ ಎಲ್ಲಿ?" ನಾನು ಪ್ರಶ್ನಿಸಿದೆ. ಅವಳು ಊರಿನ ಹೆಸರು ಹೇಳಿ ಮೂರ್ನಾಲ್ಕು ಗಂಟೆಗಳ ಪ್ರಯಾಣ ಎಂದಳು.

ನೀನು ಅಲ್ಲಿ ಏನು ಮಾಡುತ್ತಿ ಎಂದು ನಾನು ಪ್ರಶ್ನಿಸಲಿಲ್ಲ. ಬದಲಾಗಿ "ಎಷ್ಟು ಜನ ಮಕ್ಕಳು?" ಎಂದೆ. "ಹತ್ತು ಹದಿನೈದು ಜನ ಇದ್ದಾರೆ". ನಾನು ದಂಗಾದೆ. ಅದನ್ನಾಕೆ ಗಮನಿಸದೆ ಮುಂದುವರಿಸಿದಳು. "ಒಂದು ಸಲ ಹೀಗಾಯ್ತು" ಇವರ ಬಾಲ್ಯದ ಸ್ನೇಹಿತನೊಬ್ಬ ಬಂದ. ನಾಲ್ಕಾರು ಕಾರುಗಳ ಮಾಲಿಕ. ಬಹಳ ಶ್ರೀಮಂತ. ತಂದೆ ತಾಯಿಗಳನ್ನು ಕಳೆದುಕೊಂಡ ಅನಾಥ. ಇವರ ಸ್ಥಿತಿ ನೋಡಿ ನನ್ನನ್ನು ಕೇಳಿದ. ವೈನಿ ನಿಮಗಾಗಿ ನಾನೇನು ಸಹಾಯ ಮಾಡಲಿ: ಎಷ್ಟು ಹಣ ನೀಡಲಿ? ಅಥವಾ ಪ್ರತಿ ತಿಂಗಳು ಕಳುಹಿಸಲೆ".

"ನನ್ನ ಶ್ರಮದ ಹೊರತು ನನಗೇನೂ ಬೇಡ. ನಾನು ಮಾಡುವಂತದೇನಾದರೂ ಇದ್ದರೆ ಹೇಳಿ ಕೆಲಸ ಎಷ್ಟೇ ಕಷ್ಟದ್ದಿರಲಿ ನಾನು ಮಾಡುವೆ. ಆದರೆ ಬರೀ ದಾನ ನನಗೆ ಬೇಡ" ಎಂದು ಹೇಳಿದೆ. ಆಗ ನಾನು ನಿಜಕ್ಕೂ ಎರಡು ದಿನಗಳಿಂದ ಉಪವಾಸವಿದ್ದೆ".

"ನನಗೆ ನನ್ನ ಊರಿನಲ್ಲಿ ಬಡ ಮಕ್ಕಳಿಗಾಗಿ ಅನಾಥಾಶ್ರಮ ತೆರೆಯುವುದಿದೆ. ಬಡತನದ ದುಃಖವನ್ನು ನಾನು ಸ್ವತಃ ಅನುಭವಿಸಿದ್ದೇನೆ. ನಾನು ಒಂದು ಆಶ್ರಮವನ್ನು ಕಟ್ಟಿಸುವವನಿದ್ದೇನೆ. ಅಲ್ಲಿಯವರೆಗೆ ಬೇರೆಡೆ ಜಾಗ ನೋಡುವುದು, ಆ ಮಕ್ಕಳಿಗೆ ಅನ್ನ ವಸ್ತ್ರ, ಶಿಕ್ಷಣದ ಖರ್ಚನ್ನು ನಾನು ನೋಡಿಕೊಳ್ಳುವೆ. ನನ್ನ ಟ್ರಸ್ಟಿನ ಮೂಲಕ. ಆದರೆ ಮಕ್ಕಳನ್ನು ನೋಡಿಕೊಳ್ಳಲು ಒಬ್ಬರು ಬೇಕಾಗಿದ್ದಾರೆ. ನೀವೆ ಬಂದುಬಿಡಿ. ಅನೇಕ ದಿನಗಳಿಂದ ನನ್ನ ಮನದಲ್ಲಿದೆ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡುತ್ತೇನೆ. ಬರುತ್ತೀರಾ? ಎಂದಾತ ಮತ್ತೆ ಕೇಳಿದ. ನನ್ನ ಮನಸ್ಸಿಗೆ ಒಪ್ಪಿದ ಕೆಲಸವೇ ಅದು. ನಾನು ಅಲ್ಲಿಗೆ ಹೋದೆ. ಇವರಿಗೆ ಒಬ್ಬ ಸಹಾಯಕನನ್ನಿಟ್ಟೆ. ಆತ ಎಂತಹುದೇ ಸ್ವಭಾವದವನಾಗಿರಲಿ. ಮನಃಪೂರ್ವಕ ನೋಡಿಕೊಳ್ಳುತ್ತಾನೆ. ನನಗಿಂತಲೂ ಮಿಗಿಲಾಗಿ. ಬಂದಾಗ ಒಮ್ಮೆ ಹಣ ಕೊಟ್ಟು ಹೋಗುತ್ತೇನೆ. ಇನ್ನು ಇವರನ್ನು ಅಲ್ಲಿಗೆ ಕರೆದುಕೊಂಡು ಹೋಗುವವಳಿದ್ದೇನೆ. ಮೊದಲೇ ಏಕೆ ಕರೆದುಕೊಂಡು ಹೋಗಲಿಲ್ಲ ಎಂದು ನೀವು ಕೇಳಬಹುದು. ಮೊದಲು ನಾನು ಅಲ್ಲಿ ಸ್ಥಿರವಾಗುವುದು ಅವಶ್ಯವಿತ್ತಲ್ಲವೆ? ಯಾರ ಮೇಲೆ ಎಷ್ಟು ವಿಶ್ವಾಸವಿಡುವುದು? ಈಗ ಪರವಾಗಿಲ್ಲ. ಆತ ಹೇಳಿದಂತೆ ತನ್ನ ಮನೆಯನ್ನು ಸರಿಯಾಗಿ ಕಟ್ಟಿಸಿ ಆಶ್ರಮಕ್ಕಾಗಿ ನೀಡಿದ. ನನಗೆ ಒಳ್ಳೆಯ ಸಂಭಾವನೆ ಸಿಗುತ್ತದೆ. ಆಶ್ರಮದಲ್ಲಿ ಹತ್ತು ಹದಿನೈದು ಜನ ಮಕ್ಕಳಿದ್ದಾರೆ. ನನಗೆ ಒಳ್ಳೆಯ ಹುಡುಗರು. ನಾವು ಆಶ್ರಮದ ಮಾಡುವುದ್ದಿಲ. ನಮಗೆ ಜನರಿಂದ ಹಣ ಬೇಕಾಗಿಲ್ಲ. ಈ ಕೆಲಸ ನನಗೆ ಬಹಳ ಹಿಡಿಸಿದೆ" ಹೇಳುತ್ತ ಹೇಳುತ್ತ ಅವಳಿಗೆ ಉಸಿರು ಸಿಕ್ಕಿಕೊಂಡಂತಾಯಿತು. ತನ್ನ ಆನಂದವನ್ನು ಯಾರ ಬಳಿಯಾದರೂ ವ್ಯಕ್ತ ಪಡಿಸಬೇಕಾಗಿತ್ತಾಕೆಗೆ. ಆದರೆ ಅಂಥ ಆತ್ಮೀಯ ವ್ಯಕ್ತಿ ಈವರೆಗೆ ಸಿಕ್ಕಿರಲಿಲ್ಲ. ಆಕೆ ಇದನ್ನೆಲ್ಲ ಹೇಳುತ್ತಿದ್ದಾಗ ಅವಳ ಗಂಡ ನಿರ್ವಿಕಾರ ಭಾವದಿಂದ ಏನನ್ನೊ ಓದುತ್ತ ಕುಳಿತಿದ್ದ. ಅವಳು ಹೇಳುತ್ತಿದ್ದ ವಿಷಯದಲ್ಲಿ ಆತನಿಗೆ ಬಹುಶಃ ಆಸಕ್ತಿ ಇರಲಿಲ್ಲ.

ಅವಳು ನನಗೆ ಚಹ ಕೊಟ್ಟು, ಗಂಡನಿಗೂ ಕುಡಿಸಿದಳು. ಹಾಸಿಗೆ ಹೊದಿಕೆ ಸರಿಪಡಿಸಿದಳು. ಹಗುರವಾಗಿ ಮುಖದ ಮೇಲೆ ಕೈಯಾಡಿಸಿ "ನಾನು ಪೇಟೆಗೆ ಹೋಗಿ ಬರುತ್ತೇನೆ" ಎಂದಳು.

ಆತ ಗೋಣು ಅಲ್ಲಾಡಿಸಿ ಸಮ್ಮತಿ ಸೂಚಿಸಿದ. "ನಾನೂ ಹೊರಡುವೆ" ನಾನೆಂದೆ.

"ಹಾಂ ಒಮ್ಮೆ ನೀವು ನಮ್ಮ ಆಶ್ರಮಕ್ಕೆ ಭೇಟಿ ನೀಡಲೆಂದೇ ಬನ್ನಿ. ಮಕ್ಕಳು ಉತ್ತಮ ಕೈತೋಟ ಬೆಳೆಸಿದ್ದಾರೆ. ಕೆಲವು ಬೆಳೆದ ಮಕ್ಕಳೂ ಇದ್ದಾರೆ. ಎಲ್ಲ ಜಾತೀಯವರಿದ್ದಾರೆ. ಆದರೆ ಎಲ್ಲ ಒಟ್ಟಿಗೆ ಇರುತ್ತಾರೆ. ಅವರನ್ನು ನೋಡಿ ನಿಮಗೆ ಸಂತೋಷವಾದೀತು" ಕರುಣಾ ಹೇಳಿದಳು.

ಖಂಡಿತ ಬರುತ್ತೇನೆ ಎಂದು ನಾನು ಹೊರಟೆ. ಅವಳೂ ಹೊರಟಳು. ಇಲ್ಲಿಯವರೆಗೆ ಎಡಬಿಡದೆ ಮಾತನಾಡುತ್ತಿದ್ದ ಅವಳು ಈಗ ಮೌನಿಯಾಗಿ, ಕತ್ತನ್ನು ತಗ್ಗಿಸಿ , ರಸ್ತೆಯ ಒಂದು ಅಂಚಿನಲ್ಲಿ ನಡೆಯುತ್ತಿದ್ದಳು. ಅಸ್ಪಷ್ಟ ಮಾಡುತ್ತಿದ್ದ ಆಕೆಯ ನಗು ನೆನಪಿಗೆ ಬಂತು. ಅವಳನ್ನೊಮ್ಮೆ ನೋಡಿದೆ.

ಮಾರ್ಗ ಮಧ್ಯದಲ್ಲಿ ಗುಡಿ ಬಂತು. ಪೇಟೆಗೆ ಹೋಗುವ ದಾರಿ ಅಲ್ಲಿಯೆ ಒಡೆಯುತ್ತದೆ. ನಾನು ಕರುಣಾಳಿಗೆ ಹೇಳಿದೆ. "ನೀನು ಹೇಳಿದುದರ ಮೇಲೆ ವಿಶ್ವಾಸವಿಟ್ಟು ಎಂದಾದರೊಮ್ಮೆ ಬರುತ್ತೇನೆ. ಆದರೆ ದೇವಾಲಯದ

ಕಟ್ಟೆ ಮೇಲೆ ಸ್ವಲ್ಪ ಕುಳಿತುಕೊ. ನಿನಗೊಂದು ಪ್ರಶ್ನೆ ಕೇಳುವದಿದೆ". ಅವಳು ನಿಸ್ಸಂಕೋಚವಾಗಿ ಗುಡಿಗೆ ಹೋಗಿ ದೇವರಿಗೆ ಕೈ ಮುಗಿದು ಬಂದು ಗುಡಿಯ ಕಟ್ಟೆಯ ಮೇಲೆ ಕುಳಿತು "ಕೇಳಿ" ಎಂದಳು."ನೀನು ಎರಡನೆಯ ಮದುವೆ ಮಾಡಿಕೊಂಡೆಯಂತೆ, ಆ ಕೆಲಸದಾತ ಹೇಳಿದ".

"ಅವಳೊಂದು ದೀರ್ಘ ಶ್ವಾಸ ಬಿಟ್ಟು ಪ್ರಶ್ನಿಸಿದಳು. ನಿಮಗೆ ಆ ಮಾತಿನ ಮೇಲೆ ನಂಬಿಕೆ ಬಂತೆ!"

"ನಂಬದೇ ಬೇರೆ ದಾರಿಯಿರಲಿಲ್ಲ. ಆದರೂ ನೀನು ಇಷ್ಟು ಸಾಮಾನ್ಯಳಾಗಲಾರೆ ಎಂದು ಮನಸ್ಸು ಹೇಳುತ್ತಿದೆ".

"ನನ್ನ ಬಾಯಿಂದ ನಾನು ಹೇಳಬಾರದು. ಆದರೂ ನನಗೆ ನೀಡಬಹುದಾದ ಯಾವುದೇ ತೊಂದರೆಯನ್ನು ಇವರು ಉಳಿಸಲ್ಲಿಲ್ಲ. ಹೊಟ್ಟೆಗಿಲ್ಲದೆ ಎಂಟು ದಿನ ಕಳೆದೆ. ನನ್ನ ಮೇಲೆ ಅನೇಕ ದುಷ್ಟ ಅಪವಾದಗಳನ್ನು ಹೊರಿಸಿದರು. ಅವುಗಳಲ್ಲಿ ಇದೂ ಒಂದು. ಎಲ್ಲರಿಗೂ ಹೀಗೆ ಹೇಳತೊಡಗಿದರು. ಕೊನೆಗೆ ಆ ಕೆಲಸದಾತ ನನಗೊಮ್ಮೆ ಪ್ರಶ್ನಿಸಿದ "ಗಂಡನ ಬಗ್ಗೆ ಅಷ್ಟೊಂದು ಕಾಳಜಿ ಇದ್ದರೆ ನಾಲ್ಕು ದಿನಗಳಿಗೊಮ್ಮೆ ಬಂದು ಹೋಗುವದಿಲ್ಲವೇಕೆ?" "ಆ ಗಂಡನ ಅನುಮತಿ ಬೇಡವೆ?" ನಾನು ಕೋಪದಿಂದ ಮಾರ್ನುಡಿದಿದ್ದೆ. ತಪ್ಪು ಕಲ್ಪನೆ ಬಂದರೂ ಬರಲಿ ಎಂದು. "ನಿಜಕ್ಕೂ ನೀನು ಎರಡನೇ ಮದುವೆ ಮಾಡಿಕೊಂಡಿಲ್ಲ ಎಂದಾದರೆ ಉರಿಯುತ್ತಿರುವ ದೀಪವನ್ನು ಕೈಯಾರೆ ಆರಿಸು ಎಂದಿದ್ದರು ಇವರು. ನಾನು ಕೈ ಬೆರಳುಗಳಿಂದ ದೀಪವನ್ನು ನಂದಿಸಿದ್ದೆ. ವಾಸ್ತವಿಕವಾಗಿ ಆಶ್ರಮದ ಕುರಿತೆಲ್ಲ ಇವರ ಸ್ನೇಹಿತ ಇವರ ಸಮಕ್ಷಮದಲ್ಲೇ ಹೇಳಿದ್ದ. ಈಗಲಾದರೂ ನಿಮಗೆ ಯಾವುದೇ ಸಂದೇಹವಿಲ್ಲ ತಾನೆ?" ಆಕೆ ಕೇಳಿದಳು. "ಇಲ್ಲ ನನಗೆ ಸಮಾಧಾನವಾಗಿದೆ" ಎನ್ನುತ್ತ ನಾನು ನಿಟ್ಟುಸಿರು ಬಿಟ್ಟೆ. ಎದೆ ಮೇಲಿನ ಭಾರ ಇಳಿದಂತಾಗಿತ್ತು.

"ಮನುಷ್ಯ ಕಾಯಿಲೆಯಿಂದ ಬ[illegible]ಸತ್ತು ಹೋಗುತ್ತಾನೆ. ಆತ ಏನಾದರೂ [illegible]ದರೆ ನಾವೇಕೆ ಬೇಸರ ಮಾಡಿಕೊಳ್ಳಬೇಕು? ಏನೆ ಆದರೂ ಅನ್ನವಸ್ತ್ರದಾತ. ನನ್ನ [illegible]ಡನ ವ್ಯವಸ್ಥೆ ನೋಡಿಕೊಳ್ಳುತ್ತಾನಲ್ಲ. ಅಷ್ಟೇ[illegible]ಕು. ನಾನು ನನ್ನ ಗಂಡನ ಸೇವಕನೊ[illegible]ದಿಗೆ ಸಲುಗೆಯಿಂದ ವರ್ತಿಸುವುದಿಲ್ಲ. ಆದ್ದರಿಂದ ಅವನು ಈ ರೀತಿಯ ಸುದ್ದಿಯನ್ನು ಹಬ್ಬಿಸುತ್ತಾನೆ. ಆದರೆ ನಮ್ಮ ಧಾರಿ[illegible]ಯಲ್ಲಿ ನಾವು ಮುಂದೆಸಾಗಬೇಕು ಅಲ್ಲವೆ?" [illegible]ಸ್ಸುತ್ತ ಕರುಣಾ ನಕ್ಕಳು. ಅದೇ ಸಹೃದ[illegible]ಯ ಕರುಳನ್ನು ಹಿಂಡುವ ಅವಳ ನಗೆ.

ಈಸೋಪನ ನೀತಿ ಕಥೆಗಳನ್ನು ಕೇಳದವರಾರೂ ಇರಲಿಕ್ಕಿಲ್ಲ. ಇವನು ಎಷ್ಟೊಂದು ಪ್ರಸಿದ್ಧನೆಂದರೆ ಗ್ರೀಸಿನ ನಾಟಕಕಾರ ಅರಿಸ್ಟಾಫನೀಸನು ಖ್ಯಾತ ಶಿಲ್ಪಿಯೊಬ್ಬನಿಂದ ಈಸೋಪ[illegible] ಶಿಲಾಮೂರ್ತಿಯನ್ನು ಮಾಡಿಸಿಟ್ಟುಕೊಂಡಿದ್ದನಲ್ಲದೆ ತನ್ನ ನಾಟಕಗಳಲ್ಲಿ ಈಸೋಪನ ಕಥೆಗಳನ್ನು ಆತ ಬಳಸಿಕೊಳ್ಳುತ್ತಿದ್ದ. ಈಸೋಪನ ಕಥೆಗಳನ್ನು ಸಾಕ್ರಟಿಸ್ ಪದ್ಯ ರೂಪದಲ್ಲಿ ಬರೆದಿದ್ದ. ಈಸೋಪನ ಕುರಿತು ಪ್ಲೇಟೋ ಕೂಡ ಹೇಳಿದ್ದಾನೆ.

ಆದರೆ ಈಸೋಪ ಒಬ್ಬ ಗುಲಾಮನಾಗಿದ್ದ. ತನ್ನ ಬುದ್ಧಿಮತ್ತೆಯಿಂದಾಗಿ ಮಾಲೀಕನಿಂದ ಸ್ವಾತಂತ್ರ್ಯ ಪಡೆದು ಆಗಿನ ರಾಜಧಾನಿ ಅಥೆನ್ಸ್‌ಗೆ ಬಂದ. ಹಾಗೇ ಲಿಡಿಯಕ್ಕೆ ಹೋಗಿ ಅಲ್ಲಿ[illegible] ದೊರೆ ಕ್ರೀಸಸನ ಕೃಪೆಗೆ ಪಾತ್ರನಾದ. ದೊರೆ ಅವನಿಗೆ ಡೆಲ್ಫಿ ಎಂಬ ನಗರದ ಹಣಕಾಸಿ[illegible] ವ್ಯವಹಾರ ವನ್ನು ಬಿಟ್ಟುಕೊಟ್ಟ. ಈ ಕೆಲಸದಲ್ಲಿ ಈತ ಅಪೋಲೋ ದೇವತೆಗಳ (ದೇವತಾ ಮಂದಿರದ) ಪೂಜಾರಿಗಳೊಂದಿಗೆ ವೈಮನಸ್ಸನ್ನು ಕಟ್ಟಿಕೊಂಡ. ಇದು ವಿಕೋಪಕ್ಕೆ ತಿರು[illegible] ಈಸೋಪ ಒಂದು ಗುಡ್ಡದಿಂದ ನೂಕಲ್ಪಟ್ಟು ಸತ್ತ.

ಈಸೋಪನ ಕಾಲ ಸುಮಾರು ಕ್ರಿ.ಪೂ. 670-564: ಸ್ಥಳ: ಗ್ರೀಸ್. ಈತನ ಜೀವ[illegible] ವೃತ್ತಾಂತ ವೊಂದು ಕಟ್ಟು ಕಥೆ ಎನ್ನುವವರೂ ಇದ್ದಾರೆ. ಪಂಚತಂತ್ರಕ್ಕೂ ಈಸೋಪ[illegible] ಕಥೆಗಳಿಗೂ ಹೋಲಿಕೆ ಕಂಡುಬರುವುದರಿಂದ ಇವೆರಡರ ಮೂಲ ಜಾನಪ[illegible] ಕಥೆಗಳಿರಬೇಕೆಂದು ವಾದಿಸುವವರೂ ಉಂಟು.

•

-ವಿನಾಯಕ ವಿ. ಕಾಶೆಟ್[illegible]

ಗುರುತ್ವವೇ ಇಲ್ಲದಿದ್ದಲ್ಲಿ



ಊಹಿಸಲಸದಳ



— ಎಚ್.ಎನ್. ಲಕ್ಷ್ಮೀಪತಿ

ನೀವು ಮೇಲಕ್ಕೆ ಎಸೆದ ಒಂದು ಕಲ್ಲು ಪುನಃ ಒಂದಿರುಗಿ ಕೆಳಕ್ಕೆ ಬೀಳುವುದು. ಇದಕ್ಕೆ ಕಾರಣ ಭೂಮಿಯ ಗುರುತ್ವ. ಅಂದರೆ ಮೇಲಕ್ಕೆಸೆದ ಕಲ್ಲು ಹಿಂದಿರುಗಿ ಕೆಳಕ್ಕೆ ಬೀಳಲು ಕಾರಣ ವಾಗುವ ಸೆಳೆತದ ಬಲವೇ ಗುರುತ್ವ. ವಿಶ್ವದ ಪ್ರತಿ ಯೊಂದು ವಸ್ತು ಮತ್ತೊಂದು ವಸ್ತುವನ್ನು ಆಕರ್ಷಿಸುವ ಬಲದಲ್ಲಿ ಗುರುತ್ವವನ್ನು ಕಾಣ ಬಹುದು.

ಭಾರವಾದ ವಸ್ತುಗಳು ಹೆಚ್ಚು ವೇಗದಲ್ಲಿ ಭೂಮಿಯ ಕಡೆಗೆ ಬೀಳುವುದು ಅವುಗಳ ಸ್ವಾಭಾವಿಕ ಗುಣ ಎಂದು ಅರಿಸ್ಟಾಟಲ್ ತಿಳಿ ದಿದ್ದ. ಆತನ ತರ್ಕಕ್ಕೆ ಕಾರಣ, ಗರಿಗಳು ನಿಧಾನವಾಗಿ ಭೂಮಿಯೆಡೆಗೆ ಬೀಳುವುದೇ ಆಗಿತ್ತು. ಮುಂದೆ ಗೆಲಿಲಿಯೋ ಪೀಸಾ ನಗರ ದಲ್ಲಿರುವ ವಾಲಿದ ಗೋಪುರವೊಂದನ್ನು ಏರಿ ಅದರ ಮೇಲಿಂದ ಬೇರೆ ಬೇರೆ ಭಾರವುಳ್ಳ ಕಬ್ಬಿಣದ ಗುಂಡುಗಳನ್ನು ಏಕಕಾಲಕ್ಕೆ ಬಿಟ್ಟು, ಅವು ಒಂದೇ ವೇಳೆಯಲ್ಲಿ ನೆಲ ಮುಟ್ಟಿದ್ದನ್ನು ಸಾಬೀತುಪಡಿಸಿದ. ವಸ್ತುವಿನ ತೂಕ, ಬೀಳುವ ಅದರ ವೇಗದ ಮೇಲೆ ಏನೂ ಪರಿಣಾಮವನ್ನುಂಟುಮಾಡುವುದಿಲ್ಲ ಎಂಬ ಅಂಶ ಇವನ ಪ್ರಯೋಗದಿಂದ ಖಚಿತ ವಾಯಿತು ಹೆಚ್ಚು ತೂಕದ ವಸ್ತು ಹೆಚ್ಚು ವೇಗದಲ್ಲಿ ಬೀಳುವುದು ಎಂಬ ಅರಿಸ್ಟಾಟಲ್‌ನ ವಾದಕ್ಕೆ ತದ್ವಿರುದ್ಧವಾಗಿ ಸಮಕಾಲಾವಧಿಯಲ್ಲಿ ವೇಗವು ಸಮಪ್ರಮಾಣ ದಿಂದ ಹೆಚ್ಚುವುದು ಪ್ರಕೃತಿಯ ಸರಳ ನಿಯಮ ಎಂದು ಮುಂದೆ ಗೆಲಿಲಿಯೋ ಸಾರಿದ. ಗಾಳಿ ಇಲ್ಲದ ಚಂದ್ರನ ನಿರ್ವಾತ ಪರಿಸರದಲ್ಲಿ 1971ರಲ್ಲಿ ಇಳಿದ ಅಪೊಲೋ-15ರ ವ್ಯೋಮ ಯಾತ್ರಿ ಸ್ಕಾಟ್ ಹಗುರವಾದ ಗರಿ ಮತ್ತು ಭಾರವಾದ ಸುತ್ತಿಗೆಯನ್ನು ಒಮ್ಮೆಗೇ ಇಳಿ ಬಿಟ್ಟಾಗ ಅವೆರಡೂ ಏಕಕಾಲದಲ್ಲಿ ಚಂದ್ರನ ನೆಲ ಸ್ಪರ್ಶಿಸಿದವು. ಈ ದೃಶ್ಯವನ್ನು ಜನ ಟಿ.ವಿ.ಯಲ್ಲಿ ವೀಕ್ಷಿಸಿದರು. ಗೆಲಿಲಿಯೋ ಕಲ್ಪಿಸಿದ ಪ್ರಯೋಗ ಚಂದ್ರನಲ್ಲಿ ಹೀಗೆ ಸಾಬೀತಾಯಿತು.

ಆದರೆ ಗುರುತ್ವವೇ ಇಲ್ಲದಿದ್ದರೆ ಏನಾಗು ತ್ತಿತ್ತು? ಈ ಪ್ರಶ್ನೆಗೆ ಪ್ರಾಯಶಃ ನಿಮ್ಮ ಉತ್ತರ. ನ್ಯೂಟನ್‌ನ ತಲೆಯ ಮೇಲೆ ಸೇಬು ಬೀಳುತ್ತಿರ ಲಿಲ್ಲವೆಂದು ಬರಬಹುದು. ನಿಮ್ಮ ಊಹೆ ಸರಿ. ಆದರೆ ಅದು ಪೂರ್ಣವಾಗಿ ಅಲ್ಲ. ಏಕೆಂದರೆ ಮೊದಲನೆಯದಾಗಿ, ನ್ಯೂಟನ್ ಆಗಲಿ ಅಥವಾ ಸೇಬಾಗಲಿ ಭೂಮಿಯ ಮೇಲೆ ಇದ್ದಿದ್ದರೆ ತಾನೆ?

ನಾಲ್ಕು ಮೂಲಭೂತ ಶಕ್ತಿಗಳಲ್ಲಿ ಗುರುತ್ವವು

ಒಂದು ದುರ್ಬಲ ಶಕ್ತಿ. ಗುರುತ್ವವು ವಿಶ್ವದ ಪ್ರತಿ ವಸ್ತು ವಸ್ತುಗಳ ನಡುವೆ ಪರಸ್ಪರ ಆಕರ್ಷಣೆಯನ್ನು ಉಂಟುಮಾಡುತ್ತದೆ. ಆದಾಗ್ಯೂ ಇದೊಂದು ದುರ್ಬಲ ಶಕ್ತಿ. ಈ ಶಕ್ತಿಯನ್ನು ನಾವೀಗ ವಿದ್ಯುದಯಸ್ಕಾಂತ ಶಕ್ತಿಯೊಂದಿಗೆ ಹೋಲಿಸೋಣ. ಈ ಶಕ್ತಿಯೇ ಜಲಜನಕದ ಅಣುವಿನ ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳನ್ನು ಬಂಧಿಸಿರುವಂಥಾದ್ದು. ಈ ವಿದ್ಯುದಯ ಸ್ಕಾಂತ ಶಕ್ತಿಯು ಗುರುತ್ವಾಕರ್ಷಣ ಶಕ್ತಿಗಿಂತ ಒಂದರ ಮುಂದೆ ನಲುವತ್ತು ಸೊನ್ನೆಗಳನ್ನು ಬರೆದರೆ ಉಂಟಾಗುವ ಬೃಹತ್ ಮೊತ್ತದಷ್ಟು ಹೆಚ್ಚಿರುತ್ತದೆ.

ಇಂತಹ ದುರ್ಬಲವಾದ·ಗುರುತ್ವ ಶಕ್ತಿಯು ನಿಜಕ್ಕೂ ಅವಶ್ಯವೇ? ಅದಿಲ್ಲದೆ ನಾವು ಬದುಕಲು ಶಕ್ಯವಿಲ್ಲವೇ?

ನಮ್ಮ ಅಸ್ತಿತ್ವವು ನಮ್ಮ ಪರಿಸರದೊಂದಿಗೆ ನಿಕಟತೆಯನ್ನು ಬೆಳೆಸಿಕೊಂಡಿದೆ. ಈ ವಿಶ್ವದ ಬೃಹತ್ ರಚನೆಯಲ್ಲಿ ಮೇಲೆ ಹೇಳಿದ ನಾಲ್ಕು ಮೂಲಭೂತ ಶಕ್ತಿಗಳ ಪಾತ್ರ ಇದ್ದೇ ಇದೆ. ಈ ನಾಲ್ಕು ಶಕ್ತಿಗಳಲ್ಲಿ ಯಾವುದಾದರೂ ಒಂದು ಶಕ್ತಿಯನ್ನು ಕೈಬಿಟ್ಟರೆ ಏನಾಗುವುದೆಂದು ಯೋಚಿಸಿದ್ದೇ ಆದರೆ, ಅದರಿಂದೊದಗುವ ಪರಿಣಾಮಗಳನ್ನು ನಾವು ಊಹಿಸಲಸದಳ.

ವಿದ್ಯುದಯಸ್ಕಾಂತ ಶಕ್ತಿಗಿಂತಲೂ ನೂರು ಪಟ್ಟು ಶಕ್ತಿ ನ್ಯೂಟ್ರಾನ್ ಮತ್ತು ಪ್ರೋಟಾನಿನಲ್ಲಿ ಅಡಗಿದೆ! ಗುರುತ್ವ ಶಕ್ತಿಯನ್ನು ಈ ಶಕ್ತಿಯೊಂದಿಗೆ ಹೋಲಿಸಿದಾಗ ಗುರುತ್ವ ಶಕ್ತಿಯು ಸಾಪೇಕ್ಷವಾಗಿ ದುರ್ಬಲವಾದದ್ದು.

ನಮ್ಮ ಸುತ್ತಮುತ್ತಲಿನ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳಿಂದ ಪ್ರಾರಂಭಿಸಿ ಕಣ್ಣಿಗೆ ಗೋಚರಿಸುವ ಎಲ್ಲಾ ವಸ್ತುಗಳನ್ನು ಬಂಧಿಸಿಟ್ಟಿರುವ ಗುರುತ್ವವು ಅದೃಶ್ಯವಾದರೆ ಈ ಎಲ್ಲಾ ವಸ್ತುಗಳು ಪುಡಿಪುಡಿ ಯಾಗಿ ಹೋಗುವುವೇ? ನಾವು, ಅಂದರೆ ಮಾನವ ಸಂಕುಲ ನಾಶವಾಗುವುದೇ? ಎಂಬ ಪ್ರಶ್ನೆಗೆ ನಾವೀಗ ನ್ಯೂಟನ್‌ನ ವಿಲೋಮಾನುಪಾತ ವರ್ಗ ನಿಯಮದ ಒಂದು ಸರಳ ಲೆಕ್ಕವನ್ನು ಮಾಡೋಣ. ಉದಾ: ಒಂದು ಕುರ್ಚಿ 20 ಕಿಲೋಗ್ರಾಮು ಗಳಷ್ಟು ದ್ರವ್ಯ ರಾಶಿ ಹೊಂದಿದೆ ಎಂದು ಭಾವಿಸಿಕೊಳ್ಳಿ. ಈ ಕುರ್ಚಿ 10 ಕೆ.ಜಿ. ತೂಕದ ಎರಡು ಸಮಭಾಗಗಳಾಗಿ ಮುರಿದಿದೆ ಎಂದು ಊಹಿಸಿರಿ. ಈಗ ಕುರ್ಚಿಯ ಈ ಎರಡು ಭಾಗಗಳನ್ನು ಬಂಧಿಸಿಟ್ಟಿದ್ದ ಗುರುತ್ವದ ಶಕ್ತಿ ಏನು ಎಂಬುದನ್ನು ತಿಳಿದುಕೊಳ್ಳೋಣ. ನಾವೀಗ ಕುರ್ಚಿಯ ಮುರಿದ ಎರಡು ಭಾಗಗಳ ಅಂತರ ಸುಮಾರು 50 ಸೆಂ.ಮೀ. ಎಂದು ಭಾವಿಸಿದರೆ ಅವುಗಳ ಗುರುತ್ವ ಶಕ್ತಿ ಕೇವಲ 0.003 ಡೈನ್ ಅಥವಾ ಪೌಂಡುಗಳಷ್ಟು. ಈ ಶಕ್ತಿಯಿಂದ ಸುಮಾರು ಮೂರು ಮೈಕ್ರೋಗ್ರಾಂ ತೂಕದ ವಸ್ತುವನ್ನು ಎತ್ತಬಹುದಷ್ಟೆ. ಇಷ್ಟು ನಿಕೃಷ್ಟ ಶಕ್ತಿಯು ಕುರ್ಚಿಯನ್ನು ಬಂಧಿಸಿಟ್ಟಿದೆ ಎನ್ನುವುದಾದರೆ, ನಿಜಕ್ಕೂ ಮಗುವೊಂದು ಆ ಕುರ್ಚಿಯನ್ನು ನಿರಾಯಾಸವಾಗಿ ಮುರಿಯ ಬಲ್ಲದಲ್ಲವೇ? ಎಂದು ನಿಸ್ಸಂಶಯವಾಗಿ ಹೇಳಬಹುದು. ಗುರುತ್ವದ ಪಾತ್ರ ಇದರಲ್ಲಿ ಏನೇನೂ ಇಲ್ಲವೆಂದು. ವಾಸ್ತವವಾಗಿ, ನಮ್ಮೊನ್ನೊಳಗೊಂಡಂತೆ, ಎಲ್ಲ ವಸ್ತುಗಳನ್ನು ಬಂಧಿಸಿರುವ ಶಕ್ತಿ ಯಾವುದು ಎಂಬುದರ ಬಗ್ಗೆ ಕೈಗೊಳ್ಳುವ ಸವಿಸ್ತಾರವಾದ ಅಭ್ಯಾಸವು ಪುನಃ ನಮ್ಮನ್ನು ವಿದ್ಯುದಯಸ್ಕಾಂತದ ಮೂಲಕ್ಕೆ ಕೊಂಡೊಯ್ಯುತ್ತದೆ.

ಗುರುತ್ವವೇನಾದರೂ ಅದೃಶ್ಯವಾದರೆ ನಮ್ಮ ಸುತ್ತಮುತ್ತ ಇರುವ ವಸ್ತುಗಳು ಮುರಿಯಲಾರವೆಂದು ಈ ಉದಾಹರಣೆಯಿಂದೇನೋ ತಿಳಿದು ಬಂತು. ಆದರೆ, ಗುರುತ್ವವೇ ಇಲ್ಲದಿದ್ದರೆ ನಮ್ಮ ಅಸ್ತಿತ್ವಕ್ಕಂತೂ ಸಂಚಕಾರ ಶತಃಸಿದ್ಧ. ಗುರುತ್ವವೆ ಸಮ್ಮೆಲ್ಲರ ಉಳಿವಿಗೆ ಕಾರಣ. ಆದರೆ ವ್ಯೋಮಯಾನಿಗಳು ಶೂನ್ಯ ಗುರುತ್ವದ ಪರಿಸರದಲ್ಲಿ ಬದುಕಬಲ್ಲೆವೆಂದು ಸಾಬೀತು ಪಡಿಸಿಲ್ಲವೆ? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಹೌದು, ಶೂನ್ಯ ಗುರುತ್ವದ ವಿಶ್ವದಲ್ಲಿ ತುಸು ಹೋರಾಟದೊಂದಿಗೆ ಗಗನ ನೌಕೆಯಲ್ಲಿ ಬದುಕಬಹುದೆಂದು ಇತ್ತೀಚಿನ ನಮ್ಮ ಸಾಧನೆಗಳಿಂದ ತಿಳಿದು ಬಂದಿದೆ.

ಆದರೆ, ಗುರುತ್ವವು ಪ್ರಮುಖವಾದ ಪಾತ್ರವನ್ನು ವಹಿಸುತ್ತಿರುವಲ್ಲಿ ಈ ತೀರ್ಮಾನ ಲಕ್ಷ್ಯಕ್ಕೆ ಬರುವುದಿಲ್ಲ. ಗುರುತ್ವವು ಅಣುವಿನ ಮಾನದಂಡದಲ್ಲಿ ತೀರ ಗೌಣವಾದರೂ, ಅದರ ದ್ರವ್ಯ ರಾಶಿಯು ಖಗೋಳಮಾನ ಸಂಖ್ಯೆಯಲ್ಲಿ ವ್ಯಕ್ತವಾದಾಗ, ಅದು ತನ್ನ ಪ್ರಭಾವವನ್ನು ತೋರಿಸುತ್ತದೆ.

ಇಂದು ನಾವು ವಿಶ್ವಸೃಷ್ಟಿಯನ್ನು ಅರ್ಥ ಮಾಡಿಕೊಂಡಿರುವಂತೆ, ಸೌರವ್ಯೂಹ, ನಕ್ಷತ್ರಗಳು ಹಾಗೂ ಆಕಾಶಗಂಗೆಯ ಉಗಮದಲ್ಲಿ ಗುರುತ್ವವು ಬಹು ಪ್ರಮುಖ ಪಾತ್ರ ವಹಿಸಿದೆ. ವಿಶ್ವದಲ್ಲಿ ಚದುರಿದ ದಟ್ಟ ಕಾರ್ಬೋನೀಕೃತ ವಸ್ತುವನ್ನು ಒಂದು ಪ್ರಬಲ ಶಕ್ತಿ ಒಗ್ಗೂಡಿಸಿತು. ಹೀಗಾಗಿ,

ಈ ಚದುರಿದ ವಸ್ತು ಅಲ್ಲಲ್ಲೆ ಉದುರಿ ರಾಶಿ ಯಾಯಿತು. ಕಟ್ಟಕಡೆಗೆ ಈ ರಾಶಿಗಳ ಸಮೂಹವು ತನ್ನ ದ್ರವ್ಯರಾಶಿ, ಗಾತ್ರ ಮತ್ತಿತರ ಗುಣಗಳ ಆಧಾರದ ಮೇಲೆ ನಕ್ಷತ್ರಗಳು, ಆಕಾಶ ಗಂಗೆ ಮುಂತಾದವುಗಳಾದವು. ಆದ್ದರಿಂದ, ಗುರುತ್ವವೇ ಇಲ್ಲದಿದ್ದರೆ, ಮೊದಲನೆಯದಾಗಿ ನಕ್ಷತ್ರ, ಆಕಾಶಗಂಗೆ ಮುಂತಾದವುಗಳ ಉಗಮ ನಮಗೆ ಕಲ್ಪನಾತೀತವಾಗುತ್ತಿತ್ತು.

ವಿಶ್ವದ ಸೃಷ್ಟಿಯ ಬಗ್ಗೆ ನಮಗೆ ಇನ್ನೂ ಸಾಕಷ್ಟು ವಿವರಗಳು ತಿಳಿದಿಲ್ಲವೆಂದು ವಾದಿಸಬಹುದು. ಆದ್ದರಿಂದ, ನಕ್ಷತ್ರಗಳು ಮತ್ತು ಆಕಾಶಗಂಗೆ ಇರುವ ಈ ವಿಶ್ವದ ಬಗ್ಗೆ ಒಂದು ಕಲ್ಪನೆಯ ಪ್ರಯೋಗವನ್ನು ಮಾಡೋಣ. ಅದರಂತೆ ನಾವೀಗ ಗುರುತ್ವವನ್ನು ನಿಲ್ಲಿಸೋಣ. ಏನಾಗ ಬಹುದು? ಒಂದು ಮಾದರಿ ನಕ್ಷತ್ರದಲ್ಲಿ ಗುರುತ್ವ ಬಲ ಮತ್ತು ಆಂತರಿಕ ಒತ್ತಡದ ನಡುವೆ ಸಮತೆ ಏರ್ಪಟ್ಟಿರುತ್ತದೆ. ಈಗ ಗುರುತ್ವವನ್ನು ತೆಗೆಯಿರಿ. ಆಗ ಈ ಸಮತೆಯು ಅಡ್ಡಾದಿಡ್ಡಿಯಾಗುವುದು. ನಕ್ಷತ್ರವು ಆಗ ಗುರುತ್ವಾಕರ್ಷಣೆಗೋಸ್ಕರ ಸಿಡಿದು ದೂರ ಸರಿಯುತ್ತದೆ. ಅಲ್ಲದೆ ಸ್ವಯಂ ಪ್ರಕಾಶವನ್ನು ಸಹ ಕಳೆದುಕೊಳ್ಳುತ್ತದೆ.

ನಾವು ಬೇರೆ ನಕ್ಷತ್ರಗಳನ್ನು ಬಿಟ್ಟು ಬದುಕಬಹು ದಾದರೂ ನಮ್ಮದೇ ನಕ್ಷತ್ರವಾದ ಸೂರ್ಯನನ್ನು ಬಿಟ್ಟು ಬದುಕಲಾರೆವು. ಜೀವಿಯ ಉಗಮ ಮತ್ತು ಬೆಳವಣಿಗೆಯಲ್ಲಿ ಸೂರ್ಯ ಕಿರಣವು ಪ್ರಮುಖ ಪಾತ್ರವನ್ನು ವಹಿಸಿದೆ. ಗುರುತ್ವದ ಅಭಾವದಿಂದಾಗಿ ಸೂರ್ಯ ಮತ್ತು ಭೂಮಿಯ ನಡುವೆ ಸಮತೆ ತಪ್ಪಿಹೋದರೆ ನಾಗರಿಕತೆ ಇರಲಿ, ಯಾವುದೇ ಜೀವಿಯ ಉಗಮಕ್ಕೇ ಆಧಾರ ಇರುವುದಿಲ್ಲ. ವಾತಾವರಣ ಸಿಡಿದು ದೂರ ಸರಿಯುತ್ತದೆ. ಗಾಳಿ, ನೀರು ದುರ್ಲಭ ವಾಗುತ್ತವೆ. ತತ್ಪರಿಣಾಮವಾಗಿ, ಭೂಮಿಯಲ್ಲಿ ಜೀವನವು ಅಸಾಧ್ಯವಾಗುವುದಲ್ಲದೇ ಜೀವಿಯ ಉಗಮ ಮತ್ತು ವಿಕಾಸಕ್ಕೆ ತೆರೆ ಬೀಳುತ್ತದೆ.

ಈಗ ಗುರುತ್ವ ಇದ್ದಕ್ಕಿದ್ದಂತೆ ಅದೃಶ್ಯವಾದರೆ ಏನಾಗುವುದೆಂದು ಊಹಿಸಿಕೊಳ್ಳಿ. ಹಾಗಾದರೆ, ಅತ್ಯಂತ ಭಯಂಕರ ಅತಿರೇಕಗಳು ಉಂಟಾಗು ವವು. ಭೋರ್ಗರೆವ ಜಲಪಾತಗಳು ಮೇಲ್ಮುಖ ವಾಗಿ ಚಿಮ್ಮುವವು. ಹಿಮಾಚ್ಛಾದಿತ ಶಿಖರಗಳು ದಿಢೀರನೆ ಮೇಲಕ್ಕೆ ಸೆಳೆಯಲ್ಪಡುವವು. ಜೊತೆಗೆ ಭೂಮಿ ಮತ್ತು ಸೂರ್ಯ ಸಿಡಿದು ದೂರ ಸರಿಯು ವುದಲ್ಲದೆ ಇತರೆ ಅನ್ಯ ಕಾಯಗಳೊಂದಿಗೆ ಡಿಕ್ಕಿ ಹೊಡೆಯುವ ಸಂಭವ ಉಂಟಾಗಿ, ಸಕಲ ಜೀವ ರಾಶಿಯು ನಾಶವಾಗುವುದು.

ಒಟ್ಟಾರೆ ಪ್ರಕೃತಿಯು ಚಿತ್ರಗಾರನ ಕುಸುರಿನ ಚಿತ್ರಪಟದಂತಿದ್ದು ಅದರಲ್ಲಿ ಪ್ರತಿಯೊಂದು ಕುಸುರಿನ ತುಣುಕೂ, ಅದೆಷ್ಟೇ ಸೂಕ್ಷ್ಮವಿರಲಿ, ಅದಂತೂ ಚಿತ್ರಪಟ ಪೂರ್ಣಗೊಳ್ಳಲು ಅವಶ್ಯವಷ್ಟೇ. ಅಂತೆಯೇ ಗುರುತ್ವ ಸಹ, ಅಂತಹದೆ ಒಂದು ತುಣುಕು. ಅದೆಷ್ಟೇ ಸೂಕ್ಷ್ಮವಿರಲಿ, ಅದು ಅನಿವಾರ್ಯ. ●

ಮೆಸಾಚುಸೆಟ್ಸ್‌ನ ಬಳಿ ಪಿಗನ್‌ಕೌ ಎಂಬಲ್ಲಿ ಪೂರ್ತಿಯಾಗಿ ಹಳೆಯ ವರ್ತಮಾನ ಪತ್ರಿಕೆಗಳಿಂ ದಲೇ ನಿರ್ಮಿಸಲ್ಪಟ್ಟ ಮನೆಯೊಂದಿದೆ. 1922ರಲ್ಲಿ ಅಲ್ಲಿಯ ನಿವಾಸಿಗಳಾದ ಎಲಿಸ್ ಸ್ಟೆಲ್ ಮ್ಯಾಗ್ ಮತ್ತು ಆತನ ಪತ್ನಿ ಹಳೆಯ ಪತ್ರಿಕೆಗಳನ್ನು ಕಲೆಹಾಕಿ ಅದನ್ನೇ ಕಟ್ಟಡದ ಸಾಮಗ್ರಿಯನ್ನಾಗಿ ಮಾಡಿಕೊಂಡು ಮನೆಕಟ್ಟತೊಡಗಿದರು. ಮನೆಯ ಗೋಡೆಗಳನ್ನು 215 ಪುಟಗಳನ್ನು ಸೇರಿಸಿ ನಿಲ್ಲಿಸಿದ್ದರೆ, ಬಾಗಿಲು ಕಿಟಕಿಗಳಿಗೆ ಹಾಕುವ ಕರ್ಟನ್‌ಗಳನ್ನು ಕೂಡ ಪತ್ರಿಕೆಗಳ ಮುಖಪುಟುಗಳನ್ನು ಸೇರಿಸಿ ನೇಯ್ದು ಮಾಡಿದ್ದಾರೆ. ಅಲ್ಲಿರುವ ಮೇಜು ಕುರ್ಚಿಗಳೂ ವಿದೇಶದ ಉತ್ತಮವಾದ ಪತ್ರಿಕೆ ಗಳಿಂದಲೇ ನಿರ್ಮಿಸಲ್ಪಟ್ಟಿವೆ. ಅಷ್ಟೇ ಅಲ್ಲ ಅತಿಥಿಗಳಿಗಾಗಿ ಚಹ ತಿಂಡಿ ಮಾಡುವ ಒಲೆಯೂ ಬೋಸ್ಟನ್ ಮತ್ತು ನ್ಯೂಯಾರ್ಕಿನ ಉತ್ತಮ ಮಟ್ಟದ ಪತ್ರಿಕೆಗಳಿಂದ ತಯಾರಾದದ್ದೇ.

ನೋಡಲು ಬಂದವ ಈ ಮನೆಯನ್ನು 'ಓದ'ತೊಡಗುತ್ತಾನೆ.

ಟಿ.ವಿ. ತ್ರಿಲಕ್ಷ್ಮಿ.

ರೆಡ್ ಟೇಪ್

-ಕೆ. ಚಂದ್ರ ಮೌಳಿ

ಒಮ್ಮೆ ಇಂಗ್ಲೆಂಡಿನ ಸಣ್ಣ ಹಳ್ಳಿಯ ರೈಲ್ವೆ ನಿಲ್ದಾಣಕ್ಕೆ ಒಂದು ಬುಟ್ಟಿ ಪಾರ್ಸಲ್ ಆಗಿ ಬಂದಿತು. ಅದರ ವಾರಸುದಾರ ತನ್ನ ಪಾರ್ಸಲ್ ಪಡೆಯಬೇಕೆಂದಿರುವಾಗ ಆ ಬುಟ್ಟಿಯೊಳಗಿದ್ದ ದಂಪತಿ ಮೊಲಗಳು ಗೊರ್ ಎಂದು ಶಬ್ದಮಾಡಿ ತಮ್ಮ ಪರಿಚಯ ಮಾಡಿಕೊಟ್ಟವು. ಪಾಪ ತನ್ನ ಮಾಲೀಕನನ್ನು ನೋಡಿ ಮೊಲದ ದಂಪತಿಗಳು ಮುಗುಳ್ನಗುವುದು ಸ್ವಾಭಾವಿಕವೇ ಅಲ್ಲವೆ! ಆದರೆ ಇವರ ಸಮಾಗಮ ನೋಡಿ ಅಲ್ಲಿನ ರೈಲ್ವೇ ಗುಮಾಸ್ತೆಯ ಕಣ್ಣು ಅಗಲವಾಯಿತು. ತೂಕದ ಪ್ರಕಾರ ಸರಕುಸಾಗಣೆಯ ಕರ (ದರ) ತಗೊಳ್ಳಲು ಅನುವಾಗಿದ್ದ ಅವನ ಎಲ್ಲ ಲೆಕ್ಕವೂ ತಲೆಕೆಳಗಾಯಿತು. "ಅರೆ ಸಜೀವ ಪ್ರಾಣಿ ಸಾಗಿಸಿದ್ದಕ್ಕೆ ಇದರ ಎರಡರಷ್ಟು ಕರ ಕೊಡಬೇಕು. ಅಷ್ಟು ದುಡ್ಡು ಕೊಟ್ಟು ಈ ಪಾರ್ಸಲ್ ತಗೊಂಡು ಹೋಗು" ಅಂದ ಆ ಗುಮಾಸ್ತ. ಹಳ್ಳಿಮುಕ್ಕನಿಗೆ ಇದರಲ್ಲಿ ಏನೋ ಮೋಸ ಇದೆ ಅನಿಸಿತು. ಗುಮಾಸ್ತನ ಲೆಕ್ಕ ಅರ್ಥವಾಗಲಿಲ್ಲ. ಅಂತೂ ಅವನು ಒಂದಕ್ಕೆರಡು ಕರ ಕೊಡಲು ತಯಾರಿರಲಿಲ್ಲ. ಹಾಗೆಂದು ಖಡಾಖಂಡಿತವಾಗಿ ಹೇಳಿಯೂ



ಬಿಟ್ಟ. ಹಾಗಾದರೆ ನಿನಗೆ ಈ ಪಾರ್ಸಲ್ ಕೊಡೋಲ್ಲ ಎಂದು ಗುಮಾಸ್ತೆಯೂ ಹಟ ಹಿಡಿದ. ಇವರಿಬ್ಬರ ಜಗಳ ಅಲ್ಲಿಯ ಹೆಡ್ ಗುಮಾಸ್ತೆಯವರೆಗೂ ಹೋಯಿತು. ಅವನು ಇಬ್ಬರನ್ನೂ ಸಮಾಧಾನ ಮಾಡುತ್ತಾ "ಓಹೋ ಇದೆಂಥಹಾ ಸಮಸ್ಯೆ. ಇಷ್ಟು ಸಣ್ಣ ವಿಷಯಕ್ಕೆ ಅಷ್ಟು ದೊಡ್ಡ ಗಲಾಟೆ ಯಾಕೆ? ಇವತ್ತೇ ನಮ್ಮ ಲಂಡನ್ನಿನ ಮೇಲಧಿಕಾರಿಗೆ ಕಾಗದ ಬರೆದು ಸರಿಯಾದ ರೂಲ್ ಬಗ್ಗೆ ಕೇಳುವ. ಅವರು ಹೇಗೆ ಹೇಳುತ್ತಾರೋ ಹಾಗೇ ಮಾಡುವ. ಆಯ್ತಪ್ಪಾ, ನೀನು ಎರಡು ದಿನ ಬಿಟ್ಟು ಬಂದು ನಿನ್ನ ಪಾರ್ಸಲ್ ತಗೊಂಡು ಹೋಗುವಿಯಂತೆ" ಎಂದು ಹಳ್ಳಿಯಮುಕ್ಕನನ್ನು ವಾಪಸ್ಸು ಕಳಿಸಿದ. ಎಷ್ಟು ಸುಸೂತ್ರವಾಗಿ ಭಾರೀ ಜಗಳ ಪರಿಹರಿಸಿದೆನೆಂದು ತನ್ನ ಮೇಲೆ ಅಭಿಮಾನ ಹೆಚ್ಚಿ ಬೀಗುತ್ತಾ ಗುಮಾಸ್ತೆಗೆ ಒಂದು ಗಂಟೆ ಬುದ್ಧಿವಾದ ಹೇಳಿದ. ಜನ ರೊಡನೆ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ತಿಳಿಹೇಳಿದ. ಆದರೆ ಒಂದು ವಾರವಾದರೂ ಲಂಡನ್ನಿಂದ ಉತ್ತರವೇ ಬರಲಿಲ್ಲ. ಲಂಡನ್ನಿನ ರೆಡ್‌ಟೇಪ್ ಅಥವಾ ಕೆಂಪುಪಟ್ಟಿ ಒರಿಜಿನಲ್ಲೆ ಅಲ್ಲವೇ. ಅದ್ದರಿಂದ ಚೆನ್ನಾಗೇ ಉದ್ದವಾಗಿತ್ತು. ಇಲ್ಲಿ ಈ ಕಡೆ ಹಳ್ಳಿಮುಕ್ಕ ಪ್ರತಿದಿನವೂ ತನ್ನ ಬಿಳಿ ಮೊಲದ ದಂಪತಿಗಳನ್ನು ನೋಡಲು ಬರುತ್ತಿದ್ದ. ಅಷ್ಟೇ ಆದರೆ ಪರವಾಗಿರಲಿಲ್ಲ. ವಾಪಸ್ಸು ಹೋಗುವ ಮೊದಲು "ಏನಾದರೂ ನನ್ನ ಮೊಲ ಹಸಿವಿನಿಂದ ಸತ್ತರೆ ಅದರ ಬೆಲೆಯುನ್ನು ನಿನ್ನ ಕೈನಿಂದಲೇ ವಸೂಲು ಮಾಡ್ತೀನಿ" ಎಂದು ಗುಮಾಸ್ತೆಯನ್ನು ಹೆದರಿಸುತ್ತಿದ್ದ. ಹಳ್ಳಿಗನ ಮುಂದೆ ಜೋರಾಗಿ ಮಾತಾಡಿದರೂ ಗುಮಾಸ್ತೆಗೆ ಒಳಗೊಳಗೇ ಹೆದರಿಕೆ. ಎಲ್ಲಿ ಮೊಲ ಸಾಯುತ್ತದೋ ಅಥವಾ ಓಡಿ ಹೋಗುತ್ತದೋ ಎಂದು. ಕೊನೆಗೆ ರೈಲ್ವೆಯ ಖರ್ಚಿನಲ್ಲಿ ತಿನಿಸು ಕೊಂಡು ತಂದು ಮೊಲಗಳಿಗೆ ಹಾಕಲು ಶುರುಮಾಡಿದ. ಒಟ್ಟಿನಲ್ಲಿ ದಿನೇ ದಿನೇ ಈ ಗುಮಾಸ್ತನ ಚರ್ಯೆಯೇ ಬದಲಾಯಿತು. ಎಲ್ಲಾ ಈ ಮೊಲಗಳಿಂದಾಗಿ. ಮೊದಲು ಬೆಳಿಗ್ಗೆ ಕೆಲಸಕ್ಕೆ ಬಂದ ತಕ್ಷಣ ಅಲ್ಲೇ ಇದ್ದ ಕ್ರಿಸ್ತನ ಶಿಲುಬೆ ನೋಡಿ ಎದೆ ಮುಟ್ಟಿಕೊಳ್ಳುತ್ತಿದ್ದ. ಆದರೆ ಈಚೀಚೆಗೆ ಆಫೀಸಿಗೆ ಬಂದವನೇ ಮೊದಲು ಬುಟ್ಟಿಯನ್ನು ಮುಟ್ಟಿನೋಡಿ ಮೊಲಗಳ ಜೋಡಿ ಇನ್ನೂ ಇದೆಯೋ ಸತ್ತಿದೆಯೊ ಎಂದು ಅವುಗಳ ಮುಖದ ಮೇಲೆಯೇ ನಿಟ್ಟುಸಿರು ಬಿಡಲು ಶುರುಮಾಡಿದ್ದ. ಕುರ್ಚಿಯ ಮೇಲೆ ಕೂತ ತಕ್ಷಣ ಲಂಡನ್ನಿನ ಅಧಿಕಾರಿಗೆ ಈ ಮೊಲಗಳ ಸಮಸ್ಯೆ ಬಗ್ಗೆ ಒಂದರ ಮೇಲೊಂದು ನೆನಪೋಲೆ ಬರೆಯುವುದೇ ಅವನ ಮೊದಲ ಕೆಲಸವಾಗಿತ್ತು. ಆದರೆ ಆ ಅಧಿಕಾರಿ ತನ್ನ ರೆಡ್ ಟೇಪನ್ನು ಇನ್ನೂ ಎಳೆದು ತನ್ನ ಮೇಲಧಿಕಾರಿಯ ಸಲಹೆಗೆ ಕಾಯುತ್ತಿರಬೇಕು. ಇದ್ಯಾವುದರ ಪರಿವೆಯೂ ಇಲ್ಲದೆ ಬಿಳಿಮೊಲಗಳ ಜೋಡಿ ನಿಶ್ಚಿಂತೆಯಾಗಿ ತಿಂದುಂಡು ತೇಗಿ ಗೊರ್ರೆನ್ನುತ್ತಾ ಸುಖವಾಗಿದ್ದಿತು. ಕೊನೆಗೊಮ್ಮೆ ಬುಟ್ಟಿಯ ತುಂಬಾ ಮೊಲದ ಜೋಡಿ ಮತ್ತು ಅದರ ಮರಿಗಳು, ಬುಟ್ಟಿಯ ಹೊರಗೆಲ್ಲಾ ಕಸ, ಕಚೇರಿಯ ತುಂಬೆಲ್ಲಾ ಗಲಾಟೆ, ವಾಸನೆ. ಇದರ ಮಧ್ಯೆ ಹಳ್ಳಿಮುಕ್ಕನ ಬೆದರಿಕೆ ಬೇರೆ. "ಎರಡು ದೊಡ್ಡವು ಇನ್ನು ಹತ್ತು ಸಣ್ಣವು ನಾಳೆ ಬುಟ್ಟಿ ಹರೀತದೆ. ಏನಾದ್ರೂ ಒಂದು ಮರಿ ತಪ್ಪಿಸಿಕೊಂಡ್ರೂ..." ಕೊನೆಗೆ ಈ ರೆಡ್ ಟೇಪ್‌ನ ಅವಾಂತರ ತಾಳಲಾರದೆ ಗುಮಾಸ್ತ ಲಂಡನ್ನಿಗೆ ಕಳಿಸಿದ ತಂತಿ ಹೀಗಿತ್ತಂತೆ "Guinea pigs, Guinea pigs every where and not an inch to breathe... send fodder for them and allowance for me..." ಅಂದರೆ ಆ ತಂತಿಯ ಭಾವಾರ್ಥ ಹೀಗಿತ್ತು, "ಮೊಲಗಳು ಮೊಲಗಳು ಎಲ್ಲೆಡೆಗೆ, ಮಿಸುಕಾಡಲೆಡೆಯಿಲ್ಲ ಎನಗೆ... ಕಳಿಸಿರಿ ಮೊಲದ ತಿನಿಸು ಮತ್ತು ಭತ್ತೆಯೆನಗೆ".

ಮೇಲೆ ಹೇಳಿದ್ದು ಉದ್ದನೆಯ ರೆಡ್‌ಟೇಪ್‌ನ ಒಂದು ಸಣ್ಣಕತೆ. ಈ ರೆಡ್‌ಟೇಪ್ ನಮಗೆ ಬ್ರಿಟಿಶರ ವಿಶೇಷ ಕೊಡುಗೆಯಾಗಿ ನಮ್ಮಲ್ಲಿಗೆ ಕೆಂಪುಪಟ್ಟಿಯಾಗಿ ಬಂತು. ಎಲ್ಲಾ ಕೋರ್ಟು ಕಚೇರಿಗಳಲ್ಲೂ ಮೊದಲು ಅಲ್ಲಿಯ ಜವಾನರಿಗೆ ಕೆಂಪು ಪಟ್ಟಿ ತೊಡಿಸಿದರು. ಬಿಳಿಯ ಉಡುಪಿನ ಮೇಲೊಂದು ಕೆಂಪುಪಟ್ಟಿ. ಆಮೇಲೆ ಎಲ್ಲಾ ಕಚೇರಿಗಳಲ್ಲೂ "ಇಂದ – ಗೆ" ಗುಮಾಸ್ತರನ್ನು ನೇಮಿಸಿ, ನಮ್ಮ ದೇಶದಲ್ಲಿ ಮಣಗಟ್ಟಲೆ ಗುಮಾಸ್ತರನ್ನು ತಯಾರು ಮಾಡಿ ದರು. ಗುಮಾಸ್ತರಿಗೆ ಕೆಲಸ ಕೊಡಲು ಕಡತ ಗಳನ್ನು ಕೊಟ್ಟರು. ಈ ಕಡತಗಳನ್ನು ಇಡಲು ಕಟ್ಟಡಗಳನ್ನೇ ಕಟ್ಟಿದರು. ತಾಲ್ಲೂಕು ಕಚೇರಿ, ಜಿಲ್ಲಾ ಕಚೇರಿ, ಆಹಾರ ಕಚೇರಿಗಳು ಹರಡಿ ಕೊಂಡವು. ಮರದ ಕೆಳಗೆ, ಕಟ್ಟೆಯ ಮೇಲೆ ಕೂತು, ಎಲೆ

ಅಡಿಕೆ ಜಗಿಯುತ್ತಲೇ ಹಳ್ಳಿಯ ಜಗಳಗಳಿಗೆ ಗಂಟೆಗಳೊಳಗೆ ಪರಿಹಾರ ಸೂಚಿಸಿ, ಇತ್ಯರ್ಥ ಮಾಡುತ್ತಿದ್ದ ಪಂಚಾಯಿತಿ ಗಳನ್ನು ಮುರಿದು ಎಲ್ಲಾ ಕಡೆಯೂ ನ್ಯಾಯಾ ಲಯಗಳನ್ನು ತೆಗೆದರು. ಈ ನ್ಯಾಯಾಲಯ ಗಳಲ್ಲಿ ಬೆಕ್ಕಿನ ತಕ್ಕಡಿ, ಅದರಲ್ಲಿ ತೂಗಲು ಎರಡೂ ಪಕ್ಷಗಳವರ ವಾದ ವಿವಾದದ ಕಡತ ಗಳು. ಈ ಕಡತಗಳನ್ನು ಹುಟ್ಟಿಸಲು, ಅವುಗಳ ಭಾರ ಹೆಚ್ಚಿಸಲು ನಿಂತಿರುವ ಲಾಯರ್‌ಗಳು. ಹೀಗೆ ಬೆಳೆಯುತ್ತಾ ಹೋದುವು.

ಈ ನ್ಯಾಯಾಲಯಗಳಲ್ಲಿ ಹೆಚ್ಚಾಗಿ ಏನಾಗುತ್ತದೆಂದು ತಿಳಿಯಬೇಕಾದ್ರೆ ನಮ್ಮ ಹಳ್ಳಿ ಮುಕ್ಕನ ಮಾತನ್ನೇ ಕೇಳಬೇಕು. "ಕೇಸ್ ಏನಾ ತಪ್ಪಾ?" "ಅಜ್ಜನ್ ಆತು ಸಾಹೇಬ್ರ" "ಅಜ್ಜನ್ ಹಾಗಂದ್ರೇನೋ?" "ನಮ್ಮ ತಾತನ ಕಾಲ್ದಾಗಿಂದ ಬಂದಿರೋ ಕೇಸು ನಾನ್ ಅಜ್ಜ ಆಗೋಗೂಂಟ ನಡೀಬೇಕಂತಾದ್ರೀ. ಓಂಗ್ ಒಬ್ಬ ಹುಡ್ಗ ಅಜ್ಜ ಆಗೋವರೆಗೂ ನಡೆಯೋ ಕೇಸಿಗೆ, ಮುಂದೆ ಹಾಕಿದ್ರೆ ಅಜ್ಜನ್ ಅಂತಾರ್ರಿ ಸಾಹೇಬ್ರ" ಇವನು ಹೇಳ್ತಾ ಇರೋದು ಅಜ್ಜನ್ ಅಲ್ಲ, adjourn ಅಂತ ಈಗರ್ಥ ವಾಯಿತು. ಅಜ್ಜ ಸತ್ತ ಮೇಲೆ, ಅದೇ ಕೇಸಿನ ಮೊಮ್ಮಗನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದ ಕೇಸನ್ನು ನೀವೆಲ್ಲಾ ಕೇಳಿರಲೇಬೇಕು. ಇದು ಅಜ್ಜನ್ ಪ್ರಭಾವ. ಅಂದರೆ ಕೆಂಪುಪಟ್ಟಿಯ ಪ್ರಭಾವ!



ಋಷಿಮೂಲ, ನದೀಮೂಲದಂತೆ ಈ ಕೆಂಪುಪಟ್ಟಿಯ ಮೂಲ ಹುಡುಕುವುದು ಬಲುಕಷ್ಟ. ಈ ಕೆಂಪುಪಟ್ಟಿಯ ಒಂದು ತುದಿ ಹಿಡಿದು ನಡೆಯುತ್ತಾ ಹೋದರೆ ಎಲ್ಲೋ ಒಂದು ಕಡೆ ನಿಯಮಗಳ ಕಂತು, ಸೂತ್ರಗಳ ಜೊಂಡಿನಲ್ಲಿ ಸಿಕ್ಕು ಮುಗ್ಗರಿಸುತ್ತೀರಾ! ಈ ನಿಯಮ, ಸೂತ್ರಗಳಾದರೂ ಯಾಕೆ ಬೇಕೂಂತೀರಾ? ಇಬ್ಬರು ಸೇರಿದರೆ ಜೊತೆ, ಮೂವರಿದ್ದರೆ ಗುಂಪು, ಮೂವತ್ತು ಕೂಡಿದರೆ ಗೊಂದಲ ಅನ್ನುವ ಹಾಗೆಯೇ ಇಬ್ಬರಿಗೆ ಕಣ್ಣಂತೆ, ಮೂವರಿದ್ದಾಗ ಮಂತ್ರ, ಮೂವ್ವತ್ತಿದ್ದರೆ ತಂತ್ರ, ಇನ್ನು ಮುನ್ನೂರು ಕೂಡಿದ್ರೆ ಯಂತ್ರ ಅಂದರೆ ಕಂಪ್ಯೂಟರ್ ಬೇಕೆ ಬೇಕು ಅನ್ನಬಹುದು. ಅಂದರೆ ಜನಸಂಖ್ಯೆ ಹೆಚ್ಚಾದಂತೆಲ್ಲಾ ಪೀನಲ್‌ಕೋಡ್, ಇನ್‌ಕಮ್‌ಟ್ಯಾಕ್ಸ್ ಎಕ್ಸೈಜ್ ಕಸ್ಟಮ್ಸ್ ಅಂತ ನೂರಾರು ನಿಯಮಾವಳಿಗಳು, ಸೂತ್ರಗಳು ಹುಟ್ಟುಕೊಂಡು ಹೋಗ್ತಿವೆ. ಇವೆಲ್ಲಾ ರೆಡ್‌ಟೇಪಿಗೆ ಕಾರಣ ಅಂದರೂ, ಇವನ್ನೇ ರೆಡ್‌ಟೇಪ್ ಅಂತಲೂ ಅನ್ನಬಹುದು. ಈ ರೀತಿ ನೋಡಿದರೆ ಒಂದಿನ ಶಾಸ್ತ್ರಗಳೆಲ್ಲಾ ರೆಡ್‌ಟೇಪೇ ಸರಿ. ಶಾಸ್ತ್ರ ಅಂತ ಇದ್ದಮೇಲೆ ಅದಕ್ಕೆ ಟೀಕೆಟಿಪ್ಪಣಿ, ಖಂಡನೆ ಮಂಡನೆ, ಚರ್ಚೆ, ಖಂಡನ ಮಂಡನ ಚರ್ಚೆ. ಎಂದು ಕೆಂಪುಪಟ್ಟಿ ಬೆಳ್ಕೊತಾನೇ ಹೋಗುತ್ತೆ. ಹೀಗೆ ಬೆಳ್ಕೋತಾನೇ ಹೋಗಕ್ಕೂ ಕಾರಣಗಳಿವೆ. ಈ ಶಾಸ್ತ್ರ ನಿಯಮಾವಳಿಗಳನ್ನು ಬರೆಯುವ ಪಂಡಿತರು ಎಲ್ಲವನ್ನೂ ಎಳೆದೆಳೆದು, ಸುತ್ತಿ ಬಳಸಿ ಹೇಳಿ ನೇರವಾದ್ದನ್ನೂ ಸೊಟ್ಟಗೆ ಮಾಡಿ, ಸಾಧ್ಯವಾದಷ್ಟೂ ಕ್ಲಿಷ್ಟ ಪದಗಳನ್ನೇ ಬಳಸಿ, ಹೇಳಿದ್ದರ ಅರ್ಥವನ್ನು ಚೆನ್ನಾಗಿ ಮುಚ್ಚಿ ಮರೆಮಾಡಿ ಬಿಡುತ್ತಾರೆ. ಇನ್ನು ಆ ನಿಯಮದ ಅರ್ಥ ವಿವರಿಸಲು ಅನೇಕ ಸಣ್ಣ ದೊಡ್ಡ ಪುಸ್ತಕಗಳು ಹೊರಬರುತ್ತವೆ. ಹೊಸ ನಮೂನೆಯ

ಪಂಡಿತರು (consultants) ಹುಟ್ಟಿಕೊಳ್ಳುತ್ತಾರೆ. ಊರಿನ ದೊಡ್ಡ ದೊಡ್ಡ ಸಭಾಂಗಣಗಳಲ್ಲಿ, ಹೋಟೆಲುಗಳಲ್ಲಿ, ಸೆಮಿನಾರ್ ವರ್ಕ್‌ಶಾಪ್ ಅಂತ ಅದರ ಬಗ್ಗೆ ಚರ್ಚೆ ನಡೆಸುತ್ತಾರೆ. ಇಷ್ಟಾದರೂ ಜನ ಸಾಮಾನ್ಯರಿಗೇಕೆ ಮುಕ್ಕಾಲು ಮೂರು ಪಾಲು ಮಂದಿ ಅಧಿಕಾರಿಗಳಿಗೂ ಸಹ ಈ ನಿಯಮಾವಳಿಗಳು ಅರ್ಥವಾಗಿರುವುದಿಲ್ಲ. If, but, whereas, however, provided ಮುಂತಾದ ಪದ ಸಮುಚ್ಚಯಗಳಿಂದ ಬಿಗಿದಿರುವ ಗಂಟುಗಳನ್ನು ಬಿಡಿಸಲು ನಿಯಮ, ಸೂತ್ರಗಳನ್ನು



ರೂಪಿಸಿದ ಆ ಸೂತ್ರಧಾರನಿಗೂ ಸಾಧ್ಯವಿಲ್ಲ ಅನ್ನಬೇಕು.

ಒಟ್ಟಿನಲ್ಲಿ ಕಣ್ಣಂಕೆ ಸಾಧ್ಯವಿಲ್ಲ, ಕೋಲಂಕೆ ಬೇಡ ಅನ್ನಿಸಿದಾಗ ಶಾಸ್ತ್ರ, ನಿಯಮ ಬೇಕೂಂದ ಹಾಗಾಯಿತು. ಆದರೆ ಯಾರೋ ಮಾಡಿದ ನಿಯಮ ನಮ್ಮ ತಲೆಗೆ ಹೊಳೆಯದಿದ್ದರೆ, ಅದರ ಹಿನ್ನೆಲೆ ತಿಳಿಯದಿದ್ದರೆ, ಅದರ ಸರಿಯಾದ ಅರ್ಥ ಆಗದಿದ್ದರೆ ಕೊನೆಗೆ ಆಗುವುದು ಅನರ್ಥ ಅಥವಾ ಬೆಳೆಯುವುದು ಕೆಂಪು ಪಟ್ಟಿ...ಹಿನ್ನೆಲೆ ಸರಿಯಾಗಿ ಅರ್ಥವಾಗದೆ ಕಣ್ಣು ಕಟ್ಟಿದ ಕುದುರೆಯ ಹಾಗೆ ಪದ ಬಂಧಗಳ ಕಟ್ಟಿನಲ್ಲಿ ಒಂದೇ ಓಟ ಓಡುವವರೇ ಹೆಚ್ಚು. "ನೋಡ್ರಿ ನೀವಿನ್ನೂ ಬದುಕಿದ್ದೀರಾ ಅಂದ್ರೇನೆ ನಿಮಗೆ ನಿಮ್ಮ ನಿವೃತ್ತಿ ವೇತನ ಸಿಗೋದು. ಬೇಗ ಹೋಗಿ ನೀವು ಬದುಕಿದ್ದಿರಾಂತ ವೈದ್ಯರಿಂದ ಒಂದು ಸರ್ಟಿಫಿಕೇಟ್ ತಂದು ಬಿಡಿ." ಈ ಮಾತನ್ನು ಎಷ್ಟು ಜನ ನಿವೃತ್ತರು ಕೇಳಿ ಬೆಚ್ಚಿದ್ದಾರೋ ಏನೋ. ನೆರೆ ಬಂದು ಹಳ್ಳಿ ಮುಳುಗ್ತಿದೇ ಸಾಹೇಬ್ರ ಎಂದು ಮೊರೆಯಿಟ್ಟಾಗ "ನೀವು ಹೇಳೋದೂ ಸರೀನೆ. ನಾನೂ ನಿಮ್ಮ ಸಂಕಟ ಅರ್ಥಮಾಡಿಕೊಂಡು ದೊಡ್ಡ ಸಾಹೇಬ್ರಿಗೆ ಒಂದು ಮೆಮೋ ಬರ್ದೂ ಕಳ್ಸಿದ್ದೀನಿ. ಇಂಥ ಪರಿಸ್ಥಿತೀಲಿ ಏನು ಮಾಡಬಹುದೂಂತ ಅಲ್ಲಿಂದ ಬರೋವರೆಗೂ ನಾನೇನೂ ಮಾಡುಕ್ಕಾಗಲ್ಲ ನೋಡಿ" ಎಂದು ಚಿಕ್ಕ ಸಾಹೇಬ್ರು ತಮ್ಮ ಪಟ್ಟಿ ಎಳೆದರಂತೆ!

ನಿಯಮದ ಹಿನ್ನೆಲೆ ಹೋಗಲಿ, ನಿಯಮವೇ ಗೊತ್ತಿಲ್ಲ ಸರಿಯಾಗಿ ಅರ್ಥವಾಗಿಲ್ಲ ಅಂದರೆ ಆಗುವ ಅಧ್ವಾನ ಕೇಳಬೇಡಿ. ಆಗ ನಿಯಮ ಪಾಲಿಸಲು ಹೆದರಿಕೆ, ಎಲ್ಲಿ ತಪ್ಪಾಗುತ್ತೋ ಏನಾಗುತ್ತೋ ಯಾರು ಏನಂತಾರೋ ಮೇಲಿನವರೆಲ್ಲಿ ಬೈತಾರೋ ಆಡಿಟ್‌ನವರೆಲ್ಲಿ ಹಿಡೀತಾರೋ ಎನ್ನುವ ಹೆದರಿಕೆ ಒಂದು ಕಡೆ. ಸರಿಯಾಗಿ ನಿಯಮ ಪಾಲಿಸಿದರೂ, ಅದರಿಂದ ಪೆಟ್ಟು ತಿಂದವರು ಅಥವಾ ನನಗಾಗದವರು ನನ್ನ ವಿವರಣೆಗೆ ತಪ್ಪರ್ಥ ಕಲ್ಪಿಸಿ, ನಿಯಮವನ್ನೇ ಬೇರೆ ರೀತಿ ಹೇಳಿ ಎಲ್ಲಿ ನನ್ನ ತಲೆಯ ಮೇಲೆಯೇ ಗೂಬೆ ಕೂರಿಸ್ತಾರೋ ಎನ್ನುವ ಹೆದರಿಕೆ ಇನ್ನೊಂದು ಕಡೆ. ಈ ನಿಯಮಾನ ಸರಿಯಾಗಿ ಪಾಲಿಸಿಬಿಟ್ಟರೆ ನನಗೇನು ಉಪಯೋಗ, ನನ್ನ ಕಡೆಯವರಿಗೇನು ಲಾಭ, ಇದರಿಂದ ನಮ್ಮೆಲ್ಲರಿಗೂ ಒಳ್ಳೇದಾಗಬೇಕಾದ್ರೆ ಒಂದು ಚೂರು ಹಿಂಚು ಮುಂಚು ಮಾಡಬೇಕು, ಮೇಲೆ ಕೆಳಗೆ ಮಾಡಬೇಕು, ತಿರುಗ ಮುರುಗ ಹಾಕ್ಬೇಕು. ಈ ಜವಾಬ್ದಾರಿ ನಾನೊಬ್ಬನೇ ಏಕೆ ಹೊತ್ತುಕೊಳ್ಳಲಿ, ನನ್ನ ಮೇಲಧಿಕಾರಿಯ ಒಪ್ಪಿಗೆ ಮುದ್ರೆಯೂ ಬಿದ್ದು ಬಿಟ್ಟರೆ ಆಗ ನನ್ನ ತಪ್ಪು ಅರ್ಧವಾಗಿ ಮನಸ್ಸೂ ಹಗುರಾಗುತ್ತದೆ ಎಂಬ ದುರಾಲೋಚನೆ ಮನಸ್ಸಿನ್ನಾಳದಲ್ಲಿ ಹುದುಗಿರುತ್ತದೆ. ಈ ಹೆದರಿಕೆ ಮತ್ತು ದುರಾಲೋಚನೆಯಿಂದ ಶುರುವಾಗುತ್ತದೆ ನೋಡಿ ಕೆಂಪು ಪಟ್ಟಿಯ ಸುತ್ತಾಟ ಅಥವಾ passing the buck ಅನ್ನುವ ಹೊಸ ಆಟ! "ಅಯ್ಯೋ ನಮಗ್ಯಾಕಪ್ಪಾ ತಲೆ



ನೋಡಿ! ಇದನ್ನು ಮೇಲಕ್ಕೆ ತಳ್ಳೋಣ" ಎಂಬ ನಿರ್ಲಿಪ್ತ ಮನೋಭಾವದಿಂದ ಕಡತಕ್ಕೊಂದು ಕೆಂಪುಪಟ್ಟಿ ಬಿಗಿದು ಅದನ್ನು ಮೇಲಕ್ಕೆ ತಳ್ಳುತ್ತೀರಾ! 'ಏನು ಅಧಿಕಾರಿಯೋ, ಜವಾಬ್ದಾರಿ ತಗೊಳ್ಳುಕ್ಕೆ ಹೆದರಿ ಸಾಯ್ತಾರೆ' ಅಂದುಕೊಂಡೇ ಮೇಲಧಿಕಾರಿಯು ಕಡತದ ಕೆಂಪುಪಟ್ಟಿಯನ್ನು ಬಿಚ್ಚುತ್ತಾನೆ. ಅಲ್ಲಿರುವ ಕೇಸು, ಅಲ್ಲಿಯ ನಾಲ್ಕು ಸಾಲಿನ ಟಿಪ್ಪಣಿ ಏನೂ ಅರ್ಥವಾಗದೆ, ತಾನೂ ಒಂದು ಪುಟದ ಟಿಪ್ಪಣಿ ಬರೆದು ಕೆಂಪುಪಟ್ಟಿ ಬಿಗಿದು ಮತ್ತೆ ಇನ್ನೊಬ್ಬ ಮೇಲಧಿಕಾರಿಯ ಆಜ್ಞೆ ಕೋರಿ ಮೇಲೆ ಕಳಿಸುತ್ತಾನೆ. ಹೀಗೆ ಒಂದೊಂದು ಮೇಜಿನ ಮೇಲೂ ವಾರ, ತಿಂಗಳುಗಟ್ಟಲೆ ಧೂಳೂ ಕುಡಿಯುತ್ತಾ ಟಿಪ್ಪಣಿಗೆ ಎರಡರಷ್ಟು ಟಿಪ್ಪಣಿಗಳನ್ನು ಬರೆಸಿಕೊಳ್ಳುತ್ತಾ, ಊದಿದ ಹೊಟ್ಟೆಯ ಮೇಲೆ ಕೆಂಪುಪಟ್ಟಿ ಬಿಗಿಸಿಕೊಳ್ಳುತ್ತಾ ಕಡತ ಮೇಲೆ ಮೇಲೆಯೇ ಹೋಗುತ್ತಿರುತ್ತದೆ. ಅದನ್ನು ಕೆಳಗಿಳಿಸಬೇಕಾದ್ರೆ ಎಷ್ಟು ಯುಗ ಕಳೆಯಬೇಕೋ ಎಂಥ ಭಗೀರಥ ಪ್ರಯತ್ನ ನಡೆಯಬೇಕೋ, ಎಷ್ಟು ಜನರ ಕೈ ಬಿಸಿಯಾಗಬೇಕೋ ದೇವರಿಗೇ ಗೊತ್ತು. ಇನ್ನೊಂದು ರೀತಿಯ ಹೆದರಿಕೆ ಆಸ್ಪತ್ರೆಯ ಡಾಕ್ಟರ ಕೈಗಳನ್ನು ಕಟ್ಟಿ ಹಾಕುತ್ತದೆ. ರಸ್ತೆ ಅಪಘಾತದಲ್ಲಿ ಪೆಟ್ಟು ಬಿದ್ದವನಿಗೆ ಮೊದಲ ಚಿಕಿತ್ಸೆ ಕೊಡುವ ಬದಲು 'ಏ ಪೋಲೀಸ್‌ಗೆ ರಿಪೋರ್ಟ್ ಮಾಡಿದ್ದೀರಾ? ಎಂದೇ ಕೇಳ್ತಾರೆ. ಒಟ್ಟಿನಲ್ಲಿ ನಮ್ಮ ತಲೆಯ ಮೇಲೆ ಗೂಬೆ ಕೂರಿಸದಿದ್ದರೆ ಸರಿ ಎಂದು ಎಲ್ಲರೂ ನಿಯಮಾವಳಿಗಳ ಜೊಂಡಿನಲ್ಲಿ, ಕಡತಗಳ ಭಾರದಲ್ಲಿ, ಕೆಂಪುಪಟ್ಟಿಯ ಸುತ್ತಿನಲ್ಲಿ ಅವಿತುಕೊಳ್ಳಲು ಪ್ರಯತ್ನ ಪಡುತ್ತಾರೆ. ಇದರಿಂದಾಗೇ ಭಾರವಾದಷ್ಟು ಕಡತಗಳು ಮೇಲೆ ಮೇಲೆಯೇ ಹಾರುತ್ತವೆ. ಮೇಲಿನಿಂದ ಸೂಕ್ತ ಆಜ್ಞೆ ಬರುವವರೆಗೂ ನಾನಿಲ್ಲೇ ಕೂತಿರುತ್ತೇನೋ, ವರ್ಗವಾಗಿರುತ್ತೇನೋ, ನಿವೃತ್ತಿಯೇ ಆಗಿರುತ್ತೇನೋ ನೋಡಿಕೊಳ್ಳೋಣ ಅಂದುಕೊಂಡು ಕಡತ ಮೇಲಕ್ಕೆ ಸೆದ ಅಧಿಕಾರಿಗೆ ಮಾತ್ರ ನಿಶ್ಚಿಂತೆ! ನನ್ನ ಕಾಲೇಜ್ ಸ್ನೇಹಿತ ಲಾಲ್ ಕೊನೆಯ ವರ್ಷ ಕಾಲೇಜು ಬಿಡುವಾಗ ಎಲ್ಲಾ ಕಡೆಯೂ- ಅಂದರೆ ಹಾಸ್ಟೆಲ್, ಮೆಸ್, ಅಗಸ ಎಲ್ಲರ ಸಾಲ ಉಳಿಸಿ ಬಂದು ಬಿಟ್ಟ. ಅದರ ವಿಚಾರ ಕೇಳಿದಾಗ "ಅರೆ, ಅದಕ್ಯಾಕೆ ಯೋಚನೆ. ನನ್ನ ತಮ್ಮ ಈಗ ಅಲ್ಲೇ ಸೇರಿದ್ದಾನೆ. ಅವನು ಗುಣಸಂಪನ್ನ. ಅವನು ಈಗ ನನ್ನ ಸಾಲ ಬಾಕಿ ತೀರಿಸ್ತಾ ಇದ್ದಾನೆ" ಎಂದು ಹೇಳಿ ನಕ್ಕ. ಇದೇ ರೀತಿ ಒಬ್ಬರು ಅಧಿಕಾರಿಗಳೂ ಹೇಳಿದ್ದರು "ಬಿಡ್ರಿ ಕೆಲಸ ಮಾಡುಕ್ಕೆ ನಮಗೆ ಪುರುಸೊತ್ತೆಲ್ಲಿದೆ? ನನ್ನ ಹಿಂದಿನವರು ಮಾಡಿದ್ದಕ್ಕೆಲ್ಲಾ

ಉತ್ತರ ಹೇಳೋದ್ರೊಳಗೆ ಕಾಲ ಕಳೆಯುತ್ತೆ. ನಾನು ಮಾಡಿದ ತಪ್ಪಿಗೆ ಮುಂದಿನವರು ಉತ್ತರ ಹೇಳ್ಕೋತಾರೆ" ಅಂತೂ Passing the buck ಆಟ ಹೀಗೆ ನಡೆಯುತ್ತೆ. ಅಮೆರಿಕಾದ ಅಧ್ಯಕ್ಷರ ಮೇಜಿನ ಮೇಲೆ ಒಂದು ಫಲಕ ಇದೆಯಂತೆ "The buck stops here" ಅಂತ ಅಂದರೆ ಅಲ್ಲಿಂದ ಮುಂದಕ್ಕೆ ಮೇಲಕ್ಕೆ ಕೆಂಪುಪಟ್ಟಿ, ಸಾಗುಲ್ಲ ಅಂತ. ಆದರೆ ಕೆಂಪುಪಟ್ಟಿ ಮಾತ್ರ ಎಲ್ಲರನ್ನೂ ಸುತ್ತಿ ಬಳಸಿ ಎಲ್ಲರನ್ನೂ ಮುತ್ತಿ ಮಲಗಿಸಿ ಎಲ್ಲಾ ದೇಶ ಕಾಲವನ್ನೂ ಮೀರಿ ಹರಡಿ, ಸರ್ವಾಂತರ ಯಾಮಿಯಂತೆ ಸರ್ವಶಕ್ತನಾಗಿ ತಾನೇ ತಾನಾಗಿ ಎಲ್ಲ ಕಡೆಯೂ ಹರಡಿಕೊಂಡಿದೆ.

'ಸಂಭವಾಮಿ ಯುಗೇ ಯುಗೇ' ಅನ್ನುವ ರೀತಿಯಲ್ಲಿ ಈ ಕೆಂಪುಪಟ್ಟಿ ಒಂದೊಂದು ಯುಗದಲ್ಲಿ ಒಂದೊಂದು ಅವತಾರ ಹಾಕಿಕೊಂಡು ನಿಶಕ್ತರನ್ನೂ ನಿರ್ಬಲರನ್ನು ಕಾಪಾಡುತ್ತಲೇ ಬರುತ್ತಿದೆ. ಮೊದಲು ಬೇಕು ಬೇಡಗಳ ಪಟ್ಟಿಯಾಯಿತು, ಧರ್ಮ ಶಾಸ್ತ್ರಗಳಾದುವು, ನಿಯಮಾವಳಿಗಳು ನಡೆದೇ ಇವೆ. ಕಡತಗಳು ಬಂದುವು, ಅದರ ಹಿಂದೆಯೇ ಕೆಂಪುಪಟ್ಟಿ ಸುತ್ತಿಕೊಂಡು ಬಂದಿತು. ನಿಯಮುಗಳಿದ್ದ ಮೇಲೆ ವ್ಯಾಜ್ಯ ತೀರ್ಮಾನ ಮಾಡಲು ಕೋರ್ಟು ಕಚೇರಿಗಳು ಎಲ್ಲೆಲ್ಲೂ ಹುಟ್ಟಿಕೊಂಡವು. ಇತ್ತೀಚೆಗೆ ಹೊಸದಾಗಿ ಹುಟ್ಟಿಕೊಂಡಿರುವ ಅವತಾರವೆಂದರೆ ಈ Enquiry Commissionಗಳು ಅಂದರೆ ವಿಚಾರಣಾ ಸಮಿತಿಗಳು. ಕೊಲೆ ದಂಗೆ ಸುಲಿಗೆಯೇ ಆಗಲಿ, ಹಣದ ದುರುಪಯೋಗವೇ ಆಗಲಿ, ನದಿ ನೀರಿನ ವಿವಾದವೇ ಆಗಲಿ, ರಾಜ್ಯಗಳ ಗಡೀ ಪ್ರಶ್ನೆಯೇ ಆಗಲಿ, ಒಟ್ಟಿನಲ್ಲಿ ಯಾವ ಸಮಸ್ಯೆಗೆ ಪರಿಹಾರ ಕಷ್ಟವೋ ಅಥವಾ ಯಾವ ಸಮಸ್ಯೆಗೆ ಸರಿಯಾದ ಉತ್ತರ ಬೇಡವೋ, ಯಾವ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದೋ, ಇನ್ನೂ ನೂರಾರು ಸಮಸ್ಯೆಗಳನ್ನು ಹುಟ್ಟಿಸುತ್ತದೋ, ಅಂಥ ಸಮಸ್ಯೆಗಳನ್ನು ಪರಿಶೀಲಿಸಲು ಒಂದು Enquiry Commissionನ್ನು ತಕ್ಷಣ ನೇಮಕ ಮಾಡಿಬಿಡ್ತಾರೆ. ಅಲ್ಲಿಗೆ ಕೆಂಪುಪಟ್ಟಿ ಕಾಲಾತೀತವಾಗಿ, ದೇಶಾತೀತವಾಗಿ, ಸಮಸ್ಯಾತೀತವಾಗಿ

ಬೆಳೆಯುಕೊಂಡೇ ಹೋಗುತ್ತದೆಂದು ಎಲ್ಲರಿಗೂ ಖಾತ್ರಿ! ಇದನ್ನೆ ಸಣ್ಣ ಪುಟ್ಟ ಸಮಸ್ಯೆಗಳಿಗೆ ಕಮಿಟಿ ಅಂತಾರೆ ಅಷ್ಟೆ.

ಇನ್ನು ಕೆಂಪುಪಟ್ಟಿ ಇದ್ದ ಕಡೆ ಲಂಚ ಇರಲೇ ಬೇಕಲ್ಲ. ನೋಡಿ ಈ ಲಂಚ ಅನ್ನೋದು ಹೊಸದಾಗಿ ಬಂದಿರುವ ಬಲು ಕೆಟ್ಟ ಹೆಸರು. ಕೆಂಪುಪಟ್ಟಿ ಬಿಚ್ಚಿಸಲು ಕೊಡಬೇಕಾದ ಮಾಮೂಲಿಗೆ, ಕಾಣಿಕೆಗೆ, ಕೈಬಿಸಿಗೆ ಈಗ ಲಂಚ ಅಂತಾರೆ. ಮೊದಲು ಶಾಸ್ತ್ರ ಹೇಳಿದ್ದಕ್ಕೆ ದಕ್ಷಿಣೆ ಅಂತಿದ್ದರು. ಈಚೆಗೆ ನ್ಯಾಯ, ನಿಯಮ ಹೇಳಿದ್ದಕ್ಕೆ Consultancy Fee, Service Fee, ಸಲಹಾ ಶುಲ್ಕ, ಸೇವಾ ಶುಲ್ಕ ಅಂತಾರೆ. ಹಿಂದಿನ ಶಾಸ್ತ್ರದ ಕಾಲದ ದಕ್ಷಿಣೆಗೂ, ಇಂದಿನ ನಿಯಮದ ಕಾಲದ ಶುಲ್ಕಕ್ಕೂ ಮಧ್ಯೆ ಇದಕ್ಕೆ ಕಾಣಿಕೆ ಅಂತಲೂ ಹೆಸರು ಬಂದಿತ್ತು. ನಿಯಮ ಹೇಳಿದ್ದಕ್ಕೆ ಕಾಣಿಕೆ, ನಿಯಮ ತಪ್ಪಿಸಿ ಮೇಲೆ ಕೆಳಗೆ ಮಾಡೋಕ್ಕೆ ಮಸಿ ಕಾಣಿಕೆ ಇದು ಇಂದಿನ ಲಂಚಕ್ಕಿಂತ ಎಷ್ಟೋ ಗೌರವಾನ್ವಿತ ಹೆಸರು. ಕೆಂಪು ಮಸಿಯಲ್ಲಿ ಯಾವನೋ ಒಬ್ಬ ಗುಮಾಸ್ತ ನಿಮ್ಮ ಕಡತದ ಮೇಲೆ ಏನನ್ನು ಬರೆದು ಬಿಟ್ಟರೆ ಆಗ ನಿಮ್ಮ ಕೆಲಸ ಕೆಟ್ಟಿತೆಂದೇ ಅಂದುಕೊಳ್ಳಿ. ಹಾಗೆ ಬರೆದುದನ್ನು ಸರಿಪಡಿಸಲು ಕೊಡುವ ಕಾಣಿಕೆಯೇ ಮಸಿ ಕಾಣಿಕೆ! ಅಂತೂ ಕೆಂಪುಪಟ್ಟಿ, ಕೆಂಪುಮಸಿಗೆ ಇಳಿದಾಗ ಅದನ್ನು ಬಿಚ್ಚಿಸಲು, ಅದನ್ನು ಅಳಿಸಲು ಕೊಡುತ್ತಿದ್ದ ಅಲ್ಪ ಕಾಣಿಕೆಯೇ ಮಸಿಕಾಣಿಕೆ. ದಿವಾನ್ ಪೂರ್ಣಯ್ಯನವರಂತಹ ಜಬರ್ದಸ್ತಿನ ಅಧಿಕಾರಿಗ ಈ ಮಸಿಕಾಣಿಕೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲವಂತೆ. ಕೊನೆಗೆ ತಾವೇ ಸೋತು ಯಾವನೋ ಗುಮಾಸ್ತನಿಗೆ ಮಸಿಕಾಣಿಕೆ ಕೊಟ್ಟೇ ಬೆಂಗಳೂರಿನ ಕಂಟೋನ್ಮೆಂಟ್‌ನಲ್ಲಿದ್ದ ಆದರೆ ಮಹಾರಾಜರು ಇವರಿಗೆ ಕೊಟ್ಟಿದ್ದ ಭೂಮಿಯ ಸ್ವಾಧೀನ ಪಡೆದುಕೊಳ್ಳಬೇಕಾಯಿತಂತೆ. ಕೆಂಪುಪಟ್ಟಿ ಬೆಳೆದಷ್ಟೇ ಈ ಮಸಿಕಾಣಿಕೆಯು ಬೆಳೆದಿರುವುದರಿಂದ ಅದರ ಅವತಾರ ಅಂದರೆ ಲಂಚಾವತಾರವೇ ಬೇರೆಯಾಗಿ ಪರಿಗಣಿಸಬೇಕು. ಈಗ ಕೆಂಪುಪಟ್ಟಿಯ ಚರ್ಚೆ ಮಾತ್ರ ವಿಹಿತ.

ಕೆಂಪುಪಟ್ಟಿಗೆ ಸಂಬಂಧಪಟ್ಟಂತೆ ಒಂದೆರಡು ಉದಾಹರಣೆಗಳು. ನನ್ನ ಸ್ನೇಹಿತ ಒಬ್ಬ ದೊಡ್ಡ ಅಧಿಕಾರಿ. ಒಂದು ಸಣ್ಣ ಹುದ್ದೆಯಿಂದ ಹಿಡಿದು ಇವತ್ತಿನ ಬೀಗುವ ಅಧಿಕಾರಿ ಪಟ್ಟದವರೆಗೆ ಇವನು ಅನೇಕ ಹಂತಗಳಲ್ಲಿ ವಿವಿಧ ಇಲಾಖೆಗಳಲ್ಲಿ ತನ್ನ ಸೇವೆ ಸಲ್ಲಿಸಿದ್ದಾನೆ. ಆದರೆ ಒಂದೇ ಒಂದು ದಿನವಾದರೂ ಇವನು ಇತರರಂತೆ ಶ್ರಮಪಟ್ಟಿದ್ದಾಗಲೀ, ಒದ್ದಾಡಿದ್ದಾಗಲೀ, ತಲೆ ಚಚ್ಚಿಕೊಂಡಿದ್ದಾಗಲೀ, ಕೂಗಿ ಕಿರುಚಿದ್ದಾಗಲೀ ನೋಡಿಲ್ಲ. ಇವನ ಕಚೇರಿಗೆ ಹೋದರೆ ಇವನ ಮೇಜು ಸ್ವಚ್ಛವಾಗಿರುತ್ತದೆ. ಹೆಸರಿಗೆ ಒಂದೆರಡು ಕಾಗದಗಳಿರುತ್ತವೆ, ಅವನ 'ಇಂದ ಗೆ' ಟ್ರೇಗಳು ಖಾಲಿಯಾಗಿರುತ್ತವೆ. ಆರಾಮವಾಗಿ ಕೂತು ಕಾಫಿ ಸಿಗರೇಟು ಕೊಡಿಸಿ ತಾನೂ ಹರಟುತ್ತಾ ಕೂರುತ್ತಾನೆ. ನಿನ್ನ ಈ ಸ್ಥಿತಪ್ರಜ್ಞ ಸ್ಥಿತಿಗೆ ಏನು ಕಾರಣ ಅಂತ ಕೇಳಿದೆ. ಅವನೇ ಹೇಳಿದ ಮಾತು ಕೇಳಿ: "ನೋಡು ಬಹಳಾ ಸುಲಭ. ಯಾವುದೇ ವಿಷಯವಾಗಿ ಮೊದಲ ಸಲ ಕಾಗದ ಬಂದಾಗ ಅದನ್ನು ಇಲ್ಲಿ ಈ ಕೆಳಗಿನ ಡ್ರಾನಲ್ಲಿ ತುಂಬುತ್ತೀನಿ. ಅದೇ ವಿಷಯವಾಗಿ ಎರಡನೆಯ ಕಾಗದ ಬಂದಾಗ ಅದನ್ನು ಇಲ್ಲಿ ಈ ಮಧ್ಯದ ಡ್ರಾನಲ್ಲಿ ಹಾಕ್ತೀನಿ. ಮೂರನೇ ನೆನಪೋಲೆ ಬಂದರೆ ಅದನ್ನು ಇಲ್ಲಿ ಮೇಲಿನ ಡ್ರಾನಲ್ಲಿ ಇಟ್ಟಿರ್ತೀನಿ. ಅಷ್ಟು ಹೊತ್ತಿಗೆ ಸುಮಾರು ಶೇಕಡ ತೊಂಬತ್ತರಷ್ಟು ಸಮಸ್ಯೆಗಳು ತಮಗೆ ತಾವೇ ಪರಿಹಾರ ಕಂಡುಕೊಂಡಿರುತ್ತವೆ. ಇನ್ನೂ ಸಮಸ್ಯೆ ಪರಿಹಾರವಾಗದೆ ಮತ್ತೊಂದು ನೆನಪೋಲೆ ಬಂದರೆ ಅದನ್ನು ಇನ್‌ಟ್ರೇನಲ್ಲಿಟ್ಟು ಅದರ ಬಗ್ಗೆ ಯೋಚನೆ ಮಾಡ್ತೀನಿ. ಹೀಗಾಗಿ ಬೇರೆಯವರು ನೋಡುವ ನೂರು ಕಡತದ ಬದಲು ನಾನು ನೋಡುವುದು ಹತ್ತೇ ಹತ್ತು ಮುಖ್ಯವಾದುವು. ಜೊಳ್ಳೆಲ್ಲಾ ಕಾಲನ ಬಿರುಗಾಳಿಯಲ್ಲಿ ಹಾರಿಹೋಗಿರುತ್ತವೆ ಅಂದರೆ ಇವನ ಮೇಜಿನ ಡ್ರಾಗಳು ಕೆಂಪುಪಟ್ಟಿಗೆ ಒಂದು ಹೊಸ ಸಾಧನ!

ಕೆಂಪುಪಟ್ಟಿಯ ಸಮಸ್ಯೆಗೆ ಗಾಡ್ಗಿಲ್ ಅವರ ಪರಿಹಾರ— ಗಾಡ್ಗಿಲ್ ಪ್ಲಾನ್ ನಿಮಗೆ ಗೊತ್ತೇನು? ಅವರು ಕೇಂದ್ರ ಮಂತ್ರಿಗಳಾಗಿದ್ದಾಗ ಯಾವಾಗಲೂ ಪ್ರವಾಸ ಹೋಗುತ್ತಿದ್ದರಂತೆ. ವಾಪಸ್ಸು ಬರುವುದರೊಳಗೆ ಅವರ ಮೇಜಿನ ಮೇಲೆ ಕಡತಗಳ ಗುಡ್ಡವೇ ಎದ್ದುಬಿಟ್ಟಿರುತ್ತಿತ್ತಂತೆ. ಎರಡು ಕಡತ ನೋಡುವುದರೊಳಗೆ ಮತ್ತೆ ಪ್ರವಾಸ ಹೊರಡಬೇಕಾಗುತ್ತಿತ್ತಂತೆ. ನಾಲ್ಕಾರು ದಿನಗಳಲ್ಲಿ ವಾಪಸ್ಸು ಬಂದರೆ ಮತ್ತೆ ಕಡತಗಳ ಮೇಲೆ ಇನ್ನೊಂದೆರಡು ಗುಡ್ಡಗಳೆದ್ದಾಗಿರುತ್ತಿತ್ತು. ಕಡತ ನೋಡುವುದಿರಲಿ ಕಚೇರಿಯಲ್ಲಿ ಕೂರುವುದೇ ಬೇಡ

ಅನ್ನಿಸುತ್ತಿದ್ದಿರಬೇಕು. ಇದರ ಜೊತೆಗೆ ಐಎಎಸ್ ಸೆಕ್ರೆಟರಿಯ ಹಾಸ್ಯದ ಚುಚ್ಚು ಮಾತುಗಳು ಬೇರೆ. ಕೊನೆಗೊಮ್ಮೆ ಬಹಳ ಧೈರ್ಯ ಸ್ಥೈರ್ಯದಿಂದ ಕೂತು ಒಂದೇ ದಿನದಲ್ಲಿ ಎಲ್ಲಾ ಕಡತಗಳನ್ನೂ ವಿಲೇವಾರಿ ಮಾಡಿ ಬಿಟ್ಟರಂತೆ!! ಆ ಸೆಕ್ರೆಟರಿಯಿಂದ ಹಿಡಿದು ಎಲ್ಲರಿಗೂ ಸಖೇದಾಶ್ಚರ್ಯ. ಒಂದು ದಿನದಲ್ಲಿ ಇಷ್ಟೊಂದು ದೊಡ್ಡ ಗುಡ್ಡ ಕಡಿದ ಇವರು ಇನ್ನೆಂತಹ ಚಾಣಾಕ್ಷ ಪ್ರಭೃತಿ ಇರಬೇಕೆಂದು! ಇದರ ರಹಸ್ಯವನ್ನು ವಿವರಿಸುತ್ತಾ ಗಾಡ್ಗಿಲ್ಲರು ತಮ್ಮ 'ಗಾಡ್ಗಿಲ್ ಪ್ಲಾನ್' ಹೊರಗೆಡವಿದ್ದಾರೆ. ಇವರು ಎಲ್ಲಾ ಕಡತಗಳ ಮೇಲೂ, ಒಂದನ್ನೂ ಓದುವುದಿರಲಿ, ಕೆಂಪುಪಟ್ಟಿ ಬಿಚ್ಚುವ ಸಾಹಸವನ್ನೂ ಮಾಡದೆ ಮೂರೆ ಮೂರು ಟಿಪ್ಪಣಿ ಬರೆದು ಬಿಟ್ಟರಂತೆ. ಆ ಟಿಪ್ಪಣಿಗಳು Yes, I agree (ನನ್ನ ಒಪ್ಪಿಗೆ) No (ಒಪ್ಪಿಗೆಯಿಲ್ಲ) ಮತ್ತು Please discuss (ಚರ್ಚಿಸಿ) ಈ ಮೂರನ್ನು ಒಂದೊಂದು ಕಡತದ ಮೇಲೆ ಒಂದರಂತೆ ಬರೆಯುತ್ತಾ ಎಲ್ಲಾ ಕಡತಗಳನ್ನೂ 'ಇಂದ' ಟ್ರೇನಿಂದ 'ಗೆ' ಟ್ರೇಗೆ ವರ್ಗಾಯಿಸಿದರಂತೆ. ತಮ್ಮನ್ನು ತಾವೇ ಸಮರ್ಥಿಸಿಕೊಳ್ಳುತ್ತಾ ಗಾಡ್ಗಿಲ್ ಅವರು ತಮ್ಮ ಸೆಕ್ರಟರಿಯನ್ನು ಹೊಗಳಿದ್ದಾರೆ. ಅವನು ಕಡತ ಓದಿ ಮಾಡಿದ ಸಲಹೆ ಸರಿಯಾಗಿರಲೇಬೇಕು. ಅದಕ್ಕೆ ಒಪ್ಪಿಗೆ, ಒಪ್ಪಿಗೆಯಿಲ್ಲ ಅಥವಾ ಚರ್ಚಿಸಿ ಅಂದಾಗ ಸೆಕ್ರೆಟರಿ ರೇಗಿದ ಹುಲಿಯಂತೆ ಮೇಲೆ ಹಾಯ್ದು ಬರುತ್ತಾನೆ. ಆಗ ನಿಧಾನವಾಗಿ "ನೋಡಿ ನಿನ್ನೆ ನೂರಾರು ಕಡತ ಇಲ್ಲಿಂದ ಕಳಿಸಿದೆ. ನೀವು ಈಗ ಯಾವ ವಿಚಾರ ಹೇಳ್ತಿದ್ದೀರೋ ತಿಳೀತಿಲ್ಲ. ಎರಡೇ ನಿಮಿಷದಲ್ಲಿ ಆ ಕಡತದಲ್ಲಿರುವ ವಿಚಾರ ಸಂಗ್ರಹ ಹೇಳಿಬಿಡಿ" ಅನ್ನುತ್ತಿದ್ದರಂತೆ. ಹೀಗೆ ಗಂಟೆಗಟ್ಟಲೆ ಕಡತ ಓದುವ ಪ್ರಮೇಯ ತಪ್ಪಿಸಿಕೊಂಡು ಎರಡೇ ನಿಮಿಷದಲ್ಲಿ ವಿಚಾರ ಸಂಗ್ರಹ ಸಂಕ್ಷಿಪ್ತವಾಗಿ ತಿಳಿಯುತ್ತಿದ್ದರಂತೆ. ಗಾಡ್ಗಿಲ್ ಪ್ಲಾನ್ ಏನಾದರೂ ಬಂದರೆ ಕೆಂಪು ಪಟ್ಟಿಗೆ ದೊಡ್ಡ ಪೆಟ್ಟು!

ಕೆಂಪುಪಟ್ಟಿಯ ಮೇಲೆ ಸಾಕಷ್ಟು ಚುಟುಕ ಶಾಹಿರಿಗಳಿವೆ. ಆದರೆ ಈ ಕೆಳಗಿನದನ್ನು ನೀವು ಕೇಳಿರಲಾರಿರಿ:-

ನಿಯಮಾವಳಿ ಸುತ್ತಿ ಸುರುಳಿಯಾಗಿ ಬರೆಸು
ಕಡತಕೊಂದು ಕೆಂಪು ಪಟ್ಟಿಯನೆ ಸುತ್ತಿಸು
ಕೆಂಪುಪಟ್ಟಿಯ ಕಟ್ಟಿ, ಗಂಟನು ಬಿಗಿಯಿಸು
ಕಡತದ ಮೇಲೆ ಕಡತವ ತುಂಬಿ ಕಳುಹಿಸು
ತಪ್ಪಿನಿತೆನಿಸಿದರು ಕಡತವನೆ ಹಾರಿಸು!

'ಕಾಲಹರಣ'

'ಕಾಲಹರಣ'ಕ್ಕೆ ಇಂದು ಅಸಂಖ್ಯ ಮಾರ್ಗಗಳಿವೆ. ಪುಸ್ತಕ ಓದುವುದು, ಸಂಗೀತ ಆಲಿಸುವುದು, ಟಿ.ವಿ. ನೋಡುವುದು, ಹರಟೆ ಕೊಚ್ಚುವುದು, ಅಲೆಯುವುದು, ಜೂಜಾಡುವುದು, ಇತರ ಕ್ರೀಡೆ ಗಳಲ್ಲಿ ತೊಡಗುವುದು, ಚಲನಚಿತ್ರ ಮುಂತಾದವುಗಳನ್ನು ನೋಡುವುದು, ವಿಡಿಯೋ ಗೇಮ್ಸ್ ಅಥವಾ ಎಲೆಕ್ಟ್ರಾನಿಕ್ ಉಪಕರಣಗಳೊಡನೆ ವಿನೋದ, ತಿನ್ನುವುದು, ನಿದ್ರಿಸುವುದು, ಇತ್ಯಾದಿ... ಇತ್ಯಾದಿ... ಕಾಲ ಕಳೆದಂತೆ ಈ 'ಕಾಲಹರಣ'ದ ಮಾರ್ಗಗಳೂ, ಸಾಧನಗಳೂ ಹೆಚ್ಚುತ್ತ, ಸುಧಾರಿಸುತ್ತ ಬಂದಿವೆ. 'ಕಾಲಕ್ಷೇಪ'ವು ತನ್ನ ಅರ್ಥವನ್ನು ವಿಸ್ತರಿಸಿಕೊಂಡು 'ಕಾಲಹರಣ'ವಾಗಿದೆ.

ಮೇಲೆ ಹೇಳಿದ ಯಾವುದೇ ಮಾರ್ಗವನ್ನಾಗಲೀ, ಸಾಧನವನ್ನಾಗಲೀ, ಕೇವಲ 'ಕಾಲಹರಣ'ಕ್ಕಾಗಿ ಬಳಸದೇ ಬೇರೆಯ ಉದ್ದೇಶವನ್ನಿಟ್ಟುಕೊಂಡು ಉಪಯೋಗಿಸಬಹುದಷ್ಟೆ. ಜ್ಞಾನಾರ್ಜನೆ, ಆತ್ಮಶೋಧನೆ, ಆಸಕ್ತಿಯ ತಣಿವು, ಚಿಂತನೆ, ಅನುಭವ, ವ್ಯಕ್ತಿತ್ವ ನಿರ್ಮಾಣ, ಆರೋಗ್ಯ ಸಾಧನೆ, ಇಂತಹ ಗುರಿಗಳನ್ನು ತಲುಪಲೂ ಮೇಲಿನ ಮಾರ್ಗಗಳನ್ನು, ಸಾಧನಗಳನ್ನು ಬಳಸಬಹುದು. ಆಗ ಅದು, 'ಕಾಲಹರಣ'ದ ಮಾರ್ಗವೆನ್ನಿಸುವುದಿಲ್ಲ. 'ಕಾಲದ ಸದುಪಯೋಗ'ದ ಮಾರ್ಗವೆನ್ನಿಸುತ್ತದೆ ಮೇಲಾಗಿ ಕಾಲವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂದು ಗೊತ್ತಿಲ್ಲದಿದ್ದಾಗ ಮಾತ್ರ ತಾನೇ 'ಕಾಲಹರಣ'ದ ಪ್ರಶ್ನೆ?

-ಎಚ್. ಆನಂದರಾಮ ಶಾಸ್ತ್ರಿ

ಜುಲ್ಯಾನ್

ಸ್ಪ್ಯಾನಿಶ್ ಕಥೆ

ಮೂಲ: **ಲಾಫೋರ್ಟ್**

ಅನುವಾದ: **ಗೋ**



ಕಿಟಕಿಯ ಗಾಜಿಗೆ ತಲೆಯಾನಿಸಿದ ಜುಲ್ಯಾನನಿಗೆ ಒಮ್ಮಿಂದೊಮ್ಮೆಲೆ ಮೈಯಿಡೀ ತಂಪು ಹರಿದಾಡಿತು. ಆತ ಯೋಚನೆಗೀಡಾದ... ದೊಡ್ಡ ದಿನದಂದೇ ತನ್ನನ್ನಿವರು ಕಳಿಸುತ್ತಿದ್ದಾರೆ... ಹಬ್ಬದ ದಿನ ಮನೆಗೆ ಮರಳಿ ಕಳಿಸುವುದು ಅಷ್ಟು ಸರಿಯಲ್ಲ... ಆದರೆ ತಾನೀಗ ಅವರ ದೃಷ್ಟಿಯಲ್ಲಿ ಪೂರ್ಣ ಸ್ವಸ್ಥ... ಆದ್ದರಿಂದಲೇ ಇಲ್ಲಿಂದ ಈ ಬಿಡುಗಡೆ...

ಕರಿಯ ಉದ್ದ ಕೋಟನ್ನು ಧರಿಸಿದ್ದ ಜುಲ್ಯಾನ್. ಮೈಬಣ್ಣದವೇ ಆದ ನೀಳ ಕೇಶರಾಶಿ ಹೊಂಬಣ್ಣದವು. ದೊಡ್ಡ ದೊಡ್ಡ ಕಣ್ಣುಗಳ ಕೆಳಗೆ ಮುಂಚಾಚಿಕೊಂಡ ಮಾ[illegible] ಆತನ ಕೃಶವ್ಯಕ್ತಿತ್ವವನ್ನೆತ್ತಿ

ತೋರಿಸುತ್ತಿದ್ದುವು. ಈಗಾತ ಪೂರ್ಣ ಸ್ವಸ್ಥ... ಆಗಾಗ ನೋಡಲು ಬರುತ್ತಿದ್ದ ಆತನ ಹೆಂಡತಿಯೇ ಈ ಮಾತು ಹೇಳಿದ್ದು. ಎರಡು ವರ್ಷಗಳ ಮೊದಲು ಈ ಹುಚ್ಚಾಸ್ಪತ್ರೆಯಲ್ಲಿ ಸೇರಿಸಲ್ಪಟ್ಟಾಗ ಜುಲ್ಯಾನ್ ಒಂದು ಬೆದರು ಬೊಂಬೆಯಂತೆ- ಬೆದರಿದ ಬೊಂಬೆಯಂತೆ ಕಾಣುತ್ತಿದ್ದ. ಈಗ ಅಲ್ಪಸ್ವಲ್ಪ ಮೈ ತುಂಬಿಕೊಂಡ ಆತನಿಗೆ ಪಾಪ, ಹುಚ್ಚಾಸ್ಪತ್ರೆಯಿಂದ ಹೋಗಬೇಕಾಗಿ ಬಂದುದೇ ದುಃಖಕರ ಸಂಗತಿ.

"ಯಾಕಪ್ಪಾ, ತುಂಬಾ ಹೆದರಿಕೊಂಡಿದ್ದೀ... ನಿನ್ನನ್ನ ಮನೇಗೆ ಕರೆದೊಯ್ಯಲಿಕ್ಕ ಅವರೆಲ್ಲ ಇದೀಗ ಬಂದುಬಿಡಬಹುದು. ನಾಲ್ಕರ ಗಾಡಿ ಬರೋದರಲ್ಲಿದೆ. ಐದೂವರೆ ಗಾಡಿಗೆ ನೀನು ಹೋಗಬೇಕು. ಮನೆ ಸೇರಿ ಕ್ರಿಸ್‌ಮಸ್ ಹಿಂದಿನ ರಾತ್ರಿಯನ್ನು ಆನಂದದಿಂದ ಕಳೆಯುವೆ... ಜುಲ್ಯಾನ್ ನಿನ್ನ ಹೆಂಡ್ತಿ ಮಕ್ಕು ಸಂಬಂಧಿಗಳನ್ನ ಕ್ರಿಸ್‌ಮಸ್ ರಾತ್ರಿಯ ಪೂಜೆಗೆ ಕರೆದೊಯ್ಯೋದನ್ನು ಮರಿಬೇಡ. ನಿನ್ನ ಮಕ್ಕಳು ತುಂಬ ಚೆಂದದವು. ಚಿಗರೆಯಂಥವು. ಆ ಕೊನೇ ಮಗ ಇದಾನಲ್ಲಾ-ಅವರ ಹೆಸರೇನು- ಆತ ಸೇಂಟ್ ಜಾನ್ ಥರಾನೇ ಕಾಣ್ತಾನಪ್ಪಾ ನನಗಂತೂ ಅಂಥದೇ ಮುಖ ಅಂಥವೇ ಕಣ್ಣುಗಳು.."

ಆಕೆಯ ಎಡೆಬಿಡದ ಮಾತುಗಳನ್ನು ಜುಲ್ಯಾನ್ ಸುಮ್ಮನೆ ಕೇಳುತ್ತಲೇ ಇದ್ದ. ಸಿಸ್ಟರ್ ಮಾರಿಯಾ ಆತನಿಗೆ ತುಂಬ ಇಷ್ಟವಾದ ದಾದಿ. ದಪ್ಪ ಮೈಯ ಆ ಹಸನ್ಮುಖಿಯ ಸೇಬಿನಂಥ ಕಪೋಲಗಳು ಜುಲ್ಯಾನ್‌ಗೆ ತುಂಬ ಅಪ್ಯಾಯಮಾನ.

ತಾನು ಯೋಚನೆಯಲ್ಲಿ ಮುಳುಗಿಕೊಂಡಿದ್ದಾಗ ಆಕೆ ಯಾವಾಗ ಬಂದಳೋ ಎಂಬುದು ಗೊತ್ತಾಗದ ಜುಲ್ಯಾನ್ ತಬ್ಬಿಬ್ಬಾದ. ಸ್ಕರ್ಟ್ ಧರಿಸಿದ್ದ ಮಾರಿಯಾ ಎಷ್ಟು ವೇಗದಿಂದ ನಡೆದರೂ ಹೆಜ್ಜೆಯ ಸದ್ದೂ ಕೇಳದಂತೆ ಸಾಗುತ್ತಿದ್ದಳು. ತಾನೇನೋ ಚಿಂತಿಸುತ್ತಿರುವಾಗ, ಚಿಂತಿಸುತ್ತ ಅತ್ತಿತ್ತ ದೃಷ್ಟಿ ಹರಿಸುತ್ತಿದ್ದಾಗ ಥಟ್ಟನೆ ಎದುರಿಗೆ ಪ್ರತ್ಯಕ್ಷಳಾಗಿ ಅಚ್ಚರಿ ಆನಂದಗಳನ್ನುಂಟು ಮಾಡುವ ಮಾರಿಯಾ ಎಂದರೆ ಜುಲ್ಯಾನನಿಗೆ ಏನೋ ಒಂದು ಅವರ್ಣನೀಯ ಅನುಭವ. ಆದರೆ ಇವತ್ತು...ಇವತ್ತು ಆಕೆ ಹೀಗೆ ಭೇಟಿಯಾಗುತ್ತಿರುವುದು ಕಟ್ಟ ಕಡೆಯ ಬಾರಿ ಎಂದು ಅನಿಸಿದಾಗ ಜುಲ್ಯಾನ್‌ನ ಕಣ್ಣಲ್ಲಿ ನೀರು ಮೂಡಿತು.

ಭಾವುಕತೆ ಆತನಲ್ಲಿ ಮಿತಿಮೀರಿತ್ತು. ಈಗೀಗ ಅದು ಮಾನಸಿಕ ಅಸ್ವಸ್ಥ ಎಂದು ಕರೆಯಲ್ಪಟ್ಟಿತ್ತು. ಹುಚ್ಚನೆಂದೇ ಕರೆಯಲ್ಪಡುತ್ತಿದ್ದ ಜುಲ್ಯಾನ್‌ಗೆ ಪ್ರೀತಿ-ವಾತ್ಸಲ್ಯಗಳ ಒಯಾಸಿಸ್ ಆಗಿ ದೊರೆತಾಕೆ ಈ ಮಾರಿಯಾ.

"ಸಿಸ್ಟರ್, ಈ ವರ್ಷವೂ ಕ್ರಿಸ್‌ಮಸ್ ರಾತ್ರಿಯ ಪೂಜೆಯನ್ನು ನಾನು ಇಲ್ಲಿಯೇ ನಿಮ್ಮೊಂದಿಗೆ ಇದ್ದುಕೊಂಡೇ ನೋಡೋದಕ್ಕೆ ಅವಕಾಶ ಮಾಡಿಕೊಡಿ. ನಾನು ನಾಳೆಯೂ ಇಲ್ಲಿಯೇ ಇದ್ದರೆ ಏನಾದರೂ ಅನಾಹುತ ಕಾದಿದೆಯೆ? ನೀವೆಲ್ಲ ನನ್ನ ಪರಿವಾರವೇ ಅಲ್ಲವೆ? ನನ್ನನ್ಯಾಕೆ ಇವತ್ತೆ ಮರಳಿ ಕಳಿಸುವ ಹಟ ನಿಮಗೆಲ್ಲ?" ಜುಲ್ಯಾನ್ ಅಳತೊಡಗಿದ.

"ಛಿ, ಹುಡುಗರ ಹಾಗೆ ಆಡಬೇಡ, ನೋಡು, ನಿನ್ನನ್ನು ಇಲ್ಲಿಯೇ ಉಳಿಸಿಕೊಳ್ಳುವುದು ಅಸಾಧ್ಯದ ಮಾತು. ನಿನ್ನ ಹೆಂಡ್ತಿ ಈಗ ನಿನ್ನ ದಾರೀನೆ ನೋಡ್ತಿದಾಳೆ. ಹೋಗಿ ಸಂಬಂಧಿಕರ ಜೊತೆ ಸೇರಿ, ಮತ್ತೆ ಕೆಲಸದಲ್ಲಿ ತೊಡಗಿದೆ ಅಂದ್ರೆ ಇದನ್ನೆಲ್ಲ ಮರೆತು ಬಿಡ್ತಿಯಾ" ಎಂದು ಹೇಳಿ ಮಾರಿಯಾ ಹೊರಟು ಹೋದದ್ದು ಜುಲ್ಯಾನ್ ಮತ್ತೆ ಏಕಾಕಿಯಾಗಿ ಚಿಂತಾಕುಲನಾಗಲು ಕಾರಣವಾಯಿತು. ಆತನಿಗೆ ಈ ಸ್ಥಳ ಮನೆಯೇ ಆಗಿಬಿಟ್ಟಿತ್ತು. ತನ್ನನ್ನು ಇಲ್ಲಿಯವರೆಲ್ಲ ಅದೆಂಥ ಪ್ರೀತಿಯಿಂದ ಕಂಡಿದ್ದರು! ಗುಣವಾಗಿದ್ದಾನೆನಿಸಿದ ಮೇಲೆ ಆತ ಇಚ್ಚೆಪಟ್ಟದ್ದನ್ನೆಲ್ಲ ಅವರು ಪೂರೈಸುತ್ತಿದ್ದರು. ಇತ್ತೀಚೆಗೆ ಆತ ಅಲ್ಲಿ ಕಾರನ್ನೂ ನಡೆಸುತ್ತಿದ್ದ. ಮದರ್ ಮತ್ತು ಸಿಸ್ಟರ್ ಮಾರಿಯಾರನ್ನು ಕಾರಿನಲ್ಲಿ ಕೂರಿಸಿಕೊಂಡು ಪೇಟೆಗೂ ಕರೆದೊಯ್ಯುತ್ತಿದ್ದ. ಇಲ್ಲಿಂದ ಹೋಗುವುದೆಂದರೆ ಆತನಿಗೆ ಜೀವಸುತ್ತು ಬಂದಂಥ ಅನುಭವವಾಗತೊಡಗಿತು.

ತನ್ನಂಥ ಒಬ್ಬ ಮಾಜಿ ಹುಚ್ಚನ ಮೇಲೆ ಮದರ್ ಮತ್ತು ಸಿಸ್ಟರ್ ಮಾರಿಯಾ ವಿಶ್ವಾಸ ಇರಿಸಿದ್ದೊಂದು ಅವರ ಹುಚ್ಚು ಸಾಹಸವೇ ಎಂದುಕೊಂಡ ಆತ. ಉಳಿದವರ ದೃಷ್ಟಿಯಲ್ಲಿ ಆತ "ಅಪಾಯಕಾರಿ". ಆದರೆ ಮಾರಿಯಾ ಮಾತ್ರ ಎಂದೂ ಅಂಥ ಅಪಾಯಕರ ಪ್ರವೃತ್ತಿಯನ್ನು ಜುಲ್ಯಾನ್‌ನಲ್ಲಿ ಗುರುತಿಸಲಿಲ್ಲ. ಕಾರನ್ನು ಅದೆಷ್ಟು ದಕ್ಷತೆಯಿಂದ ಜಾಗರೂಕತೆಯಿಂದ ನಡೆಯಿಸುತ್ತಿದ್ದ ಆತ! ದಾರಿಯಲ್ಲಿ

ತಗ್ಗುಗಳಿದ್ದರೂ ಹಿಂದೆ ಕುಳಿತವರು ಏನಿತೂ ಧಡಿಕೆಗೀಡಾಗದಂತೆ ಕಾರು ನಡೆಸುತ್ತಿದ್ದ.

ಅವನನ್ನು ಬೀಳ್ಕೊಡಲು ಅವರೆಲ್ಲ ಬಂದು ಸೇರತೊಡಗಿದರು. ಬಂದವರೆಲ್ಲ ಕೈ ಕುಲುಕಿ ಮೈದಡವಿ ಶುಭ ಕೋರಿದಾಗ ಜುಲ್ಯಾನ್‌ನ ಮುಖದಲ್ಲಿ ಅದೇನೋ ವಿಚಿತ್ರ ಭಾವನೆ ಹರಿದಾಡಿತು.

"ಜಲ್ಯಾನ್" ಎದುರಿಗೆ ಬಂದು ನಿಂತ ದೊಡ್ಡ ಕಣ್ಣಿನ ಅಗಲಬಾಯಿಯ ಸಿಸ್ಟರ್ ರೋಜಾ ಆತನ ಕೈ ಒತ್ತಿ "ಹೋಗುತ್ತಿಯಾ" ಎಂದಳು. ಆಕೆಯೊಂದಿಗೆ ಆತ ಅಷ್ಟಾಗಿ ಪರಿಚಯಿಸಿ ಕೊಂಡಿರಲಿಲ್ಲ. ಯಾಕೋ ಏನೋ ಅವಳನ್ನು ಕಂಡರೆ ಜುಲ್ಯಾನ್‌ಗೇನೋ ಅಲರ್ಜಿ. ಹಿಂದೆ ತಾನು ಅವಳ ಮೇಲೇರಿ ಹೋಗಿದ್ದನೆಂದು ಆಕೆ ಆಸ್ಪತ್ರೆಯಿಡೀ ಹೇಳಿಕೊಂಡು ತಿರುಗಾಡಿದ ಸುದ್ದಿ ಜುಲ್ಯಾನ್‌ಗೆ ಇತ್ತೀಚೆಗಷ್ಟೆ ಗೊತ್ತಾಗಿತ್ತು. ಅಂಥ ರೋಜಾ ಒಮ್ಮೆಂದೊಮ್ಮೆಲೆ ತೀರ ಹತ್ತಿರ ಬಂದು ಕೈ ಒತ್ತಿ "ಹೋಗುತ್ತಿಯಾ?" ಎಂದು ಕೇಳಿದಾಗ ಜುಲ್ಯಾನ್‌ಗೆ ತನ್ನ ಹೆಂಡತಿ ಹರ್‌ಮಿನಿಯಾಳೇ ಬಂದು ನಿಂತಂತೆ ಭಾಸ. ಬಹುಶಃ ತನ್ನ ಹೆಂಡತಿಯನ್ನೇ ಹೋಲುವ ಆಕೆಯನ್ನು ಕಂಡರೆ ಅಲರ್ಜಿ ಉಂಟಾಗುತ್ತಿರಬೇಕು ಜುಲ್ಯಾನ್‌ಗೆ.

"ಜುಲ್ಯಾನ್, ಹೋಗು ಮದರ್ ಹೇಳಿದ್ದಾರೆ ನಿನಗೆ ಫೋನ್ ಇದೆ ಅಂತ" ಎಂದಳು ರೋಜಾ.

ಅತ್ತ ಕಡೆಯಿಂದ ಹರ್‌ಮೀನಿಯಾ ಮಾತ ನಾಡುತ್ತಿದ್ದಳು-ಎಂದಿನ ತನ್ನ ಸೌಮ್ಯವೆಂದು ಕೊಳ್ಳುವ ಗಡುಸು ದನಿಯಲ್ಲಿ. "ತಪ್ಪು ತಿಳಿಯಬೇಡ ಜುಲ್ಯಾನ್ ಗಾಡಿ ಹತ್ತಿ ನೀನೊಬ್ಬನೇ ಹೊರಟು ಬಾ. ಅಮ್ಮನಿಗೆ ಮತ್ತೆ ಅದೇ ಹಳೆಯ ನೋವು ಹೆಚ್ಚಾಗಿದೆ. ನಾನು ನಿನ್ನನ್ನು ಕರೆದೊಯ್ಯಲಿಕ್ಕೆ ಬಂದ್ರೆ ಇಲ್ಲಿ ಅಮ್ಮನ್ನ ನೋಡಿಕೊಳ್ಳಕ್ಕೆ ಮಕ್ಕಳಿಂದ ಸಾಧ್ಯವೇ ಇಲ್ಲಾ. ಇಷ್ಟಾಗಿ ನಾನು ಅಲ್ಲೀವರೆಗೆ ಬಂದು ವಾಪಸ್ ಬರೋದ್ರಲ್ಲಿ ಏನರ್ಥ ಇದೆ? ಬರಿ ಗಾಡಿ ಚಾರ್ಜು ದಂಡ... ನೀನೊಬ್ನೇ ಬಂದ್ಬಿಡು".

ಆಕೆ ಫೋನು ಕುಕ್ಕಿದ ಸದ್ದು ಕೇಳಿಸಿದರೂ ರಿಸೀವರನ್ನು ಹಾಗೇ ಕಿವಿಗಾನಿಸಿಕೊಂಡು ಯೋಚನೆಯಲ್ಲಿ ಮುಳುಗಿದ್ದ ಜುಲ್ಯಾನ್ ತಾಯಿಗೆ ಹುಷಾರಿಲ್ಲದ ಯೋಚನೆಯಲ್ಲಿ ಇನ್ನೊಂದು ರಾತ್ರಿ ಇಲ್ಲಿ ಹುಚ್ಚಾಸ್ಪತ್ರೆಯಲ್ಲಿ ಕಳೆಯುವ ಸದವಕಾಶ ಹೇಗೆ ಅಯಾಚಿತವಾಗಿ



"ನಿದ್ರೆ ಮಾತ್ರೆಗಳಿಗೆ ದುಡ್ಡು ಕೊಡೋದಿಲ್ಲ... ನಾನು ನಿದ್ರೆಗೆಡೋದಕ್ಕೆ ನಿಮ್ಮ ಮಗಳೇ ಕಾರಣ".

ಬಂದೊದಗಿತ್ತಲ್ಲಿ ಎಂಬ ಕುರಿತು ಯೋಚನೆ. ತಾನು ಏಸು ಪ್ರಭುವಿನ ಜನ್ಮೋತ್ಸವದ ಸಂದರ್ಭದಲ್ಲಿ ಮೊಂಬತ್ತಿಗಳನ್ನು ಹಚ್ಚಲು ಕೈಸೇಡಬಹುದು. ಸಮೀಚೀನ ಊಟಮಾಡ ಬಹುದು... ಎಲ್ಲರೊಂದಿಗೆ ಸೇರಿ ಭಜನ ಮಾಡಬಹುದು. ಹೌದು ಆತನಿಗೆ ಇದೊಂದು ಮಹತ್ವದ ಪರ್ವ ಕಾಲಕ್ಕೊದಗಿದ ಸ್ವರ್ಣಾವಕಾಶ.

"ಹಾಗಾದರೆ ನಾನು ನಾಳೆ ಬರುವೆ.. ಭಯಪಡುವ ಕಾರಣವೇನಿಲ್ಲ. ನೀನು ಬರುವ್ರ ದಿಲ್ಲವಾದರೆ ನಾನು ಇಲ್ಲಿ ಸಿಸ್ಟರ್‌ಗಳಿಗೆ ಸ್ವಲ್ಪ ಸಹಾಯ ಮಾಡಬಹುದು. ಹಬ್ಬ ಅಲ್ಲವೆ? ಕಾಳಜಿ ಮಾಡಬೇಡ ಸುರಕ್ಷಿತವಾಗಿ ಬಂದು ಸೇರ್ತೇನೆ..." ಆತ ಆಚೆ ಹರ್‌ಮೀನಿಯಾ ಇನ್ನೂ ತನ್ನ ಉತ್ತರಕ್ಕಾಗಿ ಕಾಯುತ್ತಿದ್ದಾಳೆಂಬ ಭ್ರಮೆಯಿಂದ ಹೇಳಿ ಮುಗಿಸಿ ರಿಸೀವರನ್ನಿಟ್ಟ..



ಸಿಸ್ಟರ್ ರೋಜಾ ಕೆಂಗಣ್ಣಿಂದ ಜುಲ್ಯಾನ್‌ನನ್ನೇ ನೋಡುತ್ತಾ ನಿಂತುಕೊಂಡಿದ್ದಳು. ಆತ ಅವನತಮುಖಿಯಾಗಿ ತಾನು ಮದರ್‌ಳನ್ನು ಕಂಡು ಏನೋ ಹೇಳಿಕೊಳ್ಳಬೇಕಾಗಿದೆಯೆಂದವನೇ ಲಗುಬಗೆಯಿಂದ ಅಲ್ಲಿಂದ ಹೊರಟ.

ಮರುದಿನ ರೈಲಿನಲ್ಲಿ ಕುಳಿತ ಜುಲ್ಯಾನ್ ತನ್ನೂರಿನತ್ತ ಸಾಗಿದ್ದ. ಹೊರಗೆ ಇಬ್ಬನಿ ಹರಡಿತ್ತು. ಒಳಗೆ ಪ್ರಯಾಣಿಕರ ಹತ್ತು ಪಟ್ಟು ಕೋಳಿಗಳು, ಬಾತುಕೋಳಿಗಳು. ಅವುಗಳ ಕೊ... ಕೋ ಕೊರ್-ಕೊರಕ್ ಜತೆ ಅವುಗಳ ಮಾಲೀಕರ ಗಲಗಲ ಬಾಯಿ ಕೇಳಿಬರುತ್ತಿತ್ತು. ಜುಲ್ಯಾನ್‌ನ ಬಳಿಯಿದ್ದ ಸಾಮಾನೆಂದರೆ ಒಂದು ಹಳೆಯ ಹರಕು ಮುರುಕಾದ ಸೂಟ್‌ಕೇಸು. ಒಂದು ಕರಿಯ ಓವರ್‌ಕೋಟು. ಅದೇ ಸದ್ಯ ಆತನಿಗೆ ಚಳಿಯಿಂದ ರಕ್ಷಿಸಿಕೊಳ್ಳಲು ಸಾಧನ. ಊರು ಸಮೀಪಿಸುತ್ತಿದ್ದ ಹಾಗೆಯೆ ಆತನಿಗೆ ಇಬ್ಬನಿಯ ತೆರೆಯಲ್ಲಿ ಕಾರ್ಖಾನೆಗಳ ಚಿಮಣಿಗಳು, ಅವುಗಳ ಶೆಡ್ಡುಗಳು ಮತ್ತು ಕಾರ್ಮಿಕರ ವಸತಿಯ ಅಸ್ಪಷ್ಟ ಆಕೃತಿಗಳು ಗೋಚರಿಸತೊಡಗಿದವು.

ತಾನು ಕ್ರಿಸ್‌ಮಸ್ ಹಿಂದಿನ ರಾತ್ರಿಯನ್ನು ಅಷ್ಟು ಸಂಭ್ರಮದಲ್ಲಿ ಕಳೆಯಬಾರದಾಗಿತ್ತೇನೋ ಅನಿಸಿತು ಜುಲ್ಯಾನ್‌ಗೆ. ಯಾಕೆಂದರೆ ಎಷ್ಟೋ ವರ್ಷಗಳಿಂದ ಆ 'ರಾತ್ರಿ'ಯನ್ನು ಆತನ ಮನೆಯಲ್ಲಿ ಆಚರಿಸುತ್ತಲೇ ಇರಲಿಲ್ಲ. ಬಡಪಾಯಿ ಹರ್‌ಮೀಸಿಯಾ ಬಹಳ ಕಷ್ಟಪಟ್ಟು ಹಬ್ಬಕ್ಕೆಂದು ಮಿಠಾಯಿಗಳನ್ನು ಮಾಡಿದ್ದಳು. ಆಕೆಯ ಮಕ್ಕಳು ಊಟ ಮುಗಿಸಿ ಅವ್ವ ಕೊಟ್ಟ ಆ ಸಿಹಿ ತಿಂಡಿಗಳನ್ನು ಮುಷಿ

ಯಿಂದ ತಂದಿದ್ದರು. ಹಿಂದಿನ ವರ್ಷ ಇಷ್ಟೆಲ್ಲ ತಿಂಡಿಗಳನ್ನು ತಿನ್ನುವುದು ಅವರಿಗೆ ಸಾಧ್ಯವಾಗಿರಲಿಲ್ಲ.

ಎಷ್ಟೋ ತಿಂಗಳಿಂದ ನಿರುದ್ಯೋಗಿಯಾಗಿದ್ದ ಆತ. ಮನೆಯ ಫರಸಿ ಕಲ್ಲುಗಳನ್ನು ಒರೆಸಿ ಸುಸ್ತಾಗಿ ಹೋಗುತ್ತಿದ್ದಳು ಹರ್ಮೀನಿಯಾ. ಈಗಾಕೆ ಗರ್ಭಿಣಿ. ಇಂಥದರಲ್ಲಿ ಉಪವಾಸವಿರಬೇಕಾದ ಪ್ರಸಂಗಗಳು. ಜುಲ್ಯಾನ್ ಆಕೆಗೆ ಸಾಕಷ್ಟು ಒಳ್ಳೆಯ ಆಹಾರ ಸಿಗುವಂತೆ ಯತ್ನಿಸುತ್ತಿದ್ದನಾದರೂ ಆಕೆ ನಿತ್ಯವೂ ತಿಳುವಾದ ಸೂಪ್ ಮತ್ತು ನಿಸ್ಸತ್ವ ಗಂಜಿಯನ್ನು ಉಣ್ಣುತ್ತಿದ್ದಾಳೆಂದು ಗೊತ್ತಾದಾಗ ಒಂದು ಹೊತ್ತಿನ ಊಟವನ್ನೇ ಬಿಟ್ಟಿದ್ದ. ಎಷ್ಟೋ ದಿನ ಇದು ಹೀಗೆಯೇ ನಡೆಯಿತು. ಬೆಳಗಿನ ತಿಂಡಿ ಮಕ್ಕಳಿಗೆ ಮಾತ್ರ. ಶಾಲೆಗೆ ಹೋಗುವ ಮೊದಲು ಅವಕ್ಕೆ ಬಿಸಿ ಬಿಸಿ ಹಾಲು ಬೇಕು. ಆದರೆ ಬಸಿರಿ ಹರ್ಮೀನಿಯಾಗೆ ಮಾತ್ರ ಅದೇ ತಿಳಿಸಾರು ಗತಿ.

ಬಡತನ ಮೇಲೆ ತಾನು ಫಾಲ್ತು ಮನುಷ್ಯ. ಜುಲ್ಯಾನ್‌ಗೆ ಸಂಬಂಧಿಕರಲ್ಲಿ ಅಂಥ ಗೌರವವೂ ಸಿಕ್ಕುತ್ತಿರಲಿಲ್ಲ. ಒಂದೊತ್ತಿನ ಊಟ, ಕೆಲಸಕ್ಕಾಗಿ ಅಲೆದಾಟ, ಕಿತ್ತು ತಿನ್ನುವ ಚಿಂತೆಗಳಿಂದಾಗಿ ಕೊನೆಗೆ ಜನರ ಬಾಯಲ್ಲಿ ಆತ 'ಹುಚ್ಚ'ನಾಗಿ ಬಿಟ್ಟ. ಅಥವಾ 'ಹುಚ್ಚ' 'ಹುಚ್ಚ' ಅಂದಂದು ಜನ ಅವನನ್ನು ಹುಚ್ಚನಾಗಿಸಿಬಿಟ್ಟರು. ಒಂದು ದಿನ ಇದ್ದಕ್ಕಿದ್ದಂತೆಯೇ ತನ್ನ ತಾಯಿ ಮತ್ತು ಹೆಂಡತಿಯ ಮೇಲೆ ಕೈ ಮಾಡಿಬಿಟ್ಟ, ಜುಲ್ಯಾನ್. ಅದೇ ಕಾರಣವಾಗಿ ಜನ ಆತನನ್ನು ಹುಚ್ಚಾಸ್ಪತ್ರೆಗೆ ಸೇರಿಸಿಬಿಟ್ಟಿದ್ದರು... ಇದೆಲ್ಲ ಆಗಿ ಹೋದ ಮಾತು. ಈಗ ಜುಲ್ಯಾನ್ ಪೂರ್ಣ ಸ್ವಸ್ಥನಾಗಿ ಮರಳುತ್ತಿದ್ದಾನೆ ಎಷ್ಟೋ ದಿನಗಳ ಹಿಂದೆಯೇ ಆತನಿಗೆ ಗುಣವಾಗಿತ್ತಾದರೂ ಮದರ್-"ಕ್ರಿಸ್‌ಮಸ್ ವರೆಗೆ ಇಲ್ಲಿಯೇ ಇರು" ಎಂದು ಆಸ್ಪತ್ರೆಯಲ್ಲೇ ಇಟ್ಟುಕೊಂಡಿದ್ದರು.

ಮನೆಗೆ ಬರುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ತಾನು ತನ್ನ ಕರ್ತವ್ಯವನ್ನು ಈಗಲೂ ಮರೆಯುತ್ತಿದ್ದೇನೆನ್ನಿಸಿತು ಜುಲ್ಯಾನ್‌ನಿಗೆ. ಮನೆಯೆಡೆಗೆ ಸಾಗುವ ರಸ್ತೆಯ ಅಕ್ಕಪಕ್ಕದ ಅಂಗಡಿಗಳನ್ನು ಕ್ರಿಸ್‌ಮಸ್‌ಗಾಗಿ ಸಿಂಗರಿಸಿದ್ದರು.

ಸಮೀಪದಒಂದು ಬೇಕರಿಯೆದುರು ನಿಂತಾಗ ಮೂಗಿಗೆ ಬ್ರೆಡ್-ಬನ್ ಮತ್ತು ಕೇಕುಗಳ ಸುವಾಸನೆ ಬಡಿಯಿತು. ತಾನೇಕೆ ಒಂದಷ್ಟು ಬನ್-ಕೇಕ್‌ಗಳನ್ನು ಖರೀದಿಸಬಾರದು ಎಂದು ಯೋಚಿಸಿದ. ಹೋಗಿ ಖರೀದಿಸಿಯೂ ಬಿಟ್ಟ. ಜೇಬಿನಲ್ಲಿದ್ದ ಹಣ ತೀರುವವರೆಗೂ ನಮೂನಮೂನೆಯ ಕೇಕುಗಳನ್ನು ಪ್ಯಾಕ್ ಮಾಡಿಸುತ್ತಲೇ ಹೋದ. ತಾನಂತೂ ಅಲ್ಲಿ ಆಸ್ಪತ್ರೆಯಲ್ಲಿ ಸಾಕಷ್ಟು ಕೇಕ್ ಪೆಸ್ಟ್ರಿ ಮುಂತಾದವುಗಳನ್ನು ತಿಂದಿದ್ದ. ಈಗ ಮನೆಯಲ್ಲಿ ಮಕ್ಕಳು ಮನದಣಿ ಕೇಕ್ ತಿನ್ನಲಿ ಪಾಪ ಎಂದು ಮನೆಕಡೆ ಹೆಜ್ಜೆ ಹಾಕಿದ.

ಒಂದು ಕೈಯಲ್ಲಿ ಸೂಟ್‌ಕೇಸ್ ಇನ್ನೊಂದು ಕೈಯಲ್ಲಿ ಮಿಠಾಯಿ ಹಿಡಿದುಕೊಂಡು ಮನೆಯ ಮೆಟ್ಟಿಲುಗಳನ್ನೇರುವುದು ಆತನಿಗೆ ಸಾಧ್ಯವಾಗದಾಯಿತು. ಆದರೆ ಸೂಟ್‌ಕೇಸನ್ನು ಇಡುವಂತಿಲ್ಲ ಕೇಕು ಪ್ಯಾಕನ್ನೂ ಬಿಡುವಂತಿಲ್ಲ. ಮನೆಯ ಜನರನ್ನೆಲ್ಲ ಕಾಣುವ ತವಕ ಬೇರೆ. ತನ್ನ ಪುಟ್ಟ ಮಕ್ಕಳ ಮೈದಡವುವ ಆಶೆ ಬೇರೆ... ತಾಯಿಯನ್ನಪ್ಪಿ ಆಕೆಯ ನಗುಮುಖವನ್ನು ಮುತ್ತಿಡುವ ಬಯಕೆ ಬೇರೆ.

ಮನೆಗೆ ಹಸಿರು ಬಣ್ಣದ ನಾಲ್ಕು ಬಾಗಿಲುಗಳು. ಅವುಗಳ ಬಣ್ಣ ಈಗ ಮಸುಕಾಗುತ್ತಿದೆ. ಅಂತೂ ಬಾಗಿಲ ಬಳಿ ಬಂದ. ಖಟ ಖಟ ಬಾಗಿಲು ಬಡಿದ.

ಹರ್ಮೀನಿಯಾ ಬಾಗಿಲು ತೆರೆದವಳು, ಪತಿಯನ್ನು ನೋಡಿ, ತನ್ನ ಸೊರಗಿದ ಬಾಹುಗಳಿಂದ ಅಪ್ಪಿಕೊಂಡಳು. ಮಕ್ಕಳಿಗಂತೂ ಅಪ್ಪ-ಬಂದದ್ದೊಂದು ದೊಡ್ಡ ಸಂಭ್ರಮ. ಆ ಮನೆಯ ಹಬ್ಬದಡಿಗೆಯ ಕಂಪಿನ ಜೊತೆಗೆ, ಮನೆಯೊಡೆಯಬಂದ ಸಂತೋಷದ ಸೌರಭವೂ ಸೇರಿ ವಾತಾವರಣವನ್ನು ಆಹ್ಲಾದಕರವನ್ನಾಗಿಸಿತು.

"ಅಪ್ಪಾ, ಇವತ್ತು ಮನೆಯಲ್ಲಿ ವಿಶೇಷ ಏನು ಗೊತ್ತಾ?"

ಸಂಗಾತಿಗೆ

ನೀ ಏನೂ
ತಪ್ಪು ಮಾಡಿಲ್ಲ
ವೆಂದರೂ
ನನ್ನ ಹೃದಯವನ್ನು
ಕದ್ದ ಆರೋಪ
ಹೊಂದಿದೆಯಲ್ಲ

-ಗೋಪಾಲಕೃಷ್ಣ ವಂಡ್ಸೆ

"ಗೊತ್ತಿಲ್ವಲ್ಲ... ಏನು ಹೇಳು..."

"ಊಟಕ್ಕೆ ಕೋಳಿ..."

ಜುಲ್ಯಾನ್ ಹೆಂಡತಿಯೆಡೆ ನೋಡಿದ. ಅವ್ವನ ಕಡೆಗೂ ದೃಷ್ಟಿ ಹರಿಸಿದ ಅವ್ವ ಈಗ ಮೊದಲಿಗಿಂತಲೂ ವಯಸ್ಸಾದವಳಂತೆ ಕಾಣುತ್ತಿದ್ದಳು. ಅಸ್ವಾಸ್ಥ್ಯ ಆಕೆಯನ್ನು ಬಿಳಿಚನ್ನಾಗಿ ಮಾಡಿತ್ತು. ಹೊಸ ಉಣ್ಣೆಯ ಶಾಲೊಂದನ್ನು ಹೊದ್ದು ಕಣ್ಣಲ್ಲಿ ಸಂಭ್ರಮ ತುಳುಕಿಸುತ್ತ ಕುಳಿತ ಆ ಬೊಚ್ಚು ಬಾಯಿಯ ಮುದುಕಿಯ ಪಕ್ಕದಲ್ಲಿ ಹಬ್ಬಕ್ಕಾಗಿ ಮಿಠಾಯಿಗಳು, ಆಟಿಕೆಗಳು, ರಿಬ್ಬನ್‌ಗಳು ರಾಶಿಯಾಗಿ ಕುಳಿತಿದ್ದವು.

"ಏನು? ನಿನಗೇನಾದರೂ ಲಾಟರಿ ತಾಗಿದೆಯಾ ಅಮ್ಮಾ?" ತಾಯಿಯ ಬಳಿ ಹೋಗಿ ಆಕೆಯ ತೊಡೆಗಳ ಮೇಲೆ ತಲೆಯಿಟ್ಟು ಮಲಗಿ ಅಚ್ಚರಿಯಿಂದ ಕೇಳಿದ. ಆತನ ತಲೆಯಲ್ಲಿ ಬೆರಳಾಡಿಸುತ್ತ ಮುದುಕಿ, "ಇಲ್ಲ ಜುಲ್ಯಾನ್ ನೀನು ಹೋದ ಮೇಲೆ ಇಲ್ಲಿ ಕೆಲವು ಜನ ಸ್ತ್ರೀಕಲ್ಯಾಣ ಸಂಘದ ಸದಸ್ಯೆಯರು ಬಂದಿದ್ದು. ನಮ್ಮನ್ನೆಲ್ಲ ತುಂಬ ಪ್ರೀತಿಯಿಂದ ನೋಡಿಕೊಂಡು ಹರ್‌ಮೀನಿಯಾಳಿಗೊಂದು ಕೆಲಸವನ್ನು ಕೊಟ್ರು" ಎಂದಳು.

"ಹೌದು. ತುಂಬ ಉಪಕಾರ ಮಾಡಿದ್ರು ನಿಮಗೆ ಒಂದು ಗರೇಜಿನಲ್ಲಿ ಕೆಲಸ ಕೊಡಿಸು ವುವಾಗಿಯೂ ಹೇಳಿದ್ದಾರೆ ಜುಲ್ಯಾನ್" ಹರ್‌ಮೀನಿಯಾ ದನಿಗೂಡಿಸಿದಳು.

"ನನಗಾ? ಗರೇಜಿನಲ್ಲಾ?" ಎಂದು ಕೇಳಿದ ಆತ ತನ್ನಲ್ಲೇ ಅಂದುಕೊಂಡ: ಹುಚ್ಚನಿಗೆ ಯಾರು ಡ್ರೈವರ್ ಕೆಲಸ ಕೊಟ್ಟಾರು? ಹೆಚ್ಚೆಂದರೆ ಅಲ್ಲಿ ಮೇಸ್ತ್ರಿಯೋ ಅಥವಾ ಕೇಸದಾಳೋ ಆಗಿ ಇಟ್ಟುಕೊಂಡಾರು... ಆತನ ಮುಖದಲ್ಲಿ ಚಿಂತೆ ಕಾಣಿಸಿಕೊಂಡಿತು.

"ಯಾಕೆ ಜುಲ್ಯಾನ್? ಏನು ಯೋಚ್ನೆ ಮಾಡ್ತಿದ್ದೀಯಪ್ಪಾ? ನಾನಿದ್ದೀನಿ ನಿನ್ನ ತಾಯಿ. ಏನೂ ಯೋಚ್ನೆ ಮಾಡಬೇಡ ತಿಳಿತಾ. ಕ್ರಿಸ್ಮಸ್ ಈಗ ಎಲ್ಲರೂ ಒಂದೆಡೆ ಸೇರಿರೋ ಸಂತೋಷ ನಿನಗಿಲ್ವಾ?" ಅಂದಳು ತಾಯಿ.

ಜುಲ್ಯಾನ್ ಅಲ್ಲಿ ತಿಂಡಿಗಳನ್ನು ತುಂಬಿಟ್ಟ ಬುಟ್ಟಿಯೆಡೆ ನೋಡಿದ. ಮಕ್ಕಳು ತನ್ನತ್ತ ಅಧೀರರಾಗಿ ನೋಡುತ್ತಿರುವುದು ಆತನ ಗಮನಕ್ಕೆ ಬಂತು. ಹೆಂಡತಿ ಆತುರದಿಂದ ತನ್ನತ್ತಲೇ ನೋಡುತ್ತಿದ್ದಾಳೆ. ಆತನಿಗೆ ಇದೆಲ್ಲ ಏನೋ ವಿಚಿತ್ರವಾಗಿ ತೋರಿತು. ಇಂಥ ಸಂಭ್ರಮ ತನಗೆ ನಲವತ್ತು ವರ್ಷಗಳಷ್ಟು ಹಳೆಯದು. ಹೌದು. ಆಗಲೂ ಇಂಥವೇ ತಿಂಡಿಗಳು, ಆಟಿಗೆಗಳು, ಪಕ್ವಾನ್ನದೂಟ. ಎಲ್ಲ ಕೆಲವು ದಿನದ್ದು. ಈ ಕೆಲವು ದಿನಗಳ ಸಂಭ್ರಮಕ್ಕಾಗಿ ವರ್ಷವಿಡೀ ಉಪವಾಸವಿದ್ದು ಕೊಳ್ಳಬೇಕಲ್ಲ. ಆತನಿಗೆ ಆ ಸಂಭ್ರಮದ ಹಿಂದಡಗಿದ ಜೀವನದ ಕ್ರೌರ್ಯ ಕಣ್ಣಿಗೆ ಕಾಣ ತೊಡಗಿತು. ●

ಇದು ಸರ್ ಆರ್ಥರ್ ವೆಲ್ಲೆಸ್ಲಿ ಭಾರತದಲ್ಲಿದ್ದಾಗ ನಡೆದದ್ದು. ಅಸ್ಸಯ (ಭಾರತದಲ್ಲಿ) ಯುದ್ಧವಾದ ನಂತರ ಹೈದರಾಬಾದ್ ಸಂಸ್ಥಾನದ ಮುಖ್ಯಮಂತ್ರಿಯು ವೆಲ್ಲೆಸ್ಲಿಯವರನ್ನು ಸಂಧಿಸಿ, ಗುಪ್ತವಾಗಿ ಮರಾಠಾ ಮತ್ತು ನಿಜಾಮರ ಶಾಂತಿಯ ಒಪ್ಪಂದದಲ್ಲಿ ತನ್ನ ಒಡೆಯನಾದ ನಿಜಾಮನು ಯಾವ ಯಾವ ಭಾಗಗಳನ್ನು ಪಡೆಯುವನೆಂದು ತಿಳಿಯಲು ಯತ್ನಿಸಿದ. ಇದಕ್ಕಾಗಿ ಒಂದು ಲಕ್ಷಕ್ಕೂ ಹೆಚ್ಚು ಹಣವನ್ನು ನೀಡುವ ಆಸೆಯನ್ನು ಆತ ತೋರಿಸಿದ.

ಆದರೆ ಜನರಲ್ ವೆಲ್ಲೆಸ್ಲಿ ಶಾಂತವಾಗಿ, "ಹಾಗಾದರೆ ನೀವು ಈ ರಹಸ್ಯವನ್ನು ಕಾಪಾಡ ಬಲ್ಲಿರೋ?" ಎಂದು ಕೇಳಿದ.

"ಹೌದು ಖಂಡಿತವಾಗಿಯೂ" ಎಂದು ಮುಖ್ಯಮಂತ್ರಿ ಉತ್ಸುಕನಾಗಿ ತನ್ನ ಕಾರ್ಯ ಸಾಧಿಸಿತೆಂದು ಸಂತೋಷದಿಂದ ಹೇಳಿದ.

"ಹಾಗೆಯೆ ನಾನು ಕೂಡ ಈ ರಹಸ್ಯವನ್ನು ಕಾಪಾಡ ಬಲ್ಲೆ" ಎಂದು ಮುಗುಳ್ನಗುತ್ತ ಅಲ್ಲಿಂದೆದ್ದು ಹೊರನಡೆದ ಆರ್ಥರ್ ವೆಲ್ಲೆಸ್ಲಿ.

-ಗಣೇಶ ಪಂಡಿತ

ನ್ಯೂಯಾರ್ಕಿನ ವಾಲ್ಟರ್ ಹಡ್ಸನ್ ಸದ್ಯಕ್ಕೆ ಜಗತ್ತಿನ ಅತಿ ಹೆಚ್ಚು 'ಭಾರದ ಮನಷ್ಯ'- 42 ವರ್ಷ ವಯಸ್ಸಿನ, ಆರಡಿ ಎತ್ತರದ ಈ 'ಅತಿಕಾಯ'ನ ದೇಹದ ತೂಕ 545 ಕೆ.ಜಿ. ಹಾಗೂ ಅದರ ಸುತ್ತಳತೆ ಒಂಭತ್ತು ಅಡಿಗಳು.

ಕೆಂಪು ಹೊದಿಕೆಯ ಕೆಳಗೆ ತನ್ನ ಭಾರಿ ಗಾತ್ರವನ್ನು ಹುದುಗಿಸಿಕೊಂಡಿರುವ ಹಡ್ಸನ್, ಕಳೆದ 27 ವರ್ಷಗಳಿಂದ ಮಲಗಿಕೊಂಡೇ ಇದ್ದಾನೆ. ಆತನ ಕೈಗಳ ಸುತ್ತ ಸುತ್ತಿಕೊಂಡಿರುವ ಮಾಂಸದ ಸುರುಳಿಗಳು ಸಮುದ್ರದ ಅಲೆಗಳನ್ನು ನೆನಪಿಸುತ್ತವೆ. ಕಾಂತಿಯುಕ್ತ ಕಣ್ಣುಗಳನ್ನು, ಗೋಧಿವರ್ಣವನ್ನು ಹೊಂದಿರುವ ಈತನ ಮುಖಭಾವ ಬೌದ್ಧ ಭಿಕ್ಷುವಿನದು. ತಲೆಯ ಇಕ್ಕೆಡೆಗಳಲ್ಲಿ, ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿ ಹೆಣೆದ ಜಡೆಗಳ ವಿಶಿಷ್ಟ ಕೇಶ ವಿನ್ಯಾಸ ಈತನಿಗೆ 'ಪವಾಡ ಪುರುಷ'ನ ಮೆರಗನ್ನು ನೀಡಿದೆ.

ಒಂದು ಸ್ವಾರಸ್ಯಕರ ಘಟನೆಯಿಂದಾಗಿ ಈ 'ಅತಿಮಾನವ'ನ ಅಸ್ತಿತ್ವ ಹೊರ ಜಗತ್ತಿಗೆ ಪರಿಚಯವಾಯಿತು.

ಕಳೆದ ತಿಂಗಳು ಹಡ್ಸನ್‌ನ ದೇಹ ಆತನ ಮಲಗುವ ಕೋಣೆಯ ಬಾಗಿಲುಗಳ ನಡುವೆ ಸಿಲುಕಿ ಹಾಕಿಕೊಂಡಿತು. ಕೊನೆಗೆ ಅಗ್ನಿಶಾಮಕ ದಳದವರು ಬಂದು ಬಾಗಿಲನ್ನು ಕತ್ತರಿಸಿದಾಗಲೇ ಹಡ್ಸನ್‌ಗೆ ವಿಮೋಚನೆ. 'ಕ್ರೇನ್' ಮೂಲಕ ಆತನನ್ನು ಮೇಲೆತ್ತಿ ಭಾರೀ ಗಾತ್ರದ ತೂಕದ ಯಂತ್ರದ ಮೇಲಿರಿಸಿ ಪರೀಕ್ಷಿಸಿದಾಗ ಈತ ವರ್ತಮಾನ ಕಾಲದ 'ದೈತ್ಯ' ಎಂದು ಸಾಬೀತಾಯಿತು. ಈ ಸುದ್ದಿ ಹಲವಾರು ಪತ್ರಿಕೆಗಳಿಗೆ ಆಹಾರವನ್ನು ಒದಗಿಸಿತು.

ಈ ಪ್ರಸಂಗದಿಂದ ಪ್ರೇರಿತನಾದ ಸಮಾಜ ಸೇವಾ ಕಾರ್ಯಕರ್ತ ಹಾಗೂ ಪೌಷ್ಟಿಕ ಆಹಾರ ತಜ್ಞ ಡಿಕ್ ಗ್ರಿಗೋರಿ ಹಡ್ಸನ್‌ನನ್ನು ಭೇಟಿಯಾದ. ಈತನ ಮೂಲಕ ಹಡ್ಸನ್‌ನ ದೈನಂದಿನ ಕಲಾಪಗಳ ಬಗ್ಗೆ ಕೆಲವಾರು ಮಾಹಿತಿಗಳು ದೊರಕಿವೆ.

ಹಡ್ಸನ್‌ನ ಊಟ ಮತ್ತು ಉಪಾಹಾರದ ಪಟ್ಟಿ ಹೀಗಿದೆ:-

ಬೆಳಗಿನ ಉಪಾಹಾರಕ್ಕೆ ಎರಡು ಪೌಂಡ್ ಹಂದಿ ಮಾಂಸ, ಒಂದು ಡಜನ್ ಕೋಳಿ ತತ್ತಿಗಳು, ಒಂದು ಡಜನ್ ಬ್ರೆಡ್ ಹಾಗೂ ಕಾಫಿ.

ಮಧ್ಯಾಹ್ನದ ಊಟಕ್ಕೆ ನಾಲ್ಕು ಗೋಧಿ ರೊಟ್ಟಿಗಳು, ನಾಲ್ಕು 'ಚೀಸ್ ಬರ್ಗರ್ಸ್' (ಮೊಸರಿನಿಂದ ತಯಾರಿಸಲ್ಪಡುವ ಒಂದು ಬಗೆ ಗಟ್ಟಿ ಪದಾರ್ಥ) ಎಂಟು ಡಬ್ಬಗಳಷ್ಟು ಮೀನಿನ ಮಾಂಸ. ಆರು ಬಗೆಯ ಹಣ್ಣು-ಹಂಪಲುಗಳು ಹಾಗೂ ಆರು ಬಾಟ್ಲಿ ಸೋಡಾ.

ರಾತ್ರಿ ಊಟಕ್ಕೆ ಬೇಯಿಸಿದ ಮೂರು ಹಂದಿ ಮಾಂಸ, ಬೇಯಿಸಿದ ಆರು ಗೆಣಸುಗಳು, ಬೇಯಿಸಿದ ಆರು ಆಲೂಗಡ್ಡೆಗಳು ಬೆಣ್ಣೆ ಹಾಗೂ ಇತರ 'ಸೂಪ್'ಗಳು ಊಟದ ಕೊನೆಯಲ್ಲಿ ಆಲೂಗಡ್ಡೆ ಚಿಪ್ಸ್, ಕೇಕ್‌ಗಳು ಅಥವಾ ಐಸ್‌ಕ್ರೀಂ ಹಡ್ಸನ್‌ನ ದೇಹ ಸಾಕಣೆಯಲ್ಲಿ ಈ ಎಲ್ಲ ಪೌಷ್ಟಿಕಾಂಶಗಳು ಪ್ರಮುಖ ಪಾತ್ರ ವಹಿಸಿವೆ.

ಇಷ್ಟು ಭಾರವನ್ನು ಹೊತ್ತುಕೊಂಡಿದ್ದರೂ ಹಡ್ಸನ್ ಸದಾ ಆರೋಗ್ಯಶಾಲಿಯಾಗಿರುವುದು ಮತ್ತು ಪ್ರಸನ್ನಚಿತ್ತನಾಗಿರುವುದು ಆಶ್ಚರ್ಯದ ಸಂಗತಿ. ಸದಾ ಹಾಸಿಗೆಯಲ್ಲೇ ಇರುತ್ತಿದ್ದರೂ ಆತನಿಗೆ ಚರ್ಮ ವ್ಯಾಧಿಗಳ ಕಾಟವಿಲ್ಲ. ಬೈಬಲ್‌ನ ಪವಿತ್ರ ಸ್ತೋತ್ರಗಳ ಪಠಣ ಮಾಡುತ್ತಾ ಆತ ನೆಮ್ಮದಿಯಲ್ಲಿರುತ್ತಾನೆ.

ಮುಂದಿನ ವರ್ಷ ಹಡ್ಸನ್‌ನನ್ನು ಬಹಾಮಾಸ್‌ನಲ್ಲಿರುವ ತನ್ನ ಕ್ಲಿನಿಕ್‌ಗೆ ಕರೆದುಕೊಂಡು ಹೋಗುವ ಯೋಜನೆ ಗ್ರಗೋರಿಯದ್ದು. ಮೂರು ವರ್ಷಗಳಲ್ಲಿ ಹಡ್ಸನ್‌ನ ತೂಕವನ್ನು 86 ಕೆ.ಜಿ. ಗಳಿಗೆ ಇಳಿಸುವುದಾಗಿ ಗ್ರಿಗೋರಿ ಹೇಳಿದ್ದಾನೆ.

ಗ್ರಗೋರಿಯ ಸಲಹೆಯಂತೆ ಸದ್ಯಕ್ಕೆ ಹಡ್ಸನ್ ಹಣ್ಣು-ಹಂಪಲು, ತರಕಾರಿ ಹಾಗೂ ಕಿತ್ತಳೆ ಹಣ್ಣಿನ ರಸವನ್ನಷ್ಟೇ ಸೇವಿಸುತ್ತಿದ್ದಾನೆ. ದೇಹ ಹಗುರಾದ ಬಳಿಕ ತನ್ನ ದೇಶವನ್ನು ಕಣ್ತುಂಬಾ ನೋಡುವ ಬಯಕೆ ಹಡ್ಸನ್‌ಗಿದೆ. ಯಾಕೆಂದರೆ ಅಮೆರಿಕನ್ ಆಗಿಯೂ ಅಮೇರಿಕೆ ಹೇಗಿದೆ ಎನ್ನುವುದೇ ತಿಳಿಯದ ಪರಿಸ್ಥಿತಿ ಆತನದ್ದು.

ಹಡ್ಸನ್ ಎಂಬ "ಅದ್ಭುತ"ದ ಪತ್ತೆಯಾಗುವುದಕ್ಕೆ ಮೊದಲು ಜಗತ್ತಿನ ಅತಿ 'ದೈತ್ಯ ಮಾನವ'ನ ಪಟ್ಟ ಮಿಸ್ಸಿಸಿಪ್ಪಿಯ 414 ಕೆ.ಜಿ. ತೂಕದ ಜಾಕ್‌ಸನ್‌ನದಾಗಿತ್ತು. ಆದರೆ ಈ ನಿಟ್ಟಿನಲ್ಲಿ ಸಾರ್ವಕಾಲಿಕ ದಾಖಲೆಯನ್ನು ಸ್ಥಾಪಿಸಿರುವ ದಿವಂಗತ ಬ್ರೌವರ್ ಮಿನೋಚ್‌ನನ್ನು ಸೋಲಿಸಲು ಮಾತ್ರ ಹಡ್ಸನ್‌ಗೆ ಸಾಧ್ಯವಾಗಿಲ್ಲ. ●

ಪದಾರ್ಥ ಚಿಂತಾಮಣಿ

• ಪಾ. ವೆಂ. •

107

—: ಹಗಲೇ ದಿನ, ಕಣ್ಮುಚ್ಚುಕಿಸುವುದೇ ನಿಮಿಷ :—

ಪೃಥ್ವಿಯ ಮೇಲೆ ಮನುಷ್ಯ ಜಾತಿ ಅಸ್ತಂಗತವಾದ ಮೇಲೆ, ಯಾವುದೋ ಲೋಕದಿಂದ ಈ ನಿರ್ಜನ ಲೋಕಕ್ಕೆ ಬುದ್ಧಿಶಾಲಿ ಜೀವಿಗಳು ಬಂದಿಳಿದವೆಂದುಕೊಳ್ಳಿ. ಅವರು ಯಾವುದೋ ಉಪಾಯದಿಂದ ನಮ್ಮ ಭಾಷೆಗಳನ್ನು ಸಮೂಲವಾಗಿ ಅರ್ಥಮಾಡಿಕೊಳ್ಳಲು ಸಮರ್ಥರಾದರೆಂದುಕೊಳ್ಳಿ. ನಾವಿಂದು ಇರುಳನ್ನು ಹಗಲು ಮಾಡಬಲ್ಲ ಬೆಳಕಿನ ಮೇಲೆ ಪ್ರಭುತ್ವ ಸ್ಥಾಪಿಸಿದ್ದೆಲ್ಲ ಅವರಿಗೆ ಇದ್ದಕ್ಕಿದ್ದಂತೆ ಲಭ್ಯವಾಯಿತೆಂದುಕೊಳ್ಳಿ. ಆಗಲೂ ಒಂದು ಕಾಲದಲ್ಲಿ ನಾವು ಸಂಪೂರ್ಣವಾಗಿ ಹಗಲಿನ ಬೆಳಕನ್ನೇ ಅವಲಂಬಿಸಿ ಇತರ ಪ್ರಾಣಿಗಳ ಹಾಗೆ ಬದುಕಿದ್ದೆವೆಂಬ ಅಂಶವನ್ನು ಆ ಜೀವಿಗಳು ನಮ್ಮ ಭಾಷೆಯ ಪದಗಳಿಂದ ಅರ್ಥಮಾಡಿಕೊಂಡಾರು. ಅದು ಹೇಗೆ ನೋಡಿ:

ಅವರು ನಮ್ಮ ಲಿಖಿತಾವಶೇಷಗಳಲ್ಲಿ ದಿನ, ದಿವಸ ಎಂಬ ಶಬ್ದಗಳನ್ನು ಕಾಣುವರು. ದಿನ ಅಥವಾ ದಿವಸಕ್ಕೆ 24 ಗಂಟೆ ಅಥವಾ 60 ಗಳಿಗೆ ಎಂದೋದುವರು. ದಿನಕ್ಕೆ ಮೂರು ಪಾಳಿಗಳಲ್ಲಿ ನಮ್ಮ ಕಾರ್ಖಾನೆಗಳು ಕೆಲಸ ಮಾಡುತ್ತಿದ್ದವೆಂದು ತಿಳಿಯುವರು. ಮಧ್ಯ ರಾತ್ರಿಯಿಂದ ನಮ್ಮ ದಿನ ಪ್ರಾರಂಭವಾಗಿ ಮಧ್ಯ ರಾತ್ರಿಗೆ ಮುಗಿಯುವುದು ಎಂದೂ ಅವರು ದಾಖಲೆಗಳಿಂದ ಅರ್ಥ ಮಾಡಿಕೊಳ್ಳುವರು. ಆದರೂ 'ದಿನ', 'ದಿವಸ' ಶಬ್ದಗಳ ಮೂಲದಲ್ಲಿ ಏನಿದೆಯೆಂದು ಶೋಧಿಸಿದರೆ ಅವರಿಗೆ ಹಗಲಿರುಳುಗಳನ್ನು ಒಂದು ಮಾಡಿದ್ದು ಮಾನವ ನಾಗರಿಕತೆಯ ಅಪರ ಕಾಲದಲ್ಲಿ ಎಂದು ಗೊತ್ತಾಗಿ ಹೋಗುವುದು. ಯಾಕೆಂದರೆ ದಿನ, ದಿವಸ ಎಂಬೀ ಪದಗಳು ಮೂಲತಃ ಆಕಾಶದಿಂದ ಬಂದ ಬೆಳಕನ್ನು, ಅಂದರೆ ಸೂರ್ಯ ಪ್ರಕಾಶವನ್ನು ಸೂಚಿಸುವ ಸಂಸ್ಕೃತ ಪದಗಳು. ಅದು ಇರುಳನ್ನು ಒಳಗೊಂಡಿಲ್ಲ. 'ದಿನ', 'ದಿವಸ' ಪದಗಳಿಗೆ ಸಂವಾದಿಯಾದ ಲ್ಯಾಟಿನ್, ಗಾಥಿಕ್, ಸ್ಲಾವಿಕ್, ಅವೆಸ್ತನ್, ಲಿಥಾವೇನಿಯನ್ ಪದಗಳನ್ನು ವಿಮರ್ಶಿಸಿದರೆ ಅವರಿಗೆ ಇದು ಇನ್ನಷ್ಟು ದೃಢ ಪಡುತ್ತಿತ್ತು. ಆಕಾಶಕ್ಕೂ ಬೆಳಕಿಗೂ ಒಂದೇ ಪದ ಬಳಕೆಯಲ್ಲಿದ್ದದ್ದನ್ನು ಅವರು ಗಮನಿಸಿದರು.

ದಿನಾಲೂ ಬಂದು ಪೀಡಿಸುತ್ತಾರೆ ಎಂಬುವುದರಲ್ಲಿ ರಾತ್ರಿ ಬಂದು ಪೀಡಿಸುವವರೂ ಸೇರಿರಬಹುದಾದರೂ ದಿನಾ ಎಂಬ ಶಬ್ದ ಮಾತ್ರ ಹಗಲನ್ನೇ ಸೂಚಿಸುತ್ತದಲ್ಲವೇ? ಒಟ್ಟಿನಲ್ಲಿ ಅವರು ಮನುಷ್ಯ ಜಾತಿ ಆದಿಯಲ್ಲಿ ಹಗಲಿನ ಬೆಳಕನ್ನೇ ನೆಚ್ಚಿ ದುಡಿಯುತ್ತಿತ್ತೆಂದೂ ರಾತ್ರಿಯಲ್ಲಿ ಅದರ ಚಟುವಟಿಕೆ ಶೂನ್ಯಪ್ರಾಯವಾಗಿತ್ತೆಂದೂ ಆಮೇಲೆ ತನ್ನ ಬೆಳಕನ್ನು ತಾನೇ ಸೃಷ್ಟಿಸಿಕೊಂಡರೂ ಭಾಷೆಯ ಶಬ್ದಗಳು ಬದಲಾಗಲಿಲ್ಲ. ಅಂತೂ ಮನುಷ್ಯ ದಿವಾಚರ ಪ್ರಾಣಿ ಹೊರತು ರಾತ್ರಿಂಚರವಲ್ಲವೆಂದೂ ಅವರು ಸರಿಯಾಗಿ ತೀರ್ಮಾನಿಸುವುದು ಖಂಡಿತ.

ಮನುಷ್ಯನ ಬಹುತರ ಭಾಷೆಗಳೆಲ್ಲೆಲ್ಲ ಈ ಲಕ್ಷಣ ಗೋಚರಿಸುತ್ತದೆ. ಪಾರಸೀಕ ಭಾಷೆಯಲ್ಲಿ ದಿನಕ್ಕೆ ರೋಜ್ ಎನ್ನುವರು. "ರೋಜ್ ಆತಾ ಹೈ" ಎಂಬಲ್ಲಿ ಹಿಂದಿಯಲ್ಲಿ ಆ ಪದ ಸೇರಿದ್ದು ಕಾಣಿಸುತ್ತದೆ. ಆದರೆ ಈ ರೋಜ್ ಎಂಬುದು ಹಳೇ ಪರ್ಶಿಯನ್ ಭಾಷೆಯಲ್ಲಿ ರೌಚ = ದಿವಸ, ಪಗಲು ಎಂದಿದೆ. ಅದು ಸಂಸ್ಕೃತದ ರೋಚಸ್‌ಗೆ ಸಂಬಂಧಿಸಿದ್ದು. ರೋಚಸ್ = ಬೆಳಕು.

ಇಂಗ್ಲೀಷಿನ Day ಕೂಡಾ ಅಷ್ಟೇ. ಅದೂ ನಮ್ಮ "ದಿವಸ"ಕ್ಕೆ ದೂರದ ಸಂಬಂಧಿ. ಈಗ Day 24 ತಾಸಿನದು. ಮಧ್ಯರಾತ್ರಿಯಿಂದ ಗಣಿಸತಕ್ಕದ್ದು ಆಗಿದ್ದರೂ ಮೊದಲು ಅದು ಸೂರ್ಯೋದಯ ದಿಂದ ಸೂರ್ಯಾಸ್ತದವರೆಗಿನ ಅವಧಿಯನ್ನೇ ಸೂಚಿಸುತ್ತಿತ್ತು.

ದ್ರಾವಿಡ ಭಾಷೆಗಳಿಗೆ ಹೋದರೂ ಅಷ್ಟೆ. ಅಲ್ಲಿ ಹಗಲಿಗೆ ಅನ್ವಯಿಸುವ ಅನೇಕ ಪದಗಳು ಸೂರ್ಯನಿಗೂ ಕಾಲಕ್ಕೂ ಅನ್ವಯಿಸುತ್ತವೆ. ನಮ್ಮ ಹೊತ್ತು ಪದವನ್ನು ತೆಗೆದುಕೊಳ್ಳಿ. "ಹೊತ್ತು ಮೂಡಿತು", "ಹೊತ್ತು ನೆತ್ತಿಗೇರಿತು", "ಹೊತ್ತಾರೆ" ಇಲ್ಲಿ ಹೊತ್ತು ಮತ್ತು ಸೂರ್ಯ ಒಂದೇ. ಈ ಶಬ್ದ ತಮಿಳು, ಮಲೆಯಾಳಿ, ತುಳು ಮೊದಲಾದ ಎಲ್ಲ ದ್ರಾವಿಡ ಭಾಷೆಗಳಲ್ಲಿ (ಪೊಳ್ತು, ಪೋರ್ತು ಇತ್ಯಾದಿ ರೂಪಗಳಲ್ಲಿ)ದ್ದರೂ ಅವೆಲ್ಲ ಸೂರ್ಯನನ್ನೂ, ಕಾಲವನ್ನೂ ನಿರ್ದೇಶಿಸುತ್ತವೆ. ತಮಿಳಿನಲ್ಲಿ ನಾಳೆ ಹಗಲೂ ಹೌದು, ಹಗಲು ರಾತ್ರಿ ಸೇರಿದ ಅವಧಿಯೂ ಹೌದು, ಬೆಳಗು ಮುಂಜಾನೆಯೂ ಹೌದು. (ನಮ್ಮ ನಾಳೆ ಇದೇ ಪದದ ಸಂಬಂಧಿ).

ಕಾಲವೊಂದು ನಿರಂತರ ಪ್ರವಾಹವಾಗಿದ್ದರೂ ನಮ್ಮ ಸೌಕರ್ಯಕ್ಕೆ ನಾವು ಅದನ್ನು ವಿಭಾಗ ಮಾಡಲು ಉಪಯೋಗಿಸುವ ಕಲ್ಪನೆಗಳು ಕೌತುಕದವಾಗಿವೆ. ಗಳಿಗೆಯ ಬಗ್ಗೆ ಬಹಳ ಹಿಂದೆ ಹೇಳಿದ್ದೇನೆ. (ಪದಾರ್ಥ 30) ಗಂಟೆಗೆ ಅರವತ್ತು ನಿಮಿಷ ಅನ್ನುವಾಗ ನಾವು ಬಳಸುವ ಆಧಾರ ರೆಪ್ಪೆ ಬಡಿಯುವಷ್ಟು ಹೊತ್ತು ಎಂಬುದನ್ನು ಸಹಾ ಗಮನಿಸುವುದಿಲ್ಲ. ಮಿಷ್ ಎಂದರೆ ಕಣ್ಮುಚ್ಚು, ಮಿಟುಕಿಸು. ಋಗ್ವೇದದಲ್ಲಿ ನಿಮಿಷ್ ಎಂದರೆ ಕಣ್ಮುಚ್ಚು ಎಂದು. ಮಹಾ ಭಾರತ ಕಾಲಕ್ಕಾಗಲೇ ಅದು ಕಾಲದ ಒಂದು ಸೂಕ್ಷ್ಮ ಅಳತೆಯಾಗಿತ್ತು. ಈಗ ನಾವು "ನಿಮಿಷ" ಎನ್ನುವುದು ಒಮ್ಮೆ ಕಣ್ಮುಚ್ಚಿ ತೆರೆಯುವುದಕ್ಕೆ ಬೇಕಾದದ್ದಕ್ಕಿಂತ ತುಂಬಾ ಜಾಸ್ತಿ ಸಮಯಕ್ಕೆ ನಿಜ. ಆದರೆ ಕಾಲದ ಸಣ್ಣ ಖಂಡವನ್ನು ಸೂಚಿಸುವುದಕ್ಕೆ ಅದು ಆಧಾರ ಕಲ್ಪನೆಯಷ್ಟೆ. ಜ್ಯೋತಿಷಿಗಳು ಗಳಿಗೆಯ 60ರ ಅಂಶ ವನ್ನು ಸೂಚಿಸಲು ಪಲ (=ವಿಘಳಿಗೆ) ಎಂಬೊಂದು ಮಾನವನ್ನು ಬಳಸುತ್ತಾರೆ. ಈ ಶಬ್ದದ ಮೂಲ ಖಚಿತವಿಲ್ಲ. ಆದರೆ ಹಿಂದಿ ಮೊದಲಾದ ಪ್ರಾಕೃತ ಜನ್ಯ ಭಾಷೆಗಳಲ್ಲಿ "ಪಲಕ" ಎಂಬ ಶಬ್ದವೊಂದಿದೆ. ಅದರ ಅರ್ಥ ಕಣ್ಣ ರೆಪ್ಪೆ. ಸಂಸ್ಕೃತ ವಾಙ್ಮಯದಲ್ಲಿ ಸ್ವಲ್ಪ ತಡವಾಗಿ (ಗಣಿತಾಧ್ಯಾಯ) (-78ನೇ ಶತಮಾನ) ಪ್ರವೇಶಿಸಿದ ಈ ಪದ ದೇಶೀಯವಿರಬಹುದೆಂದು ನನ್ನ ಅನುಮಾನ. ಹಾಗಾದರೆ ಪಲಕವೂ ನಿಮಿಷಕ್ಕೆ ಸಮಾನವಾದ ಮೂಲ ಅರ್ಥವುಳ್ಳದ್ದಾಯಿತು. ಸಾಮಾನ್ಯ ವ್ಯವಹಾರದಲ್ಲಿ ನಾವು ಕಣ್ಮುಚ್ಚಿ ತೆರೆಯುವುದರೊಳಗೆ ಬರುತ್ತೇವೆ ಎನ್ನುವುದು (ಇಂಗ್ಲೀಷಿನಲ್ಲಿ I will come in a wink; wink= ರೆಪ್ಪೆ ಬಡಿ) ಮೇಲಿನ ಊಹೆಗಳನ್ನು ಬೆಂಬಲಿಸುತ್ತದೆ.

ಕ್ಷಣ ಎಂಬ ಇನ್ನೊಂದು ಪದವನ್ನೂ ನಾವು ಕಾಲದ ಸೂಕ್ಷ್ಮ ಭಾಗಕ್ಕೆ ಬಳಸುತ್ತೇವೆ. ಕಾಳಿದಾಸನ ರಘುವಂಶದಲ್ಲಿ ಈ ಪದ ಇದೆ. ಗಣಿತ ಶಾಸ್ತ್ರದಲ್ಲಿ ಇದನ್ನು ನಾಲ್ಕು ಮಿನಿಟು ಎಂದು ಕೆಲವೆಡೆ, ಒಂದು ಸೆಕೆಂಡಿನ 4/5 ಅಂಶ ಅಥವಾ ಅದಕ್ಕೂ ಸೂಕ್ಷ್ಮವಾದ 24/35 ಅಂಶ ಇತ್ಯಾದಿಯಾಗಿ ಇತರತ್ರ ನಿಗದಿಪಡಿಸಿದೆ. ಆದರೆ "ಕ್ಷಣ" ಎಂದರೆ ಮೂಲತಃ ಏನು? ಖಂಡಿತವಿಲ್ಲ. ಆದರೂ ಕ್ಷಿ ಎಂಬ ಸಂಸ್ಕೃತ ಧಾತು ಚಿಕ್ಕದು ಮಾಡು, ನಶಿಸುವಂತೆ ಮಾಡು ಇತ್ಯಾದಿ ಅರ್ಥ ಕೊಡುತ್ತಿದ್ದು ಅದರಿಂದ "ಕ್ಷಣ" ಹುಟ್ಟಿರಬೇಕೆಂದೊಂದು ಊಹೆ ಇದೆ. ಅರ್ಥಾತ್ ತುಂಡರಿಸಿದ್ದು, ಆದ್ದರಿಂದ ಚಿಕ್ಕದು ಕ್ಷಣ ಕಾಲದ ಒಂದು ಚಿಕ್ಕ ಅಂಶ ಎನ್ನೋಣ. ಇಂಗ್ಲೀಷಿನ Minute (ಮಿನಿಟ್) ಪದ ಕೂಡ ಹೀಗೆಯೇ ಹುಟ್ಟಿದ್ದು. ಲ್ಯಾಟಿನ್ನಿನಲ್ಲಿ Minutes ಎಂದರೆ ಕಮ್ಮಿ ಮಾಡಿದ್ದು. ಆದ್ದರಿಂದ ಚಿಕ್ಕದು ಎಂದಷ್ಟೇ ಅರ್ಥ. Minor, Minimum ಇತ್ಯಾದಿ ಪದಗಳೂ ಅಲ್ಲಿಂದಲೇ ಜನಿಸಿದವುಗಳು. ಹೀಗೆ ಕ್ಷಣ ಮತ್ತು ಮಿನಿಟು ಅರ್ಥ ಬಂಧುಗಳು. ಮೊದಲಿದ್ದದ್ದು ಒಟ್ಟಾರೆ ಸ್ಥೂಲ ಅರ್ಥ. ಶಾಸ್ತ್ರಕ್ಕಾಗುವಾಗ ಈ ಸ್ಥೂಲಕ್ಕೊಂದು ನಿಶ್ಚಿತ ಮೌಲ್ಯ ಕೊಡಲಾಗುತ್ತದೆ ಅಷ್ಟೇ. ಕನ್ನಡದಲ್ಲೂ ಅಷ್ಟೇ. ಸಂಸ್ಕೃತ ಅಥವಾ ಇಂಗ್ಲೀಷಿನಲ್ಲೂ ಅಷ್ಟೇ.

ಕೊನೆಗೂ ಹಿಂಗಿದ ದಾಹ



– ಸಂಜೀವ ಪ್ಯಾಟಿ

"ಗಾವಸ್ಕರನಿಲ್ಲದ ಕ್ರಿಕೆಟ್ ಶೇಕ್ಸ್‌ಪಿಯರ ನಿಲ್ಲದ ಇಂಗ್ಲೀಷ್ ಸಾಹಿತ್ಯದಂತೆ" ಸುನೀಲ ಗಾವಸ್ಕರ್ ಕ್ರಿಕೆಟ್ಟಿನಿಂದ ನಿವೃತ್ತರಾದ ನಂತರ ಕ್ರಿಕೆಟ್ ಪಂಡಿತನೊಬ್ಬ ಹೇಳಿದ ಮಾತುಗಳಿವು. ಕ್ರಿಕೆಟ್‌ನಲ್ಲಿಯ ಅವರ ಸಾಧನೆಯ ಮಹತ್ವವನ್ನರಿಯಲು ಈ ಎರಡು ಸಾಲುಗಳಿಗಿಂತ ಹೆಚ್ಚಿನ ವಿವರಣೆ ಅನಗತ್ಯ. ಹದಿನಾರು ವರ್ಷಗಳ ಕಾಲ ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಲೆಕ್ಕಕ್ಕೆ ಸಿಗದಷ್ಟು ದಾಖಲೆಗಳನ್ನು ಸೃಷ್ಟಿಸಿದ ಈ 'ರನ್ ಮಶಿನ್' ಕ್ರಿಕೆಟ್ಟಿಗೆ ವಿದಾಯ ಹೇಳುವುದರೊಂದಿಗೆ ಭಾರತೀಯ ಕ್ರಿಕೆಟ್ ರಂಗದ ಸುವರ್ಣ ಯುಗವೊಂದು ಸಮಾಪ್ತಗೊಂಡಿತು.

ಕಳೆದ ಮೂರು ವರ್ಷಗಳಿಂದಲೇ ಗಾವಸ್ಕರ್ ನಿವೃತ್ತಿಯ ಬಗ್ಗೆ ಯೋಚಿಸುತ್ತಿದ್ದರು. ಆದರೆ ಒತ್ತೈಪಿಗಳು ಮನವೊಲಿಸಿದ್ದರಿಂದ ಅದನ್ನು ಮುಂದೂಡುತ್ತ ಬಂದಿದ್ದರು. ಪಾಕಿಸ್ತಾನದ ವಿರುದ್ಧ ಕಳೆದ ಸರಣಿಯಲ್ಲಿ ಹತ್ತು ಸಾವಿರ ಓಟಗಳನ್ನು ಪೂರೈಸಿದಾಗ ಮಾತ್ರ ನಿರ್ಧಾರ ಬಲವಾಯಿತು. ಆದರೆ ತಕ್ಷಣ ಅವರು ನಿವೃತ್ತಿಯನ್ನು ಘೋಷಿಸಲಿಲ್ಲ. ಏಕೆಂದರೆ ಅವರ ಇನ್ನೂ ಎರಡು ಮಹದಾಸೆಗಳು ಬಾಕಿ ಉಳಿದಿದ್ದವು. ಮೊದಲನೆಯದು ಕ್ರಿಕೆಟ್ಟಿನ ಕಾಶಿ ಲಾರ್ಡ್ಸನಲ್ಲಿ ಶತಕ ಬಾರಿಸುವುದು. ಎರಡನೆಯದು ಸೀಮಿತ ಓವರುಗಳ ಅಂತರ್‍ರಾಷ್ಟ್ರೀಯ ಪಂದ್ಯದಲ್ಲಿ ಮೂರಂಕಿಯನ್ನು ತಲುಪುವುದು. ದೃಢ ನಿಶ್ಚಯದಿಂದ ಅವೆರಡನ್ನೂ ಸಾಧಿಸಿದ ನಂತರ ಅವರ ಓಟಗಳ ದಾಹ ಕೊನೆಗೂ ಇಂಗಿತು.

ನಾವು ಭಾರತೀಯರು ಬಹಳ ಸಲುಭವಾಗಿ ಯೋಜನೆಗಳನ್ನು ರೂಪಿಸುತ್ತೇವೆ. ಆದರೆ ಯೋಜಿತ ಗುರಿಯನ್ನು ತಲುಪಲೇಬೇಕೆಂಬ ಛಲದಿಂದ ಮುನ್ನುಗ್ಗಿ ಗುರಿ ಸಾಧಿಸುವವರು-ತೀರಾ ವಿರಳ. ಗಾವಸ್ಕರ್ ಎರಡನೇ ಗುಂಪಿಗೆ ಸೇರುತ್ತಾರೆ. ಇದಕ್ಕೆ ಅವರ ಹತ್ತು ಸಾವಿರ ಟೆಸ್ಟ್ ಓಟಗಳು, 34 ಶತಕಗಳಿಗಿಂತ ಹೆಚ್ಚಿನ

ಉದಾಹರಣೆ ಬೇಕಿಲ್ಲ. ಇಂಥ ಛಲ, ದೃಢ ನಿಶ್ಚಯಗಳಿಂದಲೇ ಒಂದೂವರೆ ದಶಕಕ್ಕೂ ಹೆಚ್ಚುಕಾಲ ಭಾರತೀಯ ಬ್ಯಾಟಿಂಗಿಗೆ ಬೆನ್ನೆಲುಬಾಗಿದ್ದ ಗಾವಸ್ಕರರ ನಿವೃತ್ತಿ ಭಾರತೀಯ ಕ್ರಿಕೆಟ್ಟಿಗೊಂದು ತುಂಬಲಾಗದ ನಷ್ಟ. ಅವರು ಓಟ ಗಳಿಸಲಿ ಬಿಡಲಿ, ಗಾವಸ್ಕರ್ ಕ್ರೀಸ್‌ನಲ್ಲಿದ್ದಾರೆ ಎಂದಾಗ ಇರುತ್ತಿದ್ದ ಮಾನಸಿಕ ಸ್ಥೈರ್ಯ ಭಾರತೀಯ ಬ್ಯಾಟಿಂಗಿಗೆ ಉತ್ತೇಜನ ನೀಡುತ್ತಿತ್ತು. ಅವರು ಔಟಾದರೆಂದರೆ ಭಾರತದ ಬ್ಯಾಟಿಂಗಿನ ಅರ್ಧ ಪ್ರತಿರೋಧ ಕೊನೆಗೊಂಡಂತೆಯೇ. 1971ರಲ್ಲಿ ವೆಸ್ಟ್ ಇಂಡೀಸ್‌ನಲ್ಲಿ ಅವರು ಟೆಸ್ಟ್ ರಂಗಕ್ಕೆ ಪದಾರ್ಪಣೆ ಮಾಡಿದಂದಿನಿಂದ ಅವರು ನಿವೃತ್ತರಾಗುವವರೆಗೆ ಪ್ರತಿ ಟೆಸ್ಟ್‌ನಲ್ಲಿ ಅವರೊಂದಿಗೆ ಆರಂಭಿಕ ಜೋಡಿಯಾಗಿ ಯಾರು ಕಣಕ್ಕಿಳಿಯುತ್ತಾರೆಂಬುದೊಂದೆ ಕ್ರಿಕೆಟ್ ಪ್ರೇಮಿಗಳಿಗಿದ್ದ ಕುತೂಹಲ. ಲೆಕ್ಕವಿಲ್ಲದಷ್ಟು ಜನ ಈ ಲಿಟಲ್ ಮಾಸ್ಟರ್‌ನೊಂದಿಗೆ ಕಣಕ್ಕಿಳಿದರು. ಆದರೆ ಯಶಸ್ವಿಯಾದವರು ತೀರ ಕಡಿಮೆ. ಹೀಗಾಗಿ ಈ ಸುದೀರ್ಘ ಅವಧಿಯಲ್ಲಿ ತಂಡಕ್ಕೆ ಭದ್ರ ಅಡಿಪಾಯ ಹಾಕಿಕೊಡುವ ಸಂಪೂರ್ಣ ಭಾರ ಗಾವಸ್ಕರರ ಮೇಲೆಯೇ ಬಿದ್ದಿತ್ತು. ಅದನ್ನವರು ಹೇಗೆ ನಿರ್ವಹಿಸಿದರೆಂಬುದು ಈಗ ಇತಿಹಾಸದ ಪುಟಕ್ಕೆ ಸೇರಿ ಹೋಗಿದೆ.

38 ವರ್ಷ ವಯಸ್ಸಿನ ಗಾವಸ್ಕರ್ ಇನ್ನೂ ಒಂದೆರಡು ವರ್ಷ ಅಂತರ್ರಾಷ್ಟ್ರೀಯ ಕ್ರಿಕೆಟ್ ರಂಗದಲ್ಲಿ ಆಡುವ ಸಾಮರ್ಥ್ಯ ಹೊಂದಿದ್ದರೆಂಬುದು ನಿರ್ವಿವಾದ. ಆದರೆ ಅವರಲ್ಲಿ ಮುಂದುವರಿಯಬೇಕೆನ್ನುವ ಪ್ರೇರೇತಣೆಯ ಸೆಲೆ ಬತ್ತಿಹೋಗಿತ್ತು. ಇದಕ್ಕೆ ಕಾರಣವಿಷ್ಟೆ ಅವರು ಸಾಧಿಸಬೇಕೆನ್ನುವುದು ಏನೂ ಉಳಿದಿರಲಿಲ್ಲ. ವೆಸ್ಟ್ ಇಂಡೀಸ್ ವಿರುದ್ಧ ತಮ್ಮ ಟೆಸ್ಟ್ ಜೀವನ ಆರಂಭಿಸಿದ ಅವರು ವಿಂಡೀಸ್ ವಿರುದ್ಧ ಸರಣಿಯ ನಂತರವೇ ನಿವೃತ್ತರಾಗಬೇಕೆಂಬುದು ಬಹಳ ಜನರ ಅಪೇಕ್ಷೆಯಾಗಿತ್ತು. ಗಾವಸ್ಕರ್ ತಂದೆ ಮನೋಹರ ಗಾವಸ್ಕರ್ ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದರೆ ಸುನೀಲರದು ಅಚಲ ನಿರ್ಧಾರ "ನಾನು ಇನ್ನೂ ಉತ್ತುಂಗದಲ್ಲಿರುವಾಗಲೇ ನಿರ್ಗಮಿಸಲು ಬಯಸುತ್ತೇನೆ. ಕ್ರಿಕೆಟ್ ಪ್ರೇಮಿಗಳು ನಿವೃತ್ತಿಯಾಗಿದ್ದೇಕೆ ಎಂದು ಕೇಳಬೇಕೇ ಹೊರತಾಗಿ ಇವನೇಕೆ ಇನ್ನೂ ನಿವೃತ್ತಿಯಾಗಿಲ್ಲ ಎಂದು ಕೇಳುವಂತಾಗಬಾರದು" ಎಂದು ಹೇಳಿ ತಮ್ಮ ನಿರ್ಣಯವನ್ನು ಸಮರ್ಥಿಸಿಕೊಂಡರು.

ತಮ್ಮ ಆಕರ್ಷಕ ಕವರ್‌ಡ್ರೈವ್, ಸ್ಕ್ವೇರ್ ಕಟ್‌ಗಳ ಮೂಲಕ ಕ್ರಿಕೆಟ್ ಪ್ರೇಮಿಗಳ ಮನಸೂರೆಗೊಂಡ ಗಾವಸ್ಕರ್ ಕೇವಲ ಒಬ್ಬ ಶ್ರೇಷ್ಠ ಬ್ಯಾಟ್ಸ್‌ಮನ್ ಅಲ್ಲ. ಕ್ರಿಕೆಟ್ ಆಟದ ಬಗ್ಗೆ ಅವರಿಗೆ ಆಳವಾದ ಜ್ಞಾನವಿದೆ. ಅಂತೆಯೇ ಅವರ ಅಭಿಪ್ರಾಯಗಳಿಗೆ ಬಹಳ ಬೆಲೆ. ಪ್ರತಿ ಹದಿನೈದು ದಿನಗಳಿಗೊಮ್ಮೆ ದೇಶದ ಪ್ರಮುಖ ಇಂಗ್ಲೀಷ್ ಪತ್ರಿಕೆಗಳಲ್ಲಿ ಪ್ರಕಟವಾಗುವ ಅವರ ಲೇಖನವನ್ನು ಓದುಲು ಲಕ್ಷಾವಧಿ ಜನ ಕಾತರದಿಂದ ಕಾಯುತ್ತಿರುತ್ತಾರೆ.

ಅವರ ಹದಿನಾರು ವರ್ಷಗಳ ಕ್ರಿಕೆಟ್ ಜೀವನವನ್ನು ಎರಡು ಇನ್ನಿಂಗ್ಸ್‌ಗಳಾಗಿ ವಿಂಗಡಿಸಿದರೆ, ಎಂಟು ವರ್ಷಗಳ ಮೊದಲ ಇನ್ನಿಂಗ್ಸ್‌ನ್ನು ಅವರು ಕೇವಲ ಬ್ಯಾಟಿಂಗಿಗೆ ಧಾರೆಯೆರೆದರೆಂದು ಹೇಳಬೇಕು. ಎರಡನೇ ಇನ್ನಿಂಗ್ಸ್‌ನಲ್ಲಿ ಬೆಳೆದು ಬಂದದ್ದು ಅವರಲ್ಲಿನ ನಾಯಕತ್ವದ ಗುಣ ಹಾಗೂ ಕ್ರಿಕೆಟ್ ಬಗೆಗಿನ ಆಳವಾದ ಜ್ಞಾನ. 1978ರಲ್ಲಿ ಗಾವಸ್ಕರ್ ಭಾರತೀಯ ಕ್ರಿಕೆಟ್ ತಂಡದ ನಾಯಕತ್ವ ವಹಿಸಿಕೊಂಡ ಮೇಲೆಯೇ ಭಾರತದ ಸಾಧನೆಯಲ್ಲಿ ಗಮನಾರ್ಹ ಬದಲಾವಣೆಯಾದುದು. ಸಾಕಷ್ಟು ಪ್ರತಿಭಾವಂತ ಆಟಗಾರರಿದ್ದರೂ ಸಾಂಘಿಕ ಪ್ರಯತ್ನವಿಲ್ಲದೆ ತೊಳಲಾಡುತ್ತಿದ್ದ ಭಾರತೀಯರಿಗೆ ವೃತ್ತಿನಿರತ ಆಟಗಾರನೆಂದರೆ ಹೇಗಿರಬೇಕೆಂದು ಮಾರ್ಗದರ್ಶನ ಮಾಡಿ, ಸಾಂಘಿಕ ಪ್ರಯತ್ನವಿದ್ದರೆ ಅದ್ಭುತಗಳನ್ನೇ ಸಾಧಿಸಬಹುದೆಂದು ಅವರು ತೋರಿಸಿಕೊಟ್ಟರು. ಕಳೆದ ಒಂದು ದಶಕದಲ್ಲಿನ ಭಾರತೀಯರ ಸಾಧನೆಯನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಭಾರತೀಯರಿಗೆ ಗೆಲ್ಲಲೂ ಬರುತ್ತದೆ ಅದೂ ಒಂದು ಬಲಿಷ್ಠ ತಂಡ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟ ಅವಧಿ ಇದು.

ಅವರು ನಾಯಕ ಪಟ್ಟಕ್ಕೇರುವ ಮುನ್ನ ಭಾರತೀಯ ಆಟಗಾರರಿಗೆ ಕ್ರಿಕೆಟ್ ಆಡುವುದು ಗೊತ್ತಿತ್ತೆ ಹೊರತು ಅದರಿಂದ ಪ್ರಯೋಜನ ಪಡೆಯುವುದು ಗೊತ್ತಿರಲಿಲ್ಲ. ಆದರೆ ಗಾವಸ್ಕರ್ ಬಂದ ನಂತರ ಪರಿಸ್ಥಿತಿ ಬದಲಾಯಿತು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯೊಡನೆ ಸತತ ಹೋರಾಟ ನಡೆಸಿ ಆಟಗಾರರಿಗೆ ಹೆಚ್ಚಿನ ಹಣ ದೊರೆಯುವಂತೆ ಮಾಡಿದರು. ಇದರಿಂದ ಕಳೆದ ಒಂದು

ಅಂಕಿ-ಸಂಖ್ಯಾ ಪ್ರಿಯರಿಗಾಗಿ....

1971ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ತಮ್ಮ ಮೊದಲ ಟೆಸ್ಟ್ ಸರಣಿಯಲ್ಲೇ 774 ಓಟ ಬಾರಿಸಿ ದಾಖಲೆ ಸ್ಥಾಪಿಸಿದ ಗಾವಸ್ಕರ್ ಒಟ್ಟು 125 ಟೆಸ್ಟ್‌ಗಳನ್ನಾಡಿದ್ದು, 214 ಇನ್ನಿಂಗ್ಸ್‌ಗಳಲ್ಲಿ 10122 ಓಟಗಳನ್ನು ಬಾರಿಸಿದ್ದಾರೆ. 16 ಬಾರಿ ಅಜೇಯರಾಗುಳಿದಿರುವ ಅವರ ಸರಾಸರಿ 51.12. ಅವರು ನಾಲ್ಕು ದ್ವಿಶತಕಗಳನ್ನೊಳಗೊಂಡಂತೆ ಒಟ್ಟು 34 ಟೆಸ್ಟ್ ಶತಕಗಳನ್ನು ಬಾರಿಸಿದ್ದಾರೆ. 13 ವೆಸ್ಟ್ ಇಂಡೀಸಿನ ಬಿರುಗಾಳಿ ಬೌಲಿಂಗಿನೆದುರು, ಎಂಟು ಆಸ್ಟ್ರೇಲಿಯದ ವಿರುದ್ಧ, ಇಂಗ್ಲೆಂಡ್ ವಿರುದ್ಧ ಐದು, ಪಾಕಿಸ್ತಾನ ವಿರುದ್ಧ ನಾಲ್ಕು ಹಾಗೂ ನ್ಯೂಝಿಲೆಂಡ್ ಮತ್ತು ಶ್ರೀಲಂಕಾ ವಿರುದ್ಧ ತಲಾ ಎರಡು. 1983-84ರ ವೆಸ್ಟ್ ಇಂಡೀಸ್ ವಿರುದ್ಧ ಸರಣಿಯ ಎರಡನೇ ಟೆಸ್ಟಿನಲ್ಲಿ ತಮ್ಮ 29ನೇ ಶತಕ ಬಾರಿಸಿ ಡಾನ್ ಬ್ರಾಡ್‌ಮನ್ನರ ವಿಶ್ವ ದಾಖಲೆ ಸರಿಗಟ್ಟಿದ್ದ ಅವರು ಅದೇ ಸರಣಿಯ ಕೊನೆಯ ಟೆಸ್ಟ್‌ನಲ್ಲಿ ಅಜೇಯ 236 ಓಟ ಬಾರಿಸಿ ಹೊಸ ವಿಶ್ವ ದಾಖಲೆ ಸ್ಥಾಪಿಸಿದ್ದಲ್ಲದೆ, ಭಾರತದ ಪರ ಟೆಸ್ಟ್‌ನಲ್ಲಿ ಒಂದು ಇನ್ನಿಂಗ್ಸಿನಲ್ಲಿ ಅತ್ಯಧಿಕ ವೈಯಕ್ತಿಕ ಮೊತ್ತ ಬಾರಿಸಿದ ದಾಖಲೆಯನ್ನು ತಮ್ಮದಾಗಿಸಿಕೊಂಡರು.

ಒಟ್ಟು 107 'ಒಂದು ದಿನದ ಪಂದ್ಯ'ಗಳಲ್ಲಿ ಅವರು 3062 ಓಟ ಗಳಿಸಿದ್ದಾರೆ. ನ್ಯೂಝಿಲಂಡ್ ವಿರುದ್ಧ ರಿಲಯನ್ಸ್ ಕಪ್‌ನಲ್ಲಿ ಅವರು ಬಾರಿಸಿದ ಅಜೇಯ 103 ಓಟಗಳು ಅವರ ವೈಯಕ್ತಿಕ ಅತ್ಯಧಿಕ ಮೊತ್ತ. ಇದು ಒಂದು ದಿನದ ಕ್ರಿಕೆಟ್‌ನಲ್ಲಿ ಅವರ ಏಕ ಮಾತ್ರ ಶತಕವೂ ಹೌದು. ಅವರು 27 ಅರ್ಧಶತಕಗಳನ್ನೂ ಗಳಿಸಿದ್ದಾರೆ.

47 ಟೆಸ್ಟ್ ಪಂದ್ಯಗಳಲ್ಲಿ ಭಾರತದ ನಾಯಕತ್ವ ವಹಿಸಿದ್ದ ಅವರು ಒಂಭತ್ತರಲ್ಲಿ ಗೆದ್ದು, ಎಂಟರಲ್ಲಿ ಸೋತಿದ್ದಾರೆ. ಉಳಿದ ಮೂವತ್ತು ಸಮ ಆಗಿವೆ.

ದಶಕದಲ್ಲಿ ಪ್ರತಿ ಟೆಸ್ಟಿಗೆ ಆಟಗಾರ ಪಡೆಯುತ್ತಿರುವ ಹಣ ಸುಮಾರು ನಾಲ್ಕುಪಟ್ಟು ಹೆಚ್ಚಿದೆ. ಇದರಿಂದ ಆಟಗಾರನಿಗೆ ದೊರೆತಿರುವ ಉತ್ತೇಜನ ಕಡಿಮೆಯೇನಲ್ಲ.

ವಿವಿಧ ಕಂಪನಿಗಳ ಉತ್ಪಾದನೆಗಳ ಜಾಹಿರಾತುಗಳಿಗೆ ಮಾಡೆಲ್ ಆಗಿ ತಮ್ಮ ಜನಪ್ರಿಯತೆಯನ್ನು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುವ ರೂಢಿ ಆರಂಭಿಸಿದವರು ಗಾವಸ್ಕರರೇ. ಇಂದು ಕೆಲ ಖ್ಯಾತ ಆಟಗಾರರು ಇಂಥ ಜಾಹಿರಾತುಗಳ ಮೂಲಕ ಲಕ್ಷಾಂತರ ಹಣ ಗಳಿಸುತ್ತಿದ್ದಾರೆ. ಹೀಗೆ ಕ್ರಿಕೆಟಿನ ಜನಪ್ರಿಯತೆಯನ್ನು ಬಳಸಿಕೊಳ್ಳುವಲ್ಲಿ ಗಾವಸ್ಕರರ ತೀರ ಇತ್ತೀಚಿನ ಸಾಧನೆಯೆಂದರೆ ಟಿ.ವಿ. ಸೀರಿಯಲ್ ಮತ್ತು ಅವರು ಪಾಲುದಾರರಾಗಿರುವ ಪ್ರೊಫೆಶನಲ್ ಮ್ಯಾನೇಜಮೆಂಟ್ ಗ್ರೂಪ್. ಇದು ಕ್ರಿಕೆಟ್ ರಂಗದಲ್ಲಿನ ಇತರ ಖ್ಯಾತ ಆಟಗಾರರಷ್ಟೆ ಅಲ್ಲ, ಬೇರೆ ಕ್ರೀಡೆಗಳಲ್ಲಿನ ಖ್ಯಾತನಾಮರಿಂದಲೂ ಲೇಖನಗಳನ್ನು ಬರೆಸಿ ಅದನ್ನು ಪ್ರಕಟಿಸುವ ಹೊಣೆ ಹೊತ್ತುಕೊಳ್ಳುತ್ತದೆ ಇದರಿಂದ ತಮ್ಮ ಲೇಖನಕ್ಕೆ ಎಷ್ಟು ಹಣ ಕೊಡಬೇಕೆಂಬುದನ್ನು ಪತ್ರಿಕೆಗಳೊಡನೆ ಮಾತನಾಡಿ ನಿರ್ಧರಿಸುವ ಜಂಜಡ ಬರೆಯುವವರಿಗಿರುವುದಿಲ್ಲ. ಗಾವಸ್ಕರ್ ತಮ್ಮ ಪ್ರತಿಯೊಂದು ಲೇಖನಕ್ಕೆ ಸುಮಾರು ಹತ್ತು ಸಾವಿರ ರೂಪಾಯಿ ಪಡೆಯುತ್ತಾರೆ. ಗಾವಸ್ಕರರನ್ನು ಅನುಸರಿಸಿ ಕಪಿಲ್ ದೇವ್ ಸಹ 'ದೇವ ಫೀಚರ್ಸ್' ಎಂಬ ಇಂಥದೊಂದು ಏಜನ್ಸಿ ಆರಂಭಿಸಿದ್ದು ರಿಲೈನ್ಸ್ ಕಪ್ ಕಾಲಕ್ಕೆ ಹಲವಾರು ಖ್ಯಾತ ಆಟಗಾರರಿಂದ ಲೇಖನ ಬರೆಸಿ ಪ್ರಕಟಿಸಿದರು. ಹೀಗೆ ಗಾವಸ್ಕರ್ ಮಾಡಿದ್ದನ್ನು ಉಳಿದ ಆಟಗಾರರು ಅನುಸರಿಸುತ್ತಾರೆ. ಗಾವಸ್ಕರ್ ಮಾಡಲಿಂಗ್ ಆರಂಭಿಸಿದ ಮೇಲೆಯೇ ಹಲವಾರು ಆಟಗಾರರಿಗೆ ಅದರತ್ತ ಗಮನಹರಿಯಿತು. ಇಂದು ಪ್ರತಿಯೊಬ್ಬ ಆಟಗಾರ ಪಂದ್ಯವಾಡುವಾಗ ಯಾವುದೇ ಒಂದು ವಿಶಿಷ್ಟ ಕಂಪನಿಯ ಬಟ್ಟೆ, ಬೂಟು ಧರಿಸಿ, ಪ್ರಚಾರ ನೀಡಿ ಹಣ ಪಡೆಯುತ್ತಾನೆ.

ಈ ಪರಿಪಾಠಕ್ಕೆ ಕಾರಣರಾದವರೂ ಗಾವಸ್ಕರರೆ ಹೀಗೆ ವಿವಿಧ ಕಂಪನಿಗಳಿಗೆ ಪ್ರಚಾರ ನೀಡಿದ್ದಕ್ಕಾಗಿ ನಿಯಂತ್ರಣ ಮಂಡಳಿ ದಂಡ ವಿಧಿಸಿದ್ದೂ ಉಂಟು. ಆದರೆ ಇತ್ತೀಚೆಗೆ ರಿಲೈನ್ಸ್ ಕಪ್ ಕಾಲಕ್ಕೆ ನಿಯಂತ್ರಣ ಮಂಡಳಿ ಪ್ರತಿಯೊಬ್ಬ ಆಟಗಾರನೂ ಕಡ್ಡಾಯವಾಗಿ ರಿಲೈನ್ಸ್ ಕಂಪನಿಯ ಜಾಹಿರಾತು ಧರಿಸಬೇಕೆಂದು ಒತ್ತಾಯ ಮಾಡಿದಾಗ ಗಾವಸ್ಕರ್

ಅವು ಒಂದೆ ಕೈಗೊಂಡ ಕ್ರಮಗಳನ್ನು ನೆನಪಿಸಿ ಬಾಯಿ ಮುಚ್ಚಿಸಿಬಿಟ್ಟರು. ಅವರು ತಮ್ಮ ಕ್ರಿಕೆಟ್ ಜೀವನದ ಕೊನೆಯ ವರ್ಷಗಳಲ್ಲಿ ಇಂಥ ಜಾಹಿರಾತುಗಳನ್ನೊಳಗೊಂಡು ಪ್ರತಿ ಟೆಸ್ಟಿಗೆ ಸುಮಾರು ಒಂದು ಲಕ್ಷ ರೂಪಾಯಿ ಪಡೆಯುತ್ತಿದ್ದರು. ಈಗ ಕಪಿಲ್‌ದೇವ್ ಸಹ ಅಷ್ಟೆ ಹಣವನ್ನು ಪಡೆಯುತ್ತಾರೆ. ಭಾರತೀಯ ಕ್ರಿಕೆಟ್‌ನಲ್ಲಿ ಹಣದ ಹೊಳೆಯೇ ಹರಿಯುತ್ತದೆ. ಇದರಿಂದ ರಾಷ್ಟ್ರದಲ್ಲಿ ಈ ಆಟದ ಅಭಿವೃದ್ಧಿಗೆ ಆದ ಸಹಾಯ ಕಡಿಮೆಯೇನಲ್ಲ.

ಆಟಗಾರರ ಅಭಿವೃದ್ಧಿಗೆ, ಕ್ರಿಕೆಟ್ಟಿನ ಅಭಿವೃದ್ಧಿಗೆ ಗಾವಸ್ಕರ್ ಸಾಕಷ್ಟು ಸಹಾಯ ಮಾಡಿದ್ದರೂ ವಿವಾದ ಅವರ ಬೆನ್ನು ಬಿಡಲಿಲ್ಲ. ಸಾಂಘಿಕ ಪ್ರಯತ್ನಕ್ಕೆ ನೆರವಾಗುವ ದಿಶೆಯಲ್ಲಿ "ಪಂದ್ಯಪುರುಷ" "ಸರಣಿ ಪುರುಷ" ಮುಂತಾದ ಬಹುಮಾನಗಳಿಂದ ಬಂದ ಹಣವನ್ನು ತಂಡದ ಸದಸ್ಯರೆಲ್ಲರೂ ಸಮವಾಗಿ ಹಂಚಿಕೊಳ್ಳುವ ರೂಢಿಗೆ ಅವರೇ ಹುಟ್ಟು ಹಾಕಿದ್ದರು. ಆದರೆ ಯಾವುದೋ ಪ್ರದರ್ಶನ ಪಂದ್ಯದಲ್ಲಿ ಹೀಗೆ ದೊರೆತ ಬಹುಮಾನದ ಹಣವನ್ನು ಹಂಚಿಕೊಳ್ಳುವಲ್ಲಿ ಕಪಿಲ್‌ದೇವ್ ಮತ್ತು ಗಾವಸ್ಕರ್ ನಡುವೆ ಉಂಟಾದ ವಿರಸ 'ಸ್ಟಾರ್‌ವಾರ್' ಎನ್ನುವಷ್ಟರ ಮಟ್ಟಿಗೆ ಹೋಯಿತು.

ಗಾವಸ್ಕರ್ ಕಪಿಲ್ ಕೈಕೆಳಗೆ ಆಡಲು ಸಿದ್ಧರಿಲ್ಲ ಎಂಬ ಊಹಾಪೋಹಗಳು ಎದ್ದಿದ್ದವು. ಚತುರಮತಿ ಗಾವಸ್ಕರ್ ಕ್ರಿಕೆಟ್ ಮೈದಾನದಲ್ಲಿನ ತಮ್ಮ ಸಾಧನೆಯ ಮೂಲಕ ಜನತೆ ಅದನ್ನೆಲ್ಲ ಮರೆಯುವಂತೆ ಮಾಡಲೆತ್ನಿಸಿ ತಕ್ಕ ಮಟ್ಟಿಗೆ ಯಶಸ್ವಿಯಾದರೂ ಅದು ಅವರ ಕ್ರಿಕೆಟ್ ಜೀವನದಲ್ಲಿನ ಒಂದು ಕಪ್ಪು ಚುಕ್ಕೆ.

ಗಾವಸ್ಕರ್ ಒಬ್ಬ ಉತ್ತಮ ವಾಗ್ಮಿ ಹಲವು ಪತ್ರಿಕೆಗಳ ಸಂಪಾದಕ. ಕಂಪನಿಗಳ ನಿರ್ದೇಶಕರೂ ಆಗಿದ್ದಾರೆ. ಒಂದು ಮರಾಠಿ ಚಲನಚಿತ್ರದಲ್ಲಿ ನಾಯಕನಾಗಿ ಮತ್ತು ಇತ್ತೀಚೆಗೆ ಹಿಂದಿ ಚಲನಚಿತ್ರವೊಂದರಲ್ಲಿ ಗೌರವನಟನಾಗಿ ಅಭಿನಯಿಸಿದ್ದುಂಟು. ಅವರ ತಂದೆ ಮನೋಹರರ ಮಾತಿನಲ್ಲಿ ಹೇಳುವುದಾದರೆ "ಸುನಿಲ ನಿಜಜೀವನದಲ್ಲಿ ಒಬ್ಬ ಒಳ್ಳೆಯ ಆಲ್‌ರೌಂಡರ್".

'ಪ್ರತಿಯೊಬ್ಬ ಶ್ರೇಷ್ಠ ಮನುಷ್ಯನ ಹಿಂದೆ ಒಬ್ಬ ಮಹಿಳೆಯಿರುತ್ತಾಳೆ' ಎಂಬ ಇಂಗ್ಲಿಷ್ ಗಾದೆಯೊಂದಿದೆಯಲ್ಲವೆ? ಇಲ್ಲಿ ಸುನೀಲರ ಬೆಂಗಾವಲಿಗಿರುವ ಮಹಿಳೆ ಅವರ ಪತ್ನಿ ಮಾರ್ಷನೀಲ್ 'ಪಮ್ಮಿ' ಎಂದೇ ಕರೆಯಲ್ಪಡುವ ಅವರು ಗಾವಸ್ಕರರಿಗೆ ಪ್ರತಿ ಕಾರ್ಯದಲ್ಲೂ ಸಹಾಯಮಾಡುತ್ತಾರೆ. ಮೂರು ವರ್ಷಗಳ ಹಿಂದೆಯೇ ಗಾವಸ್ಕರ್ ನಿವೃತ್ತಿಯ ಬಗ್ಗೆ ಆಲೋಚಿಸುತ್ತಿದ್ದರೆಂದು ಮೊದಲೇ ಹೇಳಿದೆಯಲ್ಲವೆ? ಆಗೆಲ್ಲ ಅವರ ಮನವೊಲಿಸಿ ಪ್ರೋತ್ಸಾಹಿಸಿ, ಮುಂದುವರಿಯುವಂತೆ ಪ್ರೇರೇಪಿಸಿದವರಲ್ಲಿ ಮಾರ್ಷನೀಲ್ ಪ್ರಮುಖರು.

ಆರಂಭಿಕ ಬ್ಯಾಟ್ಸಮನ್ನನಿಗೆ ತಾಳ್ಮೆಯೆಂಬುದು ಬಹು ಮುಖ್ಯವಾದ ಅಂಶ. ಗಾವಸ್ಕರರಲ್ಲಿ ಇದು ಸಾಕಷ್ಟಿದೆ. ಕೀರ್ತಿ ಅವರ ತಲೆಗೇರಿಲ್ಲ. ತಮ್ಮ ಅಭಿಮಾನಿಗಳೊಂದಿಗೆ ಬಹಳ ತಾಳ್ಮೆಯಿಂದ ವರ್ತಿಸುತ್ತಾರೆ. "ನನ್ನ ಮೇಲೆ ಅಭಿಮಾನವಿಟ್ಟಿರುವವರೊಂದಿಗೆ ನಾನು ಸೊಕ್ಕಿನಿಂದ ವರ್ತಿಸಿದರೆ ಅವರಿಗೆ ಭ್ರಮನಿರಸನವಾಗುತ್ತದಲ್ಲವೆ? ಆದ್ದರಿಂದ ನಾನು ಅವರೊಂದಿಗೆ ಬಹಳ ತಾಳ್ಮೆಯಿಂದ ವರ್ತಿಸುತ್ತೇನೆ. ನಾನು ನನ್ನನ್ನೇ ಅಭಿಮಾನಿಯ ಸ್ಥಾನದಲ್ಲಿರಿಸಿಕೊಂಡು ಅವಲೋಕಿಸಿದಾಗ ತಾಳ್ಮೆ ಇನ್ನಷ್ಟು ಹೆಚ್ಚಾಗುತ್ತದೆ" ಎಂದವರು ಹೇಳುತ್ತಾರೆ. ಆದರೆ ಎಷ್ಟೋಬಾರಿ ಈ ಆರಂಭಿಕ ಬ್ಯಾಟ್ಸಮನ್ನನ ತಾಳ್ಮೆ ಭಾರತೀಯರಿಗೆ ಮುಳುವಾದದ್ದುಂಟು. ಉದಾಹರಣೆಗೆ 1975ರ ವಿಶ್ವಕಪ್‌ನಲ್ಲಿ ಅವರು ಇಂಗ್ಲೆಂಡ್ ವಿರುದ್ಧ 60 ಓವರ್‌ಗಳನ್ನಾಡಿ 36 ಓಟ

ಗಾವಸ್ಕರ್ ದಾಖಲೆ ಪುಸ್ತಕದಲ್ಲಿನ ಬಹುತೇಕ ಎಲ್ಲ ಬ್ಯಾಟಿಂಗ್ ದಾಖಲೆಗಳನ್ನು ಮುರಿದಿದ್ದರೂ, ಕ್ರಿಕೆಟ್ಟಿನ ಕಾಶಿ ಲಾರ್ಡ್ಸ್‌ನಲ್ಲಿ ಶತಕ ಬಾರಿಸುವುದು ಅವರಿಗೆ ಸಾಧ್ಯವಾಗಿರಲಿಲ್ಲ. ಲಾರ್ಡ್ಸ್‌ನಲ್ಲಿ ಶತಕ ಬಾರಿಸಬೇಕೆಂಬುದು ಪ್ರತಿಯೊಬ್ಬ ಬ್ಯಾಟ್ಸ್‌ಮನ್ನನ ಮಹದಾಸೆ. ಅವರಲ್ಲಿ ಬಹಳಷ್ಟು ಜನ ತಮ್ಮ ಆಸೆಯನ್ನು ಪೂರೈಸಿಕೊಳ್ಳುತ್ತಾರೆ. ಆದರೆ ಕೊನೆಗೂ ಅವರು ಲಾರ್ಡ್ಸನ್ನು ಪಳಗಿಸಿದರು. ಟೆಸ್ಟ್ ಕ್ರಿಕೆಟ್ಟಿನಿಂದ ಹಿಂದೆ ಸರಿಯುವುದಾಗಿ ಪ್ರಕಟಿಸಿದ ಮರುದಿನವೇ ಲಾರ್ಡ್ಸ್‌ನಲ್ಲಿ ಅವರು ಅಮೋಘ 188 ಓಟ ಬಾರಿಸಿದರು.

ನಿವೃತ್ತಿಯಾಗಲು ಇದಕ್ಕಿಂತ ಒಳ್ಳೆಯ ಸಂದರ್ಭ ಉಂಟೆ?

ಗಳಿಸಿದ್ದು ನಂತರ 1986ರಲ್ಲಿ ಆಸ್ಟ್ರೇಲಿಯ ದಲ್ಲಿ ಟೆಸ್ಟ್ ಗೆಲುವು ಕೈಯಳತೆಯಲ್ಲಿದ್ದಾಗ ಅತಿ ಎಚ್ಚರಿಕೆಯ ಆಟವಾಡಿ ಆ ಸುವರ್ಣಾವಕಾಶ ವನ್ನು ಕಳೆದುಕೊಂಡದ್ದು.

ಒಬ್ಬ ಬ್ಯಾಟ್ಸ್‌ಮನ್‌ನಲ್ಲಿರಬೇಕಾದ ಇನ್ನೊಂದು ಮುಖ್ಯ ಗುಣವೆಂದರೆ ಟೈಮಿಂಗ್ ಅಂದರೆ ಸರಿಯಾದ ಸಮಯಕ್ಕೆ ಹೊಡೆತವನ್ನು ಬಾರಿಸುವ ಸಾಮರ್ಥ್ಯ ಸಹ ಒಂದು. ಗಾವಸ್ಕರ್ ತಮ್ಮಲ್ಲಿರುವ ಈ ಗುಣವನ್ನು ಕೇವಲ ಆಟದಲ್ಲಷ್ಟೆ ಅಲ್ಲ, ಉಳಿದೆಡೆಗಳಲ್ಲಿ ಯೂ ಬಳಸುತ್ತಾರೆ. ಉದಾಹರಣೆಗೆ, ಪಾಕಿಸ್ತಾನದ ವಿರುದ್ಧ ಸರಣಿ ಮುಗಿದ ನಂತರ ನಾಲ್ಕು ತಿಂಗಳುಗಳ ಕಾಲ ಭಾರತದಲ್ಲಿ ಕ್ರಿಕೆಟ್ಟಿಗೆ ಗೆರಜೆಯಿತ್ತು. ಆಗ ಅವರು ತಮ್ಮ ಟಿ.ವಿ. ಸೀರಿಯಲ್ 'ಸುನೀಲ ಗಾವಸ್ಕರ್ ಪ್ರೆಸೆಂಟ್ಸ್' ಹೊರತಂದು ಜನ ತಮ್ಮನ್ನು (ತಾತ್ಕಾಲಿಕವಾಗಿ ಯಾದರೂ) ಮರೆಯದಂತ ನೋಡಿಕೊಂಡರು. ನಿವೃತ್ತಿಯನ್ನು ಪ್ರಕಟಿಸು ವಾಗಲೂ ಅವರು ಈ ಟೈಮಿಂಗನ್ನು ಕೈಬಿಡ ಲಿಲ್ಲ. ಹತ್ತು ಸಾವಿರ ಟೆಸ್ಟ್ ಓಟಗಳನ್ನು ಪೂರೈಸಿದಾಗಲೇ ಅವರು ನಿವೃತ್ತಿಯ ನಿರ್ಧಾರ ಕೈಗೊಂಡಿದ್ದರು. ಆದರೆ ತಕ್ಷಣ ಪ್ರಕಟಿಸಲಿಲ್ಲ. ಪ್ರಕಟಿಸಿದ್ದರೆ ಎಂ.ಸಿ.ಸಿ. ಮತ್ತು ವಿಶ್ವ ಎಲೆವೆನ್ ನಡುವೆ ಲಾರ್ಡ್ಸ್‌ನಲ್ಲಿ ನಡೆದ ದ್ವಿಶತಮಾನೋತ್ಸವ ಪಂದ್ಯದಲ್ಲಿ ಆಡಿ ಶತಕ ಗಳಿಸಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಆ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ತಾವು ಶತಕದ ಗಡಿಯಲ್ಲಿದ್ದಾಗ ಜಗತ್ತಿನ ಕ್ರಿಕೆಟ್ ಪ್ರೇಮಿಗಳ ಲಕ್ಷವೆಲ್ಲ ತಮ್ಮ ಮೇಲೆ ಕೇಂದ್ರೀ ಕೃತವಾಗಿದ್ದಾಗ ನಿವೃತ್ತಿಯನ್ನು ಪ್ರಕಟಿಸಿ ತಮ್ಮ ನಿವೃತ್ತಿ ಯಾವಾಗಲೂ ಅವರ ಮನದಲ್ಲುಳಿ ಯುವಂತೆ ನೋಡಿಕೊಂಡರು. ನಂತರ ರಿಲೈನ್ಸ್ ಕಪ್‌ನಲ್ಲಿ ಜ್ವರದಿಂದ ಬಳಲುತ್ತಿದ್ದರೂ ಕೇವಲ 88 ಎಸೆತಗಳಲ್ಲಿ ಶತಕ ಬಾರಿಸಿ, ನಿರ್ದಿಷ್ಟ ಗುರಿ ತಲುಪಲೇ ಬೇಕೆನ್ನುವ ತಮ್ಮ ಛಲ ಎಂಥದೆಂದು ಮತ್ತೊಮ್ಮೆ ತೋರಿಸಿಕೊಟ್ಟು ಹೊರನಡೆದರು.

ಗಾವಸ್ಕರ್ ಕ್ರಿಕೆಟ್‌ನಿಂದ ಸಾಕಷ್ಟು ಲಾಭ ಪಡೆದುಕೊಂಡಿದ್ದಾರೆ. ಅವರು ಕ್ರಿಕೆಟ್‌ನಿಂದ ಲಕ್ಷಾಧೀಶನಾದ ಪ್ರಥಮ ಆಟಗಾರ. ಆದರೆ ಅವರು ಕ್ರಿಕೆಟ್ಟಿಗೆ ನೀಡಿದುದು ಅಳೆಯಲು ಬಾರದಷ್ಟು .ಅವರ ದೃಢನಿರ್ಧಾರ, ಛಲ, ನಾಯಕತ್ವದ ಗುಣ ಕಳೆದ ಒಂದೂವರೆ ದಶಕದಲ್ಲಿ ಭಾರತೀಯ ಕ್ರಿಕೆಟ್ಟಿನ ಬೆಳವಣಿಗೆಗೆ ಬಹಳ ಸಹಾಯ ಮಾಡಿದೆ. ದಾಖಲೆಗಳನ್ನು ಸೃಷ್ಟಿಸುವ ಅವರ ಶೈಲಿ ಇತರ ಆಟಗಾರರಿಗೆ ಸಾಕಷ್ಟು ಪ್ರೇರಣೆ ನೀಡಿದೆ ಎಂಬುದು ನಿರ್ವಿವಾದದ ಮಾತು. ಅವರ ದಾಖಲೆ ಗಳನ್ನು ಮುಂದೆ ಯಾರಾದರೂ ಮುರಿಯ ಬಹುದು. ಆದರೆ ದಾಖಲೆ ಮುರಿದಾಕ್ಷಣ ಅವನು 'ಗಾವಸ್ಕರ್' ಆಗಲು ಸಾಧ್ಯವಿಲ್ಲವಲ್ಲ... ●

1948-49ರಲ್ಲಿ ಡಾ|| ಜಿ.ಎಂ. ಗುಪ್ತ ಎಂಬ ಯುವ ಸಂಶೋಧಕರು ಆಧುನಿಕ ವಿಜ್ಞಾನದ ಪಿತಾಮಹರೆಂದು ಪ್ರಸಿದ್ಧರಾದ ಡಾ|| ಐನ್‌ಸ್ಟೈನ್‌ರನ್ನು ಪ್ರಿನ್ಸ್‌ಟೌನಿನ ಉನ್ನತಾಧ್ಯಯನ ಸಂಸ್ಥೆ ಯಲ್ಲಿ ಭೇಟಿಯಾದಾಗ ಅವರನ್ನು ಇಂಗ್ಲೀಷ್ ಬದಲಾಗಿ ಸಂಸ್ಕೃತದಲ್ಲಿ ಮಾತಾಡಿ ಸ್ವಾಗತಿಸಿದರು ಆ ಮಹಾ ವಿಜ್ಞಾನಿ. ಆದರೆ ಸಂಸ್ಕೃತ ತಮಗೆ ಬರುವುದಿಲ್ಲೆಂಬ ಡಾ|| ಗುಪ್ತರ ಲಜ್ಜಿತ ಉತ್ತರದಿಂದ ಐನ್‌ಸ್ಟೈನ್‌ರಿಗೆ ಬಹಳ ಆಶ್ಚರ್ಯವಾಯಿತು. ಅವರು "ನೀವು ಹಿಂದೂ ದರ್ಶನದ ತವರಾದ ಭಾರತದಿಂದ ಬಂದವರು. ಆದರೂ ನಿಮಗೆ ಆ ಭಾಷೆಯನ್ನು ಕಲಿಯುವ ಕಳಕಳಿಯಿಲ್ಲವಲ್ಲ?! ನನ್ನೊಡನೆ ಬನ್ನಿ. ನನ್ನ ಗ್ರಂಥಾಲಯವನ್ನು ನೋಡಿ. ಸಾಕಷ್ಟು ಸಂಸ್ಕೃತ ಗ್ರಂಥಗಳಿವೆ ನನ್ನಲ್ಲಿ. ವೈಜ್ಞಾನಿಕ ಪ್ರಯೋಗಗಳನ್ನು ನಡೆಸುವಲ್ಲಿ ಮತ್ತು ನನ್ನ ಸಿದ್ಧಾಂತಗಳನ್ನು ರೂಪಿಸುವಲ್ಲಿ ನನಗೆ ಗೀತೆಯೇ ಮೂಲಸ್ಫೂರ್ತಿ. ಅದುವೇ ನನಗೆ ಮಾರ್ಗದರ್ಶಕ ವಾಗಿರುವುದು" ಎಂದರು.

'ಕಲ್ಯಾಣ ಕಲ್ಪತರು' ದಿಂದ

ಕನ್ನಡಕ್ಕೆ: ಡಾ|| ಹು.ಲ. ಚಂದ್ರಶೇಖರ.

ನವಿಲೇ... ನವಿಲೇ......

ಒಂದು ಹೃದ್ಯ ಘಟನೆ



– ರಾಜೀವ ಅಜ್ಜೀಬಳ

ಶರದ್ ಋತುವಿನಲ್ಲಿ ಒಂದು ದಿನ ಅಡಿಕೆಯ ತೋಟದಲ್ಲಿ ಯಾವುದೋ ಕೆಲಸದಲ್ಲಿ ನಿರತರಾಗಿದ ಹೊತ್ತು. ನಾವು ತೋಟದ ಅಂಚಿಗೆ ಬಂದಿದ್ದೆವು. ಅಲ್ಲೇ ಮೇಲ್ಭಾಗದಲ್ಲಿದ್ದ ಬಿದಿರು ಮೆಳೆಯ ಆಚೀಚೆ ಹಬ್ಬಿದ ಗುರಗೇಪೊದೆಯಿಂದ ಏನೋ ಬರಬರನೇ ಓಡಿಹೋದಂತಾಯಿತು . ಅದೇನೆಂದು ನೋಡಲು ಆಳು ತಿಮ್ಮ ಓಡಿದ ಹಾಗೆಯೆ ನನ್ನನ್ನು ಅವ ಬಿಂದೆಂಬಂತೆ "ಹ್ವಾಯ್, ಇಲ್ಲಿನ್ನಿ" ಎಂಬು ಕರೆದ. ನಾನೂ ಏನೋ ವಿಶೇಷವಿರಬೇಕೆಂದು ಲಗುಬಗೆಯಿಂದ ಆ ಕಡೆ ಹೋದೆ. ಅಲ್ಲಿ ನಮಗೆ ಕಂಡದ್ದು ಎರಡು ಸುಂದರ ನವಿಲು ಗಳು ಸಾವಿರ ಕಣ್ಗಳ ಗರಿ ಗೊಂಚಲು ಹೊತ್ತು ಒಂದು ಗಂಡು ಹಾಗೂ ಇನ್ನೊಂದು ಹೆಣ್ಣು. ಕಾಲುವೆಯಾಚೆ ಮೂರು ಆಳೆತ್ತರದ ದರೆಯ ಕಡೆ ಓಡುತ್ತ ನಾವು ಹತ್ತಿರ ಬಂದದ್ದು ಗೊತ್ತಾಗಿಯೋ ಏನೋ ಹೆದರಿ ಒಮ್ಮೆಲೇ ರೆಕ್ಕೆ ಬಿಚ್ಚಿ ಭರ್ರನೇ ದರೆಯ ಮೇಲಕ್ಕೆ ನೆಗೆದು ಮರೆಯಾಗಿ ಬಿಟ್ಟವು. ಅರಣ್ಯ ನಾಶದಿಂದಾಗಿ ಈಗೀಗ ನವಿಲುಗಳನ್ನು ಕಾಣುವುದೇ ದುಸ್ತರವಾದ್ದರಿಂದ ಅವು ಹಾರಿಹೋದ ಕಡೆ ಇನ್ನೂ ನೋಡುತ್ತಲೇ ಇದ್ದೆ. ಈಗ ಹತ್ತು ಹದಿನೈದು ವರ್ಷಗಳ ಒಂದೆಲ್ಲ ವರ್ಷಾಗಮನದ ಹೊತ್ತಿಗೆ, ಆಕಾಶದಲ್ಲಿ ಹನಿದುಂಬಿದ ಮೋಡ ಗಳನ್ನು ಕಂಡಾಗಲೆಲ್ಲ ಗುಡ್ಡಗಳ ಮೇಲೆ ನವಿಲುಗಳು ಗುಂಪು ಗುಂಪಾಗಿ ಕೇಕೆ ಹಾಕುತ್ತ ಕುಣಿಯುವ ಅನುಪಮ ದೃಶ್ಯ ಕಾಣಸಿಗುತ್ತಿತ್ತು. ನಾನು ಅದೇ ನೆನಪಲ್ಲೇ ಮುಳುಗಿದ್ದೆ.

ತಿಮ್ಮ ಮತ್ತೆ ಕರೆದ. "ಅವು ಇಲ್ಯಾಕೆ ಬಂದದ್ದು ಗೊತ್ತಾಯ್ತಾ ನಿಮ್ಗೆ?" ನಾನು ಇಲ್ಲವೆಂಬಂತೆ ತಲೆ ಅಲ್ಲಾಡಿಸಿದೆ. "ಇಕಾ ಇಲ್ನೋಡಿ, ತೋರಿಸ್ತೀನಿ" ಎನ್ನುತ್ತ ಆತ ಜಾಗರೂಕನಾಗಿ ಬಗ್ಗಿ ಒಂದು ಗುರಗೇ ಪೊದೆಯೊಳಗೆ ತೋಳು ಚಾಚಿ ಎರಡು ತುಸು ದೊಡ್ಡದಾದ ಕೋಳಿಮೊಟ್ಟೆಗಳನ್ನು ಹೊರತೆಗೆದ. "ಇವು ನವಿಲಿನ ಮೊಟ್ಟೆಗಳು. ಅದ್ಕೇ ಅವು ಇಲ್ಲಿಗೆ ಬಂದಿದ್ದು" ಎಂದ ಆತನ ಮುಖದಲ್ಲಿ ದಿಗ್ವಿಜಯದ ಭಾವ ಲಾಸ್ಯವಾಡುತ್ತಿತ್ತು. ಈ ಮೊಟ್ಟೆಗಳನ್ನೇನಾದರೂ ಗತಿ ಕಾಣಿಸಿಯಾ

ನೆಂದು "ಅಲ್ಲೇ ಇಟ್ಬಿಡೋ, ಅವ್ಕೆಯಾಕೆ ತೊಂದ್ರೆ ಕೊಡ್ತಿ? ಪಾಪ, ಮಕ್ಳು ಮರಿ ಆಸೆ ಯಾರಿಗಿರೋಲ್ಲ?" ಎಂದೆ.

ಯಾಕೋ ತಿಮ್ಮನ ಮುಖ ನಿರಾಶೆಯಿಂದ ಚಿಕ್ಕದಾಯಿತು. ಅವುಗಳನ್ನು ಸ್ವಸ್ಥಾನದಲ್ಲಿಯೆ ಇಟ್ಟು ಎದ್ದು ಬಂದ. ಅವನ ಮನಸ್ಸಿನಲ್ಲೇನಿತ್ತೋ ನನಗೆ ತಿಳಿಯಲಿಲ್ಲ.

ಅದಾದ ಎರಡು ದಿನದ ನಂತರ ಮತ್ತೆ ತೋಟದ ಕಡೆ ಹೋದಾಗ, ಹಿಂದೆ ಕಂಡ ಸ್ಥಳದಲ್ಲೇ ನವಿಲುಗಳು ಹ್ಯಾಂ ಹೋ ಹ್ಯಾಂ ಹೋ ಎಂದು ಕೂಗುತ್ತಿದ್ದುದು ಕೇಳಿಬಂತು. ಅವು ಅಲ್ಲೇ ಆಚೆ ಈಚೆ ಓಡಾಡುತ್ತಿದ್ದವು. ಒಂದು ಬಾರಿ ನನ್ನನ್ನು ಕಂಡು ದೂರ ಓಡಿದಂತೆ ಕಂಡರೂ, ಅವು ಅಲ್ಲೇ ಸುತ್ತಾಡುತ್ತಿರುವುದು ಕಂಡುಬಂತು. ಅವುಗಳಿಗೆ ಕಾಣದಂತೆ ನಿಂತು ಆ ಸುಂದರ ಪಕ್ಷಿಗಳ ಚಲನವಲನಗಳನ್ನು ಗಮನಿಸುತ್ತಲೇ ಇದ್ದೆ.

ಒಂದು ವಾರದ ನಂತರ ತಿಮ್ಮ ಮನೆಗೆಲಸಕ್ಕೆ ಬಂದಾಗ ಏನೋ ಸಂಶಯ ಬಂದು, "ಆ ದಿನ ತೋರ್ಸಿದ್ದೆಯಲ್ಲಾ, ಆ ನವಿಲಿನ ಮೊಟ್ಟೆಗಳನ್ನು ಒಯ್ದಿದ್ದಿಯಾ?" ಎಂದೆ. ನನ್ನ ಮನಸ್ಸಿನ ತುಂಬ ಆದಿನ ಏನನ್ನೋ ಹುಡುಕುವಂತೆ ಆಚೀಚೆ ಓಡಾಡುವ ಆ ನವಿಲು ಜೋಡಿಯಿತ್ತು "ಇಲ್ಲಾ... ಒಯ್ದಿಲ್ಲ..." ಎಂದನಾತ ಸಣ್ಣ ಧ್ವನಿಯಲ್ಲಿ.

ಕೋಳಿಮೊಟ್ಟೆಗಳಂತೆ ನವಿಲಿನ ಮೊಟ್ಟೆಗಳನ್ನು ಹುಡುಕಿ ತಿನ್ನುವವರಿದ್ದಾರೆ ಎನ್ನುವುದು ನನಗೆ ಗೊತ್ತಿತ್ತು. ಅದೇನು ಸುಬ್ಬ ಎಂಬಾತ ಎಲ್ಲಿಯೇ ನವಿಲು ಕಾಣಲಿ ಅವುಗಳನ್ನು ಬೆಂಬತ್ತಿ ಕಲ್ಲು ಹೊಡೆದು ಸಾಯಿಸುತ್ತಿದ್ದ. "ನವಿಲಿನ ಮಾಂಸ ಅಂದ್ರೆ ಅವ ಸಾಯ್ತಾನೆ" ಎನ್ನುತ್ತಾರೆ ಅವನ ಊರಿನ ಮಂದಿ. ತಿಮ್ಮನೂ ಅಂಥವನೇನೋ ಎಂದು ವಿಚಾರಿಸಿದೆ. ಆತ "ಇಲ್ಲ" ಎಂದದ್ದು ನನಗೆ ಸಮಾಧಾನ ನೀಡಿತು. ಆದರೂ ಮತ್ತೆಲ್ಲಾದರೂ ನವಿಲಿನ ಮಾಂಸಕ್ಕೆ ಬಾಯಿ ಬಿಟ್ಟೀಯಾ? ಎಂದೆ "ಹಾಂಗೇನಿಲ್ರೀ ನಮ್ಮಂಗೇ ಅವ್ಕೂ ಮಕ್ಳೂ ಮರಿ ಆಸೆ ಇರ್ತವೆ ಅಂದಿದ್ರಲ್ಲ ಆದಿನ ಎಂದಾಗ ನನ್ನ ಮಾತು ಆತನ ಮೇಲೆ ಪರಿಣಾಮ ಬೀರಿದೆ ಎನ್ನಿಸಿ ಸಂತಸವಾಯಿತು.

ಇದಾಗಿ ಸುಮಾರು ಒಂದೂವರೆ ತಿಂಗಳ ನಂತರ ಒಂದು ದಿನ ಸಂಜೆ ಹೊತ್ತಿಗೆ ಕೈಲೊಂದು ಬುಟ್ಟಿ ಹಿಡಿದು ತಿಮ್ಮ ಎದುರಾದ "ಏನೋ ಅದು?" ಎಂದೆ. "ಓ ಓ" ಎಂದು ಬಿಳಿ ನಗೆ ಸೂಸಿದ.

"ಆ ದಿನ ನಿಮ್ಹತ್ರ ಒಂದು ಸುಳ್ಳು ಹೇಳಿದ್ದೆ" ಎಂದ ಸಂಕೋಚದಿಂದ. ನನಗೆ ಅದೇನೆಂದು ನೆನಪಾಗಲಿಲ್ಲ. "ಏನೋ ಅದು?" ಎಂದೆ. ತೋಟದ ತಾವ ಸಿಕ್ಕಿತ್ತಲ್ಲಾ ಆ ನವಿಲಿನ ಮೊಟ್ಟೆ ಒಯ್ದಿದ್ದೆ. ಆದ್ರೆ ಅದ್ನ ಬೇಯ್ಸಿ ತಿನ್ದೇ, ಕೋಳಿ ಹತ್ರ ಕಾವು ಕೊಡಿಸಿ ಮರಿ ಮಾಡಿಸಿದೆ ಅವೆ ಇವು" ಎನ್ನುತ್ತ ಬಿದಿರಿನ ಬುಟ್ಟಿಯ ಮುಚ್ಚಳ ತೆಗೆದು ಕೋಳಿಮರಿಗಿಂತ ತುಸು ದೊಡ್ಡದು. ಮಿರಿಮಿರಿ ಮಿಂಚುವ ತಿಳಿ ನೀಲಿ ಮೈ, ಅದರ ತುಂಬ ಬಿಳಿ ಚುಕ್ಕೆಗಳು. ಸಣ್ಣದಾಗಿ ಸಿಳ್ಳು ಹೊಡೆದಂತಹ ಕೂಗು, ಆ ಪುಟ್ಟ



ನವಿಲು ಮರಿಗಳನ್ನು ನೋಡಿ ನಿಜಕ್ಕೂ ಅಚ್ಚರಿ ಹಾಗೂ ಸಂತಸವುಂಟಾಯಿತು.

"ಒಂದ್ಮಾತು ಕೇಳ್ತೀನಿ, ಇವ್ನ ನೀವೇ ಸಾಕ್ಕಳ್ರೀ ಮನೆ ಆಚೆ ಈಚೆ ಓಡಾಡ್ತಾ ಚೆಂದಾಕಿರ್ತವೆ" ಎಂದ. ತಿಮ್ಮ ಹೇಳಲೋ ಬೇಡವೋ ಎಂಬಂತೆ ಈ ಸುಂದರ ಪಕ್ಷಿಗಳನ್ನು ಸಾಕಿದರೂ ಸಾಕಬಹುದು ಎಂದೆನಿಸಿತು ಒಂದು ಕ್ಷಣ. ಆದರೂ ಮರುಕ್ಷಣದಲ್ಲೇ ಅವು ಎಲ್ಲಿರಬೇಕೋ ಅಲ್ಲಿದ್ದರೇ ಚೆನ್ನ ಎಂದೆನಿಸಿತು.

"ನಮ್ಮ ಬಿಡಾರದಲ್ಲೇ ಇದ್ರೆ ನಾನಿಲ್ದೇ ಇದ್ದ ಪೊತ್ನಲ್ಲಿ ನಾಯಿ ಗೀಯಿ ಹಿಡೀಬಹ್ದು ಅಥವಾ ಅದ್ನ ಹೊಡ್ದು ಸಾಯ್ಸಿ ತಿನ್ನೋಮಂದೀನೂ ಇದಾರ್ರೀ- ಅದ್ಕೇ ನಿಮ್ಮಲ್ಲಿಗೆ ತಂದೆ" ಎಂದ. ಆತನ ಮುಖದ ತುಂಬ ವಿಷಾದವೇ ತುಂಬಿತ್ತು.

"ಒಂದ್ಕೆಲಸ ಮಾಡೋಣ, ಇಲ್ಲೂ ಅಪಾಯ ಇಲ್ಲ ಅನ್ನೋಕಾಗಲ್ಲ. ಆ ತಾಯಿ ನವಿಲು ಓಡಾಡೋ ಜಾಗ ಇದೆಯಲ್ಲ- ನಮ್ಮ ತೋಟದ ತುದಿ ಅಲ್ಲೇ ಬಿಟ್ಟು ಬರೋಣ. ಹ್ಯಾಗೆ?" ಎಂದೆ. ತಿಮ್ಮ ಮರುಮಾತಿಲ್ಲದೇ ಒಪ್ಪಿದ. ಇಬ್ಬರೂ ತೋಟದ ತುದಿಗೆ ಹೋಗಿ ಅವುಗಳನ್ನು ಬುಟ್ಟಿಯಿಂದ ಹೊರತೆಗೆದು ಮೆಲ್ಲನೆ ಗುರಗೇ ಪೊದೆಯ ಬಳಿಬಿಟ್ಟೆವು. ಆಶ್ಚರ್ಯವೆಂದರೆ ಅವು ನಮ್ಮನ್ನು ಬಿಟ್ಟು ಸ್ವಲ್ಪವೂ ಆಚೆ ಈಚೆ ಕದಲಲಿಲ್ಲ. ನಮ್ಮಿಂದ ದೂರವಾಗಲು ಮನಸ್ಸಿಲ್ಲದವರಂತೇ ಶೀಟಿ ಹೊಡೆಯುತ್ತ ಅವು ನಮ್ಮ ಕಾಲು ಸುತ್ತುತ್ತಿದ್ದವು. ಸುಮಾರು ಅದೇ ಹೊತ್ತಿಗೆ ಹೆಣ್ಣು ನವಿಲೊಂದು ದರೆಯ ಅಂಚಿನಗುಂಟ ಓಡಾಡುವುದು ಕಾಣಿಸಿತು. ಬಹುಶಃ ಈ ಹಿಂದೆ ಕಳೆದುಹೋದ ತನ್ನ ಮೊಟ್ಟೆಗಳಿಗಾಗಿ ಇನ್ನೂ ಹುಡುಕಾಡುತ್ತಿತ್ತೋ ಏನೋ. ಈ ಮರಿಗಳು ತನ್ನವೇ ಎಂದು ಗುರುತಿಸಿ ತನ್ನೊಂದಿಗೆ ಒಯ್ಯಬಹುದೇ ಎಂದು ವಿಚಾರ ಮಾಡುತ್ತಲೇ ನಾವಿಬ್ಬರೂ ಇದ್ದಿಲ್ಲದೇ ತೋಟದಲ್ಲೇ ಮರೆಯಾದೆವು. ಸ್ವಲ್ಪ ಹೊತ್ತು ಬಿಟ್ಟು ಏನಾಯಿತೆಂದು ನೋಡಲು ಬಂದರೆ ಆ ಮರಿಗಳು ನಾವು ಬಂದ ಸದ್ದಿಗೆ ನಮ್ಮ ಬಳಿಗೆ ಓಡಿ ಬಂದವು. ತಾಯಿಗೆ ಕಾಣುವಂತೆ ಅವು ಓಡಾಡುತ್ತಿದ್ದರೆ ಒಂದಲ್ಲ ಒಂದು ದಿನ ಮರಿಗಳನ್ನು ಗುರುತಿಸಿ ತನ್ನೊಂದಿಗೆ ಸೇರಿಸಿಕೊಳ್ಳುತ್ತವೆ ಎಂಬ ಭರವಸೆಯೊಂದಿಗೆ ನಾವು ಮತ್ತೆ ಅವುಗಳ ಕಣ್ಣು ತಪ್ಪಿಸಿ ಮರಳಿ ಬಂದೆವು. ಆ ಹತಾಶ ತಾಯಿಯನ್ನು ನೆನೆದು ಮನಸ್ಸು ಮಮ್ಮಲ ಮರುಗಿತು.

ಮರುದಿನ ತೋಟಕ್ಕೆ ಹೋದಾಗಲೂ ಆ ಮರಿಗಳು ಆಸುಪಾಸಿನಲ್ಲೇ ಓಡಾಡುತ್ತಿದ್ದವು. ನಮ್ಮ ಹತ್ತಿರ ಓಡಿ ಬಂದವು. ತಿಮ್ಮ ಒಂದು ಸಾರೆ ಅವುಗಳನ್ನೆತ್ತಿ ಬೆನ್ನಮೇಲೆ ಮೃದುವಾಗಿ ಸವರಿ ಕೆಳಕ್ಕೆ ಬಿಟ್ಟ. ಈವರೆಗೂ ತಾಯಿ ಹಾಗೂ ಮರಿಗಳಿಗೆ ಪರಸ್ಪರ ಪರಿಚಯವಾಗಿರಲಿಕ್ಕಿಲ್ಲ ಎಂದುಕೊಂಡೆವು.

ವಾರದ ನಂತರ ಆ ನವಿಲು ಮರಿಗಳೇನಾದವೆಂದು ನೋಡಲು ಹೋಗಿದ್ದೆ. ಕಾಲುವೆಯ ಹತ್ತಿರ ಎರಡು ನಾಯಿಗಳು ನನ್ನನ್ನು ರಭಸದಿಂದ ಹಾದು ಹೋದವು. ನನ್ನೆದೆ ಧಸ್ ಎಂದಿತು. ಮನಸ್ಸೆಲ್ಲ ಭಣಗುಡತೊಡಗಿತು. ಆ ಮರಿಗಳ ಕಥೆ ಮುಗಿದೇ ಹೋಯಿತೆ? ಅಲ್ಲೇ ಕಾಲು ಹಾದಿಯನ್ನು ಬಳಸಿ ದರೆಯನ್ನು ಹತ್ತಿ ಸಾವಕಾಶವಾಗಿ ಮೇಲೆ ಹೋದೆ. ಸ್ವಲ್ಪ ಮುಂದೆ ಬೇಣದ ಅಗಳ. ಆ ಅಗಳದ ದಿಬ್ಬದಗುಂಟ ಗೇರು ಮರಗಳ ಸಾಲು. ಅದರಾಚೆ ವಿಶಾಲವಾದ ಗುಡ್ಡ. ಅಲ್ಲೀಗ ಒಂದು ವರ್ಷದಿಂದ ಅಕೇಶಿಯಾ ಅಡವಿ ಬೆಳೆಯತೊಡಗಿತ್ತು ಅಷ್ಟರಲ್ಲಿ ನನಗೊಂದು ಆಶ್ಚರ್ಯಕಾದಿತ್ತು. ಏನೋ ಸದ್ದಾಯಿತೆಂದು ಅಗಳದ ಕಡೆ ನೋಡಿದರೆ ಒಂದು ನವಿಲು ಟಣ್ಣನೇ ಜಿಗಿದು ಏನನ್ನೊ ಕೆದರತೊಡಗಿತು. ಅದರ ಹಿಂದೆ ಮತ್ತೊಂದು. ಅದರ ಜತೆಯಲ್ಲೇ ಎರಡು ಮರಿಗಳು. ನನಗೆ ಹೋದ ಜೀವ ಬಂದಂತಾಯಿತು. ಅವೇ ಮರಿಗಳು! ಕೊನೆಗೂ ತಾಯಿಯನ್ನು ಸೇರಿದ ಆ ಮರಿಗಳನ್ನು ಕಂಡು ಮನಸ್ಸು ಹುಚ್ಚೆದ್ದು ಕುಣಿಯಿತು. ಅಷ್ಟರಲ್ಲಿ ಅವು ನನ್ನನ್ನು ಕಂಡು ಅಲ್ಲಿಂದ ಓಡತೊಡಗಿದವು. ಓಡುತ್ತ ಓಡುತ್ತ ಅವು ಅಕೇಶಿಯಾ ಅಡವಿಯಲ್ಲಿ ಮರೆಯಾದವು.

ಕೆಟ್ಟ ವ್ಯಕ್ತಿಗಳಿರದಿದ್ದರೆ ಒಳ್ಳೆಯ ವಕೀಲರೆ ಇರುತ್ತಿರಲಿಲ್ಲ.

-ಚಾರ್ಲ್ಸ್ ಡಿಕೆನ್ಸ್

ತುಕ್ಕು ಅನಾಹುತಕಾರಿಯೆ?

— ಅ.ಚ. ನರಸಿಂಹಮೂರ್ತಿ

ಮನೆಗೆ ಬಂದ ಅತಿಥಿಯನ್ನು ಸ್ವಾಗತಿಸಲು ನಿಮ್ಮ ಮನೆಯ ಹಳೆಯ ಬಾಗಿಲನ್ನು ತೆರೆದಾಗ ಅದು ಕಿರ್ರೆಂದು ಶಬ್ದ ಮಾಡಿದಾಗಲೋ, ಅಥವಾ ನಿಮ್ಮ ನೆಚ್ಚಿನ ಮಡದಿಯನ್ನು ಕರೆದೊಯ್ಯುವ ಸ್ಕೂಟರು ಬಣ್ಣಗೆಟ್ಟು ಹಳೆಯದಾದಾಗಲೋ, ನೀವು 'ಹಾಳಾದ್ದು ತುಕ್ಕು ಹಿಡಿದಿದೆ' ಎಂದು ಬೇಸರಿಸುತ್ತೀರಿ.

ಈ ತುಕ್ಕಿನ ಹಾವಳಿ ನಮ್ಮ ನಿಮ್ಮ ಮನೆಗೆ ಸೀಮಿತವಾದುದಲ್ಲ. ಪ್ರಪಂಚದಾದ್ಯಂತ ಪ್ರತಿ ವರ್ಷ ತುಕ್ಕಿನಿಂದ ಆಗುವ ನಷ್ಟದ ಅಂದಾಜು ಸುಮಾರು 1 ಸಾವಿರ ಕೋಟಿ ರೂಪಾಯಿಗಳು. ಇದನ್ನು ಅಮೆರಿಕನ್ನರು 'ಬಿಲಿಯನ್ ಡಾಲರ್ ಥೀಫ್' ಎಂದೇ ಕರೆದಿದ್ದಾರೆ. ಆದರೆ ಕಳ್ಳ ಯಾರೆಂದು ಗೊತ್ತಿದ್ದರೂ ಕಳ್ಳತನವನ್ನು ಮಾತ್ರ ತಪ್ಪಿಸಲಾಗಿಲ್ಲ.

ಕಬ್ಬಿಣವು ವಾತಾವರಣದ ತೇವಾಂಶ ಅಥವಾ ನೀರಿನೊಡನೆ ಸಂಪರ್ಕ ಪಡೆದಾಗ ಅದರೊಡನೆ ವರ್ತಿಸುತ್ತದೆ. ಮತ್ತು ಆಕ್ಸೈಡ್ ರೂಪಕ್ಕೆ ಮರಳುತ್ತದೆ. ಈ ಕ್ರಿಯೆಯನ್ನೇ ನಾವು ತುಕ್ಕು ಎಂದು ಕರೆಯುವುದು. ತುಕ್ಕು ಹಿಡಿಯುವುದು ಕಬ್ಬಿಣಕ್ಕೆ ಸೀಮಿತವಾದುದಲ್ಲವಾದರೂ, ನಾವು ಈ ಪದವನ್ನು ಹೆಚ್ಚಾಗಿ ಬಳಸುವುದು ಕಬ್ಬಿಣಕ್ಕೇ. ವಾತಾವರಣದ ಮಾಲಿನ್ಯ ಹಾಗೂ ಪರಿಸರದ ರಾಸಾಯನಿಕ ಗುಣಗಳೂ ಸಹ ತುಕ್ಕು ಹಿಡಿಯಲು ಕಾರಣವಾಗುತ್ತವೆ.

ಪರಿಣಾಮವಾಗಿ ಕಬ್ಬಿಣದ ಮೇಲ್ಮೈಯಲ್ಲಿ ಕಂದು ಬಣ್ಣದ ಆಕ್ಸೈಡ್‌ನ ಹೊದಿಕೆ ನಿರ್ಮಾಣವಾಗುತ್ತದೆ.

ತುಕ್ಕಿನಿಂದ ನಷ್ಟವಾಗುವುದಷ್ಟೇ ಅಲ್ಲ ಅನಾಹುತಗಳೂ ಸಂಭವಿಸುತ್ತವೆ. ಕಟ್ಟಡ ನಿರ್ಮಾಣದಲ್ಲಿ ಬಳಸಿದ ಕಬ್ಬಿಣಕ್ಕೆ ತುಕ್ಕು ಹಿಡಿದಿದ್ದರಿಂದ ಬೃಹತ್ ಭವನಗಳೇ ವಾಲಿವೆ. ಕಟ್ಟಡಗಳ ಕಲ್ಲುಗಳು ಜರುಗಿವೆ. ಗೋಡೆಗಳು ಬಿರುಕು ಬಿಟ್ಟಿವೆ.

ತುಕ್ಕು ಹಿಡಿದಾಗ ಕಬ್ಬಿಣದ ಮೇಲ್ಮೈಯಲ್ಲಿ ಉಂಟಾದ ಆಕ್ಸೈಡ್‌ನ ಪದರದಿಂದಾಗಿ ಕಬ್ಬಿಣದ ಒಟ್ಟಾರೆ ಗಾತ್ರವೂ ಸ್ವಲ್ಪ ಹೆಚ್ಚುತ್ತದೆ. ಈ ಗಾತ್ರ ವಿಸ್ತರಣೆಯು ತನ್ನ ತೀರಾ ಹತ್ತಿರದ ವಸ್ತುಗಳ ಮೇಲೆ ಒತ್ತಡ ಹೇರಲಾರಂಭಿಸುತ್ತದೆ. ಕಿಕ್ಕಿರಿದ ರೂಮಿನಲ್ಲಿ ದಢೂತಿ ಆಸಾಮಿಯೊಬ್ಬ ಸೇರಿದರೆ ಆಗುವಂತೆ! ಅದರಲ್ಲೂ ಗೋಪುರಗಳ ಮತ್ತು ಕಟ್ಟಡಗಳ ನಿರ್ಮಾಣದಲ್ಲಿ ಬಳಸಿದ್ದರಂತೂ ಈ ಒತ್ತಡದಿಂದಾಗಿ ಕಟ್ಟಡದ ಕಲ್ಲುಗಳೂ ಜರುಗುತ್ತವೆ. ಗೋಡೆಗಳು ಸೀಳು ಬಿಡುತ್ತವೆ.

ತುಕ್ಕಿನ ಅಗಾಧ ಶಕ್ತಿಗೆ ಒಂದು ಉತ್ತಮ ಉದಾಹರಣೆ ಎಂದರೆ ಲಂಡನ್ನಿನ ಸೇಂಟ್ ಪಾಲ್ ಕೆಥೆಡ್ರಾಲ್. ಇದೊಂದು ಪುರಾತನ ಕಲ್ಲಿನ ಕಟ್ಟಡ. ನಿರ್ಮಾಣದ ಸಮಯದಲ್ಲಿ ಕಲ್ಲುಗಳನ್ನು ಹಿಡಿದಿಡಲು ಉಪಯೋಗಿಸಿದ್ದು ಕಬ್ಬಿಣದ ಸರಳುಗಳು. ಕಾಲ ಕಳೆದಂತೆ ಇವು ತುಕ್ಕು ಹಿಡಿದವು.

ಅವುಗಳ ಗಾತ್ರ ವಿಸ್ತರಣೆ ಆಯ್ತು. ಪರಿಣಾಮವಾಗಿ ಅಕ್ಕಪಕ್ಕದ ಹಾಗೂ ಮೇಲಿನ ಸಾಲುಗಳ ಕಲ್ಲುಗಳ ಮೇಲೆ ಒತ್ತಡ ಬಿತ್ತು. 2250 ಕಿ.ಮೀ. ಎತ್ತರದ ಗಂಟೆಯಾಕಾರದ ಗೋಪುರದಲ್ಲಂತೂ ಈ ಒತ್ತಡ ಇಡೀ ಗೋಪುರವನ್ನೇ ಮೇಲಕ್ಕೆ ಎತ್ತುವಷ್ಟು ಶಕ್ತಿಶಾಲಿ ಯಾಗಿತ್ತು. ಮೊದಲು ಇದನ್ನು ಯಾರೂ ನಂಬಲಿಲ್ಲ. ಆದರೆ ಕೊನೆಗೆ ಎಂಜಿನಿಯರುಗಳು ತಾರ್ಕಿಕವಾಗಿ ಲೆಕ್ಕಾಚಾರ ಹಾಕಿದಾಗ ಈ ಅಂಶ ಸ್ಪಷ್ಟವಾಗಿ ಕಂಡು ಬಂತು.

ಗ್ಲೋಸ್ಟರ್‌ಶೈರ್‌ನ ಕೆಥೆಡ್ರಾಲ್‌ವೊಂದರಲ್ಲಿಯೂ ಇದೇ ರೀತಿಯ ಪರಿಣಾಮಗಳು ಕಂಡಿವೆ. ಬ್ರಿಟನ್ನಿನ ಖ್ಯಾತ ಚರ್ಚ್ ಒಂದರಲ್ಲಂತೂ ಈ ತುಕ್ಕಿನ ಶಕ್ತಿ ಎಷ್ಟು ಅಗಾಧವಾಗಿತ್ತೆಂದರೆ ಕಂಚಿನ ಗಂಟೆಯೊಂದರ ಒಳಗೆ ಕೂಡಿಸಿದ್ದ ಕಬ್ಬಿಣದ ತುಂಡು ತುಕ್ಕು ಹಿಡಿದ್ದುದ್ದರಿಂದ ಗಂಟೆ ಬಿರುಕು ಬಿಟ್ಟಿತು. ಮತ್ತೊಂದು ಪ್ರಕರಣದಲ್ಲಿ ಗಂಟೆಯೊಂದು ಎರಡು ಹೋಳಾಯಿತು.

ಬ್ರಿಟನ್ನಿನ ಐತಿಹಾಸಿಕ ಮ್ಯೂಸಿಯಂ ಸಹ ತುಕ್ಕಿನಿಂದ ಪಾರಾಗಿಲ್ಲ. ನೂರು ವರ್ಷಗಳಿಗಿಂತ ಹಳೆಯದಾದ ಈ ಕಟ್ಟಡದಲ್ಲಿ ಉಪಯೋಗಿಸಿದ ಆಧಾರದ ಕಬ್ಬಿಣ ತುಕ್ಕು ಹಿಡಿದ ಅನೇಕ ಕಡೆ ಕಲ್ಲಿನ ಕಟ್ಟಡದ ರಚನೆಯೇ ಉಬ್ಬಿಕೊಂಡಂತಾ ಗಿದೆ.

ಇಷ್ಟೆಲ್ಲಾ ಅನಾಹುತ ಮಾಡುತ್ತಿರುವ ತುಕ್ಕು ಬ್ರಿಟಿಷ್ ಲೈಬ್ರರಿಯ ಕಟ್ಟಡವೊಂದರ ಗುಮ್ಮಟವನ್ನು ಸ್ಥಿರವಾಗಿ ಹಿಡಿದಿಟ್ಟಿದೆಯೆಂದರೆ ಅಚ್ಚರಿಯಾಗಬಹುದಲ್ಲವೇ! ಈ ಕಟ್ಟಡದ ಗುಮ್ಮಟಾಕಾರದ ಗೋಳಕ್ಕೆ ಉಪಯೋಗಿಸಿದ್ದ 'I' ಆಕಾರದ ಕಬ್ಬಿಣದ ಸರಳುಗಳನ್ನು ವಿಶೇಷ ರೀತಿಯ ಸಿಮೆಂಟಿನಿಂದ ತುಂಬಲಾಗಿತ್ತು. ಈ ಸಿಮೆಂಟು ಕಬ್ಬಿಣವನ್ನು ಮತ್ತಷ್ಟು ತುಕ್ಕು ಹಿಡಿಯಲು ಪ್ರಚೋದಿಸಿತು. ತುಕ್ಕು ಹಿಡಿದ ಸರಳುಗಳು ಎಲ್ಲಾ ದಿಕ್ಕುಗಳಲ್ಲೂ ಸಮಾನವಾಗಿ ಒತ್ತಡ ಹೇರಿದವು. ಇದೇ ಒತ್ತಡವೇ ಇಂದಿಗೂ ಗುಮ್ಮಟದ ಸ್ಥಿರತೆಗೆ ಪ್ರಮುಖ ಕಾರಣವಾಗಿದೆ!.

ತುಕ್ಕಿನ ಪರಿಣಾಮಗಳು ಕೇವಲ ಹಳೆಯ ಹಾಗೂ ಪುರಾತನ ಕಟ್ಟಡಗಳಿಗೆ ಸೀಮಿತವೆಂದು ಭಾವಿಸಬೇಡಿ. ನಾವು ಆಧುನಿಕವೆಂದು ಭಾವಿಸುವ ಆರ್.ಸಿ.ಸಿ. ಕಟ್ಟಡಗಳೂ ಇದಕ್ಕೆ ಹೊರತಾಗಿಲ್ಲ. ಸಿಮೆಂಟ್ ಕಬ್ಬಿಣವನ್ನು ಮುಚ್ಚಿ ಬಿಡುವುದರಿಂದ ಅದು ತುಕ್ಕು ಹಿಡಿಯಲಾರದೆಂಬ ನಂಬಿಕೆ ಇದ್ದರೂ ಸಿಮೆಂಟಿನಲ್ಲಿನ ಕ್ಲೋರೈಡ್‌ನ ಪ್ರಮಾಣ ಹೆಚ್ಚಾದಾಗ ಅದು ಸಿಮೆಂಟ್ ಬ್ಲಾಕಿನ ಹೈಡ್ರೋಜನ್ ಅಯಾನ್ ಸಾಂದ್ರತೆ (PH Value) ಯನ್ನು ತಗ್ಗಿಸುತ್ತದೆ. ಪರಿಣಾಮವಾಗಿ ಕಬ್ಬಿಣವು ನಂತರ ಹಾನಿಗೊಳಗಾಗುತ್ತದೆ. ಅಮೆರಿಕದಲ್ಲಿ ಅರವತ್ತರ ದಶಕದಲ್ಲಿ ಕಟ್ಟಿದ 250 ಸೇತುವೆಗಳಲ್ಲಿ ಶೇ. 22ರಷ್ಟು ಸೇತುವೆಗಳು ಕೇವಲ ನಾಲ್ಕು ವರ್ಷದ ಅವಧಿಯಲ್ಲಿ ಹಾನಿಗೊಳಗಾಗಿದ್ದವು. ಬ್ರಿಟನ್ನಿನಲ್ಲಿ 1ನೇ ಮಹಾ ಯುದ್ಧದ ಸಮಯದಲ್ಲಿ ನಿರ್ಮಿಸಿದ್ದ ಅನೇಕ ಕಟ್ಟಡಗಳು ತೀವ್ರ ಹಾನಿಗೊಳಗಾಗಿದ್ದು ಈಗ ಅವುಗಳ ಮಾಲೀಕರು ಬೊಬ್ಬೆಯಿಡುತ್ತಿದ್ದಾರೆ. ತುಕ್ಕು ಹಿಡಿದ ಲೋಹ ವನ್ನು ತೆಗೆದು ಹೊಸದಾದ ಸ್ಟೀಲ್ ಮಿಶ್ರ ಲೋಹಗಳನ್ನು ಜೋಡಿಸುವ ಖರ್ಚು ಕೆಲವು ಪ್ರಕರಣಗಳಲ್ಲಿ ಕಟ್ಟಡದ ಮೂಲ ಬೆಲೆಗಿಂತ ಹೆಚ್ಚಾಗುವುದೆಂದು ಕಂಡು ಬಂದಿದೆ. ಆದ್ದರಿಂದ ಈಗ ಆ ಕಟ್ಟಡಗಳಿಗೆ ಏನೂ ದುರಸ್ತಿ ಮಾಡ ವುದು ಸಾಧ್ಯವಿಲ್ಲದಂತಾಗಿದೆ.

ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಸದ್ಯ ಯಾವ ಸುಲಭೋಪಾಯಗಳೂ ಇಲ್ಲ. ವಾಯು ಮಾಲಿನ್ಯವೇ ಇದಕ್ಕೆ ಕಾರಣವೆಂದು ಹಲವರು ವಾದಿಸುತ್ತಾರಾದರೂ ಅದು ಸಾಬೀತಾಗಿಲ್ಲ. ಅವರಲ್ಲೂ ಹುದುಗಿಸಿರುವ ಲೋಹಕ್ಕಂತೂ ಇದು ಅನ್ವಯಿಸುವುದೇ ಇಲ್ಲ. ಬೇರೆ ಕೆಲ ಪರಿಹಾರಗಳೂ ಈಗೀಗ ಕೇಳಿ ಬರುತ್ತಿದೆ. ಲೋಹದ ಭಾಗಕ್ಕೆ ನಿಕ್ಕಲ್ ಲೇಪನ ಮಾಡುವುದು ಅಥವಾ ಗ್ಯಾಲ್ವನೈಸ್ ಮಾಡುವುದು ಇಂತಹ ಪರಿಹಾರಗಳಲ್ಲೊಂದು. ಲೋಹದ ಮೇಲೆ ಸಾಕಷ್ಟು ದಪ್ಪವಾಗಿ ಸಿಮೆಂಟನ್ನು ಕುಶಲ ರೀತಿಯಲ್ಲಿ ಹೊದಿಸುವುದು ಮತ್ತೊಂದು ಉಪಯುಕ್ತ ಸಾಧ್ಯತೆ ಯಾಗಬಹುದು. ಆದರೆ ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಿದೆ. ಆದ್ದರಿಂದ ಮುಂದಿನ ವರ್ಷಗಳಲ್ಲಿ ತುಕ್ಕಿಗೆ ಸಂಬಂಧಿಸಿದಂತೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಒಂದು ಪ್ರತ್ಯೇಕ ಎಂಜಿನಿಯರಿಂಗ್ ವಿಭಾಗವೇ ಸ್ಥಾಪನೆಯಾದರೂ ಆದೀತು!.



ಮಲೇರಿಯಾಕ್ಕೆ ಕಾರಣವಾದ ಕ್ರಿಮಿಗಳನ್ನೀತ ಕಂಡುಹಿಡಿದ

ಡಾ|| ರೋನಾಲ್ಡ್ ರಾಸ್

–ಡಾ|| ವಿ. ರಾಮಾಚಾರಿ

ಹೈದರಾಬಾದಿನ ವಿಮಾನ ನಿಲ್ದಾಣದ ಪಕ್ಕದಲ್ಲೇ ಒಂದು ಕೆಂಪು ಹೆಂಚಿನ ಕಟ್ಟಡವಿದೆ. ಮುಖ್ಯ ರಸ್ತೆಯ ಹತ್ತಿರವೇ ಇರುವ ಈ ಕಟ್ಟಡ ಸರಿಯಾದ ಮೇಲ್ವಿಚಾರಣೆ ಇಲ್ಲದ ಕಾರಣ ಪಾಳು ಬಿದ್ದಿದೆ. ಕಂಪೌಂಡ್ ಗೋಡೆಯೂ ಇಲ್ಲದಿರುವುದರಿಂದ ಸುತ್ತಮುತ್ತಲಿನ ಪ್ರದೇಶವೆಲ್ಲ ಕೊಳಚೆಯಾಗಿದೆ. ಇಂಥ ಹೊಲಸು ಕಟ್ಟಡ ಒಂದೊಮ್ಮೆ ಮಾನವಕುಲಕ್ಕೆ ಮಹದುಪಕಾರ ಮಾಡಿದ ಮಹಾ ವಿಜ್ಞಾನಿಯೊಬ್ಬನ ಪ್ರಯೋಗಾಲಯವಾಗಿತ್ತೆಂದರೆ ಆಶ್ಚರ್ಯವಾಗುತ್ತದಲ್ಲವೆ? ಹೌದು. ಆದರೆ ಇದು ಕಟು ಸತ್ಯ.

ತೊಂಭತ್ತು ವರ್ಷಗಳ ಹಿಂದೆ, ಅಂದರೆ ೧೮೯೭ ಆಗಸ್ಟ್ ೨೦ ರಂದು, ಡಾ|| ರೊನಾಲ್ಡ್ ರಾಸ್ ಮಲೇರಿಯಾ ರೋಗಕ್ಕೆ ಕಾರಣವಾದ ಕ್ರಿಮಿಗಳನ್ನು ಕಂಡುಹಿಡಿದಿದ್ದು ಇದೇ ಕಟ್ಟಡದಲ್ಲಿ. ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಯುಗವನ್ನೇ ಆರಂಭಿಸಿದ ಈ ಸಂಶೋಧನೆಗಾಗಿ ರಾಸ್‌ನನ್ನು ೧೯೦೨ರಲ್ಲಿ ನೊಬೆಲ್ ಬಹುಮಾನವಿತ್ತು ಗೌರವಿಸಲಾಯಿತು.

ಹದಿನೆಂಟನೇ ಶತಮಾನದಲ್ಲಿ ಅನೇಕ ಭೀಕರ ರೋಗಗಳಿಗೆ ಕಾರಣವಾದ, ಬರಿ ಕಣ್ಣಿಗೆ ಕಾಣಿಸದಂಥ ಕೆಲ ಕ್ರಿಮಿಗಳಿವೆಯೆಂಬುದು ಮಾನವನಿಗೆ ಗೊತ್ತೇ ಇರಲಿಲ್ಲ. ೧೯ನೇ ಶತಮಾನದ ಆದಿಯಲ್ಲಿ ಉತ್ತಮ ಮೈಕ್ರೋಸ್ಕೋಪಿನ ಶೋಧನೆಯಾದ ನಂತರ ಈ ಕ್ರಿಮಿಗಳ ಅಸ್ತಿತ್ವದ ಅರಿವಾಯಿತು. ಅವುಗಳಿಗೆ ಬ್ಯಾಕ್ಟೀರಿಯಾ ಎಂದು ಹೆಸರಿಡಲಾಯಿತು. ರಾಸ್‌ನ ಸಂಶೋಧನೆಗೆ ಮುನ್ನ ಮಲೇರಿಯಾಕ್ಕೆ ಬ್ಯಾಕ್ಟೀರಿಯಾದಂಥ ಕ್ರಿಮಿಗಳೇ ಕಾರಣವೆಂಬುದು ಮಾತ್ರ ತಿಳಿದಿತ್ತು. ಡಾ|| ಲೂಯಿ ಪಾಸ್ಚರ್, ಡಾ|| ರಾಬರ್ಟ್ ಕೋಚ್ ಮತ್ತು ಡಾ|| ಕಿಟಾಸಾಟೋರಂಥ ಖ್ಯಾತ ವಿಜ್ಞಾನಿಗಳು ಪ್ಲೇಗ್, ಕಾಲರಾ, ಟಿ.ಬಿ., ಟಿಟ್ಯಾನಸ್‌ದಂಥ ರೋಗ

ಗಳಿಗೆ ಬ್ಯಾಕ್ಟೀರಿಯಾ ಕ್ರಿಮಿಗಳೇ ಕಾರಣವೆಂಬುದನ್ನು ದೃಢಪಡಿಸಿದ್ದರು. ನಂತರ ಫ್ರಾನ್ಸಿನ ಸೈನ್ಯದಲ್ಲಿ ವೈದ್ಯನಾಗಿ ಕೆಲಸ ಮಾಡುತ್ತಿದ್ದ ಡಾ॥ ಅಲ್ಫೋನ್ಸೋ ಲ್ಯಾವೆರಾನ್ ಮಲೇರಿಯಾ ಪೀಡಿತ ರೋಗಿಗಳ ರಕ್ತ ಕಣಗಳಲ್ಲಿ ಬ್ಯಾಕ್ಟೀರಿಯಾಗಿಂತ ಸ್ವಲ್ಪ ದೊಡ್ಡದಾದ ಮಲೇರಿಯಲ್ ಪ್ಯಾರಾಸೈಟ್ ಎಂಬ ಕ್ರಿಮಿಗಳನ್ನು ಕಂಡುಹಿಡಿದ. ಆದರೆ ಈ ಕ್ರಿಮಿಗಳು ಮಾನವನ ದೇಹವನ್ನು ಪ್ರವೇಶಿಸಿದ್ದು ಹೇಗೆಂಬುದು ಮಾತ್ರ ವಿಜ್ಞಾನಿಗಳಿಗೆ ಯಕ್ಷಪ್ರಶ್ನೆಯಾಗಿತ್ತು. ಕೊಳಚೆ ಪ್ರದೇಶದಿಂದ ಬೀಸುತ್ತಿದ್ದ ಕೆಟ್ಟ ಗಾಳಿಯನ್ನು ಸೇವಿಸುವುದರಿಂದ ಈ ಕ್ರಿಮಿಗಳು ರಕ್ತ ಕಣಗಳನ್ನು ಪ್ರವೇಶಿಸಿರಬೇಕೆಂದು ಮೊದಲು ನಂಬಲಾಗಿತ್ತು. ಆದರೆ ಈ ಕ್ರಿಮಿಗಳು ಸೊಳ್ಳೆ ಕಡಿತದಿಂದಲೇ ಮಾನವನ ದೇಹ ಪ್ರವೇಶಿಸಿವೆ ಎಂಬುದನ್ನು ರಾಸ್‌ನ ಸಂಶೋಧನೆ ದೃಢಪಡಿಸಿತು. ಸೊಳ್ಳೆಗಳ ಲಾವರಸ ಗ್ರಂಥಿಯಲ್ಲಿ ಈ ಕ್ರಿಮಿಗಳಿರುತ್ತವೆ ಎಂದು ರಾಸ್ ಸಿದ್ಧಮಾಡಿ ತೋರಿಸಿದ. ಆ ವೇಳೆಗಾಗಲೇ ಮಲೇರಿಯವನ್ನು ಗುಣಪಡಿಸಲು ಕ್ವಿನೈನ್ ಔಷಧಿಯನ್ನು ಕಂಡು ಹಿಡಿಯಲಾಗಿತ್ತು. ಆದರೆ ಆ ರೋಗ ಬರವಂತೆ ತಡೆಯುವುದು ಮಾತ್ರ ಸಾಧ್ಯವಾಗಿದ್ದಿಲ್ಲ. ಇದರಿಂದ ಜಗತ್ತಿನಾದ್ಯಂತ ಲಕ್ಷಾಂತರ ಜನ ಈ ರೋಗಕ್ಕೆ ಬಲಿಯಾಗುತ್ತಿದ್ದರು.

ರೋಗದ ಮೂಲವನ್ನು ಕಂಡುಹಿಡಿದ ರಾಸ್ ಅದು ಹರಡದಂತೆ ತಡೆಗಟ್ಟಲು ಕೆಲ ಸರಳ ಪರಿಹಾರಗಳನ್ನು ಸೂಚಿಸಿದ. ಕೊಳಚೆ ನೀರು ನಿಲ್ಲದಂತೆ ಮಾಡಲು ಮತ್ತು ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ಕಡಿಮೆ ಮಾಡುವುದಕ್ಕಾಗಿ ಕೊಳಚೆ ನೀರಿನ ಹೊಂಡಗಳಲ್ಲಿ ರಾಸಾಯನಿಕ ಕ್ರಿಮಿನಾಶಕಗಳನ್ನು ಸಿಂಪಡಿಸುವಂತೆ ಅವನು ಸಲಹೆ ಮಾಡಿದ. ಈ ಪರಿಹಾರೋಪಾಯಗಳು ಪ್ರಪಂಚದ ಎಲ್ಲೆಡೆಯಲ್ಲಿ ಮಲೇರಿಯಾ ಹರಡುವಿಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡಿದವು. ಮಲೇರಿಯಾ ಪಿಡುಗಿನಿಂದ ತೀವ್ರವಾಗಿ ಬಳಲುತ್ತಿದ್ದ ಭಾರತದಂಥ ಉಷ್ಣ ಪ್ರದೇಶದ ಜನತೆಗಂತೂ ಈ ಪರಿಹಾರೋಪಾಯಗಳು ವರದಾನವೆನಿಸಿದುವು.

ರಾಸ್ ಹುಟ್ಟಿದ್ದು ಭಾರತದಲ್ಲೇ. ಹಿಮಾಲಯದ ತಳದಲ್ಲಿರುವ ಕುಮಾವ್ ಬೆಟ್ಟಗಳಲ್ಲಿರುವ ಆಲ್ಮೋರಾದಲ್ಲಿ, ೧೮೫೭ರಲ್ಲಿ ಜನಿಸಿದ ರಾಸ್‌ನನ್ನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ

ಕಳಿಸಲಾಯಿತು. ೧೮೮೧ರಲ್ಲಿ ವೈದ್ಯಕೀಯ ಪದವಿಯೊಂದಿಗೆ ಭಾರತಕ್ಕೆ ಹಿಂದಿರುಗಿದ ರಾಸ್ ಬ್ರಿಟಿಶ್ ಸೈನ್ಯದ ಭಾರತೀಯ ವೈದ್ಯಕೀಯ ಸೇವೆಯಲ್ಲಿ ಅಧಿಕಾರಿಯೆಂದು ಸೇರಿಕೊಂಡ. ಮೊದಲು ಮದ್ರಾಸು ನಂತರ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಭಾರತೀಯರು ಸಾಂಕ್ರಾಮಿಕ ರೋಗಗಳಿಂದ ತೀವ್ರವಾಗಿ ಬಳಲುತ್ತಿರುವುದನ್ನು ಕಂಡು ಅವನಿಗೆ ಬಹಳ ಕೆಡುಕೆನಿಸಿತು. ಇದನ್ನು ತಡೆಗಟ್ಟಲು ಅವನು ದೃಢನಿರ್ಧಾರ ಮಾಡಿ ವಿಶ್ವವಿದ್ಯಾಲಯದಲ್ಲಿನ ರೋಗಗಳ ಚಿಕಿತ್ಸೆಗಾಗಿ ತರಬೇತಿ ಪಡೆಯಲು ೧೮೮೯ರಲ್ಲಿ ಇಂಗ್ಲೆಂಡಿಗೆ ಹೋದ. ಭಾರತಕ್ಕೆ ಮರಳಿ ಬಂದ ನಂತರ ಬೆಂಗಳೂರು ಮತ್ತು ಇತರ ಕೆಲ ಪ್ರದೇಶಗಳಲ್ಲಿ ಹರಡಿದ ಕಾಲರಾ ರೋಗವನ್ನು ತಡೆಗಟ್ಟಲು ಶ್ರಮಿಸಿದ. ಅಲ್ಲದೆ, ಇಂಥ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕೈಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಿ ಸರ್ಕಾರಕ್ಕೆ ಅನೇಕ ವರದಿಗಳನ್ನೂ ಕಳಿಸಿದ.



ದೇಶದ ಭವಿಷ್ಯದ ಬಗ್ಗೆ ಚರ್ಚಿಸಬೇಕಾಗಿದೆ. ಭವಿಷ್ಯ ರತ್ನ ಸ್ವಾಮಿ ಸಚ್ಚಿದಾನಂದರನ್ನು ಬೇಗ ಕರೆಸು.

ಡಾ॥ ರಾಸ್‌ನ ಕೌಶಲ ವಿಜ್ಞಾನಕ್ಕಷ್ಟೇ ಸೀಮಿತವಾಗಿರಲಿಲ್ಲ. ಬಹುಮುಖ ವ್ಯಕ್ತಿತ್ವದ ಅವನೊಬ್ಬ ಕವಿ, ಲೇಖಕ, ಗಣಿತ ಶಾಸ್ತ್ರಜ್ಞನೂ ಆಗಿದ್ದ. ವಿಡಂಬನ ಕಾವ್ಯ ಆತನಿಗೆ ಅಚ್ಚುಮೆಚ್ಚು. ಅನೇಕ ನಾಟಕಗಳನ್ನೂ ಆತ ಬರೆದಿದ್ದಾನೆ. ಹೊರಾಂಗಣ ಕ್ರೀಡೆಗಳಲ್ಲಿ ಡಾ॥ ರಾಸ್‌ನಿಗೆ ತುಂಬ ಆಸಕ್ತಿಯಿತ್ತು.

೧೮೯೪-೯೫ ರಲ್ಲಿ ಆತ ರಜೆಯ ಮೇಲೆ ಮತ್ತೆ ಇಂಗ್ಲೆಂಡಿಗೆ ಹೋದಾಗ ಅವನಿಗೆ ಡಾ॥ ಪ್ಯಾಟ್ರಿಕ್ ಮ್ಯಾನ್ಸನ್‌ರ ಭೇಟಿಯಾಯಿತು. ಮಲೇರಿಯಾ ರೋಗ ಹರಡುವಿಕೆಗೆ ಕಾರಣವೇನೆಂಬುದನ್ನು ಕಂಡು ಹಿಡಿಯುವಂತೆ ಡಾ॥ ಮ್ಯಾನ್ಸನ್ ರಾಸ್‌ನಿಗೆ ಸಲಹೆ ನೀಡಿದ. ಸೊಳ್ಳೆಗಳೇ ಈ ರೋಗ ಹರಡುವಿಕೆಗೆ ಕಾರಣವಿರಬಹುದೆಂದು ಆಗಲೇ ಅವರಿಬ್ಬರಿಗೂ ಸಂದೇಹ ಬಂದಿತ್ತು.

ರಜೆ ಮುಗಿಸಿ ರಾಸ್ ಮರಳಿ ಬಂದಾಗ ಅವನನ್ನು ಸಿಕಂದರಾಬಾದಿಗೆ ವರ್ಗಾಯಿಸಲಾಯಿತು. ಆಗಲೇ ಅವನ ಸಂಶೋಧನೆ ಆರಂಭವಾಯಿತು. ಆದರೆ ಅವನ ಕೆಲಸ ಸುಲಭವಾಗಿರಲಿಲ್ಲ. ಪ್ರತಿದಿನ ಸೇನಾಪಡೆಯಲ್ಲಿ ತನ್ನ ನಿಯಮಿತ ಸೇವಾವಧಿ ಮುಗಿದ ಬಳಿಕ ಸಂಶೋಧನೆಗೆ ತೊಡಗಬೇಕಿತ್ತು. ಅಲ್ಲದೆ ಸಂಶೋಧನೆಗೆಂದು ಯಾವುದೇ ರೀತಿಯ ಧನ ಸಹಾಯವೂ ದೊರೆತಿರಲಿಲ್ಲ. ಪರೀಕ್ಷಣೆಗೆಂದು ಕೊಳಚೆ ಪ್ರದೇಶಗಳಿಗೆ ಹೋಗಿ ಸೊಳ್ಳೆಗಳನ್ನು ಹಿಡಿದುಕೊಂಡು ಬರುವುದಕ್ಕಾಗಿ ಎಷ್ಟೋ ಸಲ ಅವನು ರಜೆ ಹಾಕಬೇಕಾಗುತ್ತಿತ್ತು.

ಪರೀಕ್ಷೆಗಾಗಿ ಮಲೇರಿಯಾ ರೋಗಿಗಳ ರಕ್ತ ಮಾದರಿ ಪಡೆಯಲು ಪ್ರತಿ ರೋಗಿಗೂ ರಾಸ್ ಒಂದಾಣೆ ಕೊಡುತ್ತಿದ್ದ. ಇಂಥ ರಕ್ತ ಪರೀಕ್ಷೆ, ಸೊಳ್ಳೆಗಳ ದೇಹ ವಿಚ್ಛೇದನೆಯಲ್ಲಿ ಅನೇಕ ತಿಂಗಳುಗಳು ಕಳೆದವು. ಆದರೆ ಯಶ ದೊರೆಯಲಿಲ್ಲ. ಏತನ್ಮಧ್ಯೆ ಅವನು ಒಮ್ಮೆ ಉದಕಮಂಡಲಕ್ಕೆ ಹೋದಾಗ ಮಲೇರಿಯಾ ರೋಗ ಪೀಡಿತನಾಗಿದ್ದ. ಆಗ ಅವನಿಗೆ ಮಲೇರಿಯಾ ರೋಗಕ್ಕೆ ಕೆಲ ಜಾತಿಯ ಸೊಳ್ಳೆಗಳಷ್ಟೇ ಕಾರಣವಾಗಿರಬಹುದೆಂದ ಆಲೋಚನೆ ಹೊಳೆಯಿತು. ಆದ್ದರಿಂದ ಸಿಕಂದರಾಬಾದಿಗೆ ಮರಳಿ

ಹೋದ ನಂತರ ಉದಕಮಂಡಲದ ಸೊಳ್ಳೆಗಳನ್ನೇ ಹೋಲುವಂಥ ಸೊಳ್ಳೆ ಮರಿಗಳನ್ನು ಪೋಷಿಸಿ, ಬೆಳೆಸಿದ. ರೆಕ್ಕೆಯ ಮೇಲೆ ಚುಕ್ಕೆಯಿರುವ ಈ ಸೊಳ್ಳೆಗಳು ಅನೋಫೆಲಸ್ ಜಾತಿಗೆ ಸೇರಿದುವೆಂಬುದನ್ನು ಆತ ನಂತರ ಕಂಡುಹಿಡಿದ. ಈ ಸೊಳ್ಳೆಗಳು ಮಲೇರಿಯಾ ರೋಗಿಗಳನ್ನು ಕಡಿಯುವಂತೆ ಮಾಡಿ, ರಕ್ತ ಹೀರಿಕೊಂಡ ನಂತರ ಅವುಗಳನ್ನು ಗಾಜಿನ ನಳಿಕೆಯೊಂದರಲ್ಲಿ ಬಂಧಿಸಿಟ್ಟ. ಈ ಸೊಳ್ಳೆಗಳ ದೇಹ ವಿಚ್ಛೇದನ ಕಾರ್ಯ ಮುಂದುವರಿಯಿತು. ಸಿಕಂದರಾಬಾದಿನ ಉಷ್ಣಮಯ ವಾತಾವರಣದಲ್ಲಿ ಇಂಥ ಸೂಕ್ಷ್ಮ ಕೆಲಸ ಮಾಡುವುದು ಬಹಳ ಕಠಿಣವಾಗಿತ್ತು. ಉಷ್ಣತೆಯಿಂದಾಗಿ ರಾಸ್‌ನ ಮೈಕ್ರೋಸ್ಕೋಪಿನ ಲೆನ್ಸ್‌ಗಳು ಸೀಳಿ ಹೋಗಿದ್ದವು. ಒಂದು ದಿನ ಮಧ್ಯಾಹ್ನ ಅವನು ತಾನು ಕತ್ತರಿಸಿದ ಸೊಳ್ಳೆಯ ದೇಹದಲ್ಲಿ ಏನೂ ಕಂಡು ಬರಲಿಲ್ಲವಾದ್ದರಿಂದ ನಿರಾಶೆಯಿಂದ ಅದನ್ನು ಒಗೆಯಲು ಸಿದ್ಧನಾಗಿದ್ದ. ಅದಕ್ಕೂ ಮುನ್ನ ಅವನು ಆ ದಿನ ಎರಡು ಸೊಳ್ಳೆಗಳ ದೇಹ ವಿಚ್ಛೇದನ ಮಾಡಿ, ಪರೀಕ್ಷಿಸಿ ಸೋತುಹೋಗಿದ್ದ. ಇನ್ನೇನು ಮೂರನೆಯ ಸೊಳ್ಳೆಯ ದೇಹವನ್ನೂ ದೂರ ಒಗೆಯಬೇಕೆನ್ನುವಷ್ಟರಲ್ಲಿ, ಅದೃಷ್ಟವಶಾತ್, ಅದರ ಜಠರದ ಒಳ ಆವರಣವು ಸ್ವಲ್ಪ ಉಬ್ಬಿಕೊಂಡಿರುವುದು ಅವನ ಕಣ್ಣಿಗೆ ಬಿತ್ತು. ಅದನ್ನು ಕತ್ತರಿಸಿದಾಗ ಒಳಗೆ ಸಣ್ಣ ಸಣ್ಣ ಹರಳುಗಳಿರುವುದು ಕಂಡು ಬಂತು. ಆದರೆ ಪರೀಕ್ಷಿಸಿ ನೋಡಿದಾಗ ಅವು ಹರಳುಗಳಾಗಿರದೆ, ಮಲೇರಿಯಲ್ ಪ್ಯಾರಾಸೈಟ್ ಕ್ರಿಮಿಗಳಾಗಿರುವುದು ದೃಢಪಟ್ಟಿತು. ಆ ಸುವರ್ಣ ದಿನ ಮಲೋರಿಯಾ ರೋಗ ಹಬ್ಬುವುದಕ್ಕೆ ಸೊಳ್ಳೆಗಳ ಕಡಿತವೇ ಕಾರಣವೆಂಬುದನ್ನು ಜಗತ್ತಿಗೆ ಸಾರಿ ಹೇಳಿತು. ಸಂತೋಷಭರಿತನಾದ ರಾಸ್, ಕೂಡಲೇ ತನ್ನ ಸಂಶೋಧನೆಯ ಮೇಲೊಂದು ಕವಿತೆಯನ್ನೂ ರಚಿಸಿಬಿಟ್ಟ.

ರಾಸ್‌ನ ಈ ಮಹತ್ಸಾಧನೆಯ ಸವಿನೆನಪಿಗಾಗಿ ರಾಣಿಗಂಜ್‌ದಿಂದ ಹೈದರಾಬಾದಿನ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಗೆ 'ಡಾ|| ರೊನಾಲ್ಡ್ ರಾಸ್ ರೋಡ್' ಎಂದು ನಾಮಕರಣ ಮಾಡಲಾಯಿತು. ಇಂದು ಆ ಹೆಸರು ಮಾತ್ರ ಉಳಿದುಕೊಂಡಿದೆ. ರಾಸ್‌ನನ್ನು ನಮ್ಮ ಸರ್ಕಾರ ಮರೆತುಬಿಟ್ಟಿರುವಂತೆ ತೋರುತ್ತದೆ. ಪಾಳು ಬಿದ್ದಿರುವ ಅವನ ಕಟ್ಟಡವೇ ಇದಕ್ಕೆ ಸಾಕ್ಷಿ.

ರೋಮ್ ಹುಟ್ಟಿದ್ದು ಹೀಗೆ.....

– ವಿ. ನರಹರಿ

ರೋಮನ್ನರಿಗೆ ತಾವು ದೇವ ವಂಶಜರೆಂದು ಹೇಳಿಕೊಳ್ಳುವುದು ಬಲು ಹೆಮ್ಮೆ ಎನಿಸುತ್ತದೆ. ಬಹುಶಃ ಇದು ತಮ್ಮ ವಂಶದ ನಿಜ ಮೂಲವನ್ನು ಮರೆಮಾಚುವ ಅವರ ಯತ್ನವಾಗಿರಲೂಬಹುದು. ಶುಕ್ರ ಮತ್ತು ಅನೇಹಿಸೆಸ್ಸರ ಮಗ ಏನಿಯಸ್. ಪ್ರಸಿದ್ಧ ಟ್ರಾಯ್ ನಗರದ ಪತನವಾದ ಮೇಲೆ ಆತ ಸಾಹಸಪಟ್ಟು ಅನೇಕ ಅಪಾಯಗಳಿಂದ ಪಾರಾಗಿ ಇಟಲಿಗೆ ಬಂದ. ಅಲ್ಲಿ ದೊರೆ ಲ್ಯಾಟಿನೆಸ್ ಆ ಸಾಹಸಿಯನ್ನು ತನ್ನ ರಾಜ್ಯಕ್ಕೆ ಸ್ವಾಗತಿಸಿ ಆತನಿಗೆ ತನ್ನ ಮಗಳು ಲಾವಿನಿಯಾಳನ್ನಿತ್ತು ಮದುವೆ ಮಾಡಿದ. ಇದರಿಂದ ರುಟುಲೀ ಸಂಸ್ಥಾನದ ದೊರೆ ಟರ್ನಸ್ ಕುಪಿತನಾದ. ಮೊದಲಿನಿಂದಲೂ ಲಾವಿನಿಯಾಳಲ್ಲಿ ಅನುರಕ್ತನಾಗಿದ್ದಾತ ಈ ಟರ್ನಸ್. ಏನಿಯಸ್‌ನೊಂದಿಗೆ ಯುದ್ಧಕ್ಕಿಳಿದ ಟರ್ನಸ್ ಕದನದಲ್ಲಿ ಸಾವನ್ನಪ್ಪಿದ. ಈ ವಿಜಯದ ನಂತರ ಏನಿಯಸ್ ತನ್ನ ಪತ್ನಿಯ ಹೆಸರಿನಲ್ಲಿ ಲಾವಿನಿಯಂ ಎಂಬ ನಗರವನ್ನು ಕಟ್ಟಿದ. ಆದರೆ ನಾಲ್ಕು ವರ್ಷಗಳ ನಂತರ ನಡೆದ ಒಂದು ಹೋರಾಟದಲ್ಲಿ ವಿಜಯ ಸಂಪಾದಿಸಿದರೂ ಏನಿಯಸ್ ಮರಣವನ್ನಪ್ಪಿದ.

ಏನಿಯಸ್‌ನ ಪರಂಪರೆಯಲ್ಲಿ ೧೫ನೇಯವನಾಗಿ ಕ್ರಿಸ್ತಪೂರ್ವ ೭೭೭ರಲ್ಲಿ ನ್ಯೂಮಿಟರ್ ಎಂಬಾತ ಪಟ್ಟಕ್ಕೆ ಬಂದ. ಆತನ ಸೋದರ ಅಮುಲಿಯಸ್ ಟ್ರಾಯ್ ನಗರದಿಂದ ತಂದ ಸಂಪತ್ತಿಗೆ ಕೋಶಾಧಿಕಾರಿಯಾದ. ಹಕ್ಕಿಗಿಂತ ಹಣವೇ ಮುಖ್ಯವಾದ್ದರಿಂದ ಅಮುಲಿಯಸ್ ಹೇರಳ ಸಂಪತ್ತನ್ನು ಸ್ವಂತಕ್ಕೆ ಬಳಸಿಕೊಂಡ. ಹಣವಿದ್ದ ಮೇಲೆ ಮತ್ತೆಲ್ಲವನ್ನೂ ದೊರಕಿಸಿಕೊಳ್ಳಬಹುದಲ್ಲ. ಒಂದು ದಿನ ನ್ಯೂಮಿಟರ್‌ನ ಸ್ಥಾನವನ್ನಾಕ್ರಮಿಸಿ ಅಮುಲಿಯಸ್ ತಾನೇ ರಾಜನಾದ. ಹಣ, ಅಧಿಕಾರಗಳು ಅತ್ಯಾಚಾರಕ್ಕೆ ಮೂಲ. ಅನೇಕ ನಿಷ್ಪಾಪಿಗಳ ಕೊಲೆಗೆ ಅಮುಲಿಯಸ್ ಕಾರಣನಾದ. ಹೀಗೆ ಹತರಾದ ಅಮಾಯಕರಲ್ಲಿ ಮೊದಲಿಗನೆಂದರೆ ಪದಚ್ಯುತ ನ್ಯೂಮಿಟರ್‌ನ ಹಿರಿಯ ಮಗ.

ನ್ಯೂಮಿಟರ್‌ನಿಗೆ ರ್ಹೀಯಾ ಸಿಲ್ವಿಯಾ ಎಂಬ ಮಗಳಿದ್ದಳು. ಅತಿ ಸುಂದರಿಯಾದ ಆಕೆಗೆ ಹುಟ್ಟುವ ಮಕ್ಕಳು ತನ್ನ ಸ್ಥಾನ-ಸಂಪತ್ತುಗಳ ಮೇಲೆ ಹಕ್ಕು ಚಲಾಯಿಸಬಹುದೆಂಬ ದೂರಾಲೋಚನೆಯಿಂದ ಅಮುಲಿಯಸ್ ಆಕೆ ಕನ್ಯೆಯಾಗಿಯೇ ಉಳಿಯುವಂತೆ ಒತ್ತಾಯಿಸಿ, ಆಕೆಯನ್ನು 'ಚಿರಕನ್ಯೆ' ಎಂದು ಕರೆದ.

ಆದರೆ ಒಂದು ದಿನ ಸಮೀಪದ ಜಲಾಶಯದಿಂದ ನೀರು ತರಲು ಹೋದ ಸಿಲ್ವಿಯಾ ಕನ್ಯತ್ವವನ್ನು ಕಳೆದುಕೊಂಡಳು. ದುರುಳನೊಬ್ಬ ಅವಳ ಶೀಲವನ್ನು ಅಪಹರಿಸಿದ. ಈ ಅವಮಾನದಿಂದ ಪಾರಾಗಲು ಸಮರಾಧಿ ದೇವತೆ ಮಂಗಳನೇ ತನ್ನನ್ನು ಬಲಾತ್ಕರಿಸಿದನೆಂದು ಸಿಲ್ವಿಯಾ ಹೇಳಿದಳು.

ನವಮಾಸಾನಂತರ ಸಿಲ್ವಿಯಾ ಅವಳಿ ಪುತ್ರರಿಗೆ ಜನ್ಮವಿತ್ತಳು. ಅಮುಲಿಯಸ್ ಕಂಸನಾದ. ಆ ಮಕ್ಕಳನ್ನು ಮುಗಿಸಿಬಿಡಲು ಏರ್ಪಾಟು

ಷ್ಟಾಡಿದ. ಜತೆಗೆ "ಪಾವಿತ್ರ್ಯಹೀನ ಕನ್ಯೆಯ ರನ್ನು ಸಜೀವ ಸಮಾಧಿ ಮಾಡಬೇಕು" ಎಂಬ ಅನಿಷ್ಟ ರೂಢಿಯಂತೆ ಸಿಲ್ವಿಯಾಳನ್ನು ಕೊಲ್ಲಲು ಆಜ್ಞೆ ಮಾಡಿದ ಅಮುಲಿಯಸ್.

ಟೈಬರ್ ನದಿಗೆಸೆಯಲ್ಪಟ್ಟ ಆ ಅವಳಿ ಮಕ್ಕಳನ್ನು ಪ್ರಕೃತಿಯೆ ಕಾಪಾಡಿತೆನ್ನಬೇಕು. ದಡ ಮೀರಿ ಹರಿಯುವ ತುಂಬು ಪ್ರವಾಹವಿದ್ದುದರಿಂದಲೂ; ಮಕ್ಕಳನ್ನೆಸೆದ ಜಾಗದಲ್ಲಿ ಆಳ ವಿದ್ದುದರಿಂದಲೂ ಅವರಿಬ್ಬರೂ ಬದುಕುಳಿದರು. ಸುತ್ತ ದಟ್ಟಡವಿ. ತೋಳವೊಂದು ಅವರಿಬ್ಬರಿಗೂ ಮೊಲೆಯುಣಿಸುತ್ತಿತ್ತಂತೆ. ರಾಜನ ಕುರಿಗಳನ್ನು ಕಾಯುತ್ತಿದ್ದ ಫಾಸ್ಟುಲಸ್ ಎಂಬಾತ ಇದನ್ನು ಕಂಡು ಮಕ್ಕಳನ್ನು ಮನೆಗೆ ಕರೆದೊಯ್ದು ತನ್ನ ಹೆಂಡತಿ ಅಕಾಲೌರೆಂಶಿಯಾಳಿಗೆ ಕೊಟ್ಟ. ಆಕೆ ಸ್ವಂತ ಮಕ್ಕಳಂತೆಯೇ ಅವರಿಬ್ಬರನ್ನೂ ಬೆಳೆಸಿದಳು.

ಹೀಗೆ ವಿಚಿತ್ರ ರೀತಿಯಲ್ಲಿ ಬದುಕಿ ಬೆಳೆದ ರೋಮುಲಸ್ ಮತ್ತು ರೀಮಸ್ ತಮ್ಮ ಸಾಮರ್ಥ್ಯ ಮತ್ತು ಆಕಾಂಕ್ಷೆಗಳು ಕುರುಬರಿಗಿಂತ ಭಿನ್ನವಾಗಿರುವುದನ್ನು ಬಹುಬೇಗನೇ ಅರಿತುಕೊಂಡರು. ಕುರಿಕಾಯುವಿಕೆ ಅವರಿಬ್ಬರಿಗೂ ಬೇಸರ ತಂದಿತು. ಅದನ್ನೂ, ಬೇಟೆಯಾಡುವುದನ್ನೂ ಬಿಟ್ಟುಕೊಟ್ಟ ಆ ಅವಳಿ ಸೋದರರು ದರೋಡೆಕೋರರ ವಿರುದ್ಧ ಕತ್ತಿ ಎತ್ತಿ, ಪಡೆದ ಸಂಪತ್ತನ್ನು ಸಹಭಾಗಿಗಳೊಂದಿಗೆ ಹಂಚಿಕೊಳ್ಳತೊಡಗಿದರು. ಇಂಥದೊಂದು ಪ್ರಸಂಗದಲ್ಲಿ ರೀಮಸ್ ಪದಚ್ಯುತ ದೊರೆ ನ್ಯೂಮಿಟರ್‌ನ ಕುರಿಗಳನ್ನು ಕಾಯುವವರ ಸೆರೆಯಾಳಾದ. ಇತ್ತ ರೋಮುಲಸ್ ತನ್ನ ಸಾಕು ತಂದೆಯಾದ ಕುರುಬನಿಂದ ತಮ್ಮ ಹುಟ್ಟಿನ ಸತ್ಯ ವೃತ್ತಾಂತವನ್ನರಿತುಕೊಂಡ. ಕೂಡಲೇ ಆತ ವರ್ಷವೇಳೆಗಳೆಯದೆ ಸಹಸ್ರ ಸಹಸ್ರ ಕುರುಬರನ್ನು ಕಲೆ ಹಾಕಿ ಸೈನ್ಯ ಕಟ್ಟಿ ಅಮುಲಿಯಸ್‌ನನ್ನು ನಾಲ್ಕು ಕಡೆಗಳಿಂದಲೂ ಮುತ್ತಿದ. ಅಸಹಾಯ ಅಮುಲಿಯಸ್‌ನನ್ನು ಸೆರೆ ಹಿಡಿದು ಯಮಸದನಕ್ಕಟ್ಟಿದ. ನಲವತ್ತೆರಡು ವರ್ಷಗಳವರೆಗೆ ತನ್ನಿಂದ ದೂರವಾಗಿದ್ದ ಪಟ್ಟವನ್ನೇರಿ ಮತ್ತೆ ನ್ಯೂಮಿಟರ್ ಅಧಿಕಾರ ವಹಿಸಿಕೊಂಡ; ತನ್ನ ಮೊಮ್ಮಕ್ಕಳು ಸರ್ವ ಸಮರ್ಥರಾಗಿ ಬೆಳೆದುದನ್ನು ಕಂಡು ತಾತನಿಗೆ ಸಂತಸವಾಯಿತು.

ಈಗ, ತಾವು ಕುರಿಕಾಯುತ್ತಿದ್ದ ಬೆಟ್ಟಗಳ ಮೇಲೆ ನಗರವೊಂದನ್ನು ಕಟ್ಟಲು ಅವರಿಬ್ಬರೂ ತೀರ್ಮಾನಿಸಿದರು. ಜತೆಗಿದ್ದ ಸಹಸ್ರ ಸಂಖ್ಯೆ

ಯ ಕುರುಬರು ಈ ನಗರ ನಿರ್ಮಾಣಕ್ಕೆ ಕೈ ಗೂಡಿಸಲು ಅಣಿಯಾದರು. ಆದರೆ ಈ ಕಾರ್ಯಾರಂಭಕ್ಕೆ ಮೊದಲು ಹಕ್ಕಿಗಳ ಹಾರಾಟದ ಶಕುನವನ್ನು ನೋಡಿಬಿಡುವುದು ಶಾಸ್ತ್ರೋಕ್ತ ರೀತಿ ಎಂದು ನ್ಯೂಮಿಟರ್ ದೊರೆ ಮೊಮ್ಮಕ್ಕಳಿಗೆ ಹೇಳಿದ. ಯಾರ ಶಕುನವು ಹೆಚ್ಚು ಅನುಕೂಲಕರವಾಗಿರುತ್ತದೋ ಅವನು ಇನ್ನೊಬ್ಬನ ಸ್ಥಾನದ ಬಗ್ಗೆ ನಿರ್ಧರಿಸಬೇಕೆಂದು ಅವಳಿ ಸೋದರರಲ್ಲಿ ಒಪ್ಪಂದವಾಯಿತು.

ಬೆಟ್ಟಗಳ ಮೇಲೆ ಆಗಸದತ್ತ ನೋಡುತ್ತ ಹಕ್ಕಿಗಳ ಶಕುನಕ್ಕಾಗಿ ಕಾಯ್ದು ನಿಂತ ಸೋದರರ ಪೈಕಿ ರೀಮಸ್‌ನಿಗೆ ಆರು ರಣಹದ್ದುಗಳು ಹಾರುತ್ತ ಬರುತ್ತಿರುವುದು ಕಾಣಿಸಿತು. ರೋಮುಲಸ್ ಕಂಡದ್ದು ಹನ್ನೆರಡು ರಣಹದ್ದುಗಳನ್ನು. ಈಗ ಅಣ್ಣತಮ್ಮಂದಿರಿಬ್ಬರೂ 'ನಾನೇ ವಿಜಯಿ' ಎಂಬ ವಾದಕ್ಕಿಳಿದರು. ಸಹಸ್ರ ಸಂಖ್ಯೆಯ ಕುರುಬರಲ್ಲಿಯೂ ಇಬ್ಬಣವಾಯಿತು. ಒಬ್ಬನಿಗೆ ಮೊದಲು ಶಕುನ ಕಂಡಿತ್ತು. ಇನ್ನೊಬ್ಬನಿಗೆ ಹೆಚ್ಚು ಸ್ಪಷ್ಟವಾದ ಶಕುನ ಕಂಡಿತ್ತು. ಸರಿ, ಸೆಣಸಾಟಕ್ಕೆ ಇನ್ನೆಂಥ ಕಾರಣ ಬೇಕು?

ಹೊಸ ನಗರ ನಿವೇಶನದ ಅರ್ಧ ಕಟ್ಟಿದ ಗೋಡೆಗಳ ಮೇಲೆ ರೀಮಸ್ ಜಿಗಿದಾಗ ರೋಮುಲಸ್ ಕುಪಿತನಾದ. ತಮ್ಮನ ಮೇಲೇರಿ ಹೋಗಿ ಕ್ಷಣಾರ್ಧದಲ್ಲೇ ಆತನನ್ನು ರೋಮುಲಸ್ ಕೊಂದು ಹಾಕಿದ. "ನನ್ನ ಕೊತ್ತಲಗಳನ್ನು ಹೀಗೆ ಪ್ರವೇಶಿಸಲೆಳಸುವವರೆಲ್ಲ ಇದೇ ಗತಿಗೀಡಾಗಲಿ" ಎಂದು ಗರ್ಜಿಸಿದ. ಬಲ ಪ್ರಯೋಗದಿಂದ ತಾನೇ ಪ್ರಾಬಲ್ಯ ಬೆಳೆಯುವುದು. ಹದಿನೆಂಟರ ಹರೆಯದಲ್ಲೇ ರೋಮುಲಸ್ ರಾಜನಾದ. ಆ ನಗರಕ್ಕೂ ಆತನ ಸಾಮ್ರಾಜ್ಯಕ್ಕೂ ಆತನ ಹೆಸರೇ ಗಟ್ಟಿಯಾಯಿತು: ರೋಮ್. ರೋಮುಲಸ್‌ನಿಗೆ ಶುಭಶಕುನ ಕಂಡ ಪಾಲ್‌ಟೈನ್ ಬೆಟ್ಟದ ಮೇಲೆ ಕ್ರಿಸ್ತಪೂರ್ವ ೭೫೩ರಲ್ಲಿ ರೋಮ್‌ನಗರ ತಲೆಯೆತ್ತಿತು. ಹೆಚ್ಚುಕಡಿಮೆ ಚಚ್ಚೌಕವಾಗಿದ್ದ ಒಂದು ಮೈಲು ಸುತ್ತಳತೆಯ, ಸಾವಿರ ಮನೆಗಳ ರೋಮ್ ನಗರಕ್ಕೆ ಸುತ್ತಲಿನ ನಾಲ್ಕು ಮೈಲುಗಳ ಪ್ರದೇಶವೂ ಸೇರಿತ್ತು.

ಲಿವಿ ಎಂಬಾತ ಆ ಕಾಲದ ಬಗ್ಗೆ ಹೀಗೆ ಬರೆದಿಟ್ಟಿದ್ದಾನೆ– "ರೋಮುಳಸ್‌ನು ಮಾಡಿದ ಮೊದಲ ಕೆಲಸವೆಂದರೆ ಪಾಲಟೈನ್ ಬೆಟ್ಟವನ್ನು ಸುಭದ್ರಗೊಳಿಸಿ ದೇವತೆಗಳಿಗೆ ಬಲಿ

ವಿರಹ

ಪ್ರತಿದಿನ
ನಿನ್ನ ಧ್ಯಾನ
ದಲಿ
ಕದಪುಗಳಿಗೆ
ಕಂಬನಿಯ ಸ್ನಾನ

-ಅರವಿಂದ ದೀಕ್ಷಿತ್

ನೀಡಿದ್ದು. ವಿಧ್ಯುಕ್ತವಾಗಿ ಈ ಕಾರ್ಯವನ್ನು ಮಾಡಿ ಮುಗಿಸಿದ ಮೇಲೆ ಪ್ರಜೆಗಳನ್ನೆಲ್ಲ ಸೇರಿಸಿ ಅವರಿಗೆ ಕೆಲವು ಕಾನೂನು ಕಟ್ಟಳೆಗಳ ಕುರಿತು ತಿಳಿಹೇಳಿದ. ತನ್ನ ಪ್ರತಿಷ್ಠೆ ಮತ್ತು ಅಧಿಕಾರದ ಬಗ್ಗೆ ಅರಿವು ಮೂಡದಿದ್ದರೆ ತಾನು ಮಾಡಿದ ಕಾನೂನುಗಳನ್ನು ಪ್ರಜೆಗಳು ಪಾಲಿಸುವುದು ಕಷ್ಟ ಎಂದರಿತಿದ್ದ ರೋಮುಲಸ್ ತನ್ನ ಅಧಿಕಾರ ಎಷ್ಟು ಬಲಯುತವೆಂಬುದನ್ನು ಬಿಂಬಿಸುವ ಎಲ್ಲ ಯತ್ನಗಳನ್ನೂ ಮಾಡಿದ. ಮೊಟ್ಟಮೊದಲಿಗೆ ತನಗಾಗಿ ೧೨ ಜನರ ಅಂಗರಕ್ಷಕ ದಳವೊಂದನ್ನು ನೇಮಿಸಿಕೊಂಡ".

ರೋಮುಲಸ್‌ನ ಆಡಳಿತದಲ್ಲಿ ರೋಮ್ ಬೇಗನೇ ಬೆಳೆಯಿತು. ಅಲ್ಪಾವಧಿಯಲ್ಲಿಯೇ ಶಕ್ತಿ-ಸಂಪತ್ತುಗಳನ್ನು ಹೆಚ್ಚಿಸಿಕೊಂಡು ನೆರೆಹೊರೆಯ ದೇಶಗಳಿಗೆ ಸವಾಲೆಸೆಯಿತು. ರೋಮ್ ಜನತೆ ತಮ್ಮದೇ ಆದ ಒಂದು ಸಂವಿಧಾನವನ್ನು ರೂಪಿಸಿಕೊಳ್ಳಲೂ, ತಮಗಿಷ್ಟವಾದ ರಾಜನನ್ನು ಆರಿಸಿಕೊಳ್ಳಲೂ ಅವರಿಗೆ ರೋಮುಲಸ್ ಅವಕಾಶ ಕೊಟ್ಟ. ಆದರೆ ರೋಮ್, ಸಾಮ್ರಾಜ್ಯ ಸ್ಥಾಪಕನಾದ ರೋಮುಲಸ್‌ನೇ ತಮ್ಮ ರಾಜನೆಂದು ಜನ ಸಾರಿದರು. ಆತನೇ ಅವರ ಧಾರ್ಮಿಕ ನಾಯಕ, ಸಾರ್ವಭೌಮ ನ್ಯಾಯಾಧೀಶ ಮತ್ತು ಸೇನಾನಾಯಕ.

ಈ ಸರ್ವಶಕ್ತ ರಾಜ್ಯದಲ್ಲಿದ್ದ ಕೊರತೆಯೆಂದರೆ ಸ್ತ್ರೀಯರದು. ಆದ್ದರಿಂದ ನೆರೆಯ ಸಬೈನ ಸ್ತ್ರೀಯರನ್ನು ತನ್ನ ಪ್ರಜೆಗಳೊಂದಿಗೆ ವಿವಾಹ ಮಾಡಿಸುವ ಯೋಚನೆ ಆತನದು. ಆದರೆ ಈ ಸಂಬಂಧಕ್ಕೆ ಸಮರಪ್ರಿಯ ಸಬೈನರೊಪ್ಪಲಿಲ್ಲ. ರೋಮುಲಸ್ ಸುಮ್ಮನಿದ್ದಾನೆಯೆ? ನೆಪ್ಚೂನ್ ದೇವತೆಯ ಪ್ರೀತ್ಯರ್ಥ ಒಂದು ಭರ್ಜರಿ ಔತಣಕೂಟವನ್ನೂ ವಿನೋದಕೂಟವನ್ನೂ ಏರ್ಪಡಿಸಿದ. ಈ ದಾಸೋಹಕ್ಕೆ-ಮನರಂಜನ ಮೇಳಕ್ಕೆ ಸಬೈನರು

ತಮ್ಮ ಪತ್ನಿ-ಪುತ್ರಿಯರ ಸಮೇತ ಬಂದು ಸೇರಿದರು. ಅವರೆಲ್ಲ ಮೈಮರೆತು ಅಲ್ಲಿ ನಡೆಯುತ್ತಿರುವುದನ್ನು ನೋಡುತ್ತಿದ್ದಾಗ ರೋಮನ್ ಯುವಕರು ಕತ್ತಿ ಹಿರಿದು ನುಗ್ಗಿ ಸುಂದರಿಯರನ್ನು ಸೆಳೆದೊಯ್ದರು. ಸಬೈನರು ಹೋರಾಟಕ್ಕಿಳಿದರಾದರೂ ತಮ್ಮ ಹಲವಾರು ಪ್ರದೇಶಗಳನ್ನು ರೋಮುಲಸ್‌ನಿಗೆ ಬಿಟ್ಟುಕೊಟ್ಟು ಓಡಬೇಕಾಯಿತು. ಆದರೆ ಕ್ಯೂರಸ್ ನಗರದ ಟಾಟಿಯಸ್ ಎಂಬಾತ ಸಡ್ಡು ಹೊಡೆದು ನಿಂತ. ಇಪ್ಪತ್ತೈದು ಸಾವಿರದ ಸೈನ್ಯಬಲದೊಂದಿಗೆ ಹರಿಬಂದು ರೋಮನ್ನರ ಕ್ಯಾಪಿಟೋಲೈನ್ ಬೆಟ್ಟವನ್ನು ವಶಪಡಿಸಿಕೊಂಡುಬಿಟ್ಟ. ಕ್ಯಾಪಿಟೋಲೈನ್ ಮತ್ತು ಕ್ವಿರ್ನಿಯಾಲ್‌ಗಳ ನಡುವಣ ಕಣಿವೆಯಲ್ಲಿ ಸಬೈನರು-ರೋಮನ್ನರ ನಡುವೆ ಕೊನೆಯ ಯುದ್ಧ ನಡೆಯಿತು. ಸಮಬಲರ ಈ ಭೀಕರ ಹೋರಾಟದಲ್ಲಿ ಅನೇಕ ಸಾವು ನೋವುಗಳಾದವು. ಆದರೆ ಒಮ್ಮೆಂದೊಮ್ಮೆಲೇ ನೂರಾರು ಜನ ಸ್ತ್ರೀಯರು ತಮ್ಮ ತಲೆಗೂದಲನ್ನು ಹರವಿಕೊಂಡು ಪ್ರಾಣಾಪಾಯವನ್ನೂ ಲೆಕ್ಕಿಸದೇ ಓಡಿಬಂದು ಯುದ್ಧ ನಿಲ್ಲಿಸುವಂತೆ ಮೊರೆಯಿಟ್ಟರು. ಅವರೆಲ್ಲ ಈ ಯುದ್ಧಕ್ಕೆ ಕಾರಣರಾದ, ರೋಮನ್ ತರುಣರು ಅಪಹರಿಸಿಕೊಂಡೊಯ್ದ ಸಬೈನ ಹೆಂಗಸರು. ಇದನ್ನು ಕಂಡು ಉಭಯ ಪಕ್ಷಗಳವರೂ ಶಸ್ತ್ರತ್ಯಾಗ ಮಾಡಿ ಒಂದು ಒಪ್ಪಂದಕ್ಕೆ ಬಂದರು. ರೋಮುಲಸ್ ಮತ್ತು ಟಾಟಿಯಸ್ ಇಬ್ಬರೂ ಸಮಾನಾಧಿಕಾರದಿಂದ ರೋಮನ್ನು ಆಳಬೇಕು ಮತ್ತು ಸಬೈನರಿಗೂ ಆಡಳಿತದಲ್ಲಿ ಪಾಲು ಕೊಡಬೇಕು ಎಂದು. ಎರಡೂ ರಾಜ್ಯಗಳೂ ಒಂದಾದುವು.

ಐದು ವರ್ಷಗಳ ನಂತರ ವಿದ್ರೋಹಿಗಳಿಂದ ಟಾಟಿಯಸ್ ಹತನಾದ. ಹೀಗಾಗಿ ರೋಮುಲಸ್‌ನೇ ಆ ರಾಜ್ಯದ ಏಕಮೇವ ರಾಜನಾದ. ಆದರೆ ಅಧಿಕಾರ ದಾಹ ಆತನನ್ನು ಸರ್ವಾಧಿಕಾರಿಯನ್ನಾಗಿಸಿತು. ತಾನೇ ನಿರೂಪಿಸಿದ್ದ ನಿಯಮಗಳನ್ನು-ಕಾನೂನುಗಳನ್ನು ಧಿಕ್ಕರಿಸಿ ನಡೆಯತೊಡಗಿದ. ಸೆನೆಟ್ ತಾನು ಹೆಸರಿಗೆ ಮಾತ್ರವಿರುವುದಾಗಿ ಅರಿತುಕೊಂಡಿತಲ್ಲದೇ ತನ್ನನ್ನು ಸಾಧನವಾಗಿ ಬಳಸಿಕೊಂಡು ರೋಮುಲಸ್ ಸ್ವಾರ್ಥ ಸಾಧಿಸಿಕೊಳ್ಳುತ್ತಿರುವುದನ್ನು ಸಹಿಸದಾಯಿತು.


ಆದರೆ ಒಂದು ದಿನ ರೋಮುಲಸ್ ಹತನಾದ ಹೇಗೆಂಬುದು ಮಾತ್ರ ಇನ್ನೂ ನಿಗೂಢ. ಸೆನೆಟ್ ಸಭಾಂಗಣದಲ್ಲಿಯೇ ರೋಮುಲಸ್‌ನನ್ನು ನೂರು ಚೂರಾಗಿ ಕತ್ತರಿಸಿ ಹಾಕಲಾಯಿತೆಂದು ಕೆಲವರ ಅಭಿಪ್ರಾಯ. ಇನ್ನು ಕೆಲವರ ಪ್ರಕಾರ ಕಾಪ್ರಾದ ಜವುಗು ಪ್ರದೇಶದಲ್ಲಿ ಸೈನಿಕ ವೀಕ್ಷಣೆ ನಡೆಸುತ್ತಿದ್ದಾಗ ಸಿಡಿಲು, ಬಿರುಗಾಳಿ ಮೋಡ ಆವರಿಸಿದ್ದುವಂತೆ ಆ ಬಿರುಗಾಳಿ-ಮೋಡಗಳು ದಟ್ಟೈಸಿ ರೋಮುಲಸ್ ಕಣ್ಮರೆಯಾದನಂತೆ. (ಕ್ರಿಸ್ತಪೂರ್ವ ೭೧೬). ಸ್ವರ್ಗ ಆತನನ್ನು ಮೋಡಗಳ ಮೂಲಕ ಕರೆಸಿಕೊಂಡಿತು ಎಂದು ಜನ ನಂಬಿಬಿಟ್ಟರು. ಹೀಗೆ ಮೂವತ್ತೇಳು ವರ್ಷಗಳವರೆಗೆ ಆಳಿದ ರೋಮುಲಸ್ ಸಾಮಾನ್ಯ ರೋಮನ್ನರ ಮನದಲ್ಲಿ ದೇವತೆಯಾಗಿಬಿಟ್ಟ. ಆತನ ನೆನಪಿಗಾಗಿ ಕ್ವಿರಿನಸ್ ಎಂಬ ದೇವಾಲಯವೊಂದು ನಿರ್ಮಾಣವಾಯಿತು.

"ರೋಮ್ ಒಂದೇ ದಿನದಲ್ಲಿ ನಿರ್ಮಾಣವಾಗಲಿಲ್ಲ" ಎಂಬ ಆಂಗ್ಲ ಗಾದೆಯಿದೆಯಷ್ಟೇ. ಕ್ರಿಸ್ತಶಕ ಏಳನೆಯ ಶತಮಾನದ ವೇಳೆಗೆ ರೋಮ್ ಅತ್ಯುಚ್ಛ್ರಾಯಕ್ಕೇರಿತು. ಬ್ರಿಟನ್ ಮೊದಲ್ಗೊಂಡು ಏಶಿಯಾ ಮೈನರ್ ಅಲ್ಲದೇ ಎಲ್ಲ ಮೆಡಿಟರೇನಿಯನ್ ದ್ವೀಪಗಳೂ ಈ ಸಾಮ್ರಾಜ್ಯದ ಎಲ್ಲೆಗೊಳಪಟ್ಟಿದ್ದುವು. ಕ್ರಿಸ್ತಪೂರ್ವ ೭೦ರ ವೇಳೆಗೆ ಲಿವಿ ೧೪೩ ಸಂಪುಟಗಳಲ್ಲಿ ರೋಮ್ ಸಾಮ್ರಾಜ್ಯದ ಇತಿಹಾಸವನ್ನು ಬರೆದ. ಹುಟ್ಟಿ ಸಾವಿರ ವರ್ಷದೊಳಗಾಗಿ ಅದೊಂದು ನಾಗರಿಕತೆಯನ್ನು ಬೆಳೆಸಿಕೊಂಡು ಬಂದು ಮುಂದಿನ ನಾಗರಿಕತೆಗಳ ಮೇಲೆ ಅಳಿಸಲಾಗದ ಪ್ರಭಾವವನ್ನು ಬೀರಿತು. ಭೂಗೋಳದ ಅರ್ಧಕ್ಕೂ ಹೆಚ್ಚು ಪ್ರದೇಶದ ಮೇಲೆ ರೋಮ್ ಸಂಸ್ಕೃತಿಯ ಪ್ರಭಾವ ಉಂಟಾದದ್ದಂತೂ ನಿರ್ವಿವಾದದ ಮಾತು.

ಯಾವುದೇ ಮೂರ್ಖ ಸತ್ಯವನ್ನು ಹೇಳಬಲ್ಲ. ಆದರೆ ಸುಳ್ಳನ್ನು ಚೆನ್ನಾಗಿ ಹೇಳಲು ಬುದ್ಧಿಬೇಕು.
-ಸ್ಯಾಮುಯೆಲ್ ಬಟ್ಲರ್

'ಪ್ರೇಯಸಿಗಾಗಿ ಸಿಂಹಾಸನ ತೊರೆದ'

ಎಂಟನೆಯ ಎಡ್ವರ್ಡರು ನಾಜಿ ಹಸ್ತಕರಾಗಿದ್ದರೆ?



ಮೂಲ: **ಅಮರ್‌ನಾಥ್‌ರಾಯ್**

ಅನುವಾದ: **'ಸವ್ಯಸಾಚಿ'**

ಸುಮಾರು 51 ವರ್ಷಗಳ ಹಿಂದೆ ಇಂಗ್ಲೆಂಡಿನ ಸಮ್ರಾಟ ಎಂಟನೇ ಎಡ್ವರ್ಡ್‌ರು ತಮ್ಮ ಪ್ರೇಯಸಿ ಶ್ರೀಮತಿ ವೆಲಿಸ್ ವಾರ್‌ಫೀಲ್ಡ್ ಸ್ಪೆನ್ಸರ್ ಸಿಂಪ್ಸನ್‌ಳಿಗಾಗಿ ಬ್ರಿಟಿಶ್ ಸಿಂಹಾಸನವನ್ನು ತೊರೆದುಬಿಟ್ಟಿದ್ದರು. ಅವನ ಈ ಅಪೂರ್ವ ತ್ಯಾಗವನ್ನು ಕಂಡು ಅಸಂಖ್ಯ ಜನರು ಆತ 20ನೇ ಶತಮಾನದ ಮಜ್ನೂ, ಫರಹಾದ್, ರಾಂಝಾ ಹಾಗೂ ರೋಮಿಯೋ ಮುಂತಾಗಿ ಉದ್ಗರಿಸಿದರು. ಈ ವಿಚಿತ್ರ ಪ್ರೇಮಿಯ ಜನಜನಿತ ಕಥೆ ಇಂತಿದೆ:

ಯುವರಾಜ 'ಎಡ್ವರ್ಡ್ ಆಲ್ಬರ್ಟ್ ಕ್ರಿಶ್ಚಿಯನ್ ಜಾರ್ಜ್ ಎಂಡ್ರೂ ಪೆಟ್ರಿಕ್ ಡೇವಿಡ್'ರ 40 ವಸಂತಗಳಲ್ಲಿ ಎಷ್ಟೋ ರಾಜಕುಮಾರಿಯರೂ ಇತರ ಕನ್ನೆಯರೂ ಅವರನ್ನು ತಮ್ಮ ಹೃದಯ ಸಿಂಹಾಸನದಲ್ಲಿ ಕುಳ್ಳಿರಿಸುವ ಕನಸು ಕಾಣುತ್ತಿದ್ದರೂ ಆತ ಯಾರ ಮೋಹಪಾಶಕ್ಕೂ ಸಿಲುಕಲಿಲ್ಲ. ತನಗಿಂತಲೂ ಹೆಚ್ಚು ಪ್ರಾಯದ ವಿವಾಹಿತ ಅಮೇರಿಕನ್ ಮಹಿಳೆ ಶ್ರೀಮತಿ ಸಿಂಪ್ಸನ್ನಳನ್ನು ಆತ ಹಾರ್ದಿಕವಾಗಿ ಪ್ರೀತಿಸಿದರು. ಆಕೆಯ ಮೇಲೆ ಅವರ ಹುಚ್ಚು ಪ್ರೀತಿ ಅದೆಷ್ಟು ಹೆಚ್ಚಿತೆಂದರೆ ಅವರಿಗೆ ತನ್ನ ಮಾನ ಮರ್ಯಾದೆಯಾಗಲೀ ಭಾವೀ ಸಮ್ರಾಟನೆನಿಸುವ ತನ್ನ ಹೊಣೆಗಾರಿಕೆಯಾಗಲೀ ಗಮನ

ದಲ್ಲುಳಿಯಲಿಲ್ಲ. ಈ ನಡುವೆ 20-1-1936 ರಂದು ಬ್ರಿಟನ್ನಿನ ಐದನೇ ಜಾರ್ಜ್ ಅಸು ನೀಗಿದರು. ಮರುದಿನವೇ ಎಡ್ವರ್ಡ್‌ರು ಇಂಗ್ಲೆಂಡಿನ ಸಮ್ರಾಟನಾಗಿ ಘೋಷಿಸಲ್ಪಟ್ಟು, ನಿಯಮಾನುಸಾರ ಪಟ್ಟಾಭಿಷೇಕದ ಸಿದ್ಧತೆಗಳು ಆರಂಭವಾದವು. ಆಗಲೇ ಜನತೆಗೆ ಪ್ರೇಮ ಪ್ರಕರಣ ತಿಳಿಯಿತು. ದೇಶಾದ್ಯಂತ ಕೋಲಾಹಲವೆದ್ದಿತು. ಸಿಂಪ್ಸನ್‌ಳನ್ನು ತಮ್ಮ ಸಮ್ರಾಜ್ಞಿ ಎಂದು ಒಪ್ಪಲು ಪ್ರಜೆಗಳು ಸಿದ್ಧರಿದ್ದಿಲ್ಲ. ಪರಂಪರೆಯ ಪ್ರಕಾರ ಸಮ್ರಾಟನ ಮದುವೆ ರಾಜಕುಮಾರಿಯೊಡನೆಯೇ ನಡೆಯಬೇಕಿತ್ತು. ಆದರೆ ಎಡ್ವರ್ಡರು ತಮ್ಮ ಹಟ ಬಿಡಲಿಲ್ಲ. ದೇಶವೆದುರು ಭಯಂಕರ ವೈಧಾನಿಕ ಸಮಸ್ಯೆ ಬಂದು ನಿಂತಿತು. ಎಡ್ವರ್ಡರು ಸಿಂಹಾಸನವೇರಬೇಕು, ಇಲ್ಲವೇ ಪ್ರೇಯಸಿಯನ್ನು ಮದುವೆಯಾಗಬೇಕು. ಎರಡರಲ್ಲಿ ಒಂದನ್ನು ಮಾತ್ರ ಆಯ್ದುಕೊಳ್ಳಬೇಕಿತ್ತು. ಎಡ್ವರ್ಡರು ಮದುವೆಯನ್ನೆ ಆರಿಸಿಕೊಂಡರು. ತನ್ನ ಪ್ರಜೆಗಳನ್ನು ಬೀಳ್ಕೊಳ್ಳುತ್ತ ಅವರು 11-12-1936ರಂದು ನೀಡಿದ ರೇಡಿಯೋ ಸಂದೇಶದಲ್ಲಿ "ನಾನಿಂದು ಸಿಂಹಾಸನವನ್ನು ತೊರೆದು ಹೋಗುತ್ತಿದ್ದೇನೆ. ಇನ್ನು ನನ್ನ ಮೇಲೆ ಯಾವ ಭಾರವೂ ಇಲ್ಲ" ಎಂದು ತುಂಬಿ ಬಂದ ದನಿಯಲ್ಲಿ ನುಡಿದರು.

ರಾಜ್ಯತ್ಯಾಗದ ಆರು ತಿಂಗಳುಗಳ ಬಳಿಕ 3-6-1937ರಂದು ಶ್ರೀಮತಿ ಸಿಂಪ್ಸನ್‌ಳೊಂದಿಗೆ ಎಡ್ವರ್ಡರ ಮದುವೆ ನಡೆಯಿತು. ಅವರ ತಮ್ಮ ಬ್ರಿಟನ್ನಿನ ಸಮ್ರಾಟನೆನಿಸಿದ. ಎಡ್ವರ್ಡರಿಗೆ 'ಡ್ಯೂಕ್ ಆಫ್ ವಿಂಡ್ಸರ್' ಎಂಬ ಗೌರವ ಪದವಿ ನೀಡಿದ.

ಎಲ್ಲರಿಗೂ ತಿಳಿದ ಈ ಕತೆಯಿಂದ ಎಂಟನೇ ಎಡ್ವರ್ಡರ ಜೀವನ ತುಂಬಾ ಉದಾತ್ತವಾದುದೆಂದು ಭಾಸವಾಗುತ್ತದೆ. ಆದರೆ ಇತ್ತೀಚೆಗೆ ಹಲವು ಲೇಖಕರೂ ಇತಿಹಾಸಕಾರರೂ ಅವರ ಈ ಸ್ವರೂಪವನ್ನು ಪೂರ್ತಿಯಾಗಿ ಕೆಡಿಸಿಬಿಟ್ಟಿದ್ದಾರೆ. ಚಾರ್ಲ್ಸ್ ಜೆ.ಬಿ. ಮರ್ಫಿ ಮತ್ತು ಜೋಸೆಫ್ ಬ್ರ್ಯಾಯನ್ ತೃತೀಯ-ಎಂಬ ಲೇಖಕರು ಇತ್ತೀಚೆಗೆ 'ದ ವಿಂಡ್ಸರ್ ಸ್ಟೋರೀ' ಎಂಬ ತಮ್ಮ ಪುಸ್ತಕದಲ್ಲಿ "ಎಂಟನೇ ಎಡ್ವರ್ಡ್ ಪ್ರೇಮ ಪ್ರಕರಣದಿಂದಲ್ಲ—ತನ್ನ ತಪ್ಪುಗಳಿಂದಾಗಿ ಸಿಂಹಾಸನ ಕಳೆದುಕೊಳ್ಳಬೇಕಾಯಿತು" ಎಂದು ಹೇಳಿದ್ದಾರೆ.

ದೇಶದ ಸಂವಿಧಾನಾತ್ಮಕ ಪರಂಪರೆ, ಚರ್ಚ್ ಹಾಗೂ ಪ್ರಜೆಗಳ ಭಾವನೆಗಳನ್ನು ಗೌರವಿಸುತ್ತ ರಾಜಮಾತೆ ಮೇರಿ ತನ್ನ ಮಗನ ಪ್ರೇಯಸಿಯನ್ನು ಭೇಟಿಯಾಗಲು ಒಪ್ಪಲಿಲ್ಲ. ಯುವರಾಜ ಕಾರಣ ಕೇಳಿದಾಗ "ನಾನು ಆ ಕುಲಟೆಯನ್ನು ಭೇಟಿಯಾಗಲಾರೆ" ಎಂದು ಆಕೆ ಖಂಡತುಂಡವಾಗಿ ಹೇಳಿಬಿಟ್ಟಳಂತೆ. ಪ್ರಸಕ್ತ ಪರಂಪರೆಯಂತೆ ಯುವರಾಜ ರಾಜಮನೆತನಕ್ಕೆ ಸೇರದ ಕನ್ನೆಯನ್ನು ಮದುವೆಯಾಗುವಂತಿಲ್ಲ. ಅಲ್ಲದೆ ಶ್ರೀಮತಿ ಸಿಂಪ್ಸನ್ ತನ್ನ ಪತಿಯಿಂದ ಕಾನೂನು ಪ್ರಕಾರ ವಿಚ್ಛೇದನವನ್ನೂ ಪಡೆದಿರಲಿಲ್ಲ. ಪಟ್ಟಾಭಿಷೇಕಕ್ಕೆ ಮೊದಲು ಆಕೆಗೆ ವಿಚ್ಛೇದನ ಸಿಕ್ಕೀತೆಂದು ಯುವರಾಜ ಆಶಿಸಿದ್ದ. ಆಗ ತಾನು ಎಂದಾದರೂ ತಾಯಿ, ಸರ್ಕಾರ ಹಾಗೂ ಪ್ರಜೆಗಳನ್ನು ಸಮಜಾಯಿಸಿ ಸಿಂಪ್ಸನ್ನಳನ್ನು ಮದುವೆಯಾಗಲು ಒಪ್ಪಿಗೆ ಪಡೆಯುವುದಾಗಿ ಲೆಕ್ಕ ಹಾಕಿದ್ದ. ಆದರೆ ಪಟ್ಟಾಭಿಷೇಕದ ದಿನ ಸಮೀಪಿಸಿದರೂ ಶ್ರೀಮತಿ ಸಿಂಪ್ಸನ್ನಳಿಗೆ ವಿಚ್ಛೇದನ ದೊರೆಯಲಿಲ್ಲ. ಆಗ ಯುವರಾಜ ನಿರುಪಾಯನಾಗಿ ಸಿಂಹಾಸನವನ್ನು ತ್ಯಜಿಸಬೇಕಾಯಿತು. "ನಮ್ಮ ಈ ಲಂಪಟ ಪುತ್ರ ಒಂದು ವರ್ಷದೊಳಗೇ ಪೂರ್ತಿಯಾಗಿ ನಾಶವಾಗುವನು" ಎಂದು ಸಾಯುವ ಮುನ್ನ ಆತನ ತಂದೆ ನುಡಿದ ಭವಿಷ್ಯವಾಣಿ 11 ತಿಂಗಳೊಳಗೇ ನಿಜವಾಯಿತು.

ಆ ಇಬ್ಬರು ಲೇಖಕರ ಪ್ರಕಾರ ಯುವರಾಜ ಎಡ್ವರ್ಡ್ ನಿರಾಶರಾಗಿ ಅಧಿಕಾರ ತ್ಯಜಿಸಬೇಕಾಯಿತು. ಅವರಿಬ್ಬರೂ ಎಡ್ವರ್ಡರನ್ನು ತುಂಬ ಹತ್ತಿರದಿಂದ ನೋಡಿದವರು. ಎಡ್ವರ್ಡ್‌ನ ಒತ್ತಾಯದಂತೆ ಅಜ್ಞಾತವಾಗಿದ್ದುಕೊಂಡೇ ಈ ಕಥೆಯನ್ನು ಚಾರ್ಲ್ಸ್ ಮರ್ಫಿ ಬರೆದಿದ್ದ. ಮೂರನೇ ಬ್ರ್ಯಾಯನ್ ಜಲಸೇನಾಧಿಕಾರಿಯಾಗಿ ಎಡ್ವರ್ಡರ ಜತೆ ಕೆಲಸ ಮಾಡಿದ್ದ ಮರ್ಫಿ. ಹೀಗಾಗಿ ಚಾರ್ಲ್ಸ್ ಮರ್ಫಿ ಬರೆದ ವಿಷಯಗಳು ಕಪೋಲಕಲ್ಪಿತವೆಂದಾಗಲೀ ಹಾರಿಕೆ ಸುದ್ದಿಗಳೆಂದಾಗಲೀ ಹೇಳಲು ಸಾಧ್ಯವಿಲ್ಲ. ಎಡ್ವರ್ಡರು ಭಾವುಕರಾಗಿ ನೀಡಿದ್ದ ರೇಡಿಯೋ ಸಂದೇಶವನ್ನು ಕೇಳಿ ಎಷ್ಟೋ ಜನ ತಿರಸ್ಕಾರದಿಂದ ಮೂಗು ಮುರಿದುದನ್ನೂ ಮರ್ಫಿ ನೋಡಿದ್ದರು. ಎಡ್ವರ್ಡರ ದೌರ್ಬಲ್ಯವನ್ನು ತೋರ್ಪಡಿಸುವಂತಹ ಮುಂದಿನ ಎಷ್ಟೋ ಘಟನೆಗಳನ್ನು ಅವರು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಉದಾಹರಣೆಗೆ, ಎಡ್ವರ್ಡ್ ನಿರುಪಾಯರಾಗಿ ಸಿಂಹಾಸನ ತ್ಯಜಿಸಿದ್ದರೂ ಅವರ ಮನದಲ್ಲಿ ರಾಜಸುಖದ

ಲಾಲಸೆ ಕೊನೆಯುಸಿರಿನ ತನಕವೂ ಇತ್ತು. ಎರಡನೇ ಜಾಗತಿಕ ಯುದ್ಧದ ವೇಳೆ ಎಡ್ವರ್ಡ್ ಪ್ಯಾರಿಸ್ಸಿನ ಹತ್ತಿರ ಒಂದು ಯುದ್ಧ ಮೋರ್ಚಾದಲ್ಲಿ ನೇಮಕಗೊಂಡಿದ್ದ. ಜರ್ಮನ್ ಸೇನೆ ಪ್ಯಾರಿಸ್ಸಿನ ಮೇಲೆ ದಾಳಿಯಿಡುವ ಸಿದ್ಧತೆಯಲ್ಲಿದ್ದಾಗ, ಆತ ಮೆಲ್ಲನೆ ಅಲ್ಲಿಂದ ಸ್ಪೇನಿಗೆ ಜಾರಿದ. ಅಲ್ಲಿ ಗುಟ್ಟಾಗಿ ಹಿಟ್ಲರನ ಸಂಪರ್ಕವನ್ನು ಪಡೆದ.

ಜರ್ಮನಿಗಾಗಿ ಕೆಲಸ ಮಾಡಿದರೆ, ಜರ್ಮನಿ ಗೆದ್ದಾಗ ಎಡ್ವರ್ಡರನ್ನು ಇಂಗ್ಲೆಂಡಿನ ರಾಜನೆಂದೂ, ಅವರ ಪತ್ನಿಯನ್ನು ರಾಣಿಯೆಂದೂ ಘೋಷಿಸುವುದಾಗಿ ಹಿಟ್ಲರ್ ಅವನಲ್ಲಿ ಆಸೆ ಮೂಡಿಸಿದ್ದ. ಸ್ವಾರ್ಥಕ್ಕೆ ಬಲಿಬಿದ್ದ ಎಡ್ವರ್ಡ್ ತಮ್ಮ ದೇಶ ಹಾಗೂ ಮಿತ್ರರಾಷ್ಟ್ರಗಳಿಗೆ ದ್ರೋಹ ಬಗೆಯಲು ಒಪ್ಪಿದರು. ಆದರೆ ಚರ್ಚಿಲ್ಲರಿಗೆ ಈ ಸಂಚಿನ ಸುಳಿವು ಸಿಕ್ಕಿತು. ಅವರು ಎಡ್ವರ್ಡರನ್ನು ರಣರಂಗದಿಂದ ಸರಿಸಿ ಬಹಾನಾ ದ್ವೀಪದ ರಾಜ್ಯಪಾಲನನ್ನಾಗಿ ನೇಮಿಸಿದರು. ಯುದ್ಧ ಸಮಾಪ್ತಿಯ ಬಳಿಕ ಎಡ್ವರ್ಡ್ ಈ ನಾಟಕೀಯ ಜೀವನದಿಂದ ಹೊರಗೋಡಿದರಲ್ಲದೆ ತನ್ನನ್ನು ಅಮೆರಿಕೆಯಲ್ಲಿ ಇಂಗ್ಲೆಂಡಿನ ರಾಯಭಾರಿಯಾಗಿ ನೇಮಿಸಬೇಕೆಂದು ಆಗಿನ ಸರಕಾರಕ್ಕೆ ಒತ್ತಾಯ ಮಾಡಿದರು. ಆದರೆ ಈ ಕೋರಿಕೆ ನಿರಾಕರಿಸಲ್ಪಟ್ಟಿತು. ಹೀಗಾಗಿ ಎಡ್ವರ್ಡರು ಪತ್ನಿಯ ಜತೆ ಸಾಮಾನ್ಯ ನಾಗರಿಕನಂತೆ ಬಾಳತೊಡಗಿದರು.

ಈ ಇಬ್ಬರು ಲೇಖಕರಲ್ಲದೆ ಜೇಮ್ಸ್‌ಪೋಲ್ ಹಾಗೂ ಸುಜೇನ್ ಎಂಬ ಇಬ್ಬರು ಅಮೆರಿಕನ್ ಇತಿಹಾಸತಜ್ಞರೂ 'ಹೂ ಫೈನಾನ್ಸ್ಡ್ ಹಿಟ್ಲರ್?' (ಹಿಟ್ಲರ್‌ನಿಗೆ ಹಣ ಕೊಟ್ಟವರಾರು?) ಎಂಬ ಪುಸ್ತಕದಲ್ಲಿ ಎಂಟನೇ ಎಡ್ವರ್ಡ್ ದೊರೆಯ ಸಿಂಹಾಸನ ತ್ಯಾಗದ ಪರಿಸ್ಥಿತಿಯನ್ನು ವಿಶದವಾಗಿ ವ್ಯವಸ್ಥಿತ ರೀತಿಯಲ್ಲಿ ವರ್ಣಿಸಿದ್ದಾರೆ ಆತ ತನ್ನ ಪ್ರೇಯಸಿಗಾಗಿ ಅಲ್ಲ-ತನ್ನ ನೀತಿ ಹಾಗೂ ದೃಷ್ಟಿಕೋನದಿಂದಾಗಿ ಸಿಂಹಾಸನವನ್ನು ಬಿಡಬೇಕಾಯಿತು ಎಂದಿದ್ದಾರೆ. ಆರಂಭದಿಂದಲೆ ಎಡ್ವರ್ಡ್ ಜರ್ಮನಿಯತ್ತ ಒಲವು ತೋರಿದ್ದರು ಮತ್ತು ಹಾರ್ದಿಕವಾಗಿ ನಾಜೀ ವಿಚಾರಧಾರೆಯನ್ನೊಪ್ಪಿದರು. ಸರಕಾರಕ್ಕೆ ಇದು ತಿಳಿಯಿತು. ಸಿಂಪ್ಸನ್ ಪ್ರಕರಣವನ್ನು ಅದು ನೆಪವನ್ನಾಗಿ ಮಾಡಿಕೊಂಡು ಎಡ್ವರ್ಡರನ್ನು ಪದಚ್ಯುತರನ್ನಾಗಿಸಿತು. ತಮ್ಮ ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುವಂತಹ ಎಷ್ಟೋ ದಾಖಲೆಗಳನ್ನು ಈ ಇತಿಹಾಸಜ್ಞರು ಎದುರಿಗಿಟ್ಟಿದ್ದಾರೆ. ನಾಜೀ ವಿದೇಶ ಮಂತ್ರಿ ಹಾಗೂ ಇಂಗ್ಲೆಂಡಿನಲ್ಲಿ ಜರ್ಮನಿಯ ಮಾಜೀ ರಾಯಭಾರಿಯಾಗಿದ್ದ ವಾನ್ ರಿಬೆನ್ ಟ್ರೋಪ್ 2-1-1938ರಂದು ಹಿಟ್ಲರನಿಗೆ ಕಳುಹಿಸಿದ್ದ ಒಂದು ಪತ್ರವನ್ನು ಪ್ರಮಾಣವಾಗಿ ಉಲ್ಲೇಖಿಸಿದ್ದಾರೆ.– "ರಾಷ್ಟ್ರೀಯ ಸಮಾಜ ವಾದದ ಮೂಲಕ ಎಲ್ಲವೂ ಸಾಧ್ಯವೆಂದು ಭಾವಿಸಲಾಗುತ್ತಿದೆ. ತಮ್ಮ ವಿಚಾರಧಾರೆಯಿಂದಾಗಿ ಎಂಟನೇ ಎಡ್ವರ್ಡ್ ಜರ್ಮನಿ ವಿರೋಧಿ-ನೀತಿಗಳಿಗೆ ಪೂರ್ಣ ಸಮರ್ಥನೆ ನೀಡಲಾರರೆಂದು ಬ್ರಿಟನ್ನಿನ ಮಾಜಿ ಪ್ರಧಾನಿ ಬಾಲ್ಡ್‌ವಿನ್‌ರಿಗೆ ಮೊದಲೇ ಸಂದೇಹವುಂಟಾಗಿತ್ತು. ಪರಿಣಾಮವಾಗಿ ಅವರು ರಾಜ್ಯಾಧಿಕಾರದಿಂದ ವಂಚಿತರಾದರು".


ಇದೇ ರೀತಿ ಲಂಡನ್ನಿನಲ್ಲಿ ಪ್ರಕಟವಾಗುವ 'ಸಂಡೆ ಟೈಮ್ಸ್' ಎಂಬ ದೈನಿಕ ಪತ್ರಿಕೆ ಇತ್ತೀಚೆಗೆ ಹೀಗೆ ಬರೆಯಿತು-"ಎಂಟನೇ ಎಡ್ವರ್ಡ್ ರಾಷ್ಟ್ರ ಹಿತವನ್ನು ನಿರ್ಲಕ್ಷಿಸಿ ಹಿಟ್ಲರನ ಸಂಪರ್ಕ ಪಡೆದಿದ್ದರು. ಎಂತಲೇ ಎರಡನೇ ಮಹಾಯುದ್ಧ ಕೊನೆಗೊಳ್ಳುತ್ತಲೇ ಎರಡನೇ ಎಲಿಜಾಬೆತ್ ರಾಣಿಯ ತಂದೆ ಆರನೇ ಎಡ್ವರ್ಡರು ಎಂಟೋನೀ ಬ್ಲಂಟ್ ಎಂಬ ಕಲಾ ಇತಿಹಾಸಜ್ಞನನ್ನು ಗುಟ್ಟಾಗಿ ಜರ್ಮನಿಗೆ ಕಳುಹಿಸಿದ್ದರು. ಎಂಟನೇ ಎಡ್ವರ್ಡ್ ಹಾಗೂ ಹಿಟ್ಲರನ ನಡುವಿನ ಸಂಬಂಧ ಗಳನ್ನು ಬಹಿರಂಗಗೊಳಿಸುವ ಮೂಲ ದಸ್ತಾವೇಜುಗಳನ್ನು ಹಾರಿಸಿ ತರುವುದೇ ಬ್ಲಂಟನ ಮೂಲೋದ್ದೇಶವಾಗಿತ್ತು. ಬ್ರಿಟಿಶ್ ರಾಜಮನೆ ತನದ ಕೀರ್ತಿಗೆ ತಗಲುವ ಕಳಂಕವನ್ನು ತೊಡೆದು ಹಾಕುವ ಸದುದ್ದೇಶದಿಂದ ಆ ವ್ಯಕ್ತಿಯನ್ನು ಕಳುಹಿಸಲಾಯಿತೆಂಬುದನ್ನು 'ಹೇಸ್'ದ ರಾಜ ಕುಮಾರ ಫಿಲಿಪ್ ಕೂಡ ಒಪ್ಪಿಕೊಂಡಿದ್ದಾನೆ. ರಾಜ ಕುಮಾರ ಫಿಲಿಪ್ ಇಂಗ್ಲೆಂಡಿನ ರಾಜ ಮನೆತನದ ಸಂಬಂಧಿಕನೆಂಬುದನ್ನು ನೆನಪಿಡಬೇಕು".

ಮೇಲಿನ ಈ ಎಲ್ಲ ತಥ್ಯಗಳನ್ನು ನೋಡಿದಾಗ ಎಂಟನೇ ಎಡ್ವರ್ಡರನ್ನು ಅವನ ಪ್ರೇಯಸಿಗಾಗಿ ಅಲ್ಲ–ತಪ್ಪು ವಿಚಾರಧಾರೆ ಹಾಗೂ ದೇಶ ವಿರೋಧಿ ಚಟುವಟಿಕೆಗಳಿಗಾಗಿ ಸಿಂಹಾಸನದಿಂದ ಕೆಳಗಿಳಿಸಲಾಯಿತೆಂದು ನಿಸ್ಸಂದೇಹವಾಗಿ ಹೇಳಬಹುದು.

ಪುಸ್ತಕ ವಿಭಾಗ

ಯಶವಂತ ಚಿತ್ತಾಲರ

ಛೇದ



ಸಂಗ್ರಹ: ರಮಾ ಕಾರಂತ

—: ಭೇದ :—

ಯಶವಂತ ಚಿತ್ತಾಲರು ಕನ್ನಡಕ್ಕೆ ಮೌಲಿಕ ಸಾಹಿತ್ಯವನ್ನು ಕೊಟ್ಟ ಕೆಲವೇ ಲೇಖಕರಲ್ಲಿ ಒಬ್ಬರು. ಮುಂಬಯಿಯಲ್ಲಿ ಗುರುತರ ಜವಾಬ್ದಾರಿಯ ಕೆಲಸಗಳ ನಡುವೆಯೂ ನಮಗೆ ಗಹನ ವಿಚಾರದ ಕಾದಂಬರಿಗಳನ್ನು, ಕಥಾ ಸಂಗ್ರಹಗಳನ್ನು ಕೊಡುತ್ತ ಬಂದಿರುವ ಅವರ ಸೃಜನಶೀಲತೆ ಅಚ್ಚರಿ ತರಿಸುವಂಥದು. 'ಕತೆಯಾದಳು ಹುಡುಗಿ', 'ಬೇನ್ಯಾ'ಗಳಂಥ ಕಥಾ ಸಂಗ್ರಹಗಳನ್ನು ನೀಡಿದ ಅವರು ಈವರೆಗೆ ಬರೆದ ಕಾದಂಬರಿಗಳಲ್ಲಿ 'ಭೇದ' ಮೂರನೆಯದು. 1964ರಲ್ಲಿ 'ಮೂರು ದಾರಿಗಳು' ಹದಿನೈದು ವರ್ಷಗಳ ನಂತರ 'ಶಿಕಾರಿ' ಅದಾಗಿ ಆರು ವರ್ಷಗಳಾದ ಮೇಲೆ ಈ 'ಭೇದ'... ಚಿತ್ತಾಲರು ಗಹನವಾದುದರ ಜೊತೆಗೆ ಗಮನಾರ್ಹವಾದುದನ್ನೂ ನೀಡುತ್ತಿರುವುದಕ್ಕೆ ಅರ್ಥಪೂರ್ಣ ವಿವರಣೆ ನೀಡುತ್ತದೆ ಈ ದೀರ್ಘ ಅವಧಿ.

ಈಗಾಗಲೇ ಅವರ 'ಮೂರು ದಾರಿಗಳು' ಕಾದಂಬರಿಯ ಪಾತ್ರ ಸಂಗ್ರಹವನ್ನು 'ಕಸ್ತೂರಿ'ಯ ಓದುಗರು ಮೆಚ್ಚಿದ್ದಾರೆ. ಈಗ 'ಭೇದ'ದ ಸಾರ ಸಂಕ್ಷೇಪವನ್ನು ಶ್ರೀಮತಿ ರಮಾ ಕಾರಂತರು 'ಕಸ್ತೂರಿ'ಯ ಓದುಗರಿಗೆ ಕೊಟ್ಟಿದ್ದಾರೆ.

ಅಂದು ಶನಿವಾರ ಮಧ್ಯಾಹ್ನ....

ಇನ್ನೆರಡು ತಿಂಗಳಲ್ಲಿ ನಿವೃತ್ತನಾಗಲಿದ್ದ ಪಾರಸೀ ಗೃಹಸ್ಥ ಬೆಹರಾಮ್ ಕೇಕೀ ಪೋಚಕಾನವಾಲಾ, ಮನೆಯ ಬಾಲ್ಕನಿಯಲ್ಲಿ ಕುಳಿತು ಮುಂದಿನ ವಿಶ್ರಾಂತಿ ದಿನಗಳ ಬಗೆಗೆ ಯೋಚಿಸುತ್ತ ಚಹ ಕುಡಿಯುತ್ತಿರುವಾಗ ಹೊರಗಿನ ಕರೆಗಂಟೆ ಬಾರಿಸಿ, ಗುರುತಿನ ಕಾರ್ಡು ತೋರಿಸಿ ಒಳಗೆ ಬಂದ ಸುಮಾರು ಇಪ್ಪತ್ತೈದು ವರ್ಷದ ಯುವಕನೊಬ್ಬ ಅವನ ಇದಿರು ಕುರ್ಚಿಯಲ್ಲಿ ಕೂರುತ್ತ "ಸರ್, ನಾನು ಕರುಣಾಕರನ್, "ಎಕ್ಸ್‌ಪ್ರೆಸ್' ಪತ್ರಿಕೆಯ ವರದಿಗಾರ. ಇಲ್ಲಿ ಕೆಲವು ತಿಂಗಳ ಹಿಂದೆ ನಡೆದ ರದ್ದೀವಾಲಾ ಖೂನಿಯ ಬಗ್ಗೆ ನಿಮ್ಮಿಂದ ಮಾಹಿತಿ ಬೇಕಾಗಿತ್ತು" ಎಂದ.

ಬೆಹರಾಮ್ ಮುಂಬಯಿಯ ಬ್ರಿಟಿಷ್ ಆಡಳಿತವುಳ್ಳ ರಸಾಯನಿಕ ಉದ್ಯೋಗಕ್ಕೆ ಸಂಬಂಧಪಟ್ಟ ಕಂಪನಿಯೊಂದರಲ್ಲಿ ಮೇಲಿನ ಹುದ್ದೆಯಲ್ಲಿದ್ದವನು. ಕಂಪನಿಯ ನಿಯಮದ ಪ್ರಕಾರ ಎರಡು ವರ್ಷದ ಹಿಂದೆಯೆ, ಅಂದರೆ ಐವತ್ತೆಂಟನೆಯ ವರ್ಷದಲ್ಲಿಯೇ ನಿವೃತ್ತನಾಗಬೇಕಿತ್ತು. ಆದರೆ ಇತ್ತೀಚೆಗಿನ ಕೆಲವು ವರ್ಷಗಳಲ್ಲಿ, ಆಡಳಿತದಲ್ಲಿ ಬದಲಾವಣೆಗಳಾಗಿ, ಕಂಪನಿ ಮಾರವಾಡಿ ಉದ್ಯೋಗಪತಿಯೊಬ್ಬನ ಒಡೆತನಕ್ಕೆ ಬಂದ ಮೇಲೆ, ಆವರೆಗೂ ಇಲ್ಲದ ದುಷ್ಟ ರಾಜಕಾರಣ ತಲೆಯೆತ್ತಲು ಶುರುವಾದಾಗ, ಹಲವು ಕಿರಿಯ ಅಧಿಕಾರಿಗಳು ಕೆಲಸಕ್ಕೆ ರಾಜೀನಾಮೆ ಕೊಟ್ಟು, ಬೇರೆ ಕಂಪನಿಗಳನ್ನು ಸೇರಿದರು. ಹೊಸಬರನ್ನು ನೇಮಿಸಿ ತರಬೇತುಗೊಳಿಸಲು ಸಮಯ

ಬೇಕಿತ್ತು. ಹೀಗಾಗಿ ಬಹಳ ವರ್ಷದ ಅನುಭವವಿದ್ದ ಬೆಹರಾಮನ್ ನಿವೃತ್ತಿಯ ಸಮಯ ಎರಡು ವರ್ಷ ಮುಂದೆ ಬಿತ್ತು.

ಹಾಗೆ ನೋಡಿದರೆ ಕೆಲಸ ಮಾಡುವ ಅಗತ್ಯವೇ ಇಲ್ಲ. ಅವನಿಗೆ ಇಬ್ಬರೇ ಮಕ್ಕಳು. ಒಬ್ಬ ಮಗಳು, ಒಬ್ಬ ಮಗ. ಹಿರಿಯವಳು ಶಿರೀನ್ ಹತ್ತು ವರ್ಷದ ಹಿಂದೆಯೇ ಮದುವೆಯಾಗಿ ಜಮ್‌ಶೇಡ್‌ಪುರದಲ್ಲಿ ಗಂಡ, ಮೂವರು ಮಕ್ಕಳೊಡನೆ ಸುಖವಾಗಿದ್ದಾಳೆ. ಶಿರೀನ್‌ಳ ತಮ್ಮ ಕೇಕಿ ಅಮೇರಿಕೆಗೆ ಇಂಜಿನಿಯರಿಂಗ್ ಕಲಿಯಲು ಹೋದವನು ಅಲ್ಲಿಯೇ ನೌಕರಿ ದೊರಕಿಸಿ, ಅಲ್ಲಿಯವಳೇ ಒಬ್ಬ ಹುಡುಗಿಯನ್ನು ಮದುವೆಯಾಗಿ ಐದುವರ್ಷದಿಂದ ಅಮೇರಿಕೆಯಲ್ಲಿಯೇ ಮಜವಾಗಿದ್ದಾನೆ. ನಿವೃತ್ತರಾದ ಕೂಡಲೇ ಒಂದೆರಡು ತಿಂಗಳ ಮಟ್ಟಿಗಾದರೂ ತಂದೆತಾಯಿಗಳು ತಮ್ಮಲ್ಲಿಗೆ ಬಂದು ಅಮೇರಿಕೆಯ ವೈಭವವನ್ನು ಸವಿಯಬೇಕು ಎಂಬ ಆಶಯದ ಪತ್ರ ಕೆಲವು ದಿನದಹಿಂದೆ ಬಂದಿದೆ.

ನಿವೃತ್ತಿಯಾದ ದಿನವೇ ಅವನನ್ನು ಜಮ್‌ಶೇಡ್‌ಪುರಕ್ಕೆ ಕರೆದುಕೊಂಡು ಹೋಗಬೇಕೆಂದು ಅವನ ಮಗಳೂ ಮೊನ್ನೆಯಷ್ಟೇ ಬಂದಿದ್ದಾಳೆ: ಶಾಲೆಗೆ ರಜೆ ಸಿಕ್ಕ ಮಕ್ಕಳೊಡನೆ. ಇಷ್ಟು ದೀರ್ಘಕಾಲದ ಸೇವೆಯ ನಂತರ ವಿಶ್ರಾಂತಿ ಪಡೆಯುವ ಅರವತ್ತು ದಾಟಿದವನ ಮಾನಸಿಕ ಸ್ಥಿತಿಯ ಬಗ್ಗೆ ಬೆಹರಾಮನಿಗಿಂತ ಆತನ ಮಗಳೇ ಹೆಚ್ಚು ಯೋಚಿಸಿದಂತಿತ್ತು.

ಕಳೆದ ಹಲವು ವರ್ಷಗಳಲ್ಲಿ ಒಮ್ಮೆಯೂ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದವನಲ್ಲವಾದರೂ ಬೆಹರಾಮ್ ನಾಜೂಕು ಪ್ರಕೃತಿಯವನು. ಸಾಧಾರಣ ಆರು ಫೂಟು ಎತ್ತರಕ್ಕೆ ಶೋಭಿಸದ ಉದ್ದವಾದ ಮೋರೆಯಲ್ಲಿ ಪ್ರತಿಯೊಂದು ಉದ್ದವಾದದ್ದು. ಕಿವಿ, ಮೂಗು, ಹಣೆ ಎಲ್ಲ. ಬಂಗಾರದ ಗಿಲೀಟಿನ ಫ್ರೇಮಿನ ದಪ್ಪ ಗಾಜಿನ ಕನ್ನಡಕದೊಳಗಿಂದ ಅವಲೋಕಿಸುವ ಚುರುಕು ಕಣ್ಣುಗಳು. ಒಟ್ಟು ವ್ಯಕ್ತಿತ್ವ ಶಾಂತ. ಮೆತ್ತಗಿನ ಸ್ವಭಾವವನ್ನು [illegible]. ಕೇರಿಯ ಮನೆಗಳಲ್ಲಿ, [illegible]

[illegible]

ಕಾರಣವೂ ಇಲ್ಲದೇ ದೇಹದಲ್ಲಿ ಸೇರಿಕೊಂಡಿದ್ದ ಬಳಲಿಕೆಯು ಕಾರಣ. ಮಾನಸಿಕವಾಗಿರಬಹುದೆಂಬ ಗುಮಾನಿ ಬೆಹರಾಮನಿಗೆ ಇಲ್ಲದೆ ಇಲ್ಲ. ದಿನವೂ ರಾತ್ರಿ ಕಾಂಪೋಸ್ ಮಾತ್ರೆ ಸೇವಿಸಿದ ಮೇಲೆಯೆ ನಿದ್ರೆ ಬರುತ್ತಿತ್ತು. ಶಿರೀನ್‌ಳ ಚಿಂತೆಯ ಕಾರಣವೂ ಇದೇ ಆಗಿತ್ತು.

ಕರುಣಾಕರನ್ ತುಂಬ ಸುಟಿಯಾದ ಹುಡುಗ. ಸ್ವಚ್ಛವಾದ ಅಚ್ಚ ನೀಲಿ ಬಣ್ಣದ ಜೀನ್ಸ್, ಕಾಲರ್ ಇಲ್ಲದ ಅರ್ಧ ತೋಳಿನ ಹಳದಿ ಬಣ್ಣದ ಜರ್ಸಿ. ಜರ್ಸಿಯ ಎದೆಯಮೇಲೆ ನಿರ್ಮಾಪಕರ ಹೆಸರಿನ ಚಿಹ್ನೆ. ಚೆನ್ನಾಗಿ ಲಕಲಕಿಸುವ ಕಪ್ಪು ಬಣ್ಣದ ಲೆದರ್ ಬೂಟುಗಳು. ಮಧ್ಯದಲ್ಲಿ ಬೈತಲೆ ತೆಗೆದು ಬಾಚಿಕೊಂಡ ತಲೆಗೂದಲು. ಅದರಷ್ಟಕ್ಕೆ ಬೆಳೆಯಲು ಬಿಟ್ಟ ದಪ್ಪ ಮೀಸೆ. ಸೆಲ್ಯೂಲಾಯ್ಡ್ ಫ್ರೇಮಿನ ಕನ್ನಡಕ ಇವೆಲ್ಲವುಗಳಿಗೆ ಆರೋಗ್ಯದ ಲವಲವಿಕೆಯ ಕಳೆ ತುಂಬಿದ, ಸೌಜನ್ಯ ತುಂಬಿದ ಹಸನ್ಮುಖ. ಕರುಣಾಕರನ್ ಕೇಳಿದ ಪ್ರಶ್ನೆಗೆ ಮೈನವಿರೇಳಲು ಕಾರಣವಾದದ್ದು, ಅವನು ಕೇಳಿದ ರೀತಿಯೋ ಅಥವಾ ಸದೃಢ ತನ್ನ ದೇಹಮಾನವೋ ಬೆಹರಾಮನಿಗೆ ಸ್ಪಷ್ಟವಾಗಲಿಲ್ಲ. ಕರುಣಾಕರನ್ ಕರೆಗಂಟೆ ಬಾರಿಸಿದಾಗ ಕದ ತೆರೆದು ಅವನನ್ನು ಒಳಗೆಬಿಟ್ಟ ಚಿಕ್ಕ ಪ್ರಾಯದ ಸೀತೆ ಅವರ ಸಲುವಾಗಿ ಚಹ ಮಾಡಿ ತಂದಳು.

ಚಹ ಕುಡಿಯುತ್ತ ಕರುಣಾಕರನ್ ಕಡೆ ನೋಡುತ್ತಿದ್ದಾಗ ಅವನು ಕೇಳಿದ ಪ್ರಶ್ನೆಗಳಿಗೆ ಹೇಗೆ ಉತ್ತರ ಕೊಡಬೇಕೆಂದು ಬೆಹರಾಮ್ ಚಿಂತಿಸತೊಡಗಿದ.

ತನಗೆ ಅಗತ್ಯವಿಲ್ಲದ, ತನಗೆ ಸಂಬಂಧಿಸದ ಈ ಪ್ರಶ್ನೆಗೆ ಹಲವು ಉತ್ತರಗಳು ಮನದಲ್ಲಿ [illegible] ಇನ್ನೊಂದು ಪ್ರಶ್ನೆಯೇ ಆಗಿತ್ತು. "ಯಾವರೀತಿಯಿಂದಲೂ ಸಂಬಂಧವಿಲ್ಲದ ಈ ಖೂನಿಯ ಬಗ್ಗೆ ನನ್ನ ಹತ್ತಿರ ಮಾಹಿತಿ ಇದೆಯೆಂದು ನಿಮಗೆ ಯಾರು ಹೇಳಿದರು?" ಪ್ರಶ್ನೆಯಲ್ಲಿ ಮೂಡಿದ ಅನಾವಶ್ಯಕ ಆತುರಿಕೆಯಿಂದ ಬೆಹರಾಮನಿಗೆ ಅಸಮಾಧಾನವೆನ್ನಿಸಿತು.

"ನಿಮ್ಮ ನೆರೆಹೊರೆಯಲ್ಲಿಯೇ ನಡೆದ ಕೊಲೆಯಲ್ಲವೆ?" ಹೇಳಿದಲ್ಲಿ ಹತ್ತಾರು ಕೊಲೆಗಳ [illegible] ಮನಸ್ಸು ಹಿಡುಗಟ್ಟಿದರೂ. [illegible] ಇದು ಮನುಷ್ಯನ [illegible] ಹಾಗೆ. "ಅವರಿಂದ ಕೇಳಿ ತಿಳಿದ [illegible]." ಇವನ ಮಗ [illegible]

ಝೋಪಡಿಯಲ್ಲಿ ಕಳ್ಳಭಟ್ಟಿ ನಡೆಸುತ್ತಿದ್ದವರ
ಬಗ್ಗೆ ಇವನು ಪೊಲೀಸರಿಗೆ ಮಾಹಿತಿ ಒದಗಿಸು
ತ್ತಿದ್ದ ಎಂಬ ಗುಮಾನಿ ಈ ಕೊಲೆಗೆ ಕಾರಣ
ವಾಯಿತಂತೆ" "ಇದು ನಿಮಗೆ ಹೇಗೆ
ಗೊತ್ತಾಯಿತು?"

ಕರುಣಾಕರನ್ ಪ್ರಶ್ನೆಯೊಳಗಿನ ತನಿಖೆಯ
ಧಾಟಿ ಬೆಹರಾಮನಿಗೆ ಹಿಡಿಸಲಿಲ್ಲ. ಆದರೂ
ಖೂನಿಗೆ ಸಂಬಂಧಪಟ್ಟ ಮಾತುಕತೆಯಾದ್ದ
ರಿಂದ ತನಿಖೆಯ ಧಾಟಿ ತಂತಾನೇ ಬಂದು ಸೇರಿ
ಕೊಂಡಿರಬೇಕು ಎಂದು ಸಮಾಧಾನಗೊಂಡ.
"ನೋಡಿ ಕರಣಾಕರನ್ ನನಗೀಗ ವಯಸ್ಸಾದು
ದಕ್ಕೋ ಏನೋ ಇಂಥದ್ದನ್ನೆಲ್ಲ ಸಹಿಸುವ ಗಟ್ಟಿ
ತನವೇ ಇಲ್ಲವಾಗಿದೆ. ಆಗ ಚಹ ಮಾಡಿ
ತಂದಳಲ್ಲ? ಆ ಹುಡುಗಿಯ ತಾಯಿ ಪಾರ್ವತಿ,
ನಮ್ಮಲ್ಲಿ ಕಸಮುಸುರೆಯ ಕೆಲಸ ಮಾಡುತ್ತಾಳೆ.
ಅವಳೆಲ್ಲೋ ರಾಜಕಾರಣಿಯಾಗಬೇಕಿತ್ತು.
ಅವಳಿಗೆ ಈ ಖೂನಿಯ ಬಗ್ಗೆ ಬಹಳಷ್ಟು
ಗೊತ್ತಿದೆ. ನಾಳೆ ಇದೇ ಹೊತ್ತಿಗೆ ಬನ್ನಿರಿ, ಜಮ
ಶೇದಪುರದಿಂದ ನನ್ನ ಮಗಳು ಬಂದಿದ್ದಾಳೆ.
ಅವಳೂ ಬೇಕಾದರೆ ನಿಮ್ಮೊಡನೆ ಮಾತಾಡಲಿ.
ಸಾಯ್ಕಾಲಜಿಯಲ್ಲಿ ಎಂ.ಎ. ಅವಳು.
ಇಂಥದರ ಬಗೆಗೆ ತುಂಬ ಓದಿಕೊಂಡವಳು".
ಇಷ್ಟನ್ನು ಹೇಳುವುದರೊಳಗೆ ಬೆಹರಾಮನಿಗೆ
ಬಹಳ ದಣಿವಾಯಿತು. ತನ್ನನ್ನೇ ವಿಚಿತ್ರ ಕುತೂ
ಹಲದಿಂದ ನೋಡುತ್ತಾ ಕುಳಿತ ಕರುಣಾಕರ
ನನ್ನು ನೋಡಿ, "ನಿಮ್ಮ ಕಿಸೆಯಲ್ಲಿ ಸಿಗರೇಟ್
ಪ್ಯಾಕ್ ನಾನು ಕಾಣದೆ ಇಲ್ಲ, ಸೇದಬೇಕು ಎನಿ
ಸಿದರೆ ಸೇದಲು ಭಿಡೆ ಮಾಡಿಕೊಳ್ಳಬೇಡಿರಿ.
ಎನ್ನುತ್ತ ಆ್ಯಶ್‌ಟ್ರೇ ಮತ್ತು ಬೆಂಕಿ ಪೆಟ್ಟಿಗೆ
ಯನ್ನು ತಂದ.

ಸಿಗರೇಟೊಂದನ್ನು ಹಚ್ಚಿಕೊಳ್ಳುವಾಗ
ಕರುಣಾಕರನ್‌ಗೆ ಹಾಯೆನಿಸಿತು. ಹಿಂದೆಂದೂ
ಕಂಡಿರದ ಈ ಹಿರಿಯನ ಎದುರು ಕೂತು
ಮಾತನಾಡುವಾಗ ಕರುಣಾಕರನ್ ಒಳ
ಗೊಳಗೆ ಒಂದು ರೀತಿಯ ಆತಂಕದಿಂದ ಬಿಗಿ
ಗೊಂಡಿದ್ದ. ಸಹಜವಾಗಿಯೆ ದೃಷ್ಟಿ ಬಾಲ್ಕ
ನಿಯ ಕಟಕಟೆಯ ಹೊರಗೆ ಸರಿದು
ಅದುವರೆಗೂ ಲಕ್ಷಕ್ಕೆ ಬಂದಿರದ ಸಮುದ್ರದ
ಮೇಲೆ ತಳವೂರಿತು. ಸಂಜೆ ಐದು ಗಂಟೆಯಾ
ಗುತ್ತಾ ಬಂದರೂ ನೀರಿನ ಮೇಲಿನ ಬೆಳಕು
ಇನ್ನೂ ಮಾಸಿರಲಿಲ್ಲ. ಮುದುಕ ಒಳ್ಳೆಯ
ಜಾಗದಲ್ಲಿ ಮನೆಮಾಡಿದ್ದಾನೆ ಎನ್ನಿಸಿತು.

"ಅಲ್ಲ, ಕರುಣಾಕರನ್ ನೀವು ಈ ಖೂನಿಯ
ಮಾಹಿತಿಯ ಬಗೆಗೆ ನಮ್ಮ ಮನೆಗೆ ಬಂದಿದ್ದು
ಹೇಗೆ?"

"ಇಲ್ಲ ಸರ್, ನನಗೂ ಗೊತ್ತಿಲ್ಲ. ಬಹುಶಃ
ಬಸ್ ಸ್ಟಾಪಿನಲ್ಲಿ ಇಳಿದ ಕೂಡಲೇ ನೋಡಿದ
ಮೊದಲನೆ ಮನೆಯೇ ನಿಮ್ಮದಾದುದಕ್ಕೆ ಇರ
ಬೇಕು ಎನ್ನಿಸುತ್ತದೆ. ನೀವು ನನ್ನನ್ನು
ನಂಬಬೇಕು. ಸರ್, ಈ ಖೂನಿಯ ಬಗ್ಗೆ
ಯಾವುದೇ ದುಷ್ಟ ಕುತೂಹಲದಿಂದ ಬಂದವ
ನಲ್ಲ. ಮೊನ್ನೆ ಸಂಪಾದಕರ ಹೆಸರಿಗೆ ಒಂದು
ಸಹಿಯಿಲ್ಲದ ಪತ್ರ ಬಂದಿತು. ಅದು ನನ್ನ ಟ್ರೇಗೆ
ಬಂದಿತು. ಪತ್ರಿಕಾ ವ್ಯವಸಾಯಕ್ಕೆ ಹೊಸಬ
ನಾದ ನನ್ನ ಮೇಲೆ ಆ ಪತ್ರ ಮಾಡಿದ ಪರಿ
ಣಾಮದಿಂದಾಗಿ ನಿದ್ದೆಗೆ ಎರವಾಗಿದ್ದೇನೆ, ತಪ್ಪು
ತಿಳಿಯಬೇಡಿ. ಉದ್ದೇಶ: ನಾನು ಕಳೆದು
ಕೊಂಡ ನಿದ್ರೆಯನ್ನು ಮರಳಿ ಪಡೆಯುವುದು".

ಅವನ ಮಾತಿನಲ್ಲಿಯ ಅತೀವ ಸಹಜತೆಯೇ
ಬೆಹರಾಮವನ್ನು ತಕ್ಷಣ ತಟ್ಟಿತು.
"ನೋಡೋಣ ಕರಣಾಕರನ್ ನಾಳೆ ಬನ್ನಿ.
ಬರುವಾಗ ನೀವು ಆಗ ಹೇಳಿದ ಸಹಿಇಲ್ಲದ
ಪತ್ರವನ್ನೂ ತನ್ನಿ" ಎಂದ. ಆ ಆಶ್ವಾಸನೆ
ಯೊಳಗಿನ ಪ್ರಾಮಾಣಿಕತೆ ಕರುಣಾಕರನ್ನನ
ಮೇಲೆ ಪರಿಣಾಮ ಮಾಡದೇ ಇರಲಿಲ್ಲ.
"ಬರುತ್ತೇನೆ ಸರ್" ಎಂದು ಎದ್ದು ನಿಂತ.
ಬೆಹರಾಮನೂ ಎದ್ದು ನಿಂತು ಅವನ ಕೈ
ಕುಲುಕಿ ಬೀಳ್ಕೊಟ್ಟ. ನಿನ್ನೆಯವರೆಗೂ ಪರಸ್ಪರ
ಅಸ್ತಿತ್ವದ ಅರಿವೂ ಇಲ್ಲದಿದ್ದ ಇಬ್ಬರು,
ಒಬ್ಬರನೊಬ್ಬರು ಸಂಧಿಸಿದ ಗಳಿಗೆಯಲ್ಲಿ,
ಸಂಧಿಸಿದಾಗ, ಆಡಿದ ಕೆಲವೇ ಮಾತುಗಳಿಂದ,
ತಮ್ಮ ಊಹೆಗೂ ಮೀರಿದ ಯಾವುದೋ
ಒಂದು ಅನುಬಂಧ ತಮ್ಮನ್ನು ಆವರಿಸಿರುವ
ರೀತಿ ಇಬ್ಬರಿಗೂ ಆಶ್ಚರ್ಯವನ್ನುಂಟು
ಮಾಡಿತ್ತು.

ಮನೆಯ ಇದಿರೇ ಇದ್ದ ಬಾಂದ್ರಾ ಸ್ಟೇಶನ್ನಿಗೆ
ಹೋಗುವ ಬಸ್ ಸ್ಟಾಪಿನಲ್ಲಿ ನಿಂತ ಕರುಣಾ
ಕರನ್ ಬಸ್ಸಿನ ದಾರಿ ಕಾಯಹತ್ತಿದ. ತಾನು
ಇದೀಗ ಭೇಟಿಯಿತ್ತ ಮನೆಯ ಮಗ್ಗುಲಲ್ಲಿ
ಕಾಣಿಸುತ್ತಿದ್ದ ಹಾಳು ಬಿದ್ದ ಗೋಲಾಕಾರದ
ಹಳೆಯ ಕಟ್ಟಡವೇ ಭೂತ ಬಂಗಲೆಯಿದ್ದರೂ
ಇದ್ದೀತು. ಸ್ಟಾಪಿನಲ್ಲಿ ನಿಂತ ಮುದುಕಿಯೊಬ್ಬ
ಳನ್ನು ಹಾಗೆ ಕೇಳುವ ಮನಸ್ಸಾದರೂ
ಕೇಳಲಿಲ್ಲ, ಅಷ್ಟರಲ್ಲಿ ತಾನು ಹತ್ತುವ ಬಸ್
ಬಂದಿತು. ಬಸ್ ಹತ್ತಿ ಮನೆ ತಲುಪುವ ಪುರು
ಸೊತ್ತಿಲ್ಲ, ಕರುಣಾಕರನ್ ತನ್ನ ಕೋಣೆಯ ಕದ
ತೆಗೆದು ಸ್ವಿಚ್ಚನ್ನೊತ್ತಿದ. ಮನೆಯ ಒಡತಿ

ಯನ್ನು ಕೇಳಿದಾಗ ಇಡೀ ಕೇರಿಯ ದೀಪಗಳೇ ಹೋದುದು ತಿಳಿಯಿತು. ಹಾಗೇ ಮೇಜಿನ ಖಣದಲ್ಲಿರಿಸಿದ ಮೇಣ ಬತ್ತಿಯನ್ನು ತೆಗೆದು ಹಚ್ಚಿದ. ಲಗು ಬಗೆಯಿಂದ ಡ್ರೆಸ್ ಬದಲಿಸಿ ಮೇಣದ ಬತ್ತಿಯನ್ನು ಮೇಜಿನ ಮೇಲೆ ನಿಲ್ಲಿಸಿ ಅದರ ಬೆಳಕಿನಲ್ಲಿ ಬರೆಯಲು ಕುಳಿತ.

ಕೇರಳದಿಂದ ಬಂದ ಮೇಲೆ ಈ ಅಭ್ಯಾಸವನ್ನು ಇರಿಸಿಕೊಂಡಿದ್ದ. ಊರಿನಲ್ಲಿ ಬಿಟ್ಟು ಬಂದ ಕಿರಿಯ ತಂಗಿ ಲಲಿತಳಿಗೆ ಬರೆದ ಪತ್ರಗಳ ರೂಪದಲ್ಲಿ ಈ ಡೈರಿಯ ಬರವಣಿಗೆಯಿತ್ತು. 'ಪ್ರೀತಿಯ ಲಲಿತಾ' ಎಂದು ಕೊಂಡು ಬರೆಯಲು ಶುರುಮಾಡಿದಾಗ, ಕೇರಳದಲ್ಲಿಯ ತಮ್ಮ ಮನೆಯನ್ನು, ತಂಗಿ ಲಲಿತಳನ್ನು ಕಣ್ಮುಂದೆ ನಿಲ್ಲಿಸಿಕೊಳ್ಳುವ ಪ್ರಯತ್ನದೊಂದಿಗೆ [illegible] [illegible] ಸಂಜೆಗೆ ಮರದ ಮೇಲೆ ಕೂತು ಮಾತನಾಡುತ್ತಿದ್ದುದು ನೆನಪಿದೆಯೇ? ನಮ್ಮ ಅಪ್ಪನಿಗೆ ಇಬ್ಬರು ಹೆಂಡಂದಿರು. ನಾನು ಲಲಿತ, ಕಿರಿಯ ಹೆಂಡತಿಯ ಮಕ್ಕಳು. ಅಣ್ಣ ಹಿರಿಯ ಹೆಂಡತಿಯ ಮಗ. ತಾವೇ ಕಂಡಿಲ್ಲವಾದರೂ ಅವನ ಅಮ್ಮ ಅವನಷ್ಟೇ ಚೆಂದವಾಗಿದ್ದಳೆಂದು ಕೇಳಿ ಬಲ್ಲೆವು". ಇಂದು ಬರೆಯಬೇಕೆಂದು ಕೊಂಡಿದ್ದು ತಾನು ಭೇಟಿಯಾಗಿ ಬಂದ ಮುದುಕನ ಬಗೆಗೆ, ತಂಗಿಯ ನೆನಪನ್ನು ಕೆದಕಿದ ಪುಟ್ಟ ಸೀತೆಯ ಬಗೆಗೆ, ಬಸ್ ಸ್ಟಾಪಿನಲ್ಲಿ ಸಂಜೆಯ ಬೆಳಕಿನಲ್ಲಿ ಕಂಡ ಭೂತ ಬಂಗಲೆಯ ಬಗೆಗೆ, ಕೇವಲ ಹೊಟ್ಟೆಯ ಪಾಡಿಗಾಗಿ ದೂರದ ಕೇರಳದಲ್ಲಿ, ಪಾಲಘಾಟಿನ ಹತ್ತಿರದ ಮಲಯನ್ನೂರು ಎಂಬಲ್ಲಿ, ಮಡಲು ಹೊದಿಸಿದ ತಮ್ಮ ಸಣ್ಣ ಮನೆಯನ್ನು, ವಯಸ್ಸಾದ ಅಪ್ಪ, ವಯಸ್ಸಾಗದ ಅಮ್ಮ, ಸಾಲೆಗೆ ಹೋಗುತ್ತಿದ್ದ, ತಮ್ಮ ತಂಗಿಯರನ್ನು ಬಿಟ್ಟು, ಮುಂಬಯಿಗೆ ಬಂದಾಗ ನೌಕರಿಯನ್ನು, ಇರಲು ಕೋಣೆಯನ್ನು ದೊರಕಿಸಿಕೊಳ್ಳಲು ಪಟ್ಟ ಶ್ರಮವನ್ನು ಕುರಿತು ಇಲ್ಲಿನ ಬದುಕಿನ ಬಗೆಗೆ ತನಗಾಗುತ್ತಿದ್ದ ದಿಗ್ಭ್ರಮೆಯನ್ನು ಕುರಿತು, ಇತ್ತೀಚೆಗೆ ನಡೆದ ಖೂನಿಯನ್ನು ಕುರಿತು, ಬರೆಯುತ್ತಿದ್ದ ಡೈರಿಯಲ್ಲಿ, ಎಂದೂ ಕಳಕೊಂಡ ಅಣ್ಣನಿಗೆ ಸಂಬಂಧಪಟ್ಟ ವಾಕ್ಯವೊಂದು ಸಂಕಲ್ಪವನ್ನು ಮೀರಿ ಮನಸ್ಸಿನಲ್ಲಿ ರೂಪು ತಳೆಯುತ್ತಿದ್ದ ರೀತಿಗೆ ದಂಗುಬಡಿದವನ ಹಾಗೆ ಕುಳಿತು ಬಿಟ್ಟ.

ಹಾಗೆಯೇ ಇದ್ದ ಸ್ವಿಚ್ಚಿನಿಂದಾಗಿ ಕೋಣೆಯೊಳಗಿನ ದೀಪ ಫಕ್ಕನೆ ಬೆಳಗಿತು. ಕರುಣಾಕರನ್ ಇನ್ನೊಮ್ಮೆ ಬಚ್ಚಲಿಗೆ ಹೋಗಿ ತಂಪು ನೀರಿನಿಂದ ಕಾಲು ತೊಳೆದು, ಮೇಜಿನ ಮೇಲಿನ ಮೇಣದ ಬತ್ತಿಯನ್ನು ಆರಿಸಿ. ಇಂದಿನ ಭೇಟಿಯ ಬಗೆಗೆ ಬರೆಯಬೇಕೆನಿಸಿದ್ದನ್ನು ಬರೆದ. ಮುದುಕನನ್ನು ತಾನು ಮೆಚ್ಚಿಕೊಂಡು ರೀತಿ ಅರಿವಿಗೆ ಬಂದು ಖುಶಿಯಾಯಿತು.

ಮರುದಿವಸ ಮುದುಕ ಹೇಳಿದ ಹೊತ್ತಿಗೆ ಅವನ ಮನೆಯನ್ನು ತಲುಪುವ ತವಕದಲ್ಲಿದ್ದ ಕರುಣಾಕರನ್ ಮನಸ್ಸು [illegible] [illegible] ಮೊಳೆತಿರದ ಹೊಸ ಭಾವನೆಗಳ ತುಮುಲಕ್ಕೆ ಒಳಗಾಯಿತು. ಬಹುಶಃ ತಾನು ಇಂದು ಭೇಟಿಯಾಗಲಿದ್ದ ಇನ್ನು ಮೂವರು-ಮುದುಕನ ಹೆಂಡತಿ, ಮಗಳು ಮತ್ತು ಸೀತೆಯ ತಾಯಿ ಪಾರ್ವತಿ ಮಾತ್ರ ಎಂತಹ ಜನವೋ ಎಂಬ ಅನುಮಾನ ತನ್ನ ಅಧೈರ್ಯಕ್ಕೆ ಕಾರಣವಾಗಿರಬೇಕು ಎಂದುಕೊಂಡ. ಕದದ ಮೇಲಿನ ಕರೆಗಂಟೆಯನ್ನು ಒತ್ತಿದ ಬೆರಳಿನಲ್ಲಿ ಕೂಡ, ನಿನ್ನೆಯ ಆತ್ಮವಿಶ್ವಾಸವಿರಲಿಲ್ಲ.

ಮುಂಡಗಿನ ಕಪ್ಪು ಕಣ್ಣುಗಳನ್ನು ಅರಳಿಸಿ, ಹಲ್ಲು ತೋರಿಸಿ ನಗುತ್ತಾ ಸೀತೆ ಕದ ತಗೆಯುತ್ತಾಳೆ ಎಂದುಕೊಂಡವನನ್ನು ಇದಿರುಗೊಂಡವಳು ಚೆಹರಾಮನಮುಗಳು ಹೀರೀನಳಾಗಿದ್ದಳು. "ಬನ್ನಿ" ಎನ್ನುತ್ತ ಅವನನ್ನು ಒಳಗೆ ಬಿಟ್ಟು ಕದ ಮುಚ್ಚಿಕೊಂಡಳು. ಹೀಗೆ ಬನ್ನಿ ಎನ್ನುತ್ತ ಹಾಲಿನ ಇನ್ನೊಂದು ಮೂಲೆಗೆ ಕರೆದೊಯ್ದು ಅಲ್ಲಿದ್ದ ಸೋಫಾದಲ್ಲಿ ಕೂರಲು ಹೇಳಿ, ತಾನೂ ಇನ್ನೊಂದರಲ್ಲಿ ಕುಳಿತುಕೊಂಡಳು.

ಈ ಭೇಟಿ ಅದೇಕೋ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎನಿಸಿ ಕರುಣಾ ಕರನ್ ಅಧೀರನಾದ. "ನಿನ್ನೆ ನಾನು ಇಲ್ಲಿಗೆ ಬಂದಿದ್ದೆ" ಎಂದ.

"ನನಗೆ ಗೊತ್ತಿದೆ. ಅಪ್ಪ ಮಲಗಿದ್ದಾರೆ. ಅವರು ಏಳುವ ಮೊದಲು ನಿಮ್ಮ ಹತ್ತಿರ ಮಾತಾಡುವ ಕೆಲವು ಸಂಗತಿಗಳಿವೆ. ನಿನ್ನೆ ನೀವು ಬಂದದ್ದನ್ನು ಅಪ್ಪ ಹೇಳಿದರು. ಅವರ ವಯಸ್ಸನ್ನು ಆರೋಗ್ಯವನ್ನು ಲಕ್ಷ್ಯದಲ್ಲಿರಿಸಿಕೊಂಡಾದರೂ ನೀವು ಅವರನ್ನು ಇಂಥ ಉಪದ್ವ್ಯಾಪದಲ್ಲಿ ತೊಡಗಿಸುವ ಸಾಹಸ ಮಾಡಬಾರದಿತ್ತು"

ಅವಳ ದನಿಯಲ್ಲಿ ಇದೆಯೆಂದು ತೋರಿದ ಸೌಮ್ಯ ಗದರಿಕೆಯಿಂದಾಗಿ ಅವನಿಗೆ ಕೂಡಲೇ

ಉತ್ತರ ಕೊಡುವುದಾಗಲಿಲ್ಲ. ಸ್ವಲ್ಪ ತಡೆದು "ನಿಮ್ಮ ಪ್ರಶ್ನೆಗೆ ನನ್ನಲ್ಲಿ ನೇರವಾದ ಉತ್ತರ ಇಲ್ಲ. ಯಾಕೆಂದರೆ ನನಗೆ ಇವೆಲ್ಲ ಸರಿಯಾಗಿ ತಿಳಿದಿದ್ದಲ್ಲ" ಎಂದ.

ಅಂದ ಮೇಲೆ ನಾನು ಇಲ್ಲಿಗೆ ಬಂದದ್ದು, ಅಪ್ಪ, ಅಮ್ಮರನ್ನು ಜಮಶೇದಪುರಕ್ಕೆ ಕರೆದೊಯ್ಯಲು ನಿನ್ನೆ ನೀವು ಬಂದು ಹೋದಾಗಿನಿಂದ ಅಪ್ಪ ತುಂಬ ಬೇಜೈನು ಗೊಂಡಿದ್ದಾರೆ. ತಪ್ಪು ತಿಳಿಯಬೇಡಿ ಅಪ್ಪನ ಆರೋಗ್ಯದ ಬಗ್ಗೆ ಕಾಳಜಿಯಾಗುತ್ತದೆ ಅಷ್ಟೆ.

"ಅವರೇ ತಮ್ಮನ್ನು ಇದರಲ್ಲಿ ತೊಡಗಿಸಿ ಕೊಳ್ಳಬೇಕಾಗಿಲ್ಲ. ನೀವು ಹಾಗೂ ಕೆಲಸವಾಳು ಪಾರ್ವತಿ ನಿಮಗೆ ಗೊತ್ತಿದ್ದ ಮಾಹಿತಿ ಹೇಳಿದರೂ ಸಾಕು". "ಆದರೆ ಈ ಮಾಹಿತಿಯಿಂದ ಆಗಬೇಕಾದ್ದೇನಿದೆ? ಮನುಷ್ಯನೊಬ್ಬನ ಖೂನಿಯಲ್ಲವೆ ಇದು? ನಿಮ್ಮ ಮಾತಿನಲ್ಲಿಯ ಈ ದೂರುವ ಧ್ವನಿಯ ಬಗ್ಗೆ ನನ್ನ ಆಕ್ಷೇಪವಿದೆ. ನಮಗೆ ಭಾವನೆಗಳಿಲ್ಲವೆಂದೆ? ಪಾರ್ವತಿ ಇಂಥ ಸಂಗತಿಗಳನ್ನು ಆಡಿಕೊಳ್ಳುವಾಗ ಪ್ರಕಟಿಸುವ ಧೈರ್ಯ ನಮಗೇಕೆ ಇಲ್ಲದೆ ಹೋಯಿತು. ಈ ಸಾವು ಇದ್ದಕ್ಕಿದ್ದಂತೆ ಎಚ್ಚರಿಸುವ ರಾಜಕೀಯ ಶಕ್ತಿಗಳಿಗೆ ನಾನು ಹೆದರುತ್ತೇನೆ".

"ನಾನು ಕೂಡಿಸುವ ಮಾಹಿತಿಯಲ್ಲಿ ಯಾರ ಹೆಸರನ್ನು ಸೇರಿಸುವುದಿಲ್ಲ" ಎಂದ ಕರುಣಾಕರನ್ "ನನ್ನನ್ನು ನಂಬಿ" ಎನ್ನುವ ಧಾಟಿಯಲ್ಲಿ ತಾನು ಸಹಜ ಸ್ಫೂರ್ತಿಯಿಂದ ಹೊರಟು ಬಂದ ಕಾರ್ಯದ ಹೇತು. ಈ ಹೆಣ್ಣಿನ ಕಣ್ಣುಗಳಲ್ಲಿ ಪಡೆಯುತ್ತಿರುವ ಆಕೃತಿ ಅವನನ್ನು ಧೃತಿಗೆಡಿಸಿತು. ಮನಸ್ಸು ಕಳವಳಗೊಂಡು, ಕೊರಳಮುತ್ತಲೂ ಬೆವರು ಹನಿಸಾಲುಗಟ್ಟಿತು. "ಕುಡಿಯಲು ನೀರು ಬೇಕು" ಎನ್ನುವಷ್ಟರಲ್ಲಿ ಕದದ ಕರೆಗಂಟೆ ಎಡಬಿಡದೆ ಕಿರುಚಿತು. "ಇದು ನನ್ನ ಮಗನ ಪ್ರತಾಪ" ಎನ್ನುತ್ತ ಶಿರೀನ್ ಕದ ತೆರೆಯಲು ಹೋದಳು. ಕದ ತೆಗೆದ ಕೂಡಲೇ ಒಳಗೆ ಓಡಿ ಬಂದ ಮೂರು ಮಕ್ಕಳ ಹಿಂಡು ನೇರವಾಗಿ ದಿವಾಣ ಖಾನೆಗೆ ನುಗ್ಗಿತು. ಮಕ್ಕಳ ಹಿಂದೆಯೇ ಒಳಗೆ ಬಂದ ಸೀತೆ ನೀರಿನ ಗ್ಲಾಸು ತಂದಳು. ಸೀತೆಯ ಕೈಯಿಂದ ಅದನ್ನು ಪಡೆದು ಒಂದೇ ಗುಟುಕಿಗೆಂಬಂತೆ ಖಾಲಿ ಮಾಡಿದಾಗ ಮನಸ್ಸಿಗೆ ತುಸು ನೆಮ್ಮದಿ ಎನಿಸಿತು. ಸೀತೆಯ ಹಿಂದೆಯೇ ಇದುವರೆಗೂ ಮೋರೆ ತೋರಿಸದ ಮುದುಕಿಯೂ ದಿವಾಣ ಖಾನೆಗೆ ಬಂದು, ಅವನತ್ತ ಒಮ್ಮೆ ನೋಡಿ ಮುಗುಳ್ನಕ್ಕು, "ಅವರು ಈಗ ಬರುತ್ತಾರೆ ಕೂತಿರಿ" ಎಂದು ಮಕ್ಕಳನ್ನು ಕರೆದುಕೊಂಡು ಒಳಗೆ ಹೋದಳು. ಮುದುಕನ ಹೆಂಡತಿ ಇರಬೇಕು ಎಂದುಕೊಂಡ ಸೀತೆಯ ತಾಯಿ ಪಾರ್ವತಿ ಯೊಬ್ಬಳು ಕಣ್ಣಿಗೆ ಬೀಳುವುದುಳಿಯಿತು ಎಂಬ ವಿಷಯವೂ ಹೊಳೆಯಿತು.

ಶಿರೀನ್ ಚಹದ ಟ್ರೇ ಹೊತ್ತು ತಂದಳು. ಅಪ್ಪ ಇದೀಗ ಮೋರೆ ತೊಳೆದುಕೊಳ್ಳಲು ಹೋಗಿದ್ದಾರೆ. ನಿನ್ನೆಯ ಮೊದಲ ಭೇಟಿ ಯಲ್ಲಿಯೇ ನಿಮ್ಮನ್ನು ಬಹಳ ಹಚ್ಚಿಕೊಂಡಿ ದ್ದಾರೆ. ಆದರೆ ಅವರು ಬಂದಾಗ ದಯವಿಟ್ಟು, ಅವರ ಭಾವನೆಗಳ ಮೇಲೆ ಪರಿಣಾಮ ಮಾಡುವಂತಹ ಯಾವುದೇ ಮಾತನ್ನು ಆಡಲು ಹೋಗಬೇಡಿ" ಇಷ್ಟು ಹೇಳಿ ಶಿರೀನ್ [illegible] ಒಂದನ್ನು ಕರುಣಾ ಕರನ ಕೈಗೆ ಕೊಟ್ಟಳು.

"ಬಂದು ಬಹಳ ಹೊತ್ತಾಯಿತೆ? ಚಹ ತೆಗೆದುಕೊಳ್ಳಿ" ಎಂದು ಯಾವ ಸುಳ್ಳು ಆಡಂಬರವೂ ಇಲ್ಲದೆ ಬರಮಾಡಿಕೊಂಡ ಆತ್ಮೀಯತೆಯಿಂದ ಕರುಣಾಕರನ್ನನಿಗೆ ಒಳಗೊಳಗೇ ಏನೋ ದ್ರವಿಸಹತ್ತಿದ ಅನಿಸಿಕೆ. ಮುದುಕನನ್ನು ಮನಸ್ಸಿನಲ್ಲಿ ಕೃತಜ್ಞತೆಯಿಂದವಂದಿಸುತ್ತ, ಅಪ್ಪ ಮಗಳು ಇಬ್ಬರ ಕಡೆಗೂ ಏಕಕಾಲಕ್ಕೆ ನೋಡುತ್ತಾ ಮುಗುಳ್ನಕ್ಕ. ಅವಳು ತುಂಬ ಲಾವಣ್ಯವತಿ ಎಂಬುದು ಇದೀಗ ಗಮನಕ್ಕೆ ಬಂದವನ ಹಾಗೆ ಒಳಗೊಳಗೇ ಲಜ್ಜಿತ ನಾದ.

"ಶಿರೀನ್ ಹೇಳಿರಬೇಕು. ನೀವು ನಿನ್ನೆಯ ಭೇಟಿಯಲ್ಲಿ ಏನೂ ಹೇಳದಿದ್ದರೂ ಕೇಳಿದ ಕೆಲವೇ ಪ್ರಶ್ನೆಗಳು ನನ್ನನ್ನು ಬೇಜೈನುಗೊಳಿಸಿದವು".

ಮುದುಕನ ಈ ಅನಿರೀಕ್ಷಿತ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ಕರುಣಾಕರನ್ ಗೆ ತಿಳಿಯಲಿಲ್ಲ. ತನ್ನ ಬಾಯಿಂದ ಹೊರಟ ಮಾತುಗಳಿಂದ ಸ್ವತಃ ಬೆಹರಾಮನಿಗೂ ಆಶ್ಚರ್ಯವಾಗಿತ್ತು. ಬೆಹರಾಮನಿಗೆ ಬಹಳಷ್ಟನ್ನು ಹೇಳುವುದಿತ್ತು. ಹಾಸಿಗೆ ಯಲ್ಲಿ ಅಡ್ಡಾದಾಗ ಏನೆಲ್ಲ ಮಾತಾಡ ಬೇಕೆಂದು ಯೋಚಿಸಿಕೊಂಡಿದ್ದ, ಆದರೆ ಈಗ ತಾನು ತನ್ನಷ್ಟಕ್ಕೆ ಆಡಿಕೊಂಡಾಗ ಸಹಜವಾಗಿ ತೋರಿದ ಮಾತುಗಳು, ಇನ್ನೊಬ್ಬನಿಗೆ ತಿಳಿಸಬೇಕು ಎನ್ನುವ ಹೊತ್ತಿನಲ್ಲಿ ನಾಟಕೀಯವಾಗಿ ಕಂಡವು.

"ನಿಜ ಹೇಳಿ ಕರುಣಾಕರನ್, ನೀವು ಮತ್ತೆ ಮತ್ತೆ ಇದು ಮನುಷ್ಯನೊಬ್ಬನ ಸಾವಲ್ಲವೆ" ಎಂದು ಕೆದಕಿ ಕೇಳಿದ ಪ್ರಶ್ನೆ ಪತ್ರಿಕೋದ್ಯಮಿಯೊಬ್ಬನ ಆಸ್ಥೆಯಲ್ಲ ತಾನೆ?

"ಆಣೆಮಾಡಿ ಹೇಳುತ್ತೇನೆ ಸರ್ ನನಗೂ ಸಂಪಾದಕರಿಗೂ ಯಾವ ಮಾತುಕತೆಯೂ ಆಗಿಲ್ಲ".

ಶಿರೀನ್‌ಳ ಮೋರೆಯ ಮೇಲಿನ ಅಪನಂಬಿಕೆಯ ಛಾಯೆ ಕಂಡು ಬೆಹರಾಮ್ ಅವಳನ್ನು ಕಣ್ಣಿನಿಂದಲೇ ಸುಮ್ಮನಿರಿಸಿ "ನಾನು ಕೇಳಿದ್ದು ಅದು ಅಲ್ಲ ಕರುಣಾಕರನ್, ನನಗೆ ತಿಳಿಯ ಬೇಕಾದ್ದು ಕೊಲೆಯಲ್ಲಿ ನಿಮಗಿರುವ ಆಸ್ಥೆಯ ಸ್ವರೂಪವನ್ನು ಅದು ನಿಮ್ಮನ್ನು ಇಷ್ಟು ಗಾಢವಾಗಿ ತಟ್ಟಿದ ಕಾರಣವನ್ನು ತಿಳಿಯುವ ಆಸೆಯಾಗಿದೆ. ದಯವಿಟ್ಟು ನಂಬಿ" "ನಿಮ್ಮ ನಿದ್ದೆಗೇಡಿಗೆ ಕಾರಣ ವಾದ ಆ ಸಹಿಯಿಲ್ಲದ ಪತ್ರವನ್ನು ನೋಡ ಬಹುದೆ?" ಶಿರೀನಳ ಈ ಪ್ರಶ್ನೆಯಲ್ಲಿನ ಧ್ವನಿ, ಅವಳಿಗೇ ಕಟುವೆನಿಸಿತು. ಕರುಣಾಕರನ್ ಸಂಪೂರ್ಣವಾಗಿ ಗೊಂದಲಕ್ಕೀಡಾದ. ಇನ್ನೂ ಹೆಚ್ಚು ಒತ್ತಾಯ ಮಾಡಿದರೆ ಅತ್ತೇಬಿಡುವನೇನೊ ಎಂದು ಬೆಹರಾಮನಿಗೆ ತೋರಿತು.

ಅಷ್ಟರಲ್ಲಿ ಈ ಮೂವರೂ ತಾವು ಅರಿಯದೆ ಸಿಕ್ಕಿ ಹಾಕಿಕೊಂಡ ವಿಚಿತ್ರ ಸನ್ನಿವೇಶವನ್ನು ಬಿಡಿಸಲೋ ಎಂಬಂತೆ ಸೀತೆ ಚಹ ತಿಂಡಿಗಳ ಸರಂಜಾಮನ್ನು ಟ್ರಾಲಿಯೊಂದರ ಮೇಲೆ ಹೊತ್ತು ತಂದಳು. ಆಮೇಲೆ ಟ್ರಾಲಿಯೊಳಗಿನ ಸಾಮಾನನ್ನು ಒಂದೊಂದಾಗಿ ಟೀಪಾಯಿಯ ಮೇಲೆ ಇರಿಸಿದಳು. ಒಂದು ಪ್ಲೇಟಿನಲ್ಲಿ ಓರಣವಾಗಿ ಇರಿಸಿದ ಕೇಕ್ ಹೋಳುಗಳು, ಇನ್ನೊಂದರಲ್ಲಿ ಬರ್ಫಿಯ ಚಚಾಕ್ ತುಂಡುಗಳು, ಮತ್ತೊಂದರಲ್ಲಿ ಗೇರು ಬೀಜ ಬಾಳೆಕಾಯಿ ಬಾಳಕಗಳು, ಕೊನೆಯ ಪ್ಲೇಟನ್ನು ಇಡುವಾಗ, "ಇವು ಖಾಸಾ ನಿಮ್ಮ ಕೇರಳದವು" ಎನ್ನುತ್ತ ಅದವರೆಗೂ ನೆಲಸಿದ್ದ ಮೌನವನ್ನು ಮುರಿದಳು. "ತೆಗೆದುಕೊಳ್ಳಿ" ಎಂದು ಕಪ್ಪುಗಳಲ್ಲಿ ಚಹ ಸುರಿಯುವಾಗ "ಹೋದ ವಾರವಷ್ಟೆ ನನ್ನ ಮಗ ಕೇಕಿಯ ಜನ್ಮ ದಿವಸ. ಅವನ ಅನುಪಸ್ಥಿತಿಯಲ್ಲಿ ನಾವಿಬ್ಬರೇ ಆಚರಿಸಿದವು. ನಮ್ಮ ಕೇಕಿ ಅಮೇರಿಕಗೆ ಹೋದಾಗ ನಿಮ್ಮಷ್ಟೇ ವಯಸ್ಸಿನವನು. ಎಂದು ಮುದುಕಿ ಕೇಕೆ ತುಂಡೊಂದಕ್ಕೆ ಕರುಣಾಕರನ್‌ಗೆ ಹಾಕುತ್ತಿದ್ದಾಗ. "ನಿಮಗೆ ಅಣ್ಣ ತಮ್ಮಂದಿರೆಷ್ಟು?" ಎಂದು ಕೇಳಿದಳು. ಸನ್ನಿವೇಶಕ್ಕೆ ತೀರಾ ಸಹಜವಾದ ಪ್ರಶ್ನೆಯಾದರೂ, ಕರುಣಾಕರನ್, ಅದು ವಿಶೇಷ ರೀತಿಯಲ್ಲಿ ಕಾಹಿಳಿಸಿತೆಂಬಂತೆ, ತುಂಬ ವಿಹ್ವಲನಾದ. ಕೇಕಿನ ಹೋಳನ್ನು ಹಿಡಿದ ಕೈ ನಡುಗ ಹತ್ತಿತು. ಅವನ ಈ ಅನಿರೀಕ್ಷಿತ ಪ್ರತಿಕ್ರಿಯೆಯಿಂದ ಎಲ್ಲರಿಗೂ ಆಶ್ಚರ್ಯವಾಯಿತು.

ತನ್ನ ಬಾಯನ್ನು ಕಟ್ಟಿಬಿಟ್ಟ ಸನ್ನಿವೇಶ ದಿಂದ ಸ್ವತಃ ಕರುಣಾಕರನನೇ ಚಕಿತನಾದ. ಉತ್ತರ ಕೊಡಲು ತಡಮಾಡಿದಷ್ಟೂ ಅಪಾರ್ಥಕ್ಕೆಡೆ ಮಾಡಿಕೊಟ್ಟೇತೆಂಬ ಭಯ ಕಾಡದೆ ಬಿಡಲಿಲ್ಲ. ಮುದುಕಿಯೊಬ್ಬಳೇ ಇದ್ದಾಗ ಕೊಡಬಹುದಾದ ಉತ್ತರದ ಸಹಜತೆ ಮೊದಲಿನಿಂದಲೂ ತನ್ನನ್ನು ಅನುಮಾನದಿಂದಲೆ ನೋಡುತ್ತಾ ಬಂದ ಈ ಹೆಣ್ಣಿನ ಇದಿರು ಅಸಾಧ್ಯವಾಯಿತು.

"ನೋಡಿ ಶಿರೀನ್, ನಾನು ಕೇರಳವನ್ನು ಬಿಟ್ಟು ಮುಂಬಯಿಗೆ ಬಂದದ್ದು ಹೊಟ್ಟೆಪಾಡಿಗಾಗಿಯೆ. ಆದರೆ, ನನ್ನ ಅಣ್ಣನೊಬ್ಬ ಇಲ್ಲಿಯದೇ ಝೋಪಡಪಟ್ಟಿಯಲ್ಲಿ ಮೂರು ವರ್ಷದ ಹಿಂದೆ ಕೊಲೆಗೈಯಲ್ಪಟ್ಟ. ಆ ಸಹಿಯಿಲ್ಲದ ಪತ್ರ ನಾನು ಮಾತಿನಲ್ಲಿ ಹೇಳಿದ ಹಾಗೆ ಸಂಪಾದಕನಿಗೆ ಬಂದದ್ದಲ್ಲ. ನನ್ನ ಅಪ್ಪನಿಗೆ ಬಂದದ್ದು. ನಾನು ಒಂದು ಅರ್ಥ ದಲ್ಲಿ ಸುಳ್ಳುಹೇಳಿರಬಹುದು. ನಾನು ಯಾವ ಉದ್ದೇಶಕ್ಕಾಗಿ ಬಂದಿರುವೆನೋ ಅದನ್ನು ಸಾಧಿಸಲು ಬೇರೆ ಉಪಾಯ ಹೊಳೆಯಲಿಲ್ಲ. ಸದ್ಯವೇ ನಡೆದ ರದ್ದೀವಾಲಾನ ಖೂನಿಯ ಬಗ್ಗೆ ಮಾತನಾಡುವಾಗ ಯಾರಾದರೂ ಮುರು ವರ್ಷದ ಹಿಂದೆ ನಡೆದ ನನ್ನ ಅಣ್ಣನ ಕೊಲೆಯ ಬಗ್ಗೆ ಹೇಳಿ ಯಾರೇ ಎಂದು ತಿಳಿಯಲು ಈ ಪತ್ರವನ್ನು ಬರೆದವನು ಕೇರಳದವನೆ. ಈ ಮುದುಕನ ಮನೆಯಲ್ಲಿ ಕೆಲಸಕ್ಕಿದ್ದ ನಾನು ಬಂದಿದ್ದು ಅಣ್ಣನ ಕೊಲೆಯಾದದ್ದನ್ನು ಖಾತ್ರಿ ಮಾಡಿಕೊಳ್ಳಲು ಅಲ್ಲ. ಅವನು ಬದುಕಿದ್ದಾನೆ ಎಂದು ಪತ್ತೆ ಹಚ್ಚಲು. ಅವನು ಇಲ್ಲಿಯೇ ಝೋಪಡ ಪಟ್ಟಿಯಲ್ಲಿ ವಾಸಿಸುತ್ತಿರಬಹುದು. ಅಪ್ಪನಿಗೆ, ನಮಗೆ ಮೋರೆ ತೋರಿಸಲು ಆಗದ ಪರಿಸ್ಥಿತಿಯಲ್ಲಿ ಬದುಕುತ್ತಿರಬಹುದು. ಆ ಪತ್ರವನ್ನು ಅವನೇ ಬರೆಸಿರಬಹುದು. ನಿಜ

ಹೇಳಬೇಕೆಂದರೆ ಇದು ನನಗೆ ತಾನಾಗಿಯೇ ಹೊಳೆದ ವಿಚಾರವಲ್ಲ.

ಅಪ್ಪ, ಲಲಿತ, ಮನೆಯಲ್ಲಿಲ್ಲದ ಹೊತ್ತಿನಲ್ಲಿ ಅಮ್ಮ ನನ್ನ ತಲೆಯಲ್ಲಿ ಹಾಕಿದ್ದು, ಕಳೆದ ಹಲವು ತಿಂಗಳಲ್ಲಿ ಇಲ್ಲಿಯ ಎಷ್ಟೊಂದು ಮನೆಗಳಿಗೆ ಹೋಗಿ ಬಂದೆ. ಮೂರು ವರ್ಷಗಳ ಹಿಂದಿನ ಖೂನಿಯ ಬಗ್ಗೆ ಒಬ್ಬರಿಂದಲೂ ಮಾತು ಹೊರಡದೆ ಇದ್ದಾಗ ಖುಶಿಯಾಗುತ್ತಿತ್ತು, ಕೊನೆಗೂ ಅಣ್ಣ ಸತ್ತಿರಲಿಕ್ಕಿಲ್ಲ. ನೀವೂ ಆ ಕೊಲೆಯ ಬಗ್ಗೆ ಮಾತೆತ್ತದೆ ಉಳಿದು ಬಿಟ್ಟರೆ ನನ್ನ ಊಹೆ ಸರಿಯೆಂದು ಸಂತೋಷಪಡುತ್ತೇನೆ. ನೀವೂ ಎಂದು ಯಾಕೆ ಎಂದೆ ಎಂದರೆ, ನಿಮ್ಮ ಅಪ್ಪ ನನ್ನ ಕಂಡಂದಿನಿಂದಲೂ ಪತ್ರದಲ್ಲಿ ಬರೆದ ಮುದುಕ ಇವರೇ ಇರಬಹುದೆಂದು ಅನ್ನಿಸ ತೊಡಗಿದೆ.. ಆದಿದ್ದರೆ ಈ ಘಾಟಿಯ ಮಾತುಗಳಾಗಬಹುದಾಗಿದ್ದ ಹಲವು ಭಾವನೆಗಳು ಆಕೃತಿ ಪಡೆಯುವಷ್ಟರಲ್ಲಿ ಕರಗಿ ಹೋದಾಗ, ಬಾಯಿಂದ ಹೊರಟಿದ್ದು "ನನಗೆ ಒಬ್ಬ ಅಣ್ಣ ತಂಗಿ" ಎಂಬ ಮಾತು. ಅಷ್ಟರಲ್ಲಿ ಹಾಲಿನಲ್ಲಿ ಪ್ರವೇಶಿಸಿದ ಹೆಣ್ಣು ಪಾರ್ವತಿಯೆಂದು ತಿಳಿಯಲು ಕರುಣಾಕರನ್‌ನಿಗೆ ಕಷ್ಟವಾಗಲಿಲ್ಲ. ತುಸು ದೂರ ನಿಂತ ಅವನನ್ನೇ ಗಂಭೀರವಾಗಿ ನೋಡುತ್ತಿದ್ದ ಪಾರ್ವತಿ ಶಿರೀನಳ ದೃಷ್ಟಿ ತನ್ನತ್ತ ತಿರುಗಿದಾಗ, ಹೌದು ಎನ್ನುವಂತೆ ಸನ್ನೆ ಮಾಡಿದಳು. ಅವಳ ಮೋರೆಯ ಮೇಲಿನ ಗಾಂಭೀರ್ಯ ಶಿರೀನಳಿಗೆ ಮಾಡಿದ ಸನ್ನೆಯಿಂದಾಗಿ ಯಾವುದೆ ಊಹೆಗೂ ಮೀರಿದ ಒಂದು ನಾಟಕೀಯ ಸನ್ನಿವೇಶದಲ್ಲಿ ಸಿಲುಕಿ ಕೊಂಡಿದ್ದೇನೆ ಎಂಬ ಅನುಮಾನವಾಗಿ ಕಳವಳಗೊಂಡ. ಆದರೆ ಮುದುಕನ ಪ್ರೀತಿ ತುಂಬಿದ ಶಾಂತ ಮೋರೆ ಮಾತ್ರ ಇಂಥ ಭಾವನೆಗೆ ಎಡೆ ಕೊಡದಾಯಿತು. ಅವನು ಚಹ ಕುಡಿಯುವುದನ್ನೇ ಕಾಯುತ್ತಿದ್ದ ಶಿರೀನ್, "ಹೇಳಿ ಕರುಣಾಕರನ್ ನೀವು ಈ ಪ್ರಶ್ನೆಗಳನ್ನು ಕೇಳಲು ಬಂದದ್ದು ಕೇವಲ ನಮ್ಮ ಮನೆಗೆ ಮಾತ್ರ ಅಲ್ಲವೇ?" ಇದನ್ನು ಹೇಳುವಾಗಿನ ಅವಳದನಿ ಕರುಣಾಕರನ್ನನಿಗೆ ಸೇರಲಿಲ್ಲ. ಈ ಪ್ರಶ್ನೆಯ ಹಿಂದೆ ತನ್ನನ್ನು ಸುಳ್ಳನನ್ನಾಗಿ ಮಾಡುವ ಉದ್ದೇಶ ಸ್ಪಷ್ಟವಾಗಿ ಕಂಡದ್ದು ಕೂಡ ಆಗಲೇ. "ಅಣ್ಣನ ಶೋಧದಲ್ಲಿದ್ದವನು [illegible] ಸಣ್ಣ ಸುಳ್ಳು ಹೇಳಬೇಕಾಗಿ

ಬಂದರೆ..." ಕರುಣಾಕರನ್‌ಗೆ ವಾಕ್ಯವನ್ನು ಪೂರ್ತಿಗೊಳಿಸುವುದಾಗಲಿಲ್ಲ.

"ಅಣ್ಣನ ಶೋಧವೆಂಬುದೇ ಸುಳ್ಳು ಸಬೂಬಾಗಿದ್ದರೆ?"

ಕರುಣಾಕರನ್ ತಬ್ಬಿಬ್ಬಾದ ಅವನ ದೃಷ್ಟಿಯಲ್ಲಿಯ ಅಸಹಾಯಕತೆ ಬೆಹರಾಮನನ್ನು ತಟ್ಟದಿರಲಿಲ್ಲ. "ಶಿರೀನ್ ನಿನ್ನ ಇಂಥ ಪ್ರಶ್ನೆಯ ಉದ್ದೇಶವೇನು?"

"ಅಪ್ಪಾ, ನನ್ನನ್ನು ದಯಮಾಡಿ ಕೆಲಹೊತ್ತು ಮಾತಾಡಲು ಬಿಡು. ನನ್ನನ್ನು ಕಾಡುತ್ತಿದ್ದ ಕೆಟ್ಟ ಸಂಶಯದ ನಿವಾರಣೆ ಯಾಗುವ ಸಮಯ ಈಗ ಬಂದಿದೆ ಇವರನ್ನು ಬಲ್ಲ ಮೂವರು ಗೃಹಸ್ಥರು ಇದೀಗ ಬರಲಿದ್ದಾರೆ.

ಶಿರೀನಳ ಮಾತುಕೇಳಿದೊಡನೆ ಆಗ ಪಾರ್ವತಿ ಮಾಡಿದ ಸನ್ನೆಯ ಅರ್ಥ ಕರುಣಾಕರನ್‌ಗೆ ಹೊಳೆದು ಹೋಯಿತು, ಹೌದು ಈಗ ಬರಲಿರುವ ಗೃಹಸ್ಥರ ಮನೆಗಳಲ್ಲಿ ಇವಳು ಕೆಲಸಮಾಡುತ್ತಿರಬೇಕು. ಅಲ್ಲಿಕಂಡ ಹುಡುಗ ನಾನೇ ಎಂದು ಸನ್ನೆಯಿಂದ ಶಿರೀನಳಿಗೆ ತಿಳಿಸಿರಬೇಕು." ಸಹಾಯಬೇಡಿ ಬಂದವರನ್ನು ಠಕ್ಕನೆಂದು ತೋರಿಸಿಕೊಡಲು ಹೊರಟಿರುವಿರಲ್ಲ?" ಎಂಬ ಮಾತು ಹೊರ ಬಂದದ್ದು ನಾನುಠಕ್ಕನಲ್ಲ" ಎಂಬ ಶಬ್ದಗಳಲ್ಲಿ. "ಅದು ಈಗ ಗೊತ್ತಾಗುತ್ತದೆ" ಎಂದಳು ಶಿರೀನ್ ಚುಟುಕಾಗಿ. ಮುದುಕ ಮುದುಕಿ ಇಬ್ಬರೂ "ನೀನು ದುಡುಕುತ್ತಿದ್ದೀ ಹುಡುಗೀ" ಎನ್ನುವುದಕ್ಕೂ ಕರಗಂಟೆ ಕಿರುಚುವುದಕ್ಕೂ ಸರಿಹೋಯಿತು. ಬಂದವರು ಯಾರು ಎಂಬ ಬಗ್ಗೆ ಸಂಶಯವೇ ಇಲ್ಲದವರ ಹಾಗೆ ಶಿರೀನ್ ತಾನೇ ಕದ ತೆಗೆಯಲು ಎದ್ದಳು.

ತನ್ನ ಕಡೆಗೇ ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದ ಕರುಣಾಕರನ್ನನ ಬಗೆಗೆ ಬೆಹರಾಮನಿಗೆ ಕೆಡುಕೆನಿಸಿತು. ಶಿರೀನಳ ಮನಸ್ಸಿನಲ್ಲಿದ್ದ ಸಂಶಯ ಅವನಿಗೆಗೊತ್ತು. ಅವಳ ಪ್ರಕಾರ ಅವನು ಬಂದದ್ದು ಈ ಖೂನಿಗೆ ಸಂಬಂಧಿಸಿದಂತೆ [illegible]

ಮುಗ್ಧ ಮೋರೆಯ ಹಿಂದೆ ಠಕ್ಕತನ ಅಡಗಿರುವುದು ಶಕ್ಯವೇ ಇಲ್ಲ, ಎಂದು ತೋರಿತು ಬೆಹ ರಾಮನಿಗೆ, ಧೈರ್ಯ ಸಾಲದೊ. ನಂಬಿಕೆ ಸಾಲದೊ, ಹುಡುಗ ತಾನು ಬಂದ ಕಾರ್ಯವನ್ನು ಇನ್ನೂ ಸ್ಪಷ್ಟಪಡಿಸಿಲ್ಲ. ಶಿರೀನ್ ಅಲ್ಲಿಂದ ಎದ್ದು ಹೋದ ಮೇಲೆ "ಹೆದರಬೇಡಿ ಕರುಣಾಕರನ್ ಈಗ ಬಂದವರ ಇದಿರಾದರೂ ನಿಮ್ಮ ತನಿಖೆಯ ಉದ್ದೇಶವನ್ನು ಯಾವ ಮುಚ್ಚುಮರೆಯೂ ಇಲ್ಲದಂತೆ ಸ್ಪಷ್ಟಪಡಿಸಿ" ಎಂದ. ಅಷ್ಟು ಹೊತ್ತಿಗೆ ಶಿರೀನಳ ದುಡುಕಿನ ಸ್ವಭಾವದಿಂದಾಗಿ ಇಲ್ಲಿಗೆ ಬರುವಂತೆ ಮಾಡಿದ ಗೃಹಸ್ಥರು ಒಬ್ಬರ ಹಿಂದೊಬ್ಬರು ಸಾಲುಗಟ್ಟಿ ಇವರು ಕುಳಿತಲ್ಲಿಗೆ ಬರತೊಡಗಿದ್ದರು. ನೆಲಕ್ಕೆ ಹಾಸಿದ ಮೊಸಾಯಿಕ್ ಟ್ಯಾಲ್ಸ್‌ಗಳ ಮೇಲೆ ಅವರ ಬೂಟುಗಳು ಸದ್ದು ನಿರೀಕ್ಷೆ ಮೀರಿ ದೊಡ್ಡದಾಗಿತ್ತು. ಕರುಣಾಕರನ್ ಕಣ್ಣುಗಳನ್ನು ದೊಡ್ಡವು ಮಾಡಿ ಬಂದವರನ್ನು ನೊಡಹತ್ತಿದ.

"ಇಷ್ಟೇನೋ? ಇಡಿ ಕೇರಿಯ ಜನರನ್ನು ಕರೆದಿದ್ದಿಯೋ? ಒಬ್ಬ ವ್ಯವಹಾರ ತಿಳಿಯದ ಯುವಕನ ಠಕ್ಕುತನವನ್ನು ಹೊರಗೆಡಹಲು?" ಬೆಹರಾಮ ತನಗಾದ ತೀವ್ರ ಅಸಮಾಧಾನವನ್ನು ಅಡಗಿಸಿಡುವ ಪ್ರಯತ್ನವನ್ನು ಮಾಡಲಿಲ್ಲ. "ಪಾರ್ವತಿಗೆ ಅಲ್ಲಿ ಎರಡು ಕುರ್ಚಿ ಹಾಕಲು ಹೇಳು" ಎಂದು ಹೇಳಿ ಸೀದಾ ಮಲಗುವ ಮನೆಗೆ ಬಂದ.

ಶಿರೀನ್ ಕೂಡ ಸನ್ನಿವೇಶ ತಾನು ಬಯಸಿದ್ದಕ್ಕಿಂತ ಭಿನ್ನವಾಗಿ ಬೆಳೆಯುತ್ತಿರು ವುದೇನು ಅಡಗಿಸಿಡುವುದನ್ನು ಪಾರ್ವತಿ ಯಿಂದ ತಿಳಿದು ಫೋನ್ ಮಾಡಿ ಬಂದ ವ್ಯಕ್ತಿ ತಾನು ಊಹಿಸಿದ್ದಕ್ಕಿಂತ ಬೇರೆ ಯಾಗಿದ್ದ. ಅವರು ಬಾಗಿಲಲ್ಲಿ ನಿಂತ ರೀತಿ, ಕದ ತೆರೆದಾಗ ತನ್ನನ್ನು ನೋಡಿದ ರೀತಿ, ಹಾಲಿನಲ್ಲಿ ಬೂಟುಗಳನ್ನು ಸದ್ದು ಮಾಡಿ ನಡೆದ ರೀತಿ ಇದ್ದಕ್ಕಿದ್ದಂತೆ ಇವರು ಒಳ್ಳೆಯ ಜನ ಅಲ್ಲ ಎಂಬಗುಮಾನಿಗೆ ಎಡೆಮಾಡಿಕೊಟ್ಟವು. ಇವರಲ್ಲಿ ಒಬ್ಬರೂ ಪಾರ್ವತಿಗೆ ಪರಿಚಯದವರಲ್ಲವೆಂದು ತಿಳಿದ ಮೇಲಂತೂ ಇನ್ನಷ್ಟು ಕಂಗಾಲಾಗಿ ಬಿಟ್ಟಳು.

ಅಪ್ಪ ಡ್ರೆಸ್ಸು ಬದಲಿಸಿ ಪಾಯಿಜಾಮಾ ಅಂಗಿಯ ಬದಲು, ಪ್ಯಾಂಟು ಶರಟು ಧರಿಸಿ ಹಾಲಿನ ಕಡೆಗೆ ಹೊರಬಿದ್ದ ಅಪ್ಪನ ಕೋಣೆಯ ಹೊಸ್ತಿಲಲ್ಲಿ ಕಾಣಿಸಿಕೊಂಡ ಇವಳನ್ನು ಅಮ್ಮನೇ ಒಳಗೆ ಕರೆದು "ಇದೆಂತಹ ಉತಾವಳಿ ಕೆಲಸ ಮಾಡಕೂತಿದ್ದಿ ಈಗ ಬಂದವರು ಝೋಪಡ ಪಟ್ಟಿಗಳ ಒಡೆಯ ರಿಗೆ ಸಂಬಂದ ಪಟ್ಟ ಜನವಿರಬಹುದಂತೆ ಒಬ್ಬರೂ ಅಪ್ಪನಿಗೆ ಪರಿಚಯದವರಲ್ಲ". ಎಂದಾಗ ಶಿರೀನಳಿಗೆ ಇದ್ದ ಧೈರ್ಯವೂ ಉಡುಗಿ ಹೋಯಿತು.

ಶಿರೀನ್ ತಿರುಗಿ ದಿವಾಣಖಾನೆಗೆ ಬರುವಷ್ಟರಲ್ಲಿ ಬಂದವರಲ್ಲೊಬ್ಬ ಮಾತಾಡುತ್ತಿದ್ದ. "ಹಾಗಾದರೆ ನಿಮ್ಮ ಮಾತು ಕೊನೆಯದು" "ಹೌದು ಇದು ನಿಮ್ಮ ಪರಿಚಯ ಹೇಳಲು ನಿರಾಕರಿಸಿದ್ದರಿಂದ" "ನಾವು ಬಂದದ್ದು ನಿಮ್ಮ ಒಳಿತಿಗಾಗಿಯೆ, ಮುದುಕಪ್ಪ, ನಾವು ಬಂದ ಕೆಲಸಕ್ಕೆ ನಮ್ಮ ಪರಿಚಯದ ಅಗತ್ಯವಿಲ್ಲ".

"ಧಮಕಿಯ ಮಾತು ಬೇಡ ನೀವಿನ್ನು ಹೊರಡಬಹುದು" ಬಂದವರಿಗೆ ಹೊರಡುವ ಮನಸ್ಸು ಇದ್ದ ಹಾಗೆ ತೋರಲಿಲ್ಲ. ತಾನು ಒಳಗಿನಿಂದ ಬರುವಷ್ಟರಲ್ಲಿ ತಾವು ಬಂದ ಉದ್ದೇಶವನ್ನು ಅಪ್ಪನಿಗೆ ಹೇಳಿರಬೇಕು. ಶಿರೀನಳಿಗೆ ಬಂದವರು ಎಂತಹ ಜನ ಎಂಬುದರ ಬಗೆಗೆ ಸಂಶಯವೇ ಉಳಿಯ ಲಿಲ್ಲ.

ಇದಾವುದನ್ನೂ ಅರಿಯದ ಕರುಣಾಕರನ್‌ಗೆ ಈ ಅನಪೇಕ್ಷಿತ ವಾತಾವರಣ ಅಸಹನೀಯವಾಗತೊಡಗಿತು. ಅವನು ಕುರ್ಚಿಯಲ್ಲಿ ಚಡಪಡಿಸುವ ರೀತಿಯನ್ನು ಕಂಡು, ಆಡಬಾರದ್ದನ್ನೆಲ್ಲ ಆಡಿಬಿಡುವನೋ ಎಂದು ಆತಂಕಪಟ್ಟ ಬೆಹರಾಮ ತಾನೆ ಬಾಯಿಬಿಟ್ಟ.

"ನೋಡಿ ಇವರೆ, ಈ ವಿಷಯದಲ್ಲಿಯ ಜವಾಬ್ದಾರಿಯನ್ನು ನನಗೆ ಬಿಡಿ. ಝೋಪಡಿ ಪಟ್ಟಿಯಿಂದ ಈ ಹುಡುಗ ಒಟ್ಟು ಮಾಡಿರ.ವ ಮಾಹಿತಿಯಿಂದ ಯಾರಿಗೂ ಹಾನಿಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಹಾಗೇ ಈ ಎಳೆಯ ಪ್ರಾಯದ ಹುಡುಗನನ್ನು ಕಾಪಾಡುವ ಜವಾಬ್ದಾರಿ ಕೂಡಾ, ನೀವು ಹೇಗೂ ನನ್ನನ್ನು ನೋಡಿದ್ದೀರಿ. ನಿಮ್ಮ ಯಜಮಾನನಿಗೆ ನನ್ನ ಮಾತುಗಳಿಂದ ಸಮಾಧಾನವಾಗದಿದ್ದರೆ ಮತ್ತೆ ಬಂದು ನನ್ನನ್ನು ಕಾಣಬಹುದು. "ಪೊಲೀಸರ ಆಸರೆ ಪಡೆಯಲು ಹೋಗಬೇಡಿ, ಹುಡುಗನನ್ನು ಸದ್ಯ

ಇಟ್ಟುಕೊಳ್ಳಿ, ಆದರೆ ಬಹಳ ಕಾಲ ನಮ್ಮಿಂದ ತಪ್ಪಿಸಿಕೊಳ್ಳಲಾರ, ಬರ್ತೇವೆ".

ಬಂದವರು ಹೋದದ್ದೇ ತಡ, ಪಾರ್ವತಿ, ಶಿರೀನ ಅವಳ ತಾಯಿ ಮೂವರು ಬೆಹರಾಮ್ ಬೇಡ ಎಂದು ಕೂಗುತ್ತಿದ್ದರೂ ಕೇಳದೆ ಈ ಗುರುತಿರದ ದಾರಿ ಹೋಕಹುಡುಗನಿಂದಲೇ ಇಷ್ಟೆಲ್ಲ ಹಗರಣವಾಯಿತು. ಎಂಬಂತೆ ಗವ ಗವ ಮಾತನಾಡುತ್ತ ಕರುಣಾಕರನ್‌ನ ಮೇಲೆ ಮುಗಿಬಿದ್ದರು. ಬೆಹರಾಮ್ "ತಡೆ ಕರುಣಾಕರನ್, ತಡೆ" ಎನ್ನುತ್ತಿರುವಂತೆಯೆ, ಕರುಣಾಕರನ್ ಕಂಗಾಲಾಗಿ ಅಲ್ಲಿಂದ ಓಟಕಿತ್ತ. ಅವನು ಕತ್ತಲಲ್ಲಿ ಸೇರಿಕಾಣದಾಗುವವರೆಗೂ ನೋಡುತ್ತಾ ನಿಂತ ಬೆಹರಾಮ್ ನೇರವಾಗಿ ಬಾಲ್ಕನಿಗೆ ಹೋಗಿ ಅಲ್ಲಿಯ ಕುರ್ಚಿಯೊಂದರಲ್ಲಿ ಕುಸಿದು ಕುಳಿತ.

ಕರುಣಾಕರನ್ ದೊಂಬೀವಿಲಿಯಲ್ಲಿರುವ ತನ್ನ ಕೋಣೆಯನ್ನು ತಲುಪುವ ಹೊತ್ತಿಗೆ ಮಧ್ಯರಾತ್ರಿಯಾಗಿತ್ತು. ಮನೆಯ ಕಾಂಪೌಂಡ್‌ನಲ್ಲಿ ಕಾಲಿಡುತ್ತಿರುವಾಗ ನಿದ್ದೆ ದಣಿವುಗಳನ್ನು ಸಂಪೂರ್ಣ ಮರೆಸುವ ಮಟ್ಟಿಗೆ ದಂಗು ಬಡಿಸುವ ಸನ್ನಿವೇಶವೊಂದು ಅವನ ಆಗಮನಕ್ಕಾಗಿ ಕಾದಿತ್ತು. ಸುತ್ತಲೂ ಜನ ಸೇರಿದ್ದರು. ಏನೇನೋ ವದರಾಡುತ್ತಿದ್ದರು. ಈಗಿಂದೀಗ ನಿನ್ನ ಗಂಟು ಮೂಟೆ ಕಟ್ಟಿಕೊಂಡು ಹೊರಡು ಎನ್ನುವಂತೆ.

ಯಾರೋ ಬೀಗ ಮುರಿದು ಬಾಗಿಲು ತೆರೆದಂತಿದ್ದ ಅಸ್ತವ್ಯಸ್ತವಾದ ಕೋಣೆಯನ್ನು ಕಂಡ ಮೇಲೆ ಮಾತ್ರ ಸುತ್ತಲಿನ ಜನಕ್ಕೆ ಬಂದ ಸಿಟ್ಟಿನ ಕಾರಣ ಹೊಳೆಯಿತು. ಬೆಹರಾಮನ ಮನೆಯಲ್ಲಿ ಅವನನ್ನು ಕಂಡ ಜನ ಇಲ್ಲಿಗೂ ಬಂದಿದ್ದರು. ತಮ್ಮ ಗ್ಯಾಂಗಿನಿಂದ ಪಿತೂರಿಯಾದವನನ್ನು ಇಲ್ಲಿ ನಿಲ್ಲಿಸಿಕೊಂಡರೆ ಒಳಿತಾಗಲಿಕ್ಕಿಲ್ಲ ಎಂಬಂತಹ ಆಕ್ರೋಶ ತುಂಬಿದ ಮಾತುಗಳಲ್ಲಿ ಬೆದರಿಸುತ್ತ ಧಿಮಿ ಧಿಮಿ ಹಾರಾಡಿದ್ದರು. ಕೋಣೆಗೆ ಹಾಕಿದ ಬೀಗ ಮುರಿದು ಒಳಗೆ ನುಗ್ಗಿ ಯಾತಕ್ಕಾಗಿಯೊ ಹುಡುಕಾಡಿ ಅದು ಸಿಕ್ಕಿ ತೆಂಬ ಸಂಭ್ರಮದಲ್ಲಿ ಹೊರಟು ಹೋಗಿದ್ದರು. ಇಂತಹದೇನೊ ಇದೆಯೆಂದು ಮಧ್ಯ ರಾತ್ರಿ ಕಳೆದ ಮೇಲೆ ಕಳ್ಳ ಹೆಜ್ಜೆಯಲ್ಲಿ ತಾನು ಕೋಣೆ ಸೇರುತ್ತಿದ್ದೆ ಎಂದು ಇವರೆಲ್ಲ ತಪ್ಪು ತಿಳಿಯಲು ಕಾರಣವಾದ ಸನ್ನಿವೇಶದಲ್ಲಿ ಬಾಯಿ ತೆರೆಯಲು ಧೈರ್ಯವಾಗಲಿಲ್ಲ. ಹಸಿದ ಹೊಟ್ಟೆ, ಓಡಿ ಬಂದ ದಣಿವು, ಪ್ರಕ್ಷುಬ್ಧಗೊಂಡ ಜನ ಕರುಣಾಕರನ್ ಇಲ್ಲಿಗೆ ಬರು ವಾಗ ತಂದ ರೆಕ್ಸಿನ್ ಹೊದಿಕೆಯ ಫೈಬರ ರಟ್ಟಿನ ಸಣ್ಣ ಸೂಟ್ ಕೇಸಿನಲ್ಲಿ ರೂಮಿನೊಳಗಿದ್ದ ತನ್ನ ಸಾಮಾನು ಎಲ್ಲವನ್ನೂ ಕೈಗೆ ಬಂದ ಕ್ರಮದಲ್ಲಿ ತುರುಕಿ ಅಲ್ಲಿಂದ ಓಡಲು ತೊಡಗಿದ. ಅವನ ಹೆಜ್ಜೆ ಗಳು ದೊಂಬೀವಿಲಿ ಸ್ಟೇಷನ್ ಕಡೆಗೆ ಓಡುತ್ತಿದ್ದವು.

ಫ್ಲಾಟ್‌ಫಾರಂ ಸೇರುವ ಹೊತ್ತಿಗೆ ಟ್ರೇನ್ ಹೊರಟು ಹೋಗಿ ಕೆಲವೇ ನಿಮಿಷಗಳಾಗಿದ್ದವು. ಕರುಣಾಕರನ್ ನಿರ್ಜನವಾದ ಫ್ಲಾಟ್‌ಫಾರಂನ ಬೆಂಚೊಂದರ ಮೇಲೆ ಕುಸಿದು, ಕುಸಿದಲ್ಲೇ ಒರಗಿದ, ಒರಗಿದಲ್ಲೇ ಇದೀಗ ಹೊರಟು ಹೋದದ್ದು ರಾತ್ರಿಯ ಕೊನೆಯ ಗಾಡಿ, ಮನೆಗೆ ಹೋಗುವುದಾದರೆ ಬೆಳಗಿನವರೆಗೆ ಕಾಯಬೇಕು ಎಂಬುದು ಅರಿವಿಗೆ ಬರುತ್ತಿರುವಾಗ ನಿದ್ರೆಗೆ ತಿರುಗುವುದರಲ್ಲಿದ್ದ ದಣಿವು ಸಂಜೆ ಯಿಂದಲೂ ಏಕೆ ಕೇರಳ ಬಿಟ್ಟು ಬಂದಂದಿನಿಂದ ಅನುಭವಿಸಿದ್ದ ಘಟನೆ ಗಳೆಲ್ಲವೂ ಅರ್ಥವತ್ತಾಗಿ ಆಕಾರ ತಳೆಯಲಾರಂಭಿಸಿದ್ದವು.

ಭಡಕ್ಕನೆ ಹತ್ತಿದ ನಿದ್ರೆಯಿಂದ ಎಚ್ಚರವಾದಾಗ ತಾನಿನ್ನೂ ದೊಂಬೀವಿಲಿ ಸ್ಟೇಷನ್ನಿನ ಬೆಂಚಿನ ಮೇಲೆ ಮಲಗಿದ್ದೇನೆ ಎಂಬ ಅರಿವು ಮೂಡಿತು. ಜೊತೆಗೆ ತಾನು ಕೋಣೆ ಬಿಟ್ಟು ಬರುವಾಗ ಬ್ಯಾಗಿನಲ್ಲಿ ಹಾಕಿ ತಂದ ವಸ್ತುಗಳಲ್ಲಿ ಡಾಯರಿ ಇದ್ದ ನೆನಪಾಗಲಿಲ್ಲ. ಕೋಣೆಯ ಬೀಗ ಮುರಿದು ಒಳನುಗ್ಗಿದವರು ಅದಕ್ಕಾಗಿಯೇ ಬಂದಿರಬಹುದೆ? ಎನಿಸಿತು. ವೃತ್ತ ಪತ್ರಿಕೆಯ ಕೆಲಸಕ್ಕೆ ಅರ್ಜಿ ಹಾಕಿದ ತನ್ನ ಯೋಗ್ಯತೆಯನ್ನು ಪರೀಕ್ಷಿಸಲು ತನಗೊಪ್ಪಿಸಿದ ಈ ಕೆಲಸ ಮುಂಬೈ ಝೋಪಡಪಟ್ಟಿಗಳ ಮೇಲೆ ಬೆಳಕು ಚೆಲ್ಲಬಹುದಾದ ರಿಪೋರ್ಟು ಅಣ್ಣನ ಹುಡುಕಾಟಕ್ಕೆ ತಳಕು ಹಾಕಿಕೊಂಡಿದ್ದು ಆಕಸ್ಮಿಕ.

ಪ್ಲಾಟ್‌ಫಾರಮ್ಮಿನ ಗಡಿಯಾರ ಐದು ಹೊಡೆಯಿತು. ಬೆಳಗು ಜಾವದ ಮಬ್ಬುಗತ್ತಲನ್ನು ಸೀಳಿ ಬರುತ್ತಿದ್ದ ಟ್ರೇನು ಕಾಣಿಸಿತು. (ಬಹುಶಃ ದೊಂಬೀವಿಲಿಯಿಂದ ತನ್ನನ್ನು ಶಾಶ್ವತವಾಗಿ ಬೇರ್ಪಡಿಸಲಿದ್ದ ಟ್ರೇನಿನ ಮುಂಭಾಗವನ್ನು ಕಂಡೊಡನೆ ಅತ್ತು ಬಿಡಬೇಕು ಎಂಬಷ್ಟು ಭಾವುಕನಾದ.)

ಜೊತೆಗೆ ತಂದ ಬ್ಯಾಗಿನೊಂದಿಗೆ ಡಬ್ಬಿ ಹತ್ತಿದಾಗ ಡಬ್ಬಿ ಯಾರು ಇರಲಿಲ್ಲ. ವಿಟಿ ತಲುಪಿದೊಡನೆ ಸಮ್ರಾಟ್ ಹೋಟಲಿನಲ್ಲಿ ರೂಮು ಹಿಡಿದಿದ್ದ. ಕೇರಳದಿಂದ ಬಂದ ಮೊದಲಲ್ಲಿ ಡೊಂಬೀವಿಲಿಯಲ್ಲಿ ಕೋಣೆ ಸಿಗುವ ತನಕ ಅವನು ಈ ಹೋಟಲಿನಲ್ಲಿ ರೂಮು ಹಿಡಿದಿದ್ದ. ಕೋಣೆಯ ಕದ ಮುಚ್ಚಿದೊಡನೆ ಬೂಟುಗಳನ್ನು ತೆಗೆದು ಮಂಚದ ಮೇಲೆ ಒರಗಿದವನಿಗೆ ನಿದ್ದೆ ಬಂದದ್ದೇ ಗೊತ್ತಾಗಲಿಲ್ಲ. ಮಾರನೆಯ ದಿನ ಬೆಳಿಗ್ಗೆ ಕಿಟಕಿಯಿಂದ ತೂರಿ ಬಂದ ಸೂರ್ಯ ಕಿರಣ ಕಣ್ಣಿನ ಮೇಲೆ ಬಿದ್ದಾಗ ಎರಡು ದಿನ ಗಳಿಂದ ಹತ್ತಿದ ದಣಿವು ಎಲ್ಲಿಗೂ ಹಾರಿ ಹೋಗಿತ್ತು. ಇರಾನಿ ರೆಸ್ಟೊರೆಂಟಿನಲ್ಲಿ ಚಹ, ಆಮ್ಲೆಟ್ ಮುಗಿಸಿ, ಅಲ್ಲಿಂದಲೇ ಆಫೀಸಿಗೆ ಫೋನ್ ಮಾಡಿ ರೂಮಿಗೆ ಬಂದು ಸ್ನಾನ ಮಾಡಿ, ತಾನು ಬರೆಯಲು ಯೋಜಿಸಿಕೊಂಡ ರಿಪೋರ್ಟ್ ಬರೆಯಲು ಕುಳಿತ.

ಕರುಣಾಕರನನ್ನು ಮನೆಯಿಂದ ಓಡಿಸಿದ ಶಿರೀನ್. ಪಾರ್ವತಿಯರ ಮೇಲೆ ಬೇಸರಾಮನಿಗೆ ಸಿಟ್ಟು ಬಂದಿತ್ತು. ಅಪ್ಪನ ಮೂಡನ್ನು ಅರಿತ ಶಿರೀನ್‌ಳಿಗೆ ಅವನನ್ನು ಮಾತಾಡಿಸುವ ಧೈರ್ಯವಾಗಲಿಲ್ಲ. ಒಂದೆರಡು ಬಾರಿ ಅಲ್ಲಿಯೇ ಸುಳಿದು ಮತ್ತೊಮ್ಮೆ ಹತ್ತಿದ ಹೋಗಿ 'ಅಪ್ಪಾ' ಎಂದಾಗ ಶಿರೀನ್‌ಳ ತಾಯಿಯೂ ಹೊರ ಬಂದಳು.

"ನಿಮಗೆ ಏನು ಹೇಳಬೇಕಾಗಿದೆ ಎಂದು ಗೊತ್ತಿದೆ ಫೋನ್ ಮೇಲೆ ಮಾತಾಡಿದ್ದು ಯಾರೋ ಬಂದವರು ಯಾರೋ, ಹೇಳಿದ್ದನ್ನು ನಂಬಿ ಈ ನಿಷ್ಪಾಪ ಎಳೆಯ ನನ್ನು ಅವರ ವಶಕ್ಕೆ ಒಪ್ಪಿಸಲು ಸಿದ್ಧರಾದಿರಿ. ಅವನು ರಕ್ಕನಲ್ಲ. ಮೂರು ವರ್ಷದ ಹಿಂದೆ ಕೊಲೆಯಾದವನ ಸಂಬಂಧಿಯಾಗಿರಬೇಕು. ತಮ್ಮನೂ ಆಗಿರಬಹುದು" ಎಂದು ಹೇಳಬೇಕೆಂದಿದ್ದವನು ಅದು ತನ್ನದೇ ಕಲ್ಪನೆಯಿರಬಹುದು ಎನಿಸಿ ಸುಮ್ಮನಾದ.

ಶಿರೀನ್ ಆತ್ಮ ವಿಶ್ವಾಸದಿಂದ ಗಟ್ಟಿಯಾಗಿ "ಕರುಣಾಕರನ್ ತುಂಬಾ ಸ್ಮಾರ್ಟ್ ಆದ ಹುಡುಗ ಸಂಶಯವಿಲ್ಲ. ಆದರೆ ಅವನು ರಕ್ಕರ ಗ್ಯಾಂಗಿನವನು ಎಂಬುದಂತೂ ಖಂಡಿತ.

ಇಷ್ಟಕ್ಕೂ ಅವನು ಕೊನೆಯ ವರೆಗೂ ತಾನು ಬಂದ ಉದ್ದೇಶವನ್ನು ಹೇಳಲೇ ಇಲ್ಲ". ಶಿರೀನಳ ಮಾತು ಮುಗಿಯುವುದರೊಳಗಾಗಿ ಕದದ ಕರೆಗಂಟೆ ದೀರ್ಘವಾಗಿ ಒಳಗೆ ಬರುವವನ ಆತುರವನ್ನು ಸೂಚಿಸಿತು. ಕದ ತೆರೆದಾಗ ಕಂಡದ್ದು, ಕೆದರಿದ ಕೂದಲು, ಸದ್ಯಪೇ ಬಿಟ್ಟಂತಿದ್ದ ದಾಡಿ, ತುಟಿಗಳಿಂದ ಕೆಳಗೆ ಬಾಗಿದ ಮೀಸೆ, ಅಂತಃಕರಣದ ಆಳದಿಂದ ನೋಡುವಂತಿದ್ದ ಬೆದರಿದ ಕಣ್ಣುಗಳು. ಬೆಹರಾಮನ ದೃಷ್ಟಿ ಅವನ ಮೋರೆಯ ಮೇಲೆ ನೆಲೆಸಿತ್ತು. ಹೊರಗಿನ ಮಂದ ಬೆಳಕಿನಲ್ಲಿ ಶಿರೀನ್ ಅವಳ ತಾಯಿಗೂ ಸರಿಯಾಗಿ ಗುರುತು ಹತ್ತಲಿಲ್ಲ. "ಸರ್ ನಾನು ನಿಮ್ಮ ವಾಸು, ವಾಸುದೇವನ್" ಎಂದಾಗ ದನಿ ಗುರುತು ಹತ್ತಿದಂತಾಗಿ "ಓ! ಮೂರು ವರ್ಷಗಳಿಂದ ನಮ್ಮಲ್ಲಿ ಕೆಲಸಕ್ಕಿದ್ದ ಹುಡುಗ" ಎಂದಳು. ಅದು ವರೆಗೂ ಸುಮ್ಮನಿದ್ದ ಬೆಹರಾಮ್ "ಅರೇ ನಮ್ಮ ವಾಸು, ಬಾ, ಬಾ" ಎಂದವನೇ ಭಾವುಕನಾಗಿ ಬಂದವನನ್ನು ಒಳಗೆ ಬರಮಾಡಿಕೊಂಡ.

ಇದಾವುದರ ತಲೆ ಬುಡ ಗೊತ್ತಿಲ್ಲದ ಶಿರೀನ್ ಈ ಭೇಟಿ ಕರುಣಾಕರನ್‌ಗೆ ಸಂಬಂಧಿಸಿದ್ದು ಎನಿಸಿ ಆತಂಕಗೊಂಡಳು. ಅವನು ಹೇಳತೊಡಗಿದ. ಇಲ್ಲಿಯ ಕೆಲಸ ಬಿಟ್ಟ ನಂತರ ನಾಲ್ಕು ಕಾಸು ಮಾಡುವ ಉದ್ದೇಶದಿಂದ ಒಂದು ಗ್ಯಾರೇಜಿನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆ. ಆದರೆ ಅಲ್ಲಿ ಯಾವುದೂ ಮನಸ್ಸಿಗೆ ಒಗ್ಗದ್ದರಿಂದ ಈಗ ಮುಂಬಯಿಯಲ್ಲಿಯೇ ಚೌಕಿದಾರನಾಗಿ ಕೆಲಸ ಮಾಡುತ್ತಿದ್ದೇನೆ. ಇಲ್ಲಿ ಧಾರಾವಿಯ ಝೋಪಡಪಟ್ಟಿಯ ಮನೆಯೊಂದರಲ್ಲಿ ಇದ್ದೇನೆ.

ಪೀಠಿಕೆ ಉದ್ದವಾದಂತೆನಿಸಿ ನೇರ ವಿಷಯಕ್ಕಿಳಿದ. ಸರ್, ನಿಮ್ಮ ಮನೆಗೆ ಈ ಹೊತ್ತು ಒಬ್ಬ ಹುಡುಗ ಬಂದಿದ್ದ ನಂತಲ್ಲ, ಅವನನ್ನೊಮ್ಮೆ ನೊಡಬೇಕಾಗಿದೆ ಸರ್, ನಾನು ಬರು ವುದರೊಳಗೆ ಅವನು ಹೊರಟು ಹೋದಂತಿದೆ. ಕೆಲವು ತಿಂಗಳ ಹಿಂದೆ ನಾನು ಕೆಲಸ ಮಾಡುತ್ತಿದ್ದ ಸೀನೆಸ್ಸ್ ಕಟ್ಟಡಕ್ಕೂ ಆತ ಬಂದಿರಬೇಕು. ಅವನು ನಿಜಕ್ಕೂ ಮೂರು ವರ್ಷದ ಹಿಂದೆ ನಡೆದ ಖೂನಿಯ ಬಗೆಗೆ ತಿಳಿಯಲು ಬಂದಿರ ಬೇಕು. ಹುಡುಗ ತನ್ನ ಭೋಳೆತನದಲ್ಲಿ ಇತ್ತೀಚೆಗೆ ನಡೆದ ರದ್ದೀವಾಲಾನ ಖೂನಿಗೂ ಸಂಬಂಧವಿದ್ದಂತೆ ಮಾತಾಡಿ, ಇಲ್ಲಿಯ ಪಾತಾಳ ಲೋಕದ ವ್ಯವಹಾರ ಗಳಿಗೆ ಸಂಬಂಧಪಟ್ಟ ಹಲವರ ಸಂಶಯ ಕೆರಳಿಸಿದ್ದಾನೆ. ಪಾಪ ಅಂದು ಸತ್ತವನು ಹುಡುಗನ ಹತ್ತಿರದ ಸಂಬಂಧಿಯಾಗಿರ ಬೇಕು.

ವಾಸುದೇವನ್ ಧ್ವನಿಯಲ್ಲಿ ಮೂಡಿದ್ದ ಆತಂಕ ಪ್ರಾಮಾಣಿಕವಾದದ್ದು ಎಂಬುದ ರಲ್ಲಿ ಬೆಹರಾಮ್‌ನಿಗೆ ಸಂಶಯವಿರಲಿಲ್ಲ. ಆದರೆ ಮೂರು ವರ್ಷಗಳ ಹಿಂದಿನ ಈ ಭೀಕರ ಕೊಲೆಯ ಬಗೆಗೆ ನನಗೆ ತಿಳಿಸಿದವನು ಇದೇ ವಾಸುದೇವನ್. ಆ ಸಂಗತಿಗಳನ್ನೆಲ್ಲ ನನ್ನೊಳಗೆ ಅಡಗಿಸಿಟ್ಟು ಕೊಂಡಿದ್ದು ಇವನ ರಕ್ಷಣೆಗಾಗಿಯೆ. ಈಗ ಕೊಲೆಯಾದವನ ತಮ್ಮನೊ ಇನ್ನಾರೊ ಬಂದು ಆ ಕೊಲೆಯ ತನಿಖೆ ನಡೆಸುತ್ತಿರು ವಾಗ ಮಸ್ಕತ್ತಿನಿಂದ ಬಂದ ನಂತರ, ಕರುಣಾಕರನ್‌ನನ್ನು ಕಾಣಲು ಇವರೆಲ್ಲ ನನ್ನ ಮನೆಗೆ ಬಂದದ್ದು ಹೇಗೆ ಎಂದು ಆಶ್ಚರ್ಯವಾಗಿತ್ತು. ಈ ಬಗ್ಗೆ ನೇರವಾಗಿ ಕೇಳಿದಾಗ ವಾಸುದೇವನ್ ಹೇಳಿದ. ನಿಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಪಾರ್ವತಿ ನಾನು ಚೌಕಿದಾರನಾಗಿ ಕೆಲಸ ಮಾಡುತ್ತಿರುವವರ ಮನೆಯಲ್ಲೂ ಕೆಲಸ ಮಾಡುತ್ತಿದ್ದಾಳೆ. ಅವಳಿಗೆ ನಾನು ಗೊತ್ತು. ಅವಳೇ ಹೇಳಿದಳು. ಈ ಹುಡುಗನ ಬಗೆಗೂ ಅವನನ್ನು ನಾನು ನೋಡಬೇಕಾ ಗಿದೆ ಸರ್ ಅವನು ನಾನು ತಿಳಿದುಕೊಂಡ ಹುಡುಗ ಹೌದೋ ಅಲ್ಲವೋ ತಿಳಿಯ ಬೇಕಾಗಿದೆ.

ಬೆಹರಾಮ್ ಆಲೋಚನಾಮಗ್ನನಾದ ಮುದುಕ ಬಾಯಿ ಬಿಡದ್ದನ್ನು ಕಂಡು ಶಿರೀನ್‌ಳೇ ಹೇಳಿದಳು, "ನೋಡಿ ಅಪ್ಪ ಈಗ ಬಹಳ ದಣಿದಿದ್ದಾರೆ. ಕರುಣಾಕರನ್ ನೇನೂ ಮಳ್ಳನಲ್ಲ. ಇಂದು ಸಂಜೆ ನಡೆದಿದ್ದರ ಅರ್ಥವನ್ನು ಗ್ರಹಿಸದೆ ಇರಲಾರ. ಮೇಲಾಗಿ ನಮ್ಮಲ್ಲಿ ಯಾರಿಗೂ ಅವನ ವಿಳಾಸ ಗೊತ್ತಿಲ್ಲ. ಈಗ ನೀವು ಹೆಚ್ಚು ಹೊತ್ತು ಕೂಡುವುದು ಸರಿಯಲ್ಲ. ನಾವೇ ನಮ್ಮ ನಡತೆಯಿಂದ ಈ ಜನರಲ್ಲಿ ಸಂಶಯ ಹುಟ್ಟಿಸಿ ಅವನಿಗಿದ್ದ ಅಪಾಯ ವನ್ನು ಹೆಚ್ಚಿಸಬಹುದು" ಎಂದು ಹೇಳಿ ಸಂಜೆ ನಡೆದಿದ್ದನ್ನು ಸಂಕ್ಷಿಪ್ತವಾಗಿ ತಿಳಿಸಿದಳು. ಆಗ ಬೆಹರಾಮನೂ "ಇನ್ನೊಮ್ಮೆ ಬಾ. ಸದ್ಯ ನಾನೇ ಈ ಬಗ್ಗೆ ಏನು ಮಾಡಲಾಗುತ್ತದೊ ನೋಡುತ್ತೇನೆ" ಎಂದ.

ವಾಸುದೇವನ್ ಏನು ಹೇಳಲೂ ತೋಚದೆ, "ಬರುತ್ತೇನೆ" ಎನ್ನುತ್ತ ಬಾಗಿಲಕಡೆ ಹೊರಟ.

ಬೆಹರಾಮ್ ಮಲಗುವ ಕೋಣೆಗೆ ಹೋದವನೇ ಹಾಸಿಗೆಯಲ್ಲಿ ಅಡ್ಡವಾದ. ಬಾಗಿಲಲ್ಲಿ ಬಂದು ನಿಂತ ಮಗಳಿಗೆ, "ಕೆಲಹೊತ್ತು ಒಬ್ಬನೇ ಮಲಗಿರುತ್ತೇನೆ. ಊಟಕ್ಕೆ ಎಬ್ಬಿಸು" ಎಂದ ಶಿರೀನ್ ಹತ್ತಿರ ಹೋಗಿ ಹಾಸಿಗೆಯ ಅಂಚಿನಲ್ಲಿ ಕುಳಿತಳು. ಬೆಹರಾಮ "ವಾಸುದೇವನ್ ಬಂದ ಉದ್ದೇಶ ಏನೇ ಇರಲಿ, ಕರುಣಾಕರನನಿಗೆ ಅಪಾಯ ತಟ್ಟದ ಹಾಗೆ ನೋಡಿಕೊಳ್ಳಬೇಕು" ಎಂದ. ಶಿರೀನ್ ಕೂಡಲೆ ಅನುಮೋದಿಸುವ ರೀತಿಯಲ್ಲಿ ತಲೆದೂಗಿದಳು. ಬೆಹರಾಮನಿಗೆ ತುಸು ಹೊತ್ತಿನಲ್ಲಿಯೇ ಗಾಢ ನಿದ್ರೆ ಹತ್ತಿತು. ಕಳ್ಳ ಹೆಜ್ಜೆಯಿಂದ ಅಪ್ಪನ ಕೋಣೆ ಬಿಟ್ಟು ಅಡುಗೆಮನೆಯಲ್ಲಿದ್ದ ತಾಯಿಯ ಹತ್ತಿರ "ನಾವೆಲ್ಲ ಈ ವಾರವೇ ಜಮಶೇಡ್ ಪುರಕ್ಕೆ ಹೋದರೆ ಹೇಗೆ? ಯಾರು ಯಾರೆಲ್ಲರ ಸಲುವಾಗಿ ನಿಮ್ಮ ಜೀವಕ್ಕೆ ಅಪಾಯ" ಮಗಳು ಹೆದರಿಕೊಂಡಿದ್ದಾಳೆಂದು ಸ್ಪಷ್ಟವಿತ್ತು.

"ಅಂಥ ಧೈರ್ಯ ಈ ಜನಕ್ಕಿಲ್ಲ ಬಿಡು. ನಿನ್ನ ಅಪ್ಪನ ವಜನು ಇಲ್ಲಿಯ ಜನರಲ್ಲಿ ಸಾಕಷ್ಟಿದೆ. ನನಗೆ ಕೆಡುಕೆನಿಸಿದ್ದು ಆ ಹುಡುಗನ ಬಗೆಗೇ ನಾವು ಅವನನ್ನು ಹಾಗೆ ಓಡಿಸಬಾರದಿತ್ತು". ಸ್ವಲ್ಪ ತಡೆದು ಶಿರೀನ್ ಊಟಕ್ಕೆಬ್ಬಿಸಲು ಹೋದಾಗ ಬೆಹರಾಮ್ ಎಚ್ಚೆತ್ತಿದ್ದ. ಊಟ ಮುಗಿಸಿ ಇಡೀ ಕಾಂಪೋಜಿನ ಗುಳಿಗೆಯನ್ನು ನುಂಗಿ ನಿದ್ದೆ ಹೋದವನನ್ನು ಎಚ್ಚರಿಸಿದ್ದು ಕರ್ಕಶವಾಗಿ ಅರುಚಿದ ಟೆಲಿಫೋನಿನ ಗಂಟೆ. ಆಗ ರಾತ್ರಿ ಹನ್ನೊಂದು. ನಿದ್ದೆಗಣ್ಣಿನಲ್ಲಿಯೇ ಟೆಲಿಫೋನ್ ಕೈಗೆತ್ತಿಕೊಂಡವನು ನಿದ್ದೆಗಣ್ಣಿನಲ್ಲಿಯೇ ಹಾಸಿಗೆ ಸೇರಿದ್ದನು. ಟೆಲಿಫೋನ್ ಮೇಲೆ ಆ ಬದಿಯಿಂದ ಬಂದ ಮಾತುಗಳು ನೆನಪಿಗೆ ಬಂದದ್ದು ಬೆಳಿಗ್ಗೆ ಐದುಗಂಟೆಗೆ. "ಮುದುಕಪ್ಪಾ ನಿನ್ನ ಪೇಪರವಾಲಾ ಹುಡುಗನ ಮನೆಗೆ ಹೋಗಿ ಬಂದೆವು. ಇನ್ನೂ ಮನೆ ತಲುಪಿಲ್ಲ ಎಂದ ಮೇಲೆ ಅವನು ನಿನ್ನ ಮನೆಯಲ್ಲಿಯೇ ಇರಬೇಕು. ಬೆಳಿಗ್ಗೆ ಬಂದು ಒಮ್ಮೆ ಫೇರಿ ಹಾಕಿ ಹೋಗುತ್ತೇವೆ". ಬೆಹರಾಮ್ ಹಾಸಿಗೆಯಲ್ಲಿ ಎದ್ದು ಕುಳಿತ ಅವನಿಗೆ ತಾನು ಉತ್ತರ ಕೊಟ್ಟಿದ್ದೆನೆ? ಇಲ್ಲವೆಂದೇ ತೋರಿತು. ಈಗ ಹೇಳಿಕೊಂಡ ತನ್ನಷ್ಟಕ್ಕೆ, "ಬಾ, ನಿನ್ನ ದಾರಿ ಕಾಯುತ್ತೇನೆ".

ಬೆಳಿಗ್ಗೆ ಎಚ್ಚರವಾದಾಗ ಬಿಸಿಲು ಬೆಟ್ಟಗಾಗಿತ್ತು. ಹತ್ತಿರ ಬಂದ ಹೆಂಡತಿ ಮಗಳೊಡನೆ "ಕರುಣಾಕರನ್ ಈ ಲಫಂಗರ ಕೈಗೆ ಸಿಕ್ಕಿಲ್ಲ. ಹುಡುಗ ನಿನ್ನೆ ರಾತ್ರಿ ಕೋಣೆಗೇ ಹೋದಂತಿಲ್ಲ". ಎನ್ನುವಾಗಲೇ ರಾತ್ರಿ ಅವರು ಫೋನ ಕೆಳಗಿಡುವ ಮುನ್ನ ಹೇಳಿದ "ಇನ್ನೊಂದು ಸಣ್ಣ ಮಾತು ಮುದುಕಪ್ಪಾ ಅವನು ಟಿಪ್ಪಣಿ ಬರೆಯುತ್ತಿದ್ದ ಡಾಯರಿ ನಮಗೆ ಸಿಕ್ಕಿದೆಯೆಂದು ಅವನಿಗೆ ತಿಳಿಸಿಬಿಡು". ಆ ಇನ್ನೊಂದು ಮಾತೂ ನೆನಪಾಯಿತು. "ಅರೆ, ಇವರಿಗೆ ಅವನ ವಿಳಾಸ ಯಾರು ಕೊಟ್ಟರೊ" ಎಂದುಕೊಳ್ಳುತ್ತಿರುವಾಗಲೆ ಒಳಗೆ ಮತ್ತಷ್ಟು ದುಗುಡ ತುಂಬಿದಂತೆ ಅನಿಸಿ ಆಫೀಸಿಗೆ ರಜೆಹಾಕಬೇಕೆಂದು ಕೊಂಡವನು ಒಳಗೆ ಕುಳಿತು ಈ ಮಾನಸಿಕ ಹಿಂಸೆ ಅನುಭವಿಸುವುದಕ್ಕಿಂತ ಆಫೀಸಿಗೆ ಹೋಗುವುದೇ ಒಳಿತು ಎನ್ನಿಸಿ ಸ್ನಾನದ ಮನೆಯತ್ತ ಹೆಜ್ಜೆ ಹಾಕಿದ.

ವಾಸುದೇವನ್ ಬೆಹರಾಮ್‌ನ ಮನೆಗೆ ಕೊನೆಗೂ ಹೋದಾಗ, ಕಳೆದ ಮೂರು ತಿಂಗಳಿಂದಲೂ ತಪ್ಪುಗಂಟಾದ ಹುಡುಗ ಸಿಕ್ಕಾನು ಎಂದು ಪುಲಕಿತನಾಗಿದ್ದ. ನಿನ್ನೆ ಬೆಳಿಗ್ಗೆ ಪಾರ್ವತಿಯಿಂದ ವಿಷಯ ತಿಳಿದಾಗಿನಿಂದ, ಕರುಣಾಕರನ್ ತನ್ನ ತಮ್ಮನೇ ಎಂಬ ವಿಶ್ವಾಸವೊಂದೇ ಬೆಹರಾಮ್‌ನ ಮನೆಗೆ ಹೋಗುವ ಧೈರ್ಯಕೊಟ್ಟಿತ್ತು. "ಓಹ್ ಅವನು ನನ್ನ ತಮ್ಮನೇ ಆಗಿದ್ದರೆ ಹತ್ತು ವರ್ಷಗಳ ಹಿಂದೆ ಕಂಡವನನ್ನು ಈಗ ಗುರುತು ಹಿಡಿಯಲು ಸಾಧ್ಯವೇ ಆಗ ಕರುಣಾಕರನ್ ಕೇವಲ ಹದಿನೈದು ವರ್ಷದ ಹುಡುಗ ಮೈಯಲ್ಲಾಗ ಬಡಕಾಟಿಯಾಗಿ ಇನ್ನೂ ಸಣ್ಣವನಾಗಿ ಕಾಣುತ್ತಿದ್ದ ನಿನ್ನೆ ರಾತ್ರಿ ನಡೆದ ಘಟನೆಯನ್ನು ಪಾರ್ವತಿ ಉತ್ಸಾಹದಿಂದ ಹೇಳುವಾಗ ವಾಸುದೇವನ್‌ಗೆ ಸಂಶಯ ಉಳಿಯಲಿಲ್ಲ: -ಆ ನಾಲ್ವರು ನಿಜಕ್ಕೂ ಹುಡುಕತ್ತಿದ್ದದ್ದು ತನ್ನನ್ನು ಎಂದು! ಅವರು ತಮ್ಮ ಗ್ಯಾಂಗಿನಿಂದ ಪಿತೂರಿಯಾಗಿದ್ದಾನೆಂದು ಹೇಳಿದ ಹುಡುಗ ತಾನೇ ಎಂದು! ಅದೇ ಹೊತ್ತಿಗೆ ನಿನ್ನೆ ಬಂದ ಹುಡುಗ ನಿಜಕ್ಕೂ ಹುಡುಕುತ್ತಿದ್ದುದ್ದು ಊರಲ್ಲಿ ಮನೆಯಲ್ಲಿ ಎಲ್ಲರೂ ಕೊಲೆಯಾಗಿರುವನೆಂದೇ ತಿಳಿದಿರುವ ತನ್ನನ್ನೇ ಇರಬಹುದು ಎಂಬ

ಗುಮಾನಿಯೂ ಅವನನ್ನು ನೋಡುವ ತವಕವನ್ನು ಹೆಚ್ಚಿಸುತ್ತಿತ್ತು. ಆದರೆ ಈ ಸಲವೂ ಅವನನ್ನು ನೋಡುವುದಾಗಲಿಲ್ಲ.

ತನ್ನ ಗುಡಿಸಲಿನ ಹೊರಗೆ ಚಾರಪಾಯಿಯ ಮೇಲೆ ಮಲಗಿ---- ವಾಸುದೇವನ್ ಆಕಾಶದಲ್ಲಿಯ ಚುಕ್ಕೆಗಳನ್ನು ನೋಡುತ್ತಿದ್ದ ಹಾಗೇ ಅತೀವ ವಿಹ್ವಲನಾದ ತಮಗೆ ಬೇಕಾದವನು ಕರುಣಾಕರನ್ ಎಂದು ತಪ್ಪುತಿಳಿದ ಆ ನಾಲ್ವರೂ ಅವನ ಬೆನ್ನು ಹತ್ತಿರಲಾರರಷ್ಟೆ : ಈ ಭಾವನೆ ಅವನನ್ನು ನಡುಗಿಸಿತು.

ಮಧ್ಯರಾತ್ರಿ ಕಳೆದು ಬಹಳ ಹೊತ್ತಾಗಿತ್ತು. ಆಕಾಶವನ್ನು ಚುಕ್ಕೆಗಳ ಹೊಳಪಿನಲ್ಲಿ ಬಾಗಿ ನಿಂತ ಅವರ ಕಮಾನನ್ನು ನೋಡುತ್ತಿದ್ದ ಹಾಗೆ ಅಪ್ಪ ಅಮ್ಮನೊಡನೆ ಇಡೀ ಬಾಲ್ಯವೇ ಕಣ್ಣು ಮುಂದೆ ಸುಳಿದು ಭಾವನಾವಶನಾದ. ತಾನು ಮಲತಾಯಿಯ ಕಾಟಕ್ಕೆ ಓಡಿ ಬಂದಿದ್ದರೂ ಮನೆಯಲ್ಲಿ ಒಬ್ಬೊಂದು ಬಡತನ ಇಲ್ಲದಿದ್ದರೆ ಅವಳು ತನ್ನನ್ನು ಹೀಗೆ ಓಡಿಸುತ್ತಿರಲಿಲ್ಲವೇನೋ. ಆದರೂ ಬೆಹರಾಮನ ಮನೆಯಲ್ಲಿ ಕೆಲಸಕ್ಕೆ ನಿಂತು ಮನೆಗೆ ಹಣಕಳಿಸುವಾಗ ಕಣ್ಣ ಮುಂದೆ ನಿಲ್ಲುತ್ತಿದ್ದದ್ದು ಅಪ್ಪನ ಮೋರೆ ಮಾತ್ರ. ಮುಂದೆ ಕೆಲವು ವರ್ಷಗಳ ನಂತರ ಮಲತಾಯಿ ತಮ್ಮನ್ನೊಬ್ಬ ದುಬಾಯಿಗೆ ಹೋಗಿ ಲೆಕ್ಕವಿಲ್ಲ ದಷ್ಟು ಹಣ ಗಳಿಸಿದ ನೆಂದೂ, ಕೇರಳದಲ್ಲಿ ಜಮೀನು ಕೊಂಡು ಮನೆಕಟ್ಟಿಸಿದನೆಂದೂ, ಕೇಳಿದಾಗ ತಾನೂ ದುಬಾಯಿ ಮಸ್ಕತ್ತುಗಳಿಗೆ ಹೋಗಿ ಹೇರಳ ಹಣಗಳಿಸುವ ವಿಚಿತ್ರ ಆಸೆ. ಆಗಲೇ ದುಬಾಯಿ ಮಸ್ಕತ್ತುಗಳಿಗೆ ಹೋಗುವುದು ಹೇಗೆಂದು ತಿಳಿಯದ ತಾನು ಠಕ್ಕರ ಗ್ಯಾಂಗಿ ನಲ್ಲಿ ಸಿಕ್ಕಿಕೊಂಡಿದ್ದು.

ಪ್ರಾತರ್ವಿಧಿ ಮುಗಿಸಿ ಯೂನಿಫಾರ್ಮ್ ತೊಡುತ್ತಾ ಬೆಹರಾಮನ ಮನೆಗೆ ರಾತ್ರಿ ಹೋಗುವುದೊ ಮಧ್ಯಾಹ್ನವೊ ಎಂದು ಯೋಚಿಸಿದ. ಮಧ್ಯಾಹ್ನ ಅವನ ಆಫೀಸಿಗೆ ಹೋಗುವುದೇ ಒಳಿತು ಎನಿಸಿತು. ಈ ಒಂದು ದಿನ ರಜೆ ಹಾಕಿದರೆ ಹೇಗೆ? ಎನ್ನಿಸಿ ಕೂಡಲೇ ಕೌಂಟರ್ ಮೇಲಿನ ಟೆಲಿಫೋನಿಗೆ ಹೋಗಿ ತಾನು ಕೆಲಸ ಮಾಡುತ್ತಿದ್ದ ಸೆಕ್ಯುರಿಟಿ ಏಜೆನ್ಸಿಗೆ ಫೋನ್ ಮಾಡಿದ. ಇಷ್ಟು ದಿನ ಮಲ್ಬಾರ್ ಹಿಲ್, ಬ್ಯಾಕ್‌ಬೇರಿಕ್ಲೆಮೇಶನ್! ಕುಲಾಬಾ ಮೊದಲಾದ ಕಡೆಗಳಲ್ಲಿ, ಶ್ರೀಮಂತರ ವಸತಿಗಳ, ದೊಡ್ಡ ದೊಡ್ಡ ಕಟ್ಟಡಗಳ ಪಹರೆಯ ಕೆಲಸ ಮಾಡುತ್ತಿದ್ದ. ಇತ್ತೀಚೆಗಷ್ಟೇ ಬಾಂದ್ರಾಕ್ಕೆ ಬಂದಿದ್ದು.

ಪಾವ್ ಬಾಜಿ ಹಾಲುಮುಗಿಸಿ ಹಸಿವು ಹಿಂಗಿಸಿಕೊಂಡು ಅವನು ಚರ್ಚ್‌ಗೇಟ್ ತಲುಪಿ ಸ್ಟೇಷನ್ನಿನಿಂದ ಹೊರಬಿದ್ದು, 'ಈ ರೋಸ್' ಸಿನೆಮಾ ಥಿಯೇಟರ್ ಹಿಂದೆ ಇದ್ದ ಬೆಹರಾಮನ ಆಫೀಸಿನತ್ತ ಹೆಜ್ಜೆಹಾಕಿದ ಮುದುಕ ಅವನನ್ನು ಖುಶಿ ಯಿಂದಲೇ ಬರಮಾಡಿಕೂಂಡ. "ಇಲ್ಲಿ ಬೇಡ, ಹೊರಗೆ ಹೋಗೋಣ" ಎಂದು ಹತ್ತಿರದ 'ಏಶಿಯಾಟಿಕ್' ರೆಸ್ಟೋರೆಂಟ್‌ಗೆ ಕರೆದೊಯ್ದು ಚಹ ಕುಡಿಯುವಾಗ, ಸಂತೋಷದಿಂದಲೇ ಮಾತಿಗೆ ಆರಂಭಿಸಿದ್ದ.

ಬೆಹರಾಮನ ಮನೆಗೆ ಬಂದ ಹುಡುಗನ ಹೆಸರು ಕೊನೆಗೂ ಕರುಣಾಕರನ್ ಹೌದು ಎಂದು ತಿಳಿದಾಗ ವಾಸುದೇವನ್‌ಗೆ ಆದ ಸಂತೋಷ ಅಷ್ಟಿಷ್ಟಲ್ಲ. "ಸರ್, ಅವನು ನನ್ನ ತಮ್ಮ. ಅವನು ಹುಡುಕುತ್ತಿದ್ದದ್ದು ನನ್ನನ್ನೇ" ಎಂದ ಆದರೆ ಮುದುಕ ಮಾತ್ರ ಈ ಆಕಸ್ಮಿಕಕ್ಕೆ ವಿಶೇಷ ಮಹತ್ವ ಕೊಟ್ಟಂತೆ ಕಾಣಲಿಲ್ಲ. ಕರುಣಾಕರನ್ ಕೇರಳೀಯ ರಲ್ಲಿ ಸಾಮಾನ್ಯ ಹೆಸರು. ಕೇವಲ ಹೆಸರಿನ ಮೇಲಿಂದ ತನ್ನಮನೆಗೆ ಬಂದ ಕರುಣಾ ಕರನ್ ವಾಸುದೇವನ್ ಹುಡುಕುತ್ತಿದ್ದ ಕರುಣಾಕರನ್ ಒಬ್ಬನೇ ಎಂದು ನಂಬಲು ಅವನು ಸಿದ್ಧನಿರಲಿಲ್ಲ.

ಬೆಹರಾಮ್‌ನ ಮುಖದ ಮೇಲಿನ ಭಾವನೆಯಿಂದ ಅವನು ತನ್ನ ಮಾತುಗಳನ್ನು ನಂಬಲಿಲ್ಲ ಎನಿಸಿದಾಗಾ, ವಾಸುದೇವನ್ನನ ಅದುವರೆಗಿನ ಉತ್ಸಾಹ ಜರ್‍ರನೆ ಇಳಿದು ಹೋಯಿತು. ಅವನು ತನ್ನ ಕರುಣಾಕರನ್‌ನ ಬಗೆಗೆ ಅದುವರೆಗೂ ಕಲ್ಪಿಸಿಕೊಂಡ ಭಾವನೆಗಳು, ತಾನು ಬೆಹರಾಮನ ಮನೆಯನ್ನು ಬಿಟ್ಟಂದಿನಿಂದ ಅನುಭವಿಸಿದ ಯಾತನೆ ಹೇಳಬೇಕೆಂದಿದ್ದ ಈ ಮಾತುಗಳನ್ನು ಬೆಹರಾಮನಿಗೆ ಈಗ ಹೇಳುವುದು ನಿರರ್ಥಕ ಎನ್ನಿಸಿತು. ಎಲ್ಲಕ್ಕೂ ಮಿಗಿಲಾಗಿ, ಅವನ ಮೋರೆಯಲ್ಲಿ ಕಂಡ 'ಏನೋ' ಈ ಕರುಣಾಕರನ್ ತನ್ನ ತಮ್ಮ ನೆಂಬುದರ ಬಗೆಗೇ ಸಂಶಯ ಹುಟ್ಟಿಸಿತು. ಅತ್ತುಬಿಡಬೇಕು ಎನ್ನಿಸಿತು.

ವಾಸುದೇವನ್‌ನ ಮೋರೆಯನ್ನು ನೋಡುತ್ತಾ ಕುಳಿತ ಬೆಹರಾಮನಿಗೂ ಕೆಡುಕೆನಿಸಿತು. ಅವನಿಗೆ ಸಮಾಧಾನ ಹೇಳಬೇಕು. ಧೈರ್ಯ ತುಂಬಬೇಕು. ಎಲ್ಲವನ್ನೂ ನಾನೇ ವಿಚಾರಿಸಿ ತಿಳಿಸುತ್ತೇನೆ ಎಂದು ಹೇಳಬೇಕು ಎನ್ನುವ ಹಲವು ಮಾತುಗಳು ಮನದಲ್ಲಿ ಮೂಡಿದರು ಯಾಕೋತುಟಿ ಬಿಚ್ಚುವುದೇ ಕಷ್ಟವಾದಾಗ "ನೋಡು ವಾಸು ನಿನ್ನೆ ಇಡೀ ರಾತ್ರಿ ಸರಿಯಾಗಿ ನಿದ್ರೆಬರದಿದ್ದುದಕ್ಕೊ, ಏನೋ ತುಂಬ ದಣಿವಾಗತೊಡಗಿದೆ. ತಪ್ಪು ತಿಳಿಯಬೇಡ. ಇನ್ನೊಮ್ಮೆ ಮನೆಗೇ ಬಾ ಆಗ ನಿನ್ನ ಹಕೀಕತ್ತನ್ನೆಲ್ಲ ಹೇಳುವೆಯಂತೆ. ಕೂಡಿ ಬಂದರೆ ಕರುಣಾಕರನನ್ನೂ ಕಾಣುವೆಯಂತೆ" ಎಂದ.

ವಾಸುದೇವನಿಗೆ ಸನ್ನಿವೇಶದ ಅರ್ಥ ಹೊಳೆಯಲು ತಡವಾಗಲಿಲ್ಲ. ಮುದುಕ ಕೊನೆಗೂ ತನ್ನನ್ನೂ ನಂಬುತ್ತಿಲ್ಲ. ಕರುಣಾಕರನನ್ನು ಅವನು ಹಚ್ಚಿಕೊಂಡ ರೀತಿಯಿಂದ ಪುಲಕಿತನಾದರೂ ಅವನನ್ನು ತನ್ನಿಂದ ರಕ್ಷಿಸುವ ಅವಶ್ಯಕತೆ ತೋರಿದ ಸನ್ನಿವೇಶದಿಂದ ಅಷ್ಟೇ ಮಾನಸಿಕ ಕ್ಷೋಭೆಗೂ ಒಳಗಾದ.

ವಾಸುದೇವನ್ ಇನ್ನೂ ಹೆಚ್ಚು ಹೊತ್ತು ಕುಳಿತಿರದಾದ ತಟ್ಟನೆ ಕುಳಿತಲ್ಲಿಂದ ಎದ್ದು ನಿಂತು ಮುದುಕನಿಂದ ಬೀಳ್ಕೊಳ್ಳುತ್ತ, "ನನ್ನ ತಮ್ಮ ಭೇಟಿಯಾದರೆ ಹೇಳಿ ನಿಮ್ಮ ಮನೆಯಲ್ಲಿ ಕೆಲಸಕ್ಕಿದ್ದ ಹುಡುಗ ನಾನೇ ಎಂದು. ಮೂರು ವರ್ಷ ಹಿಂದೆ ಸಹಿ ಇರದ ಪತ್ರವನ್ನು ಬರೆದವನೂ ನಾನೇ ಎಂದು". ಇಷ್ಟು ಹೇಳಿ ಹೊರಟುನಿಂತವನು ಹೇಳಲೋಬೇಡವೊ ಎಂದು ಅನುಮಾನಿಸುತ್ತ. "ನಿನ್ನ ಬಂದವರಿಗೆ ಬೇಕಾದವನು ನಾನಿರಬಹುದು ತಪ್ಪಿ ಅವನ ಬೆನ್ನು ಹತ್ತಿರಬಹುದು. ಅವನನ್ನು ಕಾಪಾಡಿರಿ". ಎಂದವನೇ ಅಲ್ಲಿಂದ ಹೆಜ್ಜೆ ಕಿತ್ತು, ಸರಸರ್ರನೆ ರೆಸ್ಟೋರೆಂಟಿನಿಂದ ಹೊರಬಿದ್ದ.


ವಾಸುದೇವನ್ ರೆಸ್ಟೋರೆಂಟಿನಿಂದ ಹೊರಡುವಾಗ ಆಡಿದ ಮಾತುಗಳಿಂದ ಚೇತರಿಸಿಕೊಳ್ಳಲು ಬೆಹರಾಮನಿಗೆ ಕೂಡಲೇ ಸಾಧ್ಯವಾಗಲಿಲ್ಲ. ಆದಷ್ಟು ಬೇಗ ಮನೆಸೇರಿ ವಾಸುದೇವನನ್ನು ಚೆನ್ನಾಗಿ ಬಲ್ಲ ಹೆಂಡತಿಯೊಡನೆ ಈ ಹೊತ್ತು ನಡೆದದ್ದನ್ನು ಚರ್ಚಿಸಬೇಕು ಎಂದು ಅವನ ಅನಿಸಿಕೆಯಾಗಿತ್ತು.

ಮನೆ ತಲುಪಿದಾಗ ಕದ ತೆಗೆದವಳು ಶಿರೀನ್. ಅವಳನ್ನು ಮಾತಾಡಿಸದೆ ಸೀದಾ ತನ್ನ ಕೋಣೆಗೆ ಹೋಗತೊಡಗಿದಾಗ, ಅಪ್ಪನ ಮೂಡನ್ನು ಅರಿಯಲು ಶಿರೀನಳಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಆ ಮೂಡಿಗೆ ಕಾರಣರು ಯಾರು ಎಂದು ಊಹಿಸುವುದರಲ್ಲೂ ಅವಳು ತಪ್ಪಲಿಲ್ಲ. ವಾಸುದೇವನ್ ಕರುಣಾಕರನ್ ಬಗ್ಗೆ ಅವಳ ಮನಸ್ಸು ಇನ್ನಷ್ಟು ಕಠಿಣವಾಯಿತು. ಅಪ್ಪನ ಕೋಣೆಯ ಹೊರಗೇ ನಿಂತ ಅವಳು ಅಳುಕುತ್ತಲೆ "ಅಮ್ಮ ಮಕ್ಕಳೊಡನೆ ಮೌಂಟ್ ಮೇರಿಗೆ ಹೋಗಿದ್ದಾಳೆ. ಚಹ ತರಲೆ?" ಎಂದು ಕೇಳಿದಳು. "ಹಾಂ, ಮಾಡು ಬಾಲ್ಕನಿಗೆ ಬರುತ್ತೇನೆ" ಎಂದ ಬೆಹರಾಮ್. ಮುಳುಗುತ್ತಿದ್ದ ಸೂರ್ಯನನ್ನು ನೋಡುತ್ತ ಚಹ ಕುಡಿಯುತ್ತ ಗಾಢವಾದ ಯೋಚನೆಯಲ್ಲಿ ಮುಳುಗಿದ ಬೆಹರಾಮ್ ಇದ್ದಕ್ಕಿದ್ದಂತೇ "ಶಿರೀನ್" ಎಂದು ಕರೆದ. "ನೀನು ಏನೇ ಹೇಳು ಶಿರೀನ್ ವಾಸುದೇವನ್ ಕರುಣಾಕರನ್‌ನ ಅಣ್ಣನೇ ಹೌದು" ಎಂದು ಸಾರಿದ. ಏನೋ ಹೇಳಲು ಹೊರಟ ಶಿರೀನ್ ಅಪ್ಪನ ಮೋರೆಯ ಮೇಲಿನ ಉದ್ವೇಗವನ್ನು ನೋಡಿ "ವಾಸುದೇವನ್ ಆಫೀಸಿಗೆ ಬಂದಿದ್ದನೆ?" ಎಂದಿಷ್ಟೆ ಕೇಳಿದಳು. ಪಾರ್ವತಿಯಿಂದ ಈ ಮೊದಲು ಕರುಣಾಕರನ್‌ನ ಬಗೆಗೆ ಈಗ ವಾಸುದೇವನ್ ಬಗ್ಗೆ ಕೇಳಿದ್ದನ್ನು ತಿಳಿಸಲು ಇದು ಸರಿಯಾದ ಸಮಯವೆಂದೂ ಅನ್ನಿಸಲಿಲ್ಲ. ಅಮ್ಮನೂ "ಈ ಪಾರ್ವತಿ ಹೇಳಿದ್ದೆಲ್ಲವನ್ನೂ ನಂಬಬೇಡ. ಮಾತು ಬಹಳ ಬೇಕು. ಊರಿನ ಎಲ್ಲಾ ಪಂಚಾಯತಿ ಬೇಕು. ಇಷ್ಟು ಗೊತ್ತಿದ್ದರೆ ಎಷ್ಟನ್ನೆಲ್ಲ ಸೇರಿಸಿ ಬಣ್ಣಕೊಟ್ಟು ಮಾತಾಡುತ್ತಾಳೆ" ಎಂದಿದ್ದಳು. ಅದನ್ನೆಲ್ಲಾ ನೆನೆಯುವಾಗ, ಅವನಿಗೆ ಹೇಳ ಬೇಕೆಂದುಕೊಂಡಿದ್ದನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಿತ್ತು. "ಮೂರು ವರ್ಷಗಳ ಹಿಂದೆ ನಡೆದ ಕೊಲೆಯಲ್ಲಿ ವಾಸುದೇವನ್ನನ ಕೈಯಿತ್ತು" ಎಂದಳು.

ಬೆಹರಾಮನಿಗೆ ಈ ಮಾಹಿತಿಯ ಮೂಲ ಯಾವುದು ಎಂದು ತಿಳಿಯಲು ತಡವಾಗಲಿಲ್ಲ. "ಈ ವಾಸುದೇವನ್ ಬಗ್ಗೆ ನೀನೇನೂ ಅರಿಯೆ ಮಗೂ. ಮೂರು ವರ್ಷಗಳ ಹಿಂದಿನ ಕೊಲೆಯಲ್ಲಿ ಇವನ ಕೈಯಿತ್ತು ನಿಜ. ಆದರೆ ಪಾರ್ವತಿ ನಿನಗೆ ಹೇಳಿದ ಅಥವಾ ನೀನದನ್ನು ಅರ್ಥ ಮಾಡಿಕೊಂಡ ರೀತಿಯಲ್ಲಿ ಅಲ್ಲ." ಬೆಹರಾಮನಿಗೆ ಆ ಮೂರು ವರ್ಷಗಳ ಹಿಂದಿನ ಭೀಕರ

ನೆನಪಿನಿಂದ ಹಿಂತಿರುಗಲು ಕೂಡಲೇ ಆಗದೆ ಬಹಳ ಹೊತ್ತು ಮೌನವಾಗಿದ್ದ.

ಗಾಢವಾದ ನಿದ್ರೆಯಿಂದ ಎಚ್ಚೆತ್ತವನ ಹಾಗೆ ಬೆಹರಾಮ್ ಮಾತು ಮುಂದುವರಿಸಿದ. "ಕುಲಾಬಾದಲ್ಲೋ ಇನ್ನೆಲ್ಲೋ ಅವನ ಸಂಬಂಧಿಯೊಬ್ಬ ಇರಬೇಕು. ಆಗೀಗ ರಜೆ ಪಡೆದು ಅಲ್ಲಿಗೆ ಹೋಗುತ್ತಿದ್ದ. ಹೋಗುವಾಗಿನ ಉಮೇದು ನೋಡಿದರೆ ಅವನು ಮೆಚ್ಚಿಕೊಂಡ ಹೆಣ್ಣೊಂದು ಅಲ್ಲಿ ಇದ್ದರೂ ಇದ್ದೀತು ನಿನ್ನ ಅಮ್ಮ ಚೇಷ್ಟೆಮಾಡಿ ಕೇಳಿದರೆ ಸುಮ್ಮನೆ ನಕ್ಕುಬಿಡುತ್ತಿದ್ದ. ತುಂಬ ಲವಲವಿಕೆಯ ಹುಡುಗ. ಒಂದು ದಿನ ಕುಲಾಬಾದಿಂದ ಬರುವಾಗ ತುಂಬ ತಡವಾಗಿತ್ತು. ಮಾಹಿಮ್ ಬಸ್ ನಿಲ್ದಾಣದಲ್ಲಿ ಇಳಿದವನು ಒಳದಾರಿಯಿಂದ ಬರುವಾಗ ಹಾಳುಬಿದ್ದ ಗುಡಿಸಿಲೊಂದರ ಎದುರಿಗೆ ಯಾರೋ ಮೂರು ಮಂದಿ ಯಾರನ್ನೋ ಎತ್ತಿ ಟ್ಯಾಕ್ಸಿಯೊಂದರಲ್ಲಿ ಎತ್ತಿ ಹಾಕುತ್ತಿದ್ದುದನ್ನು ಕಂಡ. ಆಸ್ಪತ್ರೆಗೆ ಸಾಗಿಸುತ್ತಿರುವರೋ ಎಂದು ಬಗೆದು ಇವನೂ ಅವರ ಸಹಾಯಕ್ಕೆ ಧಾವಿಸಿದ. ಸಾಗಿಸಲ್ಪಡುವವನ ಕಾಲುಗಳನ್ನು ಹಿಡಿದವನು ಬಿಟ್ಟ. ನಂತರವೇ ತಾನು ಕಂಡಿದ್ದರ ಅರಿವಾಗಿ 'ಕೋಯಿ ಬಚಾವ್' ಎಂದು ಕೂಗುತ್ತಾ ಓಟಕಿತ್ತಿದ್ದ. ಮನೆ ತಲುಪಿದಾಗ ಅವನ ಅವತಾರ ನೋಡಬೇಕಿತ್ತು. ಎರಡು ಕಾಂಪೋಜ್ ಗುಳಿಗೆಕೊಟ್ಟು ಮಲಗಿಸಬೇಕಾದರೆ ಸಾಕುಬೇಕಾಯಿತು. ಮುಂದೆರಡು ದಿನ ಮಾತಾಡುವ ಶಕ್ತಿಯನ್ನೇ ಕಳೆದುಕೊಂಡಿದ್ದ. ಅಷ್ಟರಲ್ಲಿ ಇವನನ್ನು ಕಂಗೆಡಿಸಿದ ದೃಶ್ಯ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ತಾನು ಕಾಲುಹಿಡಿದು ಟ್ಯಾಕ್ಸಿಯಲ್ಲಿ ಹೊತ್ತು ಹಾಕಿದವನಿಗೆ ರುಂಡವೇ ಇಲ್ಲ ಎನ್ನುವುದು. ಆ ನಿರ್ಜನ ರಸ್ತೆಯ ಮಬ್ಬುಗತ್ತಲಿನಲ್ಲಿಯೂ ಕಂಡಂತಾದವನಿಗೆ ಕರುಳೇ ಬಾಯಿಗೆ ಬಂದಂತಾಗಿತ್ತು. ರುಂಡವಿಲ್ಲದ ದೇಹ ಮುಂದೆ ಸಿಕ್ಕಿದ್ದು ಧಾರಾವಿಯ ಖಾಡಿಯಲ್ಲಿ. ರುಂಡ ಸಿಕ್ಕಿದ್ದು ಎರಡು ಮೈಲಿ ದೂರದ ಠಾಣಾದ ಹತ್ತಿರ. ಆಗ ನನಗೆ ಫೋನ್ ಮೇಲೆ ಬಂದ ಧಮಕಿಗಳು ಒಂದೆರಡಲ್ಲ. ಆದರೆ ವಾಸುದೇವನ್ನನನ್ನು ನಾನು [illegible] ಸೂಚನೆ ಮಾಡಿದ್ದು ಈ ಧಮಕಿಗಳಿಗೆ ಹೆದರಿ ಅಲ್ಲ. ಅವನು ತಾನುಕಂಡ ದೃಶ್ಯವನ್ನು ನೆನೆಯುತ್ತಿದ್ದರೆ ಅವನಿಗೆ ಹುಚ್ಚೇ ಹಿಡಿಯಬಹುದು. [illegible]



ಇಲ್ಲದ ಅಪಾಯಕ್ಕೆ ಒಳಗಾಗಬಹುದು. ನಮ್ಮ ಅಗರ್‌ವಾಲ್ (ಕರುಣಾಕರನ್ ಕೆಲಸಕ್ಕಿದ್ದ ಪತ್ರಿಕೆಯ ಸಂಪಾದಕ ಬೆಹರಾಮನ್ ಗೆಳೆಯ ಸಹೋದ್ಯೋಗಿ) ನನ್ನ ಬೆನ್ನುಹತ್ತಿದ್ದು ಈ ಸಂದರ್ಭದಲ್ಲಿ. ವಾಸುದೇವನ್‌ನನ್ನು ಖುದ್ದು ಭೇಟಿಯಾಗಿ ಮಾತನಾಡಿಸುವ ಮನಸ್ಸಿತ್ತು ಅವನಿಗೆ. ಬಹುದೊಡ್ಡ ಬಂಗಾರದ ಸ್ಮಗ್ಲಿಂಗ್ ಪ್ರಕರಣದಲ್ಲಿ ಸುಮಾರು ಮೂವತ್ತು ಲಕ್ಷ ರೂಪಾಯಿಯಷ್ಟು ದೊಡ್ಡ ರಕಮನ್ನು ಒಬ್ಬನೇ ದೋಚಿ ದುಬಾಯಿಗೋ ಇನ್ನೆಲ್ಲಿಗೋ ಪರಾರಿಯಾದವನ ಕರಾಮತಿಯಂತೆ ಈ ಕೊಲೆ. ಇದೆಲ್ಲ [illegible] ಪತ್ರಿಕೆಯಲ್ಲಿ ವರದಿ ಮಾಡಿದವನ ತರ್ಕ. ಆದರೆ ಅಗರ್‌ವಾಲಾ ಮಾತ್ರ ಆಗ [illegible] ಕಟ್ಟಿಕೊಂಡ ಹಗೆಯನ್ನು ಈ ವರೆಗೂ ಬಿಟ್ಟುಕೊಟ್ಟಂತಿಲ್ಲ. ಆಮೇಲೆ ಅವನು ನನಗೆ ಫೋನ್ ಮಾಡಿದಂತಿಲ್ಲ. ಮೊನ್ನೆ ಒಂದು ಪ್ರಕ್ಷುಬ್ಧ ಮನಸ್ಥಿತಿಯಲ್ಲಿ ಕರುಣಾಕರನ್ನನ ವಿಳಾಸದ ಸಲುವಾಗಿ ಫೋನ್ ಮಾಡಬೇಕಾಯಿತು.

ಕರೆಗಂಟೆ ಸದ್ದು ಮಾಡಿದಾಗ ಶಿರೀನ್ ಎದ್ದು ಬಾಗಿಲು ತೆರೆದಳು. ಅಮ್ಮನೊಡನೆ ಮೌಂಟ್

ಮೇರಿ ಚರ್ಚ್ ನೋಡಿ ಬಂದ ಮಕ್ಕಳು ಖುಷಿ ಯಿಂದ ಓಡಿಬಂದು ಅಜ್ಜನನ್ನು ಸುತ್ತುಗಟ್ಟಿ ದವು.

ಹೆಂಡತಿ ಹಾಲಿಗೆ ಬಂದ ಕೂಡಲೇ "ಸೀತೆ ಯನ್ನು ಕಂಡ ಹಾಗಿಲ್ಲ" ಎಂದ ಅವಳನ್ನು ಮಾತನಾಡಿಸುವ ಉದ್ದೇಶದಿಂದ. "ಇಲ್ಲ, ಪಾರ್ವತಿ ಸಂಜೆಯ ಮಟ್ಟಿಗೆ ಮನೆಗೆ ಕರೆದು ಕೊಂಡು ಹೋಗಿದ್ದಾಳೆ. ವಾಸು ಬಂದಿದ್ದ ನಂತಲ್ಲ ಆಫೀಸಿಗೆ. ಕರುಣಾಕರನ್ ತನ್ನ ತಮ್ಮ ನಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದ ನಂತೆ. ಸ್ವಂತ ಬಂದರೂ ಸರಿಯೇ ಇಲ್ಲದಿದ್ದರೆ ಫೋನ್ ಮಾಡದೆ ಇರಲಿಕ್ಕಿಲ್ಲ. ಇಬ್ಬರಿಗೂ ಕೆಲವು ದಿನಗಳ ಮಟ್ಟಿಗಾದರೂ ಈ ಮುಂಬಯಿ ಬಿಟ್ಟು ದೂರ ಹೋಗಲು ಹೇಳಿ. ಪಾರ್ವತಿ ಇವತ್ತು ಶಿರೀನ್‌ಳ ಎದಿರು ಏನೆಲ್ಲಾ ಹೇಳಿಹೋಗಿದ್ದಾಳೆ. ಎಷ್ಟು ಖರೆಯೋ ಎಷ್ಟು ಸುಳ್ಳೋ. ಅವಳ ಪ್ರಕಾರ ವಾಸುದೇವನ್ನನ ಜೀವಕ್ಕೆ ಕಂಟಕವಿದೆಯಂತೆ. ಅವನು ಎದಿರು ಹಾಕಿಕೊಂಡ ಎರಡೂ ಗುಂಪಿನವರು ಅವ ನನ್ನು ತಲಾಶ್ ಮಾಡುತ್ತಿದ್ದಾರಂತೆ. ಇಬ್ಬರೂ ಹುಡುಗರ ಬಗ್ಗೆ ಮೇರಿಯ ಮುಂದೆ ಪ್ರಾರ್ಥಿಸಿ ಬಂದೆ." ಎಂದಾಗ ತನ್ನನ್ನು ಅರ್ಥಮಾಡಿ ಕೊಂಡ ಹೆಂಡತಿಯ ಬಗೆಗೆ ಬೆಹರಾಮನಿಗೆ ಪ್ರೀತಿ ಉಕ್ಕಿತು. ಇನ್ನೊಮ್ಮೆ ಚಹ ಮಾಡಿ ತರುವೆಯಾ?" ಎಂದು ಕೇಳಿ ಖುಷಿ ಯಿಂದ ಸೋಫಾದಲ್ಲಿ ಕೂತು ಚಹ ತರು ವುದನ್ನೇ ಕಾಯಹತ್ತಿದ.

ಮುಂದಿನ ನಾಲ್ಕು ದಿನ ಬೆಹರಾಮನ ಮನೆ ಯಲ್ಲಿ ವಾಸುದೇವನ್ನನ, ಕರುಣಾಕರನ್ನನ ಸುದ್ದಿಯೇ ಇಲ್ಲ. ಒಬ್ಬರೂ ಭೇಟಿಯಾಗಲಿಲ್ಲ. ಫೋನ್ ಮಾಡಲಿಲ್ಲ. ಮನೆಯಲ್ಲಿ ಯಾರೂ ಅವರ ಬಗ್ಗೆ ಚಕಾರವೆತ್ತಲಿಲ್ಲ. ಇದ್ದಕ್ಕಿದ್ದಂತೆ ಪ್ರಕಟವಾಗಿ, ಎಲ್ಲರ ಸಹನ ಶಕ್ತಿಯನ್ನೂ ಪರೀಕ್ಷೆ ಮಾಡಿ ನೋಡುವಷ್ಟು ಕೋಲಾಹಲ ವೆಬ್ಬಿಸಿ ಈಗ ಅವರು ಬಂದದ್ದಾದರೂ ಹೌದೆ? ಎನ್ನುವುದರ ಬಗೆಗೇ ಸಂಶಯ ಹುಟ್ಟಿಸುವ ಹಾಗೆ ನಾಪತ್ತೆಯಾಗಿದ್ದರು.

ಮನೆಯವರ ಮೌನ ಬೆಹರಾಮನನ್ನು ಅಸ್ವಸ್ಥ ಗೊಳಿಸಿತು. ಇವರೆಲ್ಲ ತನ್ನಿಂದ ಏನೋ ಅಡಗಿ ಸಿಡುತ್ತಿದ್ದಾರ ಎನ್ನಿಸಿ, ಹೆಂಡತಿಯನ್ನು ಹಾಗೆಯೆ ಕೇಳಿದ "ಪಾರ್ವತಿಗೆ ಗೊತ್ತಾಗಿ ದೆಯೆ?" ಪುನಃ ಕೇಳಿದ. "ಪಾರ್ವತಿಗೆ ಏನೂ ಗೊತ್ತಾದಂತಿಲ್ಲ" ಅವಳು ಮಾತು ನಿಲ್ಲಿಸಿದಳು. ಯೋಚಿಸುತ್ತಿದ್ದ ಮೂವರಿಗೂ ಮೂರು ಸಂಗತಿಗಳು ಸಾಧ್ಯವಾಗಿ ತೋರಿದವು. "ಕರುಣಾಕರನ್ ತಮ್ಮ ಮನೆಗೆ ಬಂದ ನಾಲ್ವ ರನ್ನು ನೋಡಿ ಹೆದರಿದವನು ಮುಂಬಯಿ ಬಿಟ್ಟು ಹೋಗಿರಬಹುದು ಇಲ್ಲವೇ ಅವನ ಡೈರಿಯಲ್ಲಿ ಅಂಥ ವಿಶೇಷವೇನೂ ಇಲ್ಲದ್ದರಿಂದ ಅವನ ಬೆನ್ನು ಹತ್ತಿದವರೇ ಅವನ ದಾರಿಯಿಂದ ದೂ ಸರಿದಿರಬಹುದು. ಇಲ್ಲವೇ ಕರುಣಾಕರನ್ ವಾಸುದೇವನ್ ಒಬ್ಬರನ್ನೊ ಬ್ಬರು ಭೇಟಿಯಾಗಿ ತಮ್ಮನ್ನು ರಕ್ಷಿಸಿಕೊಳ್ಳುವ ದಾರಿ ಕಂಡು ಕೊಂಡಿರಬಹುದು. ಈ ಸಾಧ್ಯತೆ ಗಳನ್ನು ಹುರುಪಿನಿಂದ ಅನುಮೋದಿಸಿದವಳು ಶಿರೀನ್. ಅಪ್ಪ ಆದಷ್ಟು ಬೇಗ ಈ ಜಂಜಾಟ ದಿಂದ ಮುಕ್ತನಾಗಲಿ ಎಂದವಳು ಬಯಸು ತ್ತಿದ್ದಳು. ಅವಳು ಚಹದ ಕಪ್ಪನ್ನು ಒಯ್ಯಲು ಏಳುತ್ತಿದ್ದ ಹಾಗೆ "ಅವುಗಳನ್ನು ಇಟ್ಟು ಬಾ. ಕೆಲಹೊತ್ತು ರಮ್ಮಿ ಆಡೋಣ" ಎಂಥ. ಎಲ್ಲ ವನ್ನೂ ಮರೆತವರಂತೆ ಮೂವರೂ ಸೋಫಾ ಗಳಲ್ಲಿ ಕುಳಿತು ರಮ್ಮಿ ಆಡತೊಡಗಿದರು.

ತಾವು ಎಷ್ಟು ಹೊತ್ತು ಆಡುತ್ತಿದ್ದೆವು ಎನ್ನು ವುದು ಅವರಿಗೆ ಗೊತ್ತಾಗಲೇ ಇಲ್ಲ. ಟೆಲಿ ಫೋನ್ ಗಂಟೆ ಬಾರಿಸುತ್ತಿದೆ ಎಂದು ಗೊತ್ತಾ ದದ್ದೂ ಸೀತೆ ಬಂದು ಎಚ್ಚರಿಸಿದಾಗಲೇ. ಶಿರೀನ್ ಓಡೋಡಿ ಹೋಗಿ ರಿಸೀವರ್ ಕೈಗೆತ್ತಿ ಕೊಂಡಾಗ ಕರೆಯುತ್ತಿದ್ದವನು ಎಕ್ಸ್‌ಪ್ರೆಸ್ ಪತ್ರಿಕೆಯ ಅಗರ್‌ವಾಲಾ ಎಂದು ತಿಳಿಯಿತು. ತಾನು ಯಾರೆಂದು ತಿಳಿಯುವ ಕುತೂಹಲ ವನ್ನು ಎಳ್ಳಷ್ಟು ತೋರಿಸದೆ ನೇರವಾಗಿ ಅಪ್ಪನ ಕೂಡ ಮಾತಾಡುವ ತರಾತುರಿಯಲ್ಲಿದ್ದವನ ಹಾಗೆ ಕೇಳಿಸಿದಾಗ, ಕೆಟ್ಟ ಕೆಟ್ಟ ವಿಚಾರಗಳಿಂದ ಮನಸ್ಸು ತಲ್ಲಣಿಸಿತು. ಹುಟ್ಟಿನಿಂದಲೇ ಅಪ್ಪ ಯಾರೆಂದು ಕೇಳಿದ ಪ್ರಶ್ನೆಗೆ ಅಗರ್‌ವಾಲ್ ಎಂದು ಪಿಸುದನಿಯ ಉತ್ತರ ನೀಡಿದಾಗ ಬೆಹ ರಾಮ್‌ಗೆ ತಾನು ಟೆಲಿಫೋನ್ ಮೇಲೆ ಮಾತಾ ಡುವ ಸ್ಥಿತಿಯಲ್ಲಿರುವಂತೆ ತೋರಲಿಲ್ಲ. ಕಳೆದ ನಾಲ್ಕು ದಿನಗಳಿಂದಲೂ ತನ್ನನ್ನು ಘಾಸಿಗೊಳಿ ಸುತ್ತಿದ್ದುದಕ್ಕೂ ಈ ಕರೆಗೂ ಸಂಬಂಧವಿದೆ ಎನ್ನಿಸಿದಾಗ ಈ ಹೊತ್ತಿಗೆ ಎಂಥ ಸುದ್ದಿಯೂ ಬೇಡ ಎನ್ನಿಸಿತು. ಅಪ್ಪನ ಮೋರೆ ನೋಡಿಯೋ ಸನ್ನಿವೇಶವನ್ನು ಅರ್ಥ ಮಾಡಿಕೊಂಡ ಶಿರೀನ್ ರಿಸೀವರನ್ನು ತಾನೇ ಬಾಯಿಹತ್ತಿರ ಹಿಡಿದು "ಅಗರವಾಲ್ ಸಾಬ್ ನಾನು ಶಿರೀನ್,

ಫೋಚ್ ಖಾನಾವಾಲರ ಮಗಳು. ಅಪ್ಪನಿಗೆ ಜೀವದಲ್ಲಿ ಸೌಖ್ಯವಿಲ್ಲ. ನಾಳೆ ಬೆಳಗಿಗೇ ಫೋನ್ ಮಾಡಲು ಹೇಳುತ್ತೇನೆ ಆಗದೆ? ಎಂದಳು. "ನಥಿಂಗ್ ಅರ್ಜೆಂಟ್ ನಾಳೆ ಫೋನ್ ಮಾಡಲಿ, ಝೋಪಡಪಟ್ಟಿಗಳ ಮೇಲಿನ ರಿಪೋರ್ಟು ತುಂಬಾ 'ಕಾಂಪ್ರಹೆನ್ಸಿವ್' ಆಗಿದೆ. ಕರುಣಾಕರನ್ ನಿಜಕ್ಕೂ ಸ್ಮಾರ್ಟ್ ಹುಡುಗ. ರಿಪೋರ್ಟ್ ಮುದ್ರಣಕ್ಕೆ ಸಿದ್ಧವಾಗುತ್ತಾ ಇದೆ." ಎಂದು ಅಗರ್‌ವಾಲ್ ಫೋನ್ ಕೆಳಗಿರಿಸಿದ. ಅವನು ಹೇಳಿದ ಮಾತನ್ನು ಅಪ್ಪನ ಮುಂದೆ ಹೇಳುವಾಗ, ನಿರಂಬಳತೆಯ ಹಿಂದೆಯೇ ಅರ್ಥವಾಗದ ದುಗುಡ ಮನದಲ್ಲಿ ನೆಲೆಹತ್ತಿತು. ದುಗುಡಕ್ಕೆ ಮಾತು ಮೂಡಿದಂತೆ ಬೆಹರಾಮ್ ಹೇಳಿದ "ಬೆಂಭೋದ್ ಇಲ್ಲಿಯೂ ತನ್ನ ಹುಟ್ಟುಗುಣ ಬಿಡಲಿಲ್ಲ. ನಾನೇ ಆ ರಿಪೋರ್ಟಿಗೆ ಮಾಹಿತಿ ಒದಗಿಸಿದ್ದೇನೆ ಎಂದು ಸಾಬೀತುಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ.

"ಅಪ್ಪಾ ಮೊದಲಿನಿಂದಲೂ ನನಗೆ ಅದೇ ಸಂಶಯ. ಈ ಮಾರವಾಡಿಯೇ ಕರುಣಾಕರನನ್ನು ನಮ್ಮಲ್ಲಿಗೆ ಕಳಿಸಿದ್ದು. ಅವನು ನಮ್ಮಲ್ಲಿಗೆ ಬಂದದ್ದು ಆಕಸ್ಮಿಕವಲ್ಲ"

ಬೆಹರಾಮ್ ಸುಮ್ಮನಾದ ಸ್ವಲ್ಪ ತಡೆದು ಏನೇ ಆಗಲಿ ನಾಳೆ ನಾನೇ ಆಗರವಾಲನಿಗೆ ಫೋನ್ ಮಾಡುತ್ತೇನೆ. ಕರುಣಾಕರನ್ ಸುಖರೂಪವಾಗಿ ಮುಂಬಯಿ ಬಿಟ್ಟು ಹೋಗಿದ್ದಾನೆಂದು ತಿಳಿದರೆ ಸಾಕು. ಹಾಗೆಯೇ ಪಾರ್ವತಿಯಿಂದ ಬಂದವನು ವಾಸುದೇವನ್ನನೇ, ಸುರಕ್ಷಿತವಾಗಿದ್ದಾನೆ ಎಂದು ತಿಳಿದರೆ ಸಾಕು. ಯಾಕೆ ಬಂದಿದ್ದ? ಏನು ಹೇಳಿದ? ಎಂಬುದೆಲ್ಲಾ ಅಪ್ರಸ್ತುತವಾದದ್ದು. ಸೋಮವಾರದಿಂದ ಎಂಟು ದಿನ ರಜೆ ಹಾಕಿ (ಆಫೀಸಿಗೆ) ನಿನ್ನ ಮಕ್ಕಳ ಜೊತೆ ಸುಖವಾಗಿ ಕಾಲ ಕಳೆಯುತ್ತೇನೆ".

ಗಂಡನ ಮನಸ್ಸಿನ ಸಮಾಧಾನವನ್ನು ನೋಡಿ ಸಂತೋಷಪಟ್ಟ ಹೆಂಡತಿ "ಅಪ್ಪ ಮಗಳು ಮಾತಾಡಿಕೊಳ್ಳಿ ನಾನು ರಾತ್ರಿಯೂಟದ ತಯಾರಿ ಮಾಡುತ್ತೇನೆ" ಎಂದು ಅಡಿಗೆ ಮನೆಯತ್ತ ನಡೆದಳು.

ಅದೇ ದಿನ ರಾತ್ರಿ ಶಿರೀನಳ ಪ್ರಾರ್ಥನೆಯ ಫಲವಾಗಿಯೊ ಎಂಬಂತೆ ಬೆಹರಾಮ್ ಗಾಢವಾಗಿ ನಿದ್ರೆ ಮಾಡಿದ. ಬೇಗನೆ ಎದ್ದರೂ ಯಾವುದೇ ದುಗುಡ ಮನಸ್ಸನ್ನು ಕಾಡಲಿಲ್ಲ. ಚಹ ಕುಡಿಯುತ್ತ ಬಾಲ್ಕನಿಯಲ್ಲಿ ಕುಳಿತಾಗ, ಶಿರೀನ್ ಆ ದಿನದ ಪೇಪರ್ ತಂದುಕೊಟ್ಟಳು. "ಸ್ನಾನ ಮುಗಿಸಯೇ ಪೇಪರ್ ಓದುತ್ತೇನೆ" ಎಂದವನು ಈ ದಿನ ಪಾರ್ವತಿ ಬಂದ ಕೂಡಲೆ ಕರುಣಾಕರನ್ ಮತ್ತು ವಾಸುದೇವನ್ ಬಗೆಗೆ ಅವಳಿಗೆಷ್ಟು ಗೊತ್ತಿದೆ ಕೇಳಿಬಿಡಬೇಕು ಎಂದುಕೊಳ್ಳುತ್ತ ಸ್ನಾನದ ಮನೆಗೆ ನಡೆದ.

ಅಪ್ಪ ಸ್ನಾನಕ್ಕೆ ಹೋದಾಗ ಅವನು ಓದುವ ಮೊದಲೇ ಬಿಟ್ಟು ಹೋದ ದಿನ ಪತ್ರಿಕೆಯನ್ನು ಓದುತ್ತಾ ಶಿರೀನ್ ಸೋಫಾದ ಮೇಲೆ ಕುಳಿತಳು. ಪುಟ ತಿರುವಿ ಮೂರನೆಯ ಪುಟದ ಜಾಹೀರಾತು ಒಂದನ್ನು ಓದುತ್ತಿದ್ದ ಹಾಗೆ ಥಕ್ಕಾಗಿ ಹೋದಳು. ಅಲ್ಲಿಂದ ನೇರವಾಗಿ ಅಡಿಗೆ ಮನೆಗೆ ಹೋದವಳು ಅಮ್ಮನ ಜತೆ ಸೀತೆ ಇದ್ದುದನ್ನು ಕಂಡು ಇಂಗ್ಲೀಷ್‌ನಲ್ಲಿ ತಗ್ಗಿದ ದನಿಯಲ್ಲಿ ಹೇಳತೊಡಗಿದಳು. "ಇಂದಿನ ಪತ್ರಿಕೆಯಲ್ಲಿ ಎಕ್ಸ್‌ಪ್ರೆಸ್‌ನವರು ಜಾಹೀರಾತು ಕೊಟ್ಟಿದ್ದಾರೆ. ರವಿವಾರ ಮುಂಬಯಿಯ ಸ್ಲಮ್‌ಗಳ ಬಗ್ಗೆ ಬರೆದ ವಿಶೇಷ ರಿಪೋರ್ಟು ಎರಡು ಕಂತುಗಳಲ್ಲಿ ಬರಲಿದೆಯಂತೆ. ಬರೆದವನ ಹೆಸರೂ ಕೊಟ್ಟಿದ್ದಾರೆ. ಇಲ್ಲಿ ಬಂದ ಹುಡುಗನೇ 'ಕೇ' ಅಂತೆ. ಕೊಲೆಯಾದವನ ತಮ್ಮನೇ ಬರೆದ ವರದಿಯಂತಿದ್ದ ರಿಪೋರ್ಟು ಇಂಥ ಡಾಕ್ಯುಮೆಂಟರಿ ತರಹದ ಬರವಣಿಗೆಯಲ್ಲಿ ಅಪೂರ್ವವಂತೆ. ಅಪ್ಪ ಓದಿದರೆ ಕ್ರುದ್ಧನಾದಾನು ಎಂದು ಹೆದರಿ ಪತ್ರಿಕೆ ಅಡಗಿಸಿಟ್ಟಿದ್ದೇನೆ".

ಕೆಲಸದ ನೆವಮಾಡಿ ಸೀತೆಯನ್ನು ಹೊರಗೆ ಕಳಿಸಿ ಮುದುಕಿ ಹೇಳಿದಳು. "ಪತ್ರಿಕೆಯನ್ನು ಅಡಗಿಸಿ ಇಡುವುದು ಬೇಡ. ಅಗರ್‌ವಾಲಾ ಫೋನ್ ಮಾಡಿದಾಗ ಜಾಹೀರಾತಿನ ಬಗ್ಗೆ ಹೇಳದೆ ಇರಲಾರ. ಅವನು ಹೇಳಿದ ಮೇಲೆ ಓದುವುದಕ್ಕಿಂತ ಈಗಲೇ ಓದುವುದು ಒಳ್ಳೆಯದು".

ಬೆಹರಾಮ್ ಬಚ್ಚಲು ಮನೆಯಿಂದ ಹೊರಬಂದವನು ನೇರವಾಗಿ ಮಲಗುವ ಕೋಣೆಗೆ ಹೋದ. ಬೆಳಗಿನ ಪ್ರಾರ್ಥನೆ ಮುಗಿಸಿ ಹೊರಬಂದ ಅಪ್ಪನ ಶಾಂತ ಮೋರೆ ಶಿರೀನಳಿಗೆ ತುಂಬ ಸುಂದರವಾಗಿ ಕಂಡಿತು ಹಾಗೆ ಹೇಳಿದಳು ಕೂಡ. ಬೆಹರಾಮ್ "ಥ್ಯಾಂಕ್ಸ್" ಎಂದ.

ಮುಂದಿನ ಹದಿನೈದು ಮಿನಿಟುಗಳಲ್ಲಿ ಪಾರ್ವತಿ ಬಂದಳು. ತಾನಿದ್ದರೆ ಪಾರ್ವತಿ ಸರಿಯಾಗಿ ಮಾತಾಡದಿರಬಹುದು ಎಂದು ಶಿರೀನ್ ಅಮ್ಮ, ಮಕ್ಕಳೊಡನೆ ಹೊರಗೆ ಹೊರ

ನಿಮ್ಮ ಮಗುವಿಗೆ "ಎ" ಜೀವಸತ್ವದ ಅಗತ್ಯವಿದೆ

ಮಕ್ಕಳಲ್ಲಿ ಅದರಲ್ಲೂ 1 ರಿಂದ 4 ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುವ ದೃಷ್ಟಿದೋಷ ಹಾಗೂ ಅಂಧತ್ವಕ್ಕೆ 'ಎ' ಜೀವಸತ್ವದ ಕೊರತೆಯೇ ಮುಖ್ಯ ಕಾರಣ.

"ಎ" ಅನ್ನಾಂಗ ಕೊರತೆಯಿಂದ ರಾತ್ರಿ ಕುರುಡುತನ ಬರುತ್ತದೆ.

ನಿಮ್ಮ ಮಗುವಿನ ಕಣ್ಣು ಮತ್ತು ಚರ್ಮ ಆರೋಗ್ಯದಿಂದಿರ ಬೇಕಾದರೆ ಅದರ ಆಹಾರದಲ್ಲಿ ಸಾಕಷ್ಟು "ಎ" ಅನ್ನಾಂಗದ ಅಂಶವಿರಲೇಬೇಕು.

ಹಸಿರು ಸೊಪ್ಪು, ಹಳದಿ ಹಣ್ಣು, ತರಕಾರಿ, ಕ್ಯಾರೆಟ್, ಮೊಟ್ಟೆ, ಹಾಲು, ಬೆಣ್ಣೆ ಹಾಗೂ ತುಪ್ಪದಲ್ಲಿ "ಎ" ಅನ್ನಾಂಗವಿದೆ.

ಶಾರ್ಕ್‌ಲಿವರ್ ಎಣ್ಣೆ, ಕಾಡ್ ಲಿವರ್ ಎಣ್ಣೆಯಲ್ಲಿ "ಎ" ಅನ್ನಾಂಗದ ಅಂಶ ಜಾಸ್ತಿ ಇರುತ್ತದೆ.

"ಎ" ಅನ್ನಾಂಗವನ್ನು 'ಹನಿ' ರೂಪದಲ್ಲಿ ಅಥವಾ ಮಾತ್ರೆ ರೂಪ ದಲ್ಲಿ ಕೂಡಾ ಕೊಡಬಹುದು. ನಿಮ್ಮ ಮಗುವಿಗೆ "ಎ" ಜೀವಸತ್ವ ತಪ್ಪದೆ ಕೊಡಿ.

ಹೆಚ್ಚಿನ ವಿವರಗಳಿಗೆ:

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು. —ಇವರನ್ನು ಸಂಪರ್ಕಿಸಿರಿ.

'ಕರ್ನಾಟಕ ವಾರ್ತೆ'

ಟಳು. ಬೆಹರಾಮ್ "ಕೂರು, ಪಾರ್ವತಿ ನಿನ್ನ ಮನೆಗೆ ಬಂದವನು ಕರುಣಾಕರನ್ನನೋ, ವಾಸುದೇವನ್ನನೋ?" ಎಂದು ಕೇಳುವಾಗ ಬಂದವನು ಇಬ್ಬರಲ್ಲಿ ಒಬ್ಬನಾದರೆ ಸಾಕು ಎಂಬ ಧ್ವನಿ ಮೂಡಿತ್ತು. ಪಾರ್ವತಿ ನಿಂತೇ ಇದ್ದಳು. "ನಿನ್ನೆ ಬಂದವನ ಹೆಸರ ನಾನರಿಯೆ. ನಾನು ಕೆಲಸ ಮಾಡುತ್ತಿದ್ದ ಕಟ್ಟಡ ಒಂದರಲ್ಲಿ ವಾಚ್‌ಮನ್ ಕೆಲಸ ಮಾಡುತ್ತಿದ್ದುದರಿಂದ ಅವನು ನನಗೆ ಗೊತ್ತು. ನಿನ್ನೆ ಸಂಜೆ ದೀಪ ಹಚ್ಚುವ ಹೊತ್ತಿಗೆ 'ಧುತ್' ಎಂದು ನನ್ನ ಗುಡಿಸಿಲಿಗೈ ಬಂದ. ಗುರುತೇ ಹತ್ತಲಿಲ್ಲ. ದಾಡಿ ಮೀಸೆ ಬೋಳಿಸಿಕೊಂಡು ಕೂದಲನ್ನು ಸಣ್ಣದಾಗಿ ಕತ್ತರಿಸಿಕೊಂಡು ಒಂದು ನಮೂನೆ ಕಾಣುತ್ತಿದ್ದ. ನನಗೆ ಹೆದರಿಕೆಯಾಯಿತು. 'ನಾನು ಕರುಣಾಕರನ ಅಣ್ಣ' ಎಂದ. 'ಅವನನ್ನು ನಾನು ಹುಡುಕುತ್ತಾ ಇದ್ದೇನೆ. ಇನ್ನೂ ಸಿಕ್ಕಲಿಲ್ಲ' ಎಂದ. ನನ್ನದೊಂದು ಕೆಲಸ ಮಾಡು ನಾಳೆ ಬೆಳಿಗ್ಗೆ ಆ ಪಾರಸಿ ಮುದುಕನ ಮನೆಗೆ ಕೆಲಸಕ್ಕೆ ಹೋದಾಗ ಈ ಲಕೋಟೆಯನ್ನು ಅವರಿಗೆ ಮುಟ್ಟಿಸು. ಕರುಣಾಕರನ್ ಬಂದರೆ ಕೊಡಲು ಹೇಳು. ಕೂಡಲೇ ವಿಮಾನದಿಂದ ಹೊರಟು ಬಾ ಎಂದು ಬರೆದ ಚೀಟಿ ಒಳಗಿದೆ. ವಿಮಾನದ ಟಿಕೆಟಗೆ ಬೇಕಾದ ಹಣವನ್ನೂ ಇರಿಸಿದ್ದೇನೆ' ಎಂದವನೇ ಸರಕ್ಕನೆ ಕಿಸೆಯಿಂದ ಲಕೋಟೆ ತೆಗೆದು ನನ್ನ ಕೈಯಲ್ಲಿ ತುರುಕಿ ಹೊರಟೇ ಹೋದ. ಇದು ನೋಡಿ ಅವನು ಕೊಟ್ಟ ಲಕೋಟೆ ಬಾಯಿ ಮುಚ್ಚಿದ ಹಾಗೇ ತಂದಿದ್ದೇನೆ. ಕರುಣಾಕರನ್ ಎರಡು ದಿನದ ಮೊದಲೇ ಬಂದು ಹೋದದ್ದನ್ನು ಹೇಳಲು ಮನಸ್ಸಾಗಲಿಲ್ಲ. ಯಾಕೋ ಅವನು ಕರುಣಾಕರನ ಅಣ್ಣನೆಂಬುದರಲ್ಲಿ ವಿಶ್ವಾಸವೇ ಮೂಡಲಿಲ್ಲ" ಪಾರ್ವತಿಯ ಮಾತಿನಲ್ಲಿ ಕಾತರ ತುಂಬಿತ್ತು.

ಸನ್ನಿವೇಶ ಅನಾವಶ್ಯಕ ತೊಡಕಾಗುತ್ತ ನಡೆದಂತೆ ಬೆಹರಾಮನಿಗನ್ನಿಸಿತು "ಹಾಗಾದರೆ ಕುರುಣಾಕರನ್ ಇನ್ನೂ ಮುಂಬಯಿಯಲ್ಲಿಯೇ ಇದ್ದಾನೆ ಎನ್ನುತ್ತೀಯಾ?" "ತಾನು ನಾಳೆಯೇ ಊರಿಗೆ ಹೋಗುತ್ತೇನೆ ಕೆಲವು ತಿಂಗಳು ಬಿಟ್ಟು ಮತ್ತೆ ಬಂದಾಗ ನಿಮ್ಮನ್ನು ಕಾಣುತ್ತೇನೆ ಎಂದಿದ್ದ" ಎಂದು ಹೇಳಿದಳು.

ಕರೆಗಂಟೆಯ ಸದ್ದಾಯಿತು. ಕದ ತೆಗೆದಾಗ ಬಂದವಳು ಶಿರೀನಳಾಗಿದ್ದಳು. "ನಿನ್ನ ಹಾದಿಯನ್ನೇ ಕಾಯುತ್ತಿದ್ದೆ" ಎಂದು ಆರಂಭಿಸಿದ ಬೆಹರಾಮ್ ಆಗಿನಿಂದಲೂ ನಡೆದದ್ದನ್ನು ಸಂಕ್ಷಿಪ್ತವಾಗಿ ನಿವರಿಸಿದ.

ಬೆಹರಾಮನಿಗೆ ಕೊನೆಗೂ ಆ ದಿನ ಅಗರ್‌ವಾಲ್ ಫೋನ್ ಮೇಲೆ ಸಿಗಲಿಲ್ಲ. ಸತತವಾಗಿ ಹತ್ತು ಸಲ ನಂಬರ್ ತಿರುಗಿಸಿದಾಗ ಹತ್ತಿದ ಫೋನ್ ಮೇಲೆ ಬಂದ ಹೆಣ್ಣು ದನಿ, ಅಗರ್‌ವಾಲ್ ಅಂದು ಬೆಳಗಿಗೇ ಮುಂಬಯಿಯ ಹೊರಗೆ ಹೋಗಿರುವನೆಂದೂ ಬರಲು ನಾಲ್ಕು ದಿನಗಳಾಗಬಹುದೆಂದೂ ಹೇಳಿತು. ಇಂಥದ್ದನ್ನು ಊಹಿಸಿದಂತಿದ್ದ ಅವನು ಉದ್ವೇಗವನ್ನು ತೊರೆದು ಶಾಂತನಾಗಿದ್ದ. ಹೆಂಡತಿ ಮಗಳು ಇಬ್ಬರಿಗೂ, ಅವನನ್ನು ಆ ಸ್ಥಿತಿಯಲ್ಲಿ ನೋಡಿ ಸಮಾಧಾನವಾಗಿತ್ತು.

"ನೋಡು ಶಿರೀನ್, ನನಗೆ ಅಗರವಾಲನ ಬಗ್ಗೆ ಮೊದಲಿನಿಂದಲೂ ಗುಮಾನಿ. ನನ್ನ ಗುಮಾನಿ ನಿಜವಾಗಿದ್ದಲ್ಲಿ, ಈ ರಿಪೋರ್ಟು ಪ್ರಕಟವಾಗಲಾರದು. ಕೋಟ್ಯಾಂತರ ರೂಪಾಯಿಗಳ ವ್ಯವಹಾರದಲ್ಲಿ ಕೊಲೆ ಮಾಡಿಸಲು, ಮಾಡಿಸಿದ್ದನ್ನು ಅಡಗಿಸಿಡಲು ಲಕ್ಷಗಟ್ಟಲೇ ರೂಪಾಯಿ ಖರ್ಚು! ನಂಬುವೆಯಾ? ಮೂರು ವರ್ಷಗಳ ಹಿಂದೆ ನಡೆದ ಸಂದರ್ಭದಲ್ಲಿ ವಾಸುದೇವನನ್ನು ಮಾತಾಡಿಸುವ ಅವಕಾಶ ಒದಗಿಸಿಕೊಟ್ಟರೂ ಸಾಕು. 25,000 ರೂಪಾಯಿ ನನ್ನ ಪಾಲಿಗೆ".

"ಡೋಂಟ್ ಟೆಲ್ ಮಿ"

"ಹೌದು ಮಗೂ ಇದು ನಿಜ. ಟೆಲಿಫೋನ್ ಮೇಲೆ ಬಂದ ಈ ಸೂಚನೆಯನ್ನು ಕೇಳಿ ನಾನು ಮಾತಾಡದಿದ್ದಾಗ, ಇಷ್ಟು ಸಾಲದಿದ್ದರೆ ನಿನಗೆ ಬೇಕಾದ ರಕಮನ್ನು ಕೇಳು ಎಂದ. ನಾನು ಸಿಟ್ಟಿನಿಂದ ಚೀರಿದಾಗ, ಹಣ ಕೊಡಮಾಡಿದ್ದು ನನ ಗಲ್ಲವಾಗಿತ್ತು ಎಂದು ಹೇಳಲೆಂಬಂತೆ 'ವೆಲ್ ಈ ಹಣದಿಂದ ವಾಸುದೇವನ್ನನ ಭವಿಷ್ಯವೇ ಬದಲಿಸೀತು' ಎಂದು ಮಾತನ್ನು ತಿದ್ದಿದ. ಸ್ವತಃ ಹಣಕ್ಕಾಗಿ ಏನನ್ನು ಮಾಡಲೂ ಹೇಸದವನು ಈತ."

ಇನ್ನೊಬ್ಬನ ಮೇಲೆ ಇಷ್ಟೊಂದು ಗಂಭೀರ ಆರೋಪವನ್ನು ಹೊರಿಸಿದ ತನ್ನ ಮಾತಿನಿಂದ ತಾನೇ ಬೇಸರಗೊಂಡವನಂತೆ "ಯಾಕೋ ಈ ದಿನ ಮೂಡ್ ಸರಿಯಾಗಿಲ್ಲ ಮಕ್ಕಳನ್ನು ಕರೆದುಕೊಂಡು. ಸಂಜೆ ನ್ಯಾಶನಲ್ ಪಾರ್ಕಿಗೆ ಹೋಗೋಣ. ಅಲ್ಲಿಯ ಗಿಡ ಮರಗಳ ಹಸಿರಿನ ಸಹವಾಸದಿಂದಾದರು ಮನಸ್ಸು ಚೇತರಿಸಬಹುದು" ಎಂದ. ಹೆಂಡತಿ ಮಕ್ಕಳಿಗೂ ಈ ವಿಚಾರ ಒಪ್ಪಿಗೆಯಾಯಿತು.

ಸಂಜೆ ನ್ಯಾಶನಲ್ ಪಾರ್ಕಿಗೆ ಹೋಗಿ ಹೆಂಡತಿ, ಮಗಳು, ಮೊಮ್ಮಗಳೊಡನೆ, ಅಚ್ಚ ಸಂಗಮುವರಿಕಲ್ಲಿನ ಸ್ಮೃತಿ ಮಂದಿರವುಳ್ಳ ಗುಡ್ಡವನ್ನು ಮುಟ್ಟಿ, ಸಂಜೆಯ ಸೂರ್ಯನ ಹೊಂಬಿಸಿಲಿನಲ್ಲಿ ಬೆಳಗಿನಿಂತ ವನಶ್ರೀಯನ್ನು ನೋಡುತ್ತಿರುವಾಗ ಮನಸ್ಸಿನ ಬೇಸರ ಕ್ಷಣಾರ್ಧದಲ್ಲಿ ಮಾಯವಾಯಿತು.

ತಿರುಗಿ ಮಕ್ಕಳೊಡನೆ ಟ್ರೇನಿನಲ್ಲಿ ಕೂತು ಮನೆಗೆ ಮರಳುವಾಗ ಪುನಃ ಅಗರವಾಲಾ ನೆನಪಿಗೆ ಬಂದ. ತನ್ನ ಅನಿಸಿಕೆಗಳನ್ನು ಶಿರೀನ್ ಳೊಡನೆ ಹಂಚಿಕೊಂಡರೆ ದುಗುಡ ಕಡಿಮೆಯಾದೀತು ಎನಿಸಿ ಹೇಳತೊಡಗಿದ. "ಕೇಳು ಶಿರೀನ್, ಈ ಪುಂಡ ಅಗರ್‌ವಾಲ್ ನಮ್ಮ ಕಂಪನಿಯನ್ನು ಸೇರಿದಾಗ ತುಂಬ ಎಳೆಯ ಪ್ರಾಯದವನು. ಅವನ ಹೆಸರು ಗೌರೀಪ್ರಸಾದ ಎಂದು. 'ಕಾಲ್ ಮಿ ಜೆಪಿ' ಎನ್ನುತ್ತಿದ್ದ. ನನ್ನನ್ನು ಬಿಪಿ ಎಂದು ಕರೆಯುತ್ತಿದ್ದ" ಎಂದ. ಹಾಗೆಯೆ ತನಗಿಂತ ಹನ್ನೆರಡು ವರ್ಷಕ್ಕೆ ಕಿರಿಯನಾದ ಗೌರೀ ಪ್ರಸಾದನ ಸ್ವಭಾವವನ್ನು ಮಕ್ಕಳಂತೆ ಕೆಣಕುವ, ಛೇಡಿಸುವ, ಸಿಟ್ಟು ಮಾಡಿದರೆ ತಣಿಸುವ, ತುಂಟತನವನ್ನು ಅವನುಇದ್ದಕ್ಕಿದ್ದಂತೆ ಆಫೀಸ್ (ಕೆಲಸ) ಬಿಟ್ಟು, ತನ್ನ ಅಣ್ಣನ 'ಎಕ್ಸ್‌ಪ್ರೆಸ್' ಪತ್ರಿಕೆಯ ಸಂಪಾದಕನಾಗುವೆನೆಂದು ತನಗೆ ವಿದಾಯ ಹೇಳಿ ಹೋದದ್ದನ್ನು, ನಂತರ ಮೂರು ವರ್ಷಗಳ ಹಿಂದೆ ತನ್ನ ಮನೆಗೆ ಬಂದು, "ಊಟಕ್ಕೆಂದೇ ಬಂದೆ" ಎಂದು ಹೇಳಿ, 'ಪತ್ರಾನು ಮಚ್ಚಿ' ಹಾಕಿಸಿಕೊಂಡು ಹೊಟ್ಟೇ ತುಂಬಾ ಊಟ ಮಾಡಿದ್ದನ್ನೂ, ಅದಾದ ಎಂಟೇ ದಿನಗಳಲ್ಲಿ, ತನ್ನ ಪರಿಚಯ ಇಲ್ಲದವನಂತೆ ಹಣ ಕೊಡುವೆನೆಂದು ಫೋನ್ ಮಾಡಿದ್ದನ್ನು, ಮೊನ್ನೆ ಕರುಣಾಕರನ್ ಬಗ್ಗೆ ವಿಚಾರಿಸಿ ಫೋನ್ ಮಾಡಿದಾಗ, ಸಿಟ್ಟಿನಿಂದ, ಕರುಣಾಕರನ್ ಸತ್ತ ಎಂದದ್ದನ್ನೂ ವಿವರಿಸಿದ.

ಬೆಹರಾಮನಿಗೆ ದೀರ್ಘವಾಗಿ ಮಾತಾಡಿದ್ದರಿಂದ ದಮ್ಮು ಹತ್ತಿತು. ಶಿರೀನ್ ಹೇಳಿದಳು "ಅಪ್ಪಾ ಅಗರ್‌ವಾಲನ ಜೊತೆಗೆ ತಪ್ಪು ನಡೆದುಕೊಳ್ಳಲಿಲ್ಲ. ತಪ್ಪು ಹೇಳಲಿಲ್ಲ. ಸುಳ್ಳೇ ಯಾಕೆ ಮನಸ್ಸಿಗೆ ಹಚ್ಚಿಕೊಳ್ಳುತ್ತಿ? ಕರುಣಾಕರನ್ ಬಂದ ನಿನ್ನ ಮನಸ್ಸನ್ನು ವ್ಯಾಪಿಸಿ ಕುಳಿತು ಬಿಟ್ಟ. ವಾಸುದೇವನ್ ಬಂದ, ತನ್ನ ಬಗೆಗೇ ಚಿಂತೆಗೊಳ್ಳುವಂತೆ ಮಾಡಿದ. ಈಗ ಅಗರ್‌ವಾಲಾ ಇದು ಯಾಕೆ ಹೀಗಾಗುತ್ತದೆ ಎಂದರೆ, ಎಲ್ಲಿಯವರೆಗೆ ನಾವು ವಾಸ್ತವವನ್ನು ವಾಸ್ತವವಾಗಿಯೆ ಗ್ರಹಿಸುತ್ತೇವೆಯೋ, ಅಲ್ಲಿಯವರೆಗೆ ನಾವು ಅದನ್ನು ಸುಲಭವಾಗಿ ಎದುರಿಸಬಲ್ಲೆವು. ಅಂಥ ಶಕ್ತಿ ಮನುಷ್ಯನಿಗಿದೆ. ಶಿರೀನಳಿಗೆ ತನ್ನ ಮಾತು ಭಾಷಣದ ಧಾಟಿಯಾಯಿತೆಂದು ಅನಿಸಿದರೂ, ಈ ಸಂದರ್ಭದಲ್ಲಿ ಅದು ತಪ್ಪೆಂದು ತೋರಲಿಲ್ಲ.

ಮುಂದಿನ ಎರಡು ದಿನದಲ್ಲಿ ಬೆಹರಾಮನ ಮನೆಯಲ್ಲಿಯ ಬದುಕು ಮಾಮೂಲು ಸ್ವರೂಪಕ್ಕೆ ತಿರುಗತೊಡಗಿತು.

ಆ ದಿನ ಎಲ್ಲರೂ ಸಿನೇಮಾ ನೋಡಿ ಮನೆಗೆ ಬರುತ್ತಿರುವಾಗಲೇ ಟೆಲಿಫೋನ್ ಗಂಟೆ ಬಾರಿಸುತ್ತಿತ್ತು. ಶಿರೀನಳ ತಾಯಿ, ರಿಸೀವರನ್ನು ಕೈಗೆತ್ತಿಕೊಂಡಾಗ ಆ ಬದಿಯಿಂದ, "ನಾನು ಅಗರವಾಲಾ, ಪೋಚಖಾನಾವಾಲಾ ಫೋನ್ ಮಾಡಿದ್ದರಂತೆ ಇದ್ದಾರೆಯೆ?" ಎಂದು ಕೇಳಿದ ಇದ್ದಾರೆ ಎಂದು ಹೇಳಿದ ಮುದುಕಿ ಗಂಡನತ್ತ ತಿರುಗಿ "ಇಗೊ ಅಗರ್‌ವಾಲನ ಫೋನ್, ಈ ಹೊತ್ತೇ ಬಂದದ್ದು ಒಳ್ಳೆಯದಾಯಿತು. ಮನಸ್ಸಿನ ಎಲ್ಲ ಸಂಶಯಗಳನ್ನು ದೂರ ಮಾಡಿಕೊ ಆದರೆ ಜಗಳ ಬೇಡ" ಎಂದು ಫೋನ್ ರಿಸೀವರನ್ನು ಗಂಡನ ಕೈಗಿತ್ತಳು. ಶಾಂತ, ಮೆತ್ತಗಿನ ಸ್ವಭಾವದ ಗಂಡ, ಎಂದೂ ಯಾರ ಮೇಲೂ ಹರಿಹಾಯ್ದವನಲ್ಲ. ಆದರೆ ಇತ್ತೀಚೆಗೆ ಅಗರವಾಲರ ಹೆಸರೇ ಸಿಟ್ಟಿಗೆ ಕಾರಣವಾಗುತ್ತಿದ್ದುದನ್ನು ನೆನೆದು ಈ ಎಚ್ಚರಿಕೆ ನೀಡಿದ್ದಳು.

ಬೆಹರಾಮ್ ಅದೇ ಬೂಟು ಕಳಚುವ ಸಿದ್ಧತೆಯಲ್ಲಿದ್ದ. ಅರ್ಧಕ್ಕೆ ತಡೆದು ಹೆಂಡತಿಯ ಕೈಯಿಂದ ರಿಸೀವರನ್ನು ಇಸಕೊಂಡು ಸೀಟಿನ ಮೇಲೆ ಕುಳಿತುಕೊಂಡ. ಗಂಟಲು ಸರಿಪಡಿಸಿಕೊಳ್ಳುತ್ತ ಮಾತಿಗೆ ಆರಂಭಿಸಿದ. 21 ವರ್ಷಗಳಿಂದಲೂ ಕಾಯುತ್ತಿದ್ದ ಈ ಅವಕಾಶವನ್ನು ಈಗ ತಪ್ಪಿಸಿಕೊಳ್ಳಲಾರೆ ಎಂಬಂತೆ, "ಈ ಸಾರೆ ಮೊದಲು ನನಗೆ ಮಾತನಾಡಗೊಡು ಕೇಳು" ಎನ್ನುತ್ತ "ನೀನು ಪೇಪರಿನಲ್ಲಿ ಜಾಹೀರಾತು ಕೊಟ್ಟಿದ್ದೀಯಲ್ಲ? ಝೋಪಡಪಟ್ಟಿ ಒಡೆಯರನ್ನು ಹೆದರಿಸಿ ಹಣ ಸೆಳೆಯುವುದಕ್ಕಲ್ಲ ತಾನೆ?" ಎಂದ. ತಾವು ಒಂದೇ ಆಫೀಸಿನಲ್ಲಿ ಜೊತೆಯಾಗಿ ಕಳೆದ ದಿನಗಳನ್ನು ನೆನಪಿಸಿಕೊಂಡು "ಆಗ ನೀನೆಷ್ಟು ಚುಡಾಯಿಸುತ್ತಿದ್ದೆ! ನಾನು ಸಿಟ್ಟಿಗೆದ್ದಾಗ ಸಮಾಧಾನ ಮಾಡುತ್ತಿದೆ ನಿನ್ನ ಮಾತಿಗೆ ನೊಂದು ನಾನು ಪರ್ಚೇಜ್ ಜವಾಬ್ದಾರಿಯನ್ನು ಬಿಟ್ಟುಕೊಟ್ಟಾಗ ನೀನೆಷ್ಟು ಸಮಾಧಾನ ಮಾಡುತ್ತಿದ್ದೆ. ಆಗೆ ನೀನಾಡಿದ ಮಾತು 'may be too cruel, but

believe me, you are the only one in this office when I adore' ಎಂದೆ. ಆಗ ನನಗೆ, ನಾನು ಎಂದಿನಿಂದಲೂ ಹುಡುಕುತ್ತಿದ್ದ ತಮ್ಮನನ್ನು ತಿರುಗಿ ಪಡೆದಷ್ಟು ಸಂತೋಷವಾಗಿತ್ತು. ನಂತರ ನನ್ನ ಬದುಕಿನಲ್ಲಿ ಹಾಜರಾದದ್ದು ಮೂರು ವರ್ಷದ ನಂತರ. ಧುಲ್ ಎಂದು ಬಂದೆ. ಊಟ ಮಾಡುತ್ತೇನೆ ಎಂದೆ. ಆದರೆ ನಮ್ಮಲ್ಲಿ ಊಟ ಮಾಡಿ ಹೋದ ಎಂಟೇ ದಿನ ಗಳಲ್ಲಿ ನನಗೆ ಹಣ ಕೊಡಲು ಮಾಡಿದ ನಿನ್ನ ಧಾರ್ಷ್ಟ್ಯವನ್ನು ಎಂದಿಗೂ ಮರೆಯಲಾರೆ! ನೆನ ಪಿದೆಯೆ ಗೌರಿ? ನನ್ನ ಪರಿಚಯವೇ ಇಲ್ಲದವ ರಂತೆ 'ಮಿಸ್ಟರ್ ಪೋಚ್‌ಖಾನಾ ವಾಲಾ' ಎಂದು ಸಂಬೋಧಿಸಿದ್ದು? ನಿನ್ನ ಹೊಸ ಹುದ್ದೆಯ ಗರ್ವದಿಂದ, ನಾನು ಎಕ್ಸ್‌ಪ್ರೆಸ್ ಪತ್ರಿಕೆಯ ಅಗರ್‌ವಾಲಾ ಎಂದು ಪರಿಚಯ ಹೇಳಿದ್ದು? ಯಾಕಪ್ಪಾ ಒಮ್ಮೆ ಹೀಗೆ, ಒಮ್ಮೆ ಹಾಗೆ ಆಗಿ ಸತಾಯಿಸುತ್ತಿ? ಹೋದ ಸಲ ಕರುಣಾಕರನ್ ಬಗ್ಗೆ ಫೋನ್ , ಮಾಡಿದ್ದಕ್ಕೆ, ನನ್ನ ಮೇಲಿನ ಸಿಟ್ಟಿನಿಂದ, "He is dead" ಎಂದೆ ಅಮಾನುಷವಾಗಿ. ನಾನು ಒಳ್ಳೆಯ ವನೋ ಕೆಟ್ಟವನೊ ಅನ್ನುವುದು ಈಗ ಮುಖ್ಯ ವಲ್ಲ. ನನಗೀಗ ಅರವತ್ತು ವರ್ಷ. ಇನ್ನೆರಡು ತಿಂಗಳಲ್ಲಿ ನಾನು ನಿವೃತ್ತನಾಗುವೆ. ಒಮ್ಮೆ ಯಾದರೂ ಕಿರಿಯ ತಮ್ಮನಂತೆ, ಕಿರಿಯ ತಮ್ಮ ನಾಗಿ...."

ಬೆಹರಾಮನಿಗೆ ಕೊರಳು ಬಿಗಿದು ಬಂತು. ಅಪ್ಪನನ್ನು ಆಗಿನಿಂದಲೂ ಗಮನಿಸುತ್ತಿದ್ದ ಶಿರೀನ್ ಓಡಿಬಂದು ಅಪ್ಪನ ಕೈಯಿಂದ ರಿಸೀ ವರನ್ನು ಕಸಿದುಕೊಂಡು ಕಿವಿಗೆ ಹಚ್ಚಿ ನೋಡಿ ದಾಗ ಆ ಕಡೆ ಯಾರೂ ಇದ್ದಂತೆ ತೋರ ಲಿಲ್ಲ. ಫೋನ್ ಕೆಳಗಿಟ್ಟು, ಅಪ್ಪನನ್ನು ಸಂತೈಸಲು ಹೊರಟವಳಿಗೆ ಅಳು ಬರುವಂತಾಯಿತು. ಅಮ್ಮನನ್ನು ಕರೆದಳು. ಇಬ್ಬರೂ ಸೇರಿ ಬೆಹ ರಾಮನನ್ನು ಕುಳಿತಲ್ಲಿಂದ ಎಬ್ಬಿಸಿ, ಮಲಗುವ ಕೋಣೆಗೆ ಕರೆದುಕೊಂಡು ಹೋದರು. ಗಾಢ ನಿದ್ದೆಯಿಂದ ಎದ್ದವನ ಹಾಗೆ, ಕೆಂಗನಸನ್ನು ಕಂಡು ಬೆದರಿದವನ ಹಾಗೆ ಕಾಣುತ್ತಿದ್ದ ಗಂಡನ ಮೋರೆಯನ್ನು ಕಂಡು ಮುದುಕಿಗೆ ಕರುಳು ಕಿವಿಚಿದಂತಾಯಿತು. ಹಾಸಿಗೆಯ ಅಂಚಿನಲ್ಲಿ ಕುಳಿತ ಬೆಹರಾಮ್ ದಡಬಡಿಸಿ ಎಚ್ಚೆತ್ತವನಂತೆ "ಅರೆ, ನನ್ನ ಸುತ್ತಲೂ ಯಾಕೆ? ನಾನು ಸರಿ ಯಾಗಿದ್ದೇನೆ. ಬಟ್ಟೆ ಬದಲಿಸಿ ಬರುತ್ತೇನೆ. ಊಟ ಮಾಡೋಣ" ಎಂದ.



ಮರುದಿನ ಬೆಳಿಗ್ಗೆ ಎಲ್ಲರೂ ಬೇಗನೆ ಎದ್ದರು. ಬೆಹರಾಮನೇ ಉತ್ಸಾಹದಿಂದ ಬಾಲ್ಕನಿಯ ಗಾಜಿನ ಕದಗಳನ್ನು ಸರಿಸಿದ. "ಅಪ್ಪಾ, ನಾವಿಬ್ಬರೂ 'ಲ್ಯಾಂಡ್ಸ್ ಎಂಡ್' ತನಕ ವಾಕಿಂಗ್ ಹೋಗಿ ಬರೋಣ" ಎಂದು ಸೂಚಿಸಿದಳು. ಇಬ್ಬರೂ ಹೊರಟರು.

ಅವರು ಹೋಗಿ ಅರ್ಧ ಗಂಟೆಯಲ್ಲಿ ಕಟ್ಟಡದ ಇದಿರು ಕಾರೊಂದು ಬಂದು ನಿಂತಿತು. ಕಂದು ಬಣ್ಣದ ಸಫಾರಿ ಸೂಟು ಧರಿಸಿದ ಗೃಹಸ್ಥ ರೊಬ್ಬರು ಕೈಯಲ್ಲಿ ಗುಲಾಬಿ ಹೂವಿನ ಗುಚ್ಛ ವನ್ನು ಹಿಡಿದು ಇಳಿಯುವುದನ್ನು ಬೆಹರಾಮನ ಹೆಂಡತಿ ಕಂಡಳು. ಕರೆಗಂಟೆಯ ಸದ್ದನ್ನು ಕೇಳಿ, ಕದ ತೆರೆದು ಒಳಗೆ ಬಂದವರನ್ನು ನೋಡಿ ಅನು ಮಾನದಿಂದ, "ನೀವು ಅಗರ್‌ವಾಲ್ ಅಲ್ಲವೆ?" ಎಂದಳು. "ನಾನು ನಿಮಗೆಲ್ಲ ಪರಿ ಚಯವಿದ್ದ ಅಗರವಾಲನಲ್ಲ. ಅವನ ಅಣ್ಣ. ನೀವು ಪೋಚ್‌ಖಾನಾವಾಲರ ಪತ್ನಿಯಲ್ಲವೆ? ನಿಮ್ಮ ಗಂಡ ಇನ್ನೂ ಎದ್ದಿರಲಿಕ್ಕಿಲ್ಲ ಅಲ್ಲವೇ?"

"ಇಲ್ಲ ಎದ್ದಿದ್ದಾರೆ ಮಗಳ ಜೊತೆಗೆ ಹೀಗೇ ತಿರುಗಾಡಲು ಹೋಗಿದ್ದಾರೆ" ಎನ್ನುವಷ್ಟರಲ್ಲಿ ಕದದ ಕರೆಗಂಟೆ ಕೂಗಿತು. "ಅಗೊ, ಬಂದರು" ಎನ್ನುತ್ತ ಮುದುಕಿ ಕದ ತೆರೆದಳು. ಅಗರ್‌ವಾಲಾ ಬೆಹರಾಮನನ್ನು ಸಮೀಪಿಸಿ

"ನಾನು ಅಗರವಾಲ, ನಿಮಗೆ, ಪರಿಚಯವಿದ್ದ ಗೌರೀ 'ಪ್ರಸಾದನ ಅಣ್ಣ. ಕೂರೋಣವೆ?" ಎಂದ.

"ನಿಜ ಹೇಳುವುದಾದರೆ ನಿನ್ನೆ ನಾನು ಗೌರಿಯೊಡನೆ ಮಾತಾಡಿದ ರೀತಿಯಿಂದ ನನಗೆ ನಾಚಿಕೆಯೆನ್ನಿಸಿದೆ. ಇಷ್ಟೆಲ್ಲ ವಯಸ್ಸಾದ ಮೇಲೂ ನಾನೇ ಒಬ್ಬ ಅಣ್ಣನಂತೆ ನಡೆದುಕೊಳ್ಳಲಿಲ್ಲ. ನಿಮ್ಮನ್ನು ಕಳುಹಿಸುವ ಬದಲು ಸ್ವತಃ ಬಂದಿದ್ದರೆ ನಾನೇ ಅವನ ಕ್ಷಮೆ ಬೇಡುತ್ತಿದ್ದೆ. ಹೇಗಿದ್ದಾನೆ ನಮ್ಮ ಪುಂಡ ಗೌರೀಪ್ರಸಾದ?" ತನ್ನ ಮಾತಿನಲ್ಲಿ ಮೂಡಿದ ಸಹಜತೆಯಿಂದ ಬೆಹರಾಮನಿಗೆ ಸಮಾಧಾನವಾಯಿತು.

"ಏರ್ ಪೋರ್ಟಿಗೆ ಹೋಗುವ ಮೊದಲು ನನ್ನ ಬಳಿಯಿದ್ದ ಅಲ್ಪ ಸಮಯದಲ್ಲಿ ಒಂದು ಮಾತನ್ನು ತಿಳಿಸಿಯೇ ಹೋಗಬೇಕು ಅನ್ನಿಸಿತು ಮುಜುಗರಕ್ಕೆ, ತಪ್ಪು ಭಾವನೆಗೆ ಎಡೆಯಿಲ್ಲದಿರಲಿ ಎಂದು ನೇರವಾಗಿ ಮಾತಿಗೇ ಬರುತ್ತೇನೆ. ನನ್ನ ತಮ್ಮ ಗೌರೀ ಪ್ರಸಾದ ಇನ್ನಿಲ್ಲ. ಅವನು ಸತ್ತು ಈಗ ಮೂರು ವರ್ಷಗಳ ಮೇಲೇ ಆಗಿದೆ. He was murdered. ಇದೇ ಬಾಂದ್ರಾದಲ್ಲಿ ನಿಮಗೆ ಈ ಸಂಗತಿ ಹೇಗೆ ಗೊತ್ತಾಗಲಿಲ್ಲ? ಅವನು ಮತ್ತೆ ಮತ್ತೆ ಪ್ರೀತಿಯಿಂದ ಕರೆಯುತ್ತಿದ್ದ. 'My Friend From Babdra' ನೀವೇ ಆಗಿದ್ದಿರಿ. ಅವನು ಸಾಯುವ ಮೊದಲು ಊಟ ಮಾಡಿದ್ದು ನಿಮ್ಮ ಮನೆಯಲ್ಲಾಗಿತ್ತು ಎನ್ನುವ ಸಂಗತಿ ನನಗೆ ನಿನ್ನೆಯವರೆಗೆ ಗೊತ್ತಾಗಲಿಲ್ಲ. ನಿನ್ನೆ ಟೆಲಿಫೋನ್ ಮೇಲೆ ಕೇಳಿದ ಮಾತುಗಳಿಂದ ಸ್ಪಷ್ಟವಾದ ಕೆಲವು ಸಂಗತಿಗಳನ್ನು ನಿಮ್ಮೊಡನೆ ಹಂಚಿಕೊಂಡಾಗ, ಮನಸ್ಸು ಹಗುರವಾದೀತು. ತಮ್ಮನ ಆತ್ಮಕ್ಕೆ ಶಾಂತಿ ಸಿಕ್ಕೀತು ಎಂಬ ಆಸೆಯಿಂದ ಇಲ್ಲಿಗೆ ಬಂದಿದ್ದೇನೆ.

"ಅವನ ಕೆಲವು ವಿಚಿತ್ರ ಭಾವನೆಗಳು ನಮಗೂ ಅರ್ಥವಾಗುತ್ತಿದ್ದಿಲ್ಲ. ಇವುಗಳಲ್ಲಿ ಒಂದು. ಉಳಿದವರ ನಂಬಿಕೆಗಳನ್ನು ಪ್ರಶ್ನಿಸುವ ತುಂಟತನ. ಚುಡಾಯಿಸುತ್ತಾನೆ ಎಂದು ಗೊತ್ತಿದ್ದೂ ಸಿಟ್ಟಿಗೆದ್ದರೆ ನಕ್ಕು ಬಿಡುತ್ತಿದ್ದ. ನೀವೇ ವರ್ಣಿಸಿದಂತೆ ಅವನು ಪುಂಡ, ದುಷ್ಟನಲ್ಲ. ನೀವು ಅವನ ಬಗ್ಗೆ ಮಾಡಿಕೊಂಡ ಕಲ್ಪನೆಗೆ ಭಂಗ ತಂದದ್ದು ನಾನು. ತಮ್ಮ ಸತ್ತ ದುಃಖದಲ್ಲಿ ಅವನ ಕೊಲೆಯ ಬಗ್ಗೆ ಮಾಹಿತಿ ದೊರಕಿಸಲು ಹಣ ಕೊಡಲು ಮಾಡಿದಾಗ ಆಗ ನಾನು ಹುಚ್ಚನಾಗಿದ್ದೆ. ಅವನು ಯಾವಾಗಲೂ ಹೇಳುತ್ತಿದ್ದ. ಬಾಂದ್ರಾದ ಗೆಳೆಯ ಯಾರು? ಅವನ ಕೆಲಸವೇನು? ಯಾವುದೂ ಗೊತ್ತಾಗಲಿಲ್ಲ. ಅವನು ಸತ್ತ ಭೀಕರ ರೀತಿ, ನಿಮ್ಮ ಕೆಲಸದ ಹುಡುಗನಿಂದ ನಿಮಗೆ ತಿಳಿದಿರಬೇಕು. ಪೇಪರಿನಲ್ಲಿ ಅವನ ಹೆಸರು ಬರದಂತೆ ನೋಡಿಕೊಳ್ಳಲು ನನಗಿದ್ದ ವರ್ಚಸ್ಸನ್ನೆಲ್ಲ ಉಪಯೋಗಿಸಬೇಕಾಯಿತು. ಅವನ ಮೈಮೇಲಿನ ಒಡವೇ (ವಾಚು, ಉಂಗುರ) ಗಳಿಗಾಗಿ ಕೊಲೆಯಾಗಿರಬೇಕೆಂದು ಅನಿಸಿಕೆ. ಇದು ಅವನು ಹಿಡಿದ ಟ್ಯಾಕ್ಸಿ ಚಾಲಕನ ಕೆಲಸವಿದ್ದರೂ ಇರಬಹುದು: ಈವರೆಗೆ ಪತ್ತೆ ಹತ್ತಿಲ್ಲ. ಇನ್ನು ಕರುಣಾಕರನ್, ನಮ್ಮಿಬ್ಬರ ಭಾವನಾಲೋಕದಲ್ಲಿ ಈ ಹುಡುಗ ಎಬ್ಬಿಸಿದ ಕೋಲಾಹಲವನ್ನು ಬಲ್ಲೆ. ಹುಡುಗ ಪಾಪ, ಯಾಕೊ ಮೂರು ವರ್ಷಗಳ ಹಿಂದೆ ಕೊಲೆಯಾದವನು ತನ್ನ ಅಣ್ಣನೆಂದು ತಿಳಿದಿದ್ದ, ಸತ್ತವನು ನನ್ನ ತಮ್ಮನೆಂದು ಹೇಳಲು ನನಗೆ ನಾಲಿಗೆಯೇ ಏಳಲಿಲ್ಲ. ಏನೇ ಹೇಳಿ, ತಮ್ಮನಂತಹ ಮೌಲಿಕ ವಸ್ತು ಇನ್ನೊಂದಿಲ್ಲ. ಕರುಣಾಕರನ್‌ನ ರಿಪೋರ್ಟು ಪ್ರಕಟವಾಗುತ್ತದೆ. ಪ್ರತಿಯೊಬ್ಬನೂ ಓದಲೇ ಬೇಕಾದ್ದು ಅದು. ಕರುಣಾಕರನ್ ಸುರಕ್ಷಿತವಾಗಿದ್ದಾನೆ. ನಾನೇ ವಿಮಾನದ ಟಿಕೆಟ್ಟು ಕೊಟ್ಟು ಕಳಿಸಿದ್ದೇನೆ. ಅಂದು ನಿಮ್ಮ ಟೆಲಿಫೋನ್ ಕರೆ ಬಂತು. ನೀವು ಯಾರೆಂದು ತಿಳಿಯಲಿಲ್ಲ. ಗೌರಿ ಎಂದು ಕರೆಯುವ ವ್ಯಕ್ತಿಗೆ, ಗೌರಿ ಸತ್ತು ಮೂರು ವರ್ಷಗಳಾದದ್ದು ಗೊತ್ತಿಲ್ಲವಲ್ಲ ಎನಿಸಿ ಮನಸ್ಸು ರೋಸಿತು. ಗೌರಿ ಸತ್ತು ಹೋದ ಎನ್ನಬೇಕೆಂದಿದ್ದನ್ನು 'ಕರುಣಾಕರನ್ ಸತ್ತು ಹೋದ' ಎಂದು ಚೀರಿ ಹೇಳಿದ್ದೆ. ದಯಮಾಡಿ ನನ್ನನ್ನು ನನ್ನ ತಮ್ಮನನ್ನು ಕ್ಷಮಿಸಿ ಬಿಡಿ ಕಲ್ಕತ್ತೆಯಿಂದ ಬಂದ ಮೇಲೆ ಇನ್ನೊಮ್ಮೆ ಕಾಣುತ್ತೇನೆ. ಗುಡ್‌ಬಾಯ್!"

"ಹೇಳದೆ ಕೇಳದೆ ಬಂದ. ನನ್ನ ತಮ್ಮ ಇನ್ನಿಲ್ಲ; ಮೂರು ವರ್ಷಗಳ ಹಿಂದೆಯೇ ಸತ್ತ ಎಂದು ಸುದ್ದಿ ಕೊಟ್ಟ ತಮ್ಮನಷ್ಟು ಮೌಲಿಕವುಳ್ಳ ವಸ್ತು ಇನ್ನೊಂದಿಲ್ಲ ಎಂದು ತತ್ವಜ್ಞಾನಿಯಂತೆ ಸಾರಿ ಹೊರಟು ಹೋದ. ಅಲ್ಲಿಯ ಮೂವರಿಗೂ ತಮ್ಮೊಳಗಿನ ಸತ್ವಪೂರ್ಣವಾದದ್ದೇನೊ ಕಳೆದು ಹೋದ ಅನುಭವ. ಇನ್ನು ಮೇಲೆ ನನ್ನ ಮಟ್ಟಿಗಂತೂ "ಪಾತ್ರಾನು ಮಚ್ಛ ವರ್ಷ" ಎಂದಳು ಮುದುಕಿ. ಬೆಹರಾಮ್ ನಿದ್ದೆ ಗಣ್ಣಿನಲ್ಲಿದ್ದವ

ನಂತೆ ಮಿಕಿ ಮಿಕಿ ನೋಡುತ್ತಾ ನಿಂತಿದ್ದ. "ನೀನು ಸ್ವಲ್ಪ ಮಲಗಲ್ಲ, ಬ್ರೇಕ್ ಫಾಸ್ಟಿಗೆ ಎಬ್ಬಿಸುತ್ತೇನೆ" ಎಂದಳು ಶಿರೀನ್ ಬೆಹರಾಮ್ ಹೋಗಿ ತೊಟ್ಟ ಉಡುಪಿನಲ್ಲಿಯೇ ಹಾಸಿಗೆಯಲ್ಲಿ ಒರಗಿದ. ಶಿರೀನ್ ಒಳಗೆ ಬಂದ ಮೇಲೆ, "ಗೌರೀ ಪ್ರಸಾದ ಬಂದ ಮೇಲೆ ಎಬ್ಬಿಸಲು ಮರೆಯಬೇಡ" ಎಂದನು.

ಇದ್ದಕ್ಕಿದ್ದಂತೆ ಅರ್ಧ ರಾತ್ರಿಯಲ್ಲಿ 'ಕೋಯಿ ಬಚಾವ್' ಎಂದು ಅವನ ಬಾಯಿಂದ ಹೊರಟ ಉದ್ಗಾರ ಮನೆಯವರನ್ನಲ್ಲದೆ, ಪಕ್ಕದ ಮನೆಯವರನ್ನೂ ಎಬ್ಬಿಸಿತ್ತು. ವಾಸುದೇವನ್ ರುಂಡವಿಲ್ಲದ ದೇಹವನ್ನು ನೋಡಿ ಹೀಗೆ ಕೂಗುತ್ತ ಓಡಿ ಬಂದಿದ್ದ. ಬೆಹರಾಮ ಯಾವ ಸ್ವಪ್ನವನ್ನು ಕಂಡಿದ್ದನೊ! ಇವರೆಲ್ಲ ಬಂದು ಏನಾಯಿತೆಂದು ವಿಚಾರಿಸುವಷ್ಟರಲ್ಲಿ ಅವನು ಸುತ್ತಲಿನ ಜಗತ್ತಿನ ಸಂಬಂಧವನ್ನೇ ಕಳೆದು ಕೊಂಡವನಂತೆ ಪಿಳಿ ಪಿಳಿ ನೋಡುತ್ತಿದ್ದ.

ಬೆಹರಾಮ್ ಆ ದಿನ ರಾತ್ರಿ ಹೊಕ್ಕ ಸ್ಥಿತಿಯಿಂದ ಹೊರಗೆ ಬರಲೇ ಇಲ್ಲ. ಹೊರಗೆ ಬರುವ ಭರವಸೆಯನ್ನು ಡಾಕ್ಟರರೂ ಕೊಡಲಿಲ್ಲ. ಅಗರವಾಲನ ಅಣ್ಣ ಬಂದು ಭೇಟಿಯಾದ. ಅವನ ಪ್ರಯತ್ನದಿಂದ ವಾಸುದೇವನ್ ಕರುಣಾಕರನ್ನರೂ ಬಂದಿದ್ದರು. ಗುರುತು ಹಿಡಿದನೊ ಇಲ್ಲವೊ. ಇಬ್ಬರನ್ನೂ ಕಣ್ಣು ಬಿಟ್ಟು ನೋಡಿದ್ದ. ಆದರೂ ಶಿರೀನಳ ದೃಷ್ಟಿಯಲ್ಲಿ, ಅಪ್ಪ ಆ ಇಬ್ಬರನ್ನೂ ನೋಡುತ್ತಿರುವಾಗ ಅವರ ಬದಿಯಲ್ಲಿ ಇನ್ನೊಬ್ಬನನ್ನು ಹುಡುಕುವಂತೆ ಕಂಡಿತು.

ಬೆಹರಾಮ್ ಮುಂದೆ ಬಹಳ ದಿನ ಬದುಕಿ ಉಳಿಯಲಿಲ್ಲ. ಮುಂದೆ ಎರಡು ವರ್ಷಗಳಲ್ಲೇ ಹೆಂಡತಿಯೂ ತೀರಿ ಹೋದಳು. ಆಗಲೂ ಮಗ ಬರಲಿಲ್ಲ. ಇನ್ನೂ ಮೂರು ವರ್ಷ ತನಗೆ ಬರಲಾಗುವುದಿಲ್ಲವೆಂದೂ, ಮುಂಬಯಿಯ ಮನೆ ಮತ್ತು ಉಳಿದ ಆಸ್ತಿಯ ಬಗ್ಗೆ ತನಗಾವ ಆಸೆಯೂ ಇಲ್ಲವೆಂದೂ ಫೋನ್ ಮಾಡಿ ತಿಳಿಸಿದ್ದ. ಮುಂಬಯಿಯ ಮನೆಯನ್ನು ಬೆಹರಾಮನ ಆಫೀಸಿನವರಿಗೇ ಬಾಡಿಗೆ ಕೊಡುವುದೆಂದು ನಿಶ್ಚಯಿಸಿ ಶಿರೀನ್ ಮತ್ತು ಅವಳ ಗಂಡ ಮುಂಬಯಿಗೆ ಬಂದರು.

ಅಪ್ಪ ಅಮ್ಮ ಇಬ್ಬರೂ ಇಲ್ಲದ ಅನಾಥ ಮನೆಯ ಬೀಗ ತೆಗೆದು ಒಳಗೆ ಹೋಗುವಾಗ ಶಿರೀನ ಭಾವನಾವಶಳಾದಳು. ಮನೆಯನ್ನೆಲ್ಲ ಸುತ್ತಾಡಿ ಬಾಲ್ಕನಿಗೆ ಬಂದು ಅಪ್ಪನಿಗೆ ಬಹಳ ಪ್ರಿಯವಾದ ಸಮುದ್ರದತ್ತ ಕಣ್ಣು ಹಾಯಿಸಿದಳು. ಅದೇಕೋ ಆ ಹೊರಗಿನ ಸಮುದ್ರ, ಅದರಲ್ಲಿ ತೇಲುವ ಹಾಯಿ ದೋಣಿಗಳು, ಇವುಗಳೆಲ್ಲ ಭಯಾನಕವಾಗಿ ಕಾಣಿಸಿ, ಅಪ್ಪನಿಗೂ ಆ ದಿನ ರಾತ್ರಿ ಹೀಗೆಯೇ ಕಾಣಿಸಿರಬಹುದೆ ಎನಿಸಿ, 'ಕೋಯಿ ಬಚಾವ್' ಎಂಬ ಉದ್ಗಾರ ತಂತಾನೆ ಬಾಯಿಂದ ಹೊರಟಾಗ, ಹೆದರಿ ಕಂಗಾಲಾದ ಶಿರೀನ್ ಬಾಲ್ಕನಿ ಬಿಟ್ಟು ಈಚೆಗೆ ಬಂದಳು. ●

ಮೌನ ಸಂವಾದದ ಒಂದು ಮಹತ್ತರ ಕಲೆ.

-ವಿಲಿಯಂ ಹಜಲಿಟ್

Printed and published by **M.H.BELGAUMKAR** on behalf of Lokashikshana Trust at " SAMYUKTA KARNATAKA PRESS ", No.2, Residency Road, Bangalore-560 025. Managing Editor **K.SHAMA RAO.** Rep: Bombay: V. Satyamurthi. Phone: 5510502, Madras, S.K.Murti Phone: 414870. New Delhi: V.K.Chopra Phone:7114785.

Registered with the Registrar of Newspapers for India under No.35/3957.

KASTURI PRICE: Rs. 3.00 Reg. no. KRNG 43
Licence No. L2120/wpp No.33



Printed at Rajhan's Enterprises Bangalore-44 Phone: 357070